ಪ್ರಚೋದನೆ

# ಲಂಕೇಶ್

ನವೆಂಬರ್ 9, 2011 ಪುಟ 20 ರೂ. 14/-

ಅಡ್ವಾನಿಯ ರಥ ಯಾತ್ರೆ



## ಜೈಲಿಗಿನ್ನು ಮೂರೇ ಗೇಣು

## VIMS: ಡಾ. ವಿನಾಯಕ ಕಾಪಿ ಕೇಂದ್ರ



## ಶಾರುಖ್‌ನ ಹೊಸ ಅವತಾರ್

## ಬಾಬಿ ಸೆರಗಲ್ಲಿ ಒರಟನ ಒದ್ದಾಟ



# ಬಿಜೆಪಿ ಎಲೆ ಮೇಲಿನ ಹಂದಿಯೂ, ಕಾಂಗ್ರೆಸ್ ಎಲೆ ಮೇಲಿನ ಕತ್ತೆಯೂ ಮತ್ತು ಅಡ್ವಾಣಿಯ ರಥವೂ!

ಶಿವಸುಂದರ್ ಚಾರ್ವಾಕ






ಪಥಭ್ರಷ್ಟ ಬಿಜೆಪಿಯನ್ನು ಸರಿಮಾಡಲು ರಥಭ್ರಷ್ಟ ಅಡ್ವಾಣಿಯವರು ಮತ್ತೊಂದು ರಥಯಾತ್ರೆ ಕೈಗೊಂಡಿದ್ದಾರೆ. ಇದು ಅವರ ರಾಜಕೀಯ ಜೀವನದ ಆರನೆಯ ಮತ್ತು ಪ್ರಾಯಶಃ ಕೊಟ್ಟ ಕೊನೆಯ ಮತಯಾತ್ರೆಯೂ ಇರಬಹುದು. ಈ ರಥಯಾತ್ರೆಗೆ 'ಜನ ಚೇತನ' ಯಾತ್ರೆ ಎಂದು ಹೆಸರಿಟ್ಟಿರುವ ಬಿಜೆಪಿ ಪಕ್ಷ ಭ್ರಷ್ಟಾಚಾರದ ವಿರುದ್ಧ ಜನ ಜಾಗೃತಿಯೇ ಈ ಯಾತ್ರೆಯ ಪ್ರಧಾನ ಉದ್ದೇಶವೆಂದು ಹೇಳಿದೆ. ಅದರ ಘೋಷವಾಕ್ಯ "ಅಬ್ ಬಸ್"- ಇನ್ನೂ ಸಾಕು ಎಂದು. ಆದರೆ ಬಿಜೆಪಿ ಪಕ್ಷದೊಳಗೇ ಇರುವ ಹಲವು ಭಿನ್ನಮತೀಯರು "ಅಬ್ ಬಸ್ ಕರೋ" ಎಂದು ಅಡ್ವಾಣಿಗೇ ಹೇಳುತ್ತಿದ್ದಾರೆ ಎಂಬುದು ಯಾತ್ರೆ ಪ್ರಾರಂಭವಾದಾಗಿನಿಂದಲೂ ಬಿಜೆಪಿಯವರೇ ಹರಡಿರುವ ಸುದ್ದಿ!

ಪ್ರಭು ಚಾವ್ಲಾರಂಥ ಪರಮ ಚೆಡ್ಡಿಹರುಕ ಬಿಜೆಪಿ 'ಚಿಂತಕ'ರೂ ಇದು "ಬಿಜೆಪಿ ಚೇತನಾ ಯಾತ್ರೆಯೇ" ಹೊರತು "ಜನ ಚೇತನಾ ಯಾತ್ರೆ" ಅಲ್ಲವೆಂದು ಹೇಳುತ್ತಿರುವುದೇ ಬಿಜೆಪಿಯ ಘೋಷಿತ ಉದ್ದೇಶಕ್ಕೂ ಆಂತರಿಕ ರಾಜಕಾರಣಕ್ಕೂ ಇರುವ ವ್ಯತ್ಯಾಸವನ್ನು ವಿದಿತಗೊಳಿಸುತ್ತದೆ! ಅವರೇ ಹೇಳಿಕೊಳ್ಳುವ ಹಾಗೆ ಕರ್ನಾಟಕ ಮತ್ತು ಗುಜರಾತ್ ಬಿಟ್ಟರೆ ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ಚುನಾವಣಾ ಕ್ಷಮತೆ ಯಾವ ರಾಜ್ಯದಲ್ಲೂ ಹೇಳಿಕೊಳ್ಳುವಂತಿಲ್ಲ. ಮೊನ್ನೆ ನಡೆದ ಹಿಸ್ಸಾರ್ ಮಧ್ಯಂತರ ಚುನಾವಣೆ ಬಿಟ್ಟರೆ ಇತ್ತೀಚೆಗೆ ಮಧ್ಯಪ್ರದೇಶ, ಉತ್ತರ ಪ್ರದೇಶ, ಉತ್ತರ್‌ಖಂಡ್, ಬಂಗಾಳ, ಪಂಜಾಬ್ ರಾಜ್ಯಗಳಲ್ಲಿ ನಡೆದ ಯಾವುದೇ ಚುನಾವಣೆಗಳಲ್ಲಿ ಬಿಜೆಪಿ ಹೇಳಿಕೊಳ್ಳುವಂಥ ಸಾಧನೆ ಮಾಡಿಲ್ಲ. ಅಷ್ಟು ಮಾತ್ರವಲ್ಲ, ಗುಜರಾತ್ ಬಿಟ್ಟರೆ ಮಿಕ್ಕ ಕಡೆ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯ ಜನಪ್ರಿಯತೆ ಕುಗ್ಗುತ್ತಿದೆ. ಹಳೆ ಅಜೆಂಡಾಗಳು ಅಷ್ಟು ಫಲಿತಾಂಶ ಕೊಡುತ್ತಿಲ್ಲ. ಅದೇ ಸಮಯದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದರೆ ಎನ್‌ಡಿಎ ಮಿತ್ರಪಕ್ಷಗಳ ಬೆಂಬಲ ಬೇಕೇಬೇಕು. ಆದರೆ ಜೆಡಿಯು ಮತ್ತು ಅಕಾಲಿ ದಳ ಹೊರತುಪಡಿಸಿದರೆ ಬೇರೆ ಯಾರೂ ನೆಚ್ಚಿಕೊಳ್ಳುವಂಥ ಮಿತ್ರರೇ ಬಿಜೆಪಿಗೆ ಇಲ್ಲವಾಗಿದೆ. ಹಳೆಯ ಹಲವಾರು ಮಿತ್ರಪಕ್ಷಗಳು ನಿಧಾನವಾಗಿ ಕಾಂಗ್ರೆಸ್ ಜೊತೆ ದೋಸ್ತಿ ಕುದುರಿಸಿಕೊಳ್ಳುತ್ತಿವೆ. ಕೆಲವು ಈಗಾಗಲೆ ಕ್ಯಾಂಪು ತೊರೆದಿವೆ. ಜೆಡಿಯು ಎಂಬ ಮಿತ್ರ ಪಕ್ಷಕ್ಕೂ ಬಿಜೆಪಿಯ ಅಸಲಿ ಅಜೆಂಡಾ ಆದ ಹಿಂದೂ ಕೋಮುವಾದದ ಜೊತೆ ಬಹಿರಂಗ ಸ್ನೇಹ ಇಟ್ಟುಕೊಳ್ಳಲು ಸಾಧ್ಯವಿಲ್ಲವಾಗಿದೆ.

ಹೀಗಾಗಿ 2014ರ ಲೋಕಸಭಾ ಚುನಾವಣೆಗೆ ಈಗಲೇ ತಯಾರಿ ಪ್ರಾರಂಭಿಸಿರುವ ಬಿಜೆಪಿ ಮುಂದೆ ಅಧಿಕಾರಕ್ಕೆ ಬರಬೇಕೆಂದರೆ ಕುಸಿಯುತ್ತಿರುವ ತನ್ನ ಓಟು ಶೇರುಗಳನ್ನು ಭದ್ರ ಪಡಿಸಿಕೊಳ್ಳುತ್ತಲೇ ಹಳೆಯ ಮತ್ತು ಹೊಸಮಿತ್ರರನ್ನು ಜೊತೆಗೂಡಿಸಿಕೊಳ್ಳಬೇಕಿದೆ. ಅದರ ಜೊತೆಗೆ ಎನ್‌ಡಿಎ ಒಕ್ಕೂಟಕ್ಕೆ ಪ್ರಶ್ನಾತೀತ ನಾಯಕನಾಗಿದ್ದ ವಾಜಪೇಯಿ ಈಗ ರಂಗದಲ್ಲಿ ಇಲ್ಲದಿರುವ ಸಂದರ್ಭದಲ್ಲಿ ಬಿಜೆಪಿಯೊಳಗೆ ಮತ್ತು ಹೊರಗೆ ಸರ್ವ ಸಮ್ಮತ ಪ್ರಧಾನಿ ಅಭ್ಯರ್ಥಿಯನ್ನು ಹುಡುಕುವುದೇ ಕಷ್ಟವಾಗಿದೆ. ಅಡ್ವಾಣಿ ಭಾರತದ ರಾಜಕಾರಣದಲ್ಲಿ ರಕ್ತಸಿಕ್ತ ಫ್ಯಾಸಿಸ್ಟ್ ರಾಜಕಾರಣದ ಅಧ್ಯಾಯ ಪ್ರಾರಂಭಿಸಿದ, ಬಿಜೆಪಿಯ ಗದ್ದುಗೆಗೆ ಅಲ್ಪಸಂಖ್ಯಾತರ ಹೆಣಗಳ ಸೋಪಾನವನ್ನು ಮಾಡಿಕೊಟ್ಟ ಪರಮ ಹಿಂದೂತ್ವವಾದಿಯಾದರೂ ಆರೆಸ್ಸೆಸ್‌ನ ಸಂಘಟನಾ ಶಿಸ್ತನ್ನು ಹಲವಾರು ಬಾರಿ ಮುರಿದಿರುವುದರಿಂದ ಸಂಘಪರಿವಾರಕ್ಕೆ ಅಡ್ವಾಣಿ ಒಪ್ಪಿತ ಕ್ಯಾಂಡಿಡೇಟಲ್ಲ. ಚೆಡ್ಡಿಗಳ ನೆಚ್ಚಿನ ಅಭ್ಯರ್ಥಿ ಈಗ ಭಾರತದ ಕೋಮುವಾದಿ ರಾಜಕಾರಣವನ್ನು ಅಡ್ವಾಣಿ ಯುಗದಿಂದ ಮೋದಿತ್ವದ ಹಂತಕ್ಕೆ ಕೊಂಡೊಯ್ದಿರುವ ಗುಜರಾತಿನ ನರಹಂತಕ ನರೇಂದ್ರ ಮೋದಿ. ಆದರೆ ಮೋದಿಯ ಮುಖ ಇನ್ನೂ ಅರೆ ಸೆಕ್ಯುಲಾರ್ ರಾಜಕಾರಣಿಗಳಿಗೆ ಪಥ್ಯವಿಲ್ಲ, ಏಕೆಂದರೆ ಗುಜರಾತಿನ ಕರಾಳ ಘಟನೆಗಳನ್ನು ಮುಸ್ಲಿಂ ಸಮುದಾಯ ಮರೆತಿಲ್ಲ, ಹೀಗಾಗಿ ಮೋದಿಯ ಛತ್ರಿ ಹಿಡಿರುವ ಸುಷ್ಮಾ ಮತ್ತು ಜೈಟ್ಲಿಯಂಥ ನರಿಗಳೂ ಪ್ರಧಾನಿ ಹುದ್ದೆಗೆ ಆಸೆಪಡುತ್ತಿವೆ.

ಹೀಗೆ ಬಿಜೆಪಿಯೊಳಗೇ ಇಲ್ಲದಿರುವ ಖುರ್ಚಿಗೆ ನಡೆದಿರುವ ಪೈಪೋಟಿಯಲ್ಲಿ ಅಂತಿಮ ಸುತ್ತಿನ ಅಭ್ಯರ್ಥಿಯಾಗಿ ಹೊರಹೊಮ್ಮಲು ಮೋದಿ ಮತ್ತು ಅಡ್ವಾಣಿ ಇಬ್ಬರೂ ಇಲ್ಲದ ಕಸರತ್ತು ನಡೆಸುತ್ತಿದ್ದಾರೆ. ಒಂದೆಡೆ ಮೋದಿ ಇದ್ದಕ್ಕಿದ್ದಂತೆ ಸದ್ಭಾವನಾ ಉಪವಾಸ ಕೂತು ರಾಷ್ಟ್ರೀಯ ಮಟ್ಟದಲ್ಲಿ ಇಮೇಜು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದಕ್ಕೆ ಪ್ರತಿಯಾಗಿ ಅಡ್ವಾಣಿ ಭ್ರಷ್ಟಾಚಾರದ ವಿರುದ್ಧ ಸಮರ ಯಾತ್ರೆಯ ಪೋಸು ಕೊಡುತ್ತಾ ಜನಚೇತನಾ ಯಾತ್ರೆಯನ್ನು ಪ್ರಾರಂಭಿಸಿದ್ದಾರೆ. ಮೋದಿ ಮತ್ತು ಅಡ್ವಾಣಿ ನಡುವಿನ ಒಳ ಪೈಪೋಟಿ ಎಷ್ಟು ತಾರಕಕ್ಕೆ ಹೋಗಿದೆಯೆಂದರೆ ಈವರೆಗಿನ ಎಲ್ಲಾ ಐದು ರಥಯಾತ್ರೆಗಳನ್ನು ಗುಜರಾತಿನಿಂದ ಪ್ರಾರಂಭಿಸಿದ್ದ ಅಡ್ವಾಣಿ ಈ ಬಾರಿ ಮಾತ್ರ ತಮ್ಮ ಯಾತ್ರೆಯನ್ನು ಮೋದಿಯನ್ನು ಬಹಿರಂಗವಾಗಿ ವಿರೋಧಿಸಿದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಬಿಹಾರ್ ರಾಜ್ಯದಿಂದ ಪ್ರಾರಂಭಿಸಿದ್ದಾರೆ. ಹೀಗೆ ಈ ರಥಯಾತ್ರೆ ಮುಖ್ಯವಾಗಿ 2014ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ತನ್ನ ಆಂತರಿಕ ಮತ್ತು ಬಾಹ್ಯ ಸಾಮರ್ಥ್ಯವನ್ನು ಪುನರುಜ್ಜೀವನಗೊಳಿಸಿಕೊಳ್ಳಲು ಬಿಜೆಪಿ ನಡೆಸಿರುವ ಬಿಜೆಪಿ ಚೇತನಾ ಯಾತ್ರೆಯೇ ಆಗಿದೆ.

ಮೋದಿ ಮತ್ತು ಅಡ್ವಾಣಿಯವರ ನಡುವಿನ ಒಳಜಗಳ ಏನೇ ಇದ್ದರೂ ಇಬ್ಬರೂ ಪರಮ ಹಿಂದೂತ್ವವಾದಿಗಳು ಮತ್ತು ನರಹಂತಕ ಫ್ಯಾಸಿಸ್ಟರು ಎಂಬುದನ್ನು ರುಜುವಾತುಪಡಿಸಿದ್ದಾರೆ. ಇಬ್ಬರೂ ದೇಶದ ರಾಜಕಾರಣದಲ್ಲಿ ಕೋಮುವಾದಿ ವಿದ್ವೇಷವನ್ನು ಬಿತ್ತುವ ಮೂಲಕವೇ ಅಧಿಕಾರವನ್ನು ಪಡೆದವರು. ಕೋಮುವಾದಕ್ಕೆ ತತ್‌ಕ್ಷಣದ ಚುನಾವಣಾ ಪ್ರಯೋಜನ ಕಡಿಮೆಯಾಗುತ್ತಿದ್ದಂತೆ ಗುಡ್ ಗವರ್ನೆನ್ಸ್, ಅಭಿವೃದ್ಧಿ, ಭ್ರಷ್ಟಾಚಾರ ಮುಕ್ತ ಸರ್ಕಾರದ ಗಾಳಿಪಟವನ್ನು ಹಾರಿಸಿದವರೇ. ಆರೆಸ್ಸೆಸ್ ಮತ್ತು ಬಿಜೆಪಿ ಜನರ ಮನೋಭಾವಕ್ಕೆ ತಕ್ಕಂತೆ ತಮ್ಮ ಬಣ್ಣವನ್ನು, ಬಾವುಟವನ್ನು, ಮಾತಿನ ವರಸೆಯನ್ನು ಬದಲಿಸುತ್ತಾ ಅಧಿಕಾರಕ್ಕೆ ಬಂದು ನಂತರ ಒಂದೊಂದಾಗಿ ಹಿಂದೂ ರಾಷ್ಟ್ರದ ಅಜೆಂಡಾವನ್ನು ಜಾರಿಗೆ ತರುವ ದೀರ್ಘಕಾಲೀನ ವ್ಯೂಹದೊಂದಿಗೆ ರಾಜಕಾರಣದಲ್ಲಿದೆ. ಇದನ್ನು ಪ್ರಜ್ಞಾವಂತ ಮತ್ತು ಕೋಮುವಾದ ರಾಜಕಾರಣಕ್ಕೆ ಬಲಿಯಾದ ಸಮುದಾಯಗಳು ಎಂದಿಗೂ ಮರೆಯುವಂತಿಲ್ಲ. ಗಾಂಧಿ ಕೊಲೆಯ ನಂತರ ಪ್ರಧಾನಧಾರೆ ರಾಜಕಾರಣದ ಅಂಚಿನಲ್ಲಿದ್ದ ಆಗಿನ ಭಾರತೀಯ ಜನಸಂಘ ಜಯಪ್ರಕಾಶ್ ನಾರಾಯಣರ ಭ್ರಷ್ಟಾಚಾರ ವಿರೋಧಿ ಹೋರಾಟದ ಹಿಂದೆ ಅವಿತುಕೊಂಡೇ ಮತ್ತೆ ಪ್ರಧಾನ ವಾಹಿನಿಗೆ ಬಂದುಬಿಟ್ಟಿತು. 1977ರಲ್ಲಿ ಅಧಿಕಾರಕ್ಕೆ ಬಂದೊಡನೆ ಶಿಕ್ಷಣ ಮತ್ತು ಸಂಸ್ಕೃತಿ, ವಿದೇಶಾಂಗ ವ್ಯವಹಾರದಂಥ ಕೀಲಕ ಖಾತೆಗಳನ್ನು ಪಡೆದುಕೊಂಡು ಹಿಂದೂ ಕೋಮುವಾದಕ್ಕೆ ಶಾಸನಬದ್ಧ ಸಮರ್ಥನೆ ಪಡೆದುಕೊಳ್ಳಲು ಯತ್ನಿಸಿತು. ಮತ್ತೆ 1984ರಲ್ಲಿ ರಾಜಕೀಯದಂಚಿಗೆ ಸೇರಿದ್ದ ಬಿಜೆಪಿಯನ್ನು ಅಡ್ವಾಣಿಯ ಕೋಮುವಾದಿ ರಥಯಾತ್ರೆ ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೆ ತಂದಿತು. ಆ ಅಧಿಕಾರವನ್ನು ಬಳಸಿಕೊಂಡೇ 1992ರಲ್ಲಿ ಅವರು ಬಾಬ್ರೀ ಮಸೀದಿ ಕೆಡವಿ ಹಾಕಿದರು. ಗುಡ್ ಗವರ್ನೆನ್ಸ್, ಸುಭದ್ರ ಮತ್ತು ಸುರಾಜ್ಯದ ಹೆಸರಲ್ಲಿ 1999ರಲ್ಲಿ ಕೇಂದ್ರದಲ್ಲಿ ಪಡೆದುಕೊಂಡ ಅಧಿಕಾರದ ಶ್ರೀರಕ್ಷೆಯಲ್ಲೇ 2002ರ ಗುಜರಾತ್ ಹತ್ಯಾಕಾಂಡವನ್ನು ದಕ್ಕಿಸಿಕೊಂಡಿತು. ಹೀಗೆ ಚುನಾವಣಾ ಪೂರ್ವದಲ್ಲಿ ಯಾವುದೇ ನೆಪದಲ್ಲಿ ಅಧಿಕಾರ ಪಡೆದುಕೊಂಡರೂ ಅಧಿಕಾರಕ್ಕೆ ಬಂದೊಡನೆ ಹಿಂದೂ ರಾಷ್ಟ್ರದ ಅಂಜೆಂಡಾವನ್ನು ಯಾವುದೇ ಎಗ್ಗುಸಿಗ್ಗಿಲ್ಲದೆ ಜಾರಿಗೆ ತರುತ್ತಿದೆ. ಹೀಗಾಗಿ ಈಗಲೂ ಅದರ ಭ್ರಷ್ಟಾಚಾರದ ವಿರೋಧಿ ಮುಸುಕಿನ ಹಿಂದಿರುವ ಗುಪ್ತ ಹಿಂದೂತ್ವವಾದಿ ಅಜೆಂಡಾವನ್ನು ಕಾಣುವಷ್ಟು ಜನರ ಕಣ್ಣುಗಳು ಸಮರ್ಥವಿರಬೇಕು.

ಕೋಮುವಾದಿ ಅಜೆಂಡಾ ಈಗ ಹಿಂದಿನಷ್ಟು ಸಲೀಸಾಗಿ ಓಟುಗಳನ್ನು ಗಳಿಸಿಕೊಡಲು ಸಾಧ್ಯವಾಗುತ್ತಿಲ್ಲ, ಈಗ ಕೇವಲ ಮುಸ್ಲಿಂ ವಿರೋಧ, ಪಾಕಿಸ್ತಾನ ವಿರೋಧ ರಾಜಕಾರಣದಲ್ಲಿ ಬಿಜೆಪಿ ಸರಕನ್ನು ಮಾರುವಷ್ಟು ಪ್ರಬಲವಾಗಿಲ್ಲ. ಆದ್ದರಿಂದಲೇ 2004ರಲ್ಲಿ ಬಿಜೆಪಿ "India is Shining" ಎಂಬ ಅಭಿವೃದ್ಧಿ ಭ್ರಾಂತಿಯ ಆತ್ಮವಂಚಕ ಘೋಷಣೆಯನ್ನು ತೇಲಿಬಿಟ್ಟಿತ್ತು. ಆದರೆ ಅದು ಸಾಮಾನ್ಯ ಜನರಿಂದ ತಿರಸ್ಕರಿಸಲ್ಪಟ್ಟ ನಂತರ ಕೇಂದ್ರದ ಮಟ್ಟಿಗೆ ಬಿಜೆಪಿ ಚೇತರಿಸಿಕೊಳ್ಳಲೇ ಆಗಿರಲಿಲ್ಲ. ಹೀಗಾಗಿ ಈ ಬಾರಿಯ ಚುನಾವಣೆಗೆ ಮುಂಚೆ ಮತ್ತೊಂದು ಲಂಗರಿಗಾಗಿ ಕಾಯುತ್ತಿದ್ದ ಆ ಪಕ್ಷಕ್ಕೆ ಕಾಂಗ್ರೆಸ್ ಕೇಂದ್ರದಲ್ಲಿ ನಡೆಸುತ್ತಲೇ ಬಂದಿರುವ ಬ್ರಹ್ಮಾಂಡ ಭ್ರಷ್ಟಾಚಾರ ವರವಾಗಿ ಬಂದಿತು. ಜನರೆಲ್ಲಾ ದಿಗ್ಭ್ರಾಂತಿಯಾಗುವ ಪ್ರಮಾಣದಲ್ಲಿ ನಡೆದಿರುವ ಲಕ್ಷ ಕೋಟಿಗಳ ಹಗರಣಗಳು ಜನರಲ್ಲಿ ಹುಟ್ಟುಹಾಕಿದ ಪರಮ ತಿರಸ್ಕಾರವನ್ನು ಬಳಸಿಕೊಳ್ಳಲು ಅದು ಹೋದ ವರ್ಷದ ಡಿಸೆಂಬರ್‌ನಲ್ಲಿಯೇ ಯೋಜನೆ ಹಾಕಿಕೊಂಡಿತು.

ಆದರ ಪ್ರಥಮ ತಂತ್ರವಾಗಿ ಜನರಲ್ಲಿ ಭ್ರಷ್ಟ… ವಿರೋಧಿ ಭಾವನೆಯನ್ನು ಸದೃಢೀಕರಿಸಲು ಜನಾಂದೋ… ಸ್ವರೂಪವನ್ನು ಕೊಡಲು ಆರೆಸ್ಸೆಸ್ ಯೋಜನೆ ರೂ… ನೇರವಾಗಿ ತಾವೇ ಹೋರಾಟದ ಕಣಕ್ಕೆ ಇಳಿದರೆ… ಸಮ್ಮತಿ ಸಿಗುವುದು ಕಷ್ಟ ಎಂದು ಅಂದಾಜಿಸಿದ… ಮೊದಲು ಪ್ರತ್ಯಕ್ಷವಾಗಿ ಬಾಬಾ ರಾಮದೇವರನ್ನು… ಪರೋಕ್ಷವಾಗಿ ಅಣ್ಣಾ ಹಜಾರೆಯವರನ್ನು ಬಳಸಿಕೊ… ಈಗ ಅಣ್ಣಾ ತಂಡದ ಕೇಜ್ರಿವಾಲ್, ಕಿರಣ್ ಬೇದಿ… ಯಿಂದ ನೇರವಾಗಿ ಮಾರ್ಗದರ್ಶನ ಪಡೆಯುತ್ತಿ… ಸ್ವಯಂ ಅಣ್ಣಾ ಹಜಾರೆ ಬಿಜೆಪಿ ಭ್ರಷ್ಟಾಚಾರದ… ಕುರುಡರಾಗಿದ್ದದ್ದೂ ಈಗ ಸಾಬೀತಾಗಿದೆ.

ಹೀಗೆ ಭ್ರಷ್ಟಾಚಾರ ವಿರೋಧಿ ಭಾವನೆ ಕಾ… ವಿರೋಧಿಯಾಗಿ ಗಟ್ಟಿಯಾಗತೊಡಗಿದ ಮೇಲೆ… ನೇರವಾಗಿ ಅದನ್ನು ಬಿಜೆಪಿಯ ಪರವಾದ ಅಲೆ… ಮಾಡಿಕೊಳ್ಳಲು ಅಡ್ವಾಣಿ ನೇತೃತ್ವದಲ್ಲಿ ಬಿಜೆಪಿ… ಆರೆಸ್ಸೆಸ್ ಕಣಕ್ಕಿಳಿದಿದೆ.

ಆದರೆ ಕರ್ನಾಟಕದಲ್ಲಿ ಬಿಜೆಪಿ ನಡೆಸಿರುವ ಭೂ… ಣದ ಕರ್ಮಕಾಂಡವೇ ಮೂರು ಲಕ್ಷ ಕೋಟಿ ರೂಪಾ… ಷ್ಟೆಂದು ಸರ್ಕಾರವೇ ನೇಮಿಸಿದ ಬಾಲಸುಬ್ರಹ್ಮಣ್ಯನ್… ಹೇಳಿದೆ. ಇದು ಕೇಂದ್ರದ 2ಜಿ ಮತ್ತು ಸಿಎಜಿ ಹ… ಒಟ್ಟು ಮೊತ್ತಕ್ಕಿಂತ ಜಾಸ್ತಿ. ಇನ್ನು ಒರಿಸ್ಸಾದಲ್ಲಿ ಬಿಜೆಪಿ-… ಜಂಟಿ ಅಧಿಕಾರದ ಅವಧಿಯಲ್ಲಿ ರೋಜ್‌ಗಾರ್ ಯೋ… ಮತ್ತು ಭೂಹಗರಣದಲ್ಲೂ ಮೂರು ಲಕ್ಷ… ರೂಪಾಯಿ ಹಗರಣ ಸಂಭವಿಸಿದೆಯೆಂದು ಈಗ ಅ… ಬಿಜೆಪಿ ರಾಜ್ಯ ಕಾರ್ಯದರ್ಶಿಯೇ ಹೇಳುತ್ತಿದ್ದಾ… ಅವಧಿಯಲ್ಲೇ ಕರ್ನಾಟಕದ ರೀತಿಯಲ್ಲೇ ಅಲ್ಲೂ… ಹಗರಣಗಳು ಹತ್ತಾರು ನಡೆದಿವೆ. ಇನ್ನು ಕಳೆ… ವರ್ಷಗಳಿಂದ ಬಿಜೆಪಿಯ ಮಿತ್ರಪಕ್ಷವೇ ಅಧಿಕಾರದ… ರಸ್ತೆಗಳು ಎಷ್ಟು ಅಧ್ವಾನವಾಗಿದ್ದವೆಂದರೆ ಅಡ್ವಾಣಿಂ… ಅಲ್ಲಿ ಹೋಗಲಾಗದೆ ಹೆಲಿಕಾಪ್ಟರ್‌ನಲ್ಲಿ ಹಾರಬೇಕಾ… ಮಧ್ಯಪ್ರದೇಶದ ಸಾತ್ನಾದಿಂದಲೂ ರಸ್ತೆಗೆಂದು ಕೊಟ್ಟ ದು… ಮಂತ್ರಿಗಳ ಜೇಬು ಸೇರಿದ್ದರಿಂದ ಅಲ್ಲೂ ಅಡ್ವಾಣಿಂ… ಆಕಾಶ ಮಾರ್ಗದಲ್ಲಿ ಹಾರಬೇಕಾಯಿತು. ಇವೆಲ್ಲಾ ಭ್ರಷ್ಟ… ವಲ್ಲವೇ ಎಂದು ಕೇಳಿದ್ದಕ್ಕೆ ಅಡ್ವಾಣಿಯವರು "ಹೌದು… ಬಿಜೆಪಿ ಅಥವಾ ಎನ್‌ಡಿಎ ಕೂಟದ ಪಕ್ಷಗಳು ಆಳು… ರಾಜ್ಯ ಸರ್ಕಾರದಲ್ಲಿನ ಭ್ರಷ್ಟಾಚಾರದ ಬಗ್ಗೆ ಮಾತನ್ನಾ… ದಿಲ್ಲ, ಏಕೆಂದರೆ ಇದು ರಾಷ್ಟ್ರವ್ಯಾಪಿ ಆಂದೋಲನ… ಇದರ ಗುರಿ ಕೇಂದ್ರ ಸರ್ಕಾರವಾಗಿದೆ" ಎಂದು ಹೇ… ಅವರ ಜೊತೆಗಿರುವ ಅನಂತಕುಮಾರ್ ಸ್ವಯಂ ಹ… ಹಗರಣದಲ್ಲಿ ಪಾಲುಧಾರಿ!

ಕಾಂಗ್ರೆಸ್ ಎಲೆಯಲ್ಲಿ ಕತ್ತೆ ಬಿದ್ದಿರುವುದು ನಿಜ… ಬಿಜೆಪಿ ಎಲೆಯಲ್ಲೂ ಹಂದಿ ಬಿದ್ದಿದೆ. ಅದನ್ನು ಮ… ಅಡ್ವಾಣಿಯ ರಥ ಜನರ ಆಶಯಗಳ ಮೇಲೆ… ಹೊರಟಿದೆ.

ಧರ್ಮದ ಬಗ್ಗೆ ಜನರಿಗಿರುವ ಮುಗ್ಧ ಶ್ರದ್ಧೆ… ದುರುಪಯೋಗಪಡಿಸಿಕೊಂಡ ರೀತಿಯಲ್ಲೇ ಭ್ರಷ್ಟಾ… ವಿರುದ್ಧ ಜನರಿಗಿರುವ ಆಕ್ರೋಶವನ್ನು ದುರುಪಯೋ… ಕೊಳ್ಳುವುದೇ ಈ 'ಜನ ಚೇತನಾ ಯಾತ್ರೆ'ಯ ಸಾರ…

ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಲ್ಲರೂ ಭ್ರಷ್ಟಾಚಾ… ಅದರ ವಿರುದ್ಧ ಸಾಮಾನ್ಯ ಜನ ದೊಡ್ಡ ಸಂಗ್ರಾ… ಸಾರಬೇಕು. ಆದರೆ ಬಿಜೆಪಿ ಭ್ರಷ್ಟಾಚಾರದ ವಿರುದ್ಧ… ಆಕ್ರೋಶವನ್ನು ಬಳಸಿಕೊಳ್ಳುತ್ತಿರುವುದು ಮಾತ್ರ ಅ… ಪಡೆದು ತನ್ನ ಹಿಂದೂ ರಾಷ್ಟ್ರ ಅಜೆಂಡಾವನ್ನು ಹಿಂ… ನಿಂದ ತರಲು ಎಂಬುದನ್ನು ಮರೆಯಬಾರದು. ಭ್ರಷ್ಟ… ವನ್ನು ವಿರೋಧಿಸೋಣ. ಭ್ರಷ್ಟಾಚಾರದ ವಿರೋಧಿ ವ… ನಲ್ಲಿರುವ ಹಿಂದೂತ್ವವಾದಿಗಳ ಅಜೆಂಡಾಗಳಿಗೆ ಬ… ದಿರೋಣ!

## ನೋ ಕಾಮೆಂಟ್ಸ್

"ಮೋದಿ ಅಧಿಕಾರಕ್ಕೆ ಬರುವ ಹತ್ತು ವರ್ಷ ಮುಂಚೆ, ಅಂದರೆ 1991ರಲ್ಲೇ, ಗುಜರಾತಿನ 18,028 ಹಳ್ಳಿಗಳಲ್ಲಿ 17,940 ಹಳ್ಳಿಗಳು ವಿದ್ಯುದೀಕರಣಗೊಂಡಿದ್ದವು. ಗುಜರಾತಿನ ರಸ್ತೆಗಳ ಶೇ.87.5ರಷ್ಟು ರಸ್ತೆಗಳು ಅಸ್ಫಾಲ್ಟಿಂಗ್ ಆಗಿದ್ದವು. 1994-2001ರ ನಡುವೆ ಅಂದರೆ ಮೋದಿ ಬರುವ ಮುಂಚೆಯೇ ಗುಜರಾತಿನ ಅಭಿವೃದ್ಧಿ ದರ ಶೇ.10-13 ರಷ್ಟಿತ್ತು. ಅಷ್ಟೇ ಅಲ್ಲದೆ 1990ರಿಂದಲೂ ಗುಜರಾತ್ ದೇಶದ ಶೇ.78ರಷ್ಟು ಉಪ್ಪನ್ನೂ, ಶೇ.98ರಷ್ಟು ಸೋಡಾ ಆಶ್ ಅನ್ನೂ, ಶೇ.26 ರಷ್ಟು ಔಷಧಿಗಳನ್ನು ಉತ್ಪಾದಿಸುತ್ತಾ ಬಂದಿದೆ. ಹೀಗಿರುವಾಗ ಮೋದಿ ಮ್ಯಾಜಿಕ್‌ನಿಂದ ಗುಜರಾತ್ ಕಳೆದ ಹತ್ತು ವರ್ಷದಲ್ಲಿ ಅಭಿವೃದ್ಧಿ ಹೊಂದಿತು ಎಂಬುದರಲ್ಲಿ ಹುರುಳಿಲ್ಲ."

*- ಪ್ರೊ.ದೀಪಂಕರ್ ಗುಪ್ತಾ, ಸಂಶೋಧಕ*

"ನಾನು ಅತ್ಯಂತ ಗೌರವಿಸುವ ಅನಂತಮೂರ್ತಿಗಳು ಮೀಸಲಾತಿ ಇಲ್ಲದ ಏಕೈಕ ಕ್ಷೇತ್ರ ಸಾಹಿತ್ಯವೆಂದು ಹೇಳಿದ್ದಾರೆ. ಖಾಸಗಿಯವರು ನೀಡುವ ಪ್ರಶಸ್ತಿಗಳಲ್ಲಿ ಬ್ರಾಹ್ಮಣರಿಗೆ ಅಘೋಷಿತ ಮೀಸಲಾತಿ ಇರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಕನ್ನಡದಲ್ಲಿ 8 ಜನರಿಗೆ ಜ್ಞಾನಪೀಠ ಸಿಕ್ಕಿದರೆ ಅದರಲ್ಲಿ 6 ಜನ ಬ್ರಾಹ್ಮಣರೇ ಇರುವುದು ಬ್ರಾಹ್ಮಣರಿಗೆ ಇರುವ ಅಘೋಷಿತ ಮೀಸಲಾತಿಗೆ ಒಂದು ಉದಾಹರಣೆ. ನಾವು ಮೀಸಲಾತಿ ಕೇಳುತ್ತಿಲ್ಲ, ಹಿಂದುಳಿದವರಲ್ಲಿ, ದಲಿತರಲ್ಲಿ, ಅಲ್ಪಸಂಖ್ಯಾತರಲ್ಲಿ, ಮಹಿಳೆಯರಲ್ಲಿ ಪ್ರತಿಭೆಗಳಿದ್ದರೆ ಅವರಿಗೂ ಮನ್ನಣೆ ಕೊಡಿ ಎಂದು ಕೇಳುತ್ತಿದ್ದೇವೆ."

*- ನಿಡುಮಾಮಿಡಿ ಸ್ವಾಮೀಜಿ*

"ನನಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕೊಂಚ ಗಲಿಬಿಲಿಯಾಯಿತು. ನನಗಿಂತ ಈ ಪ್ರಶಸ್ತಿಗೆ ಹೆಚ್ಚು ಅರ್ಹರಾದ ಪು.ತಿ. ನರಸಿಂಹಾಚಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರಂಥ ಸಾಹಿತಿಗಳಿದ್ದರು. ಆದರೆ ಎಲ್ಲಾ ಉತ್ತಮ ಸಾಹಿತಿಗಳಿಗೂ ಜ್ಞಾನಪೀಠ ಸಿಗುವುದಿಲ್ಲ."

*- ಯು. ಆರ್. ಅನಂತಮೂರ್ತಿ*

"ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಹಜಾರೆ ನೇತೃತ್ವದ 'ಇಂಡಿಯಾ ಅಗೇನ್ಸ್ಟ್ ಕರಪ್ಷನ್' ಸಂಘಟನೆಗೆ ಸಾರ್ವಜನಿಕರು ನೀಡಿದ ದೇಣಿಗೆಯಲ್ಲಿ ಅಂದಾಜು 70-80 ಲಕ್ಷ ರೂಪಾಯಿಯನ್ನು ಅಣ್ಣಾ ತಂಡದ ಸದಸ್ಯ ಅರವಿಂದ ಕೇಜ್ರಿವಾಲ್ ತಮ್ಮ ಸ್ವಂತ ಟ್ರಸ್ಟಿಗೆ ಬಳಸಿಕೊಂಡಿದ್ದಾರೆ. ಅಣ್ಣಾ ಹಜಾರೆ ಕಳೆದ ಆಗಸ್ಟ್‌ನಲ್ಲಿ ದೆಹಲಿಯ ರಾಮಲೀಲಾ ಮೈದಾನದಲ್ಲಿ 12 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿದಾಗ ಸಾರ್ವಜನಿಕರಿಂದ 80 ಲಕ್ಷ ರೂಪಾಯಿ ಹಣವನ್ನು ಸ್ವೀಕರಿಸಿದ್ದು ಇದನ್ನು ಬೇರೆ ಉದ್ದೇಶಕ್ಕೆ ಬಳಸಿದ್ದಾರೆ. ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಭಾಗವಹಿಸಿರುವವರೇ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವುದು ದುರದೃಷ್ಟಕರ."

*- ಸ್ವಾಮಿ ಅಗ್ನಿವೇಶ್*

"ಯೋಜನಾ ಆಯೋಗದ ಮಾನವ ಅಭಿವೃದ್ಧಿ ವರದಿಯಂತೆ 2009-10ರಲ್ಲಿ ಪರಿಶಿಷ್ಟ ಜಾತಿಯ ಜನರಿಗೆ ಶೇ.7.0ರಷ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇ.9.4ರಷ್ಟು ನಿರುದ್ಯೋಗ ಪ್ರಮಾಣದಲ್ಲಿ ಹೆಚ್ಚಾಗಿದೆ. ಪರಿಶಿಷ್ಟ ಪಂಗಡದಲ್ಲಿ ಕ್ರಮೇಣವಾಗಿ ಶೇ.6.3 ಮತ್ತು 7.8ರಷ್ಟು ನಿರುದ್ಯೋಗ ಕಾಣಿಸಿಕೊಂಡಿದೆ. ತಳಸಮುದಾಯಕ್ಕಿಂತ ಇತರ ಜಾತಿಗಳಲ್ಲಿನ ನಿರುದ್ಯೋಗ ಪ್ರಮಾಣ ಅಷ್ಟಿಲ್ಲ."

*- ಪತ್ರಿಕಾ ವರದಿ*

## ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇದುವ… ಡಿನೋಟಿಫೈ ಆಗಿರುವ 5,00ಎಕರೆ ಭೂಮಿಯಲ್ಲಿ ಒಂದೇ ಒಂದು … ಭೂಮಿ ತಮಗಾಗಲೀ, ತಮ್ಮ ಸಂಬಂಧಿಕರಿಗಾಗಲೀ ಸೇರಿಲ್ಲ."

*- ಮುರುಗೇಶ್ ನಿರಾ…*

"ದಲಿತರು ಮತ್ತು ಹಿಂದೂಗಳು ಬೇರೆ ಬೇರೆ ಎಂದು ಹೇಳುವ ಮೂ… ಅಂಬೇಡ್ಕರರ ಹೆಸರು ಹೇಳಿಕೊಂಡು ಕೆಲ ಸಂಸ್ಥೆಗಳು ಅಂತಾರಾಷ್ಟ್ರೀಯ ಮಟ್ಟ… ಪಿತೂರಿ ನಡೆಸುತ್ತಿವೆ. ಆದರೆ ದಲಿತರೂ ಹಿಂದೂ ಧರ್ಮಕ್ಕೆ ಸೇರಿದವರೇ. ಅಂಬೇಡ್ಕರರೇ ಹಿಂದೂ ರಾಷ್ಟ್ರ ರಚನೆಯ ಬಗ್ಗೆ ಮಾತನಾಡಿದ್ದಾರೆ. ಸಂ… ರಾಷ್ಟ್ರಭಾಷೆಯಾಗಬೇಕು ಮತ್ತು ಭಗವಾಧ್ವಜ ರಾಷ್ಟ್ರಧ್ವಜವಾಗಬೇಕು ಎಂಬ ಜನಮತ ಗಣನೆಯನ್ನೂ ನಡೆಸಿದ್ದಾರೆ."

*- ದತ್ತಾತ್ರೇಯ ಹೊಸಬಾಳೆ, ಆರೆಸ್ಸೆಸ್ ನಾ…*

## ಈಗಲೂ ಹಾಗೆ ಇರುವಂತಿದೆಯಲ್ಲ!

"ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪ ಮತ್ತು ಕುಮಾರಸ್ವಾಮಿಯವರು ಒಂದೇ ನಾಣ್ಯದ ಎರಡು ಮುಖಗಳಿದ್ದಂತಿದ್ದರು. ಅವರಿಬ್ಬರ ನ… ರಾಜಕೀಯ ವಿರೋಧವಿದೆಯೇ ವಿನಃ ವೈಯಕ್ತಿಕ ದ್ವೇಷಾಸೂಯೆಗಳಿಲ್ಲ. … ನವೆಂಬರ್ 15ರ ನಂತರ ಬಿಜೆಪಿಯ ಗ್ರಹಗತಿಗಳೆಲ್ಲಾ ಸರಿ ಹೋಗುತ್ತದೆ."

*- ಸೋಮ…*

# ಭಂಗಿಗಳ ಬವಣೆಗೆ ಕುರುಡಾದ ಭಟ್ಟಂಗಿ ಸರ್ಕಾರ



• ಗೌರಿ ಲಂಕೇಶ್
editorlankesh@gmail.com

ಇವತ್ತು ದೀಪಾವಳಿ ಹಬ್ಬ. ಬೆಳಕು ಮತ್ತು ನೆಮ್ಮದಿಗೆ ಸಂಕೇತವಾದ ಈ ಹಬ್ಬದ ದಿನ ಬೆಂಗಳೂರಿನಲ್ಲಿ ಜನ ಪಟಾಕಿ ಸಿಡಿಸುತ್ತಿದ್ದಾರೆ, ತಮ್ಮ ಮನೆಗಳಲ್ಲಿ ದೀಪಗಳನ್ನು ಬೆಳಗುತ್ತಿದ್ದಾರೆ. ಆದರೆ ದೂರದ ಊರೊಂದರಲ್ಲಿ ಸುಮಾರು 40 ಜನ ಇವತ್ತಿಗೂ ತಮ್ಮ ಬದುಕಿನಲ್ಲಿ ಬೆಳಕಾಗಲಿ, ನೆಮ್ಮದಿಯಾಗಲಿ ಇಲ್ಲದೆ ನರಕದಂತಹ ಸ್ಥಿತಿಯಲ್ಲಿ ಬದುಕುತ್ತಿರುವುದು ನನ್ನನ್ನು ಕಾಡುತ್ತಿದೆ.

ಮೊನ್ನೆ ನಮ್ಮ ಆಫೀಸಿಗೆ ಮಿತ್ರ ಮತ್ತು ಯುವ ಕವಿ ವೀರಣ್ಣ ಮಡಿವಾಳರ ಬಂದಿದ್ದರು. ಅವರೊಂದಿಗೆ ಹರಟುತ್ತಿದ್ದಾಗ ಸವಣೂರಿನ ಭಂಗಿ ಜನರತ್ತ ನಮ್ಮ ಮಾತು ಹೊರಳಿತು. ನಿಮಗೆ ನೆನಪಿರುತ್ತದೆ, ಕಳೆದ ವರ್ಷ ಜುಲೈ 20ರಂದು ಸವಣೂರಿನ ಮುನಿಸಿಪಾಲಿಟಿ ಎದುರು ಮೂವರು ಭಂಗಿಗಳು ತಮ್ಮ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದ್ದರು. ಅವರ ಪ್ರತಿಭಟನೆಗೆ ಕಾರಣ ಅವರ ತಲೆ ಮೇಲಿದ್ದ ಮುರುಕಲು ಸೂರನ್ನು ಉಳಿಸಿಕೊಳ್ಳುವುದಾಗಿತ್ತು. ಅವರು ಪ್ರತಿಭಟನೆಯ ದೃಶ್ಯ ನಮ್ಮ ರಾಜ್ಯವನ್ನಲ್ಲದೆ ಇಡೀ ದೇಶವನ್ನೇ ಅಲುಗಾಡಿಸಿತ್ತು. ಕೂಡಲೇ ರಾಜ್ಯ ಸರ್ಕಾರ ಅವರ ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳಿತ್ತು. ಅದರಲ್ಲೂ ಅಲ್ಲಿನ ಶಾಸಕ ಮತ್ತು ನೀರಾವರಿ ಮಂತ್ರಿ ಬಸವರಾಜ ಬೊಮ್ಮಾಯಿ ಕಣ್ಣೀರಿಟ್ಟು ತನ್ನ ಕೈಲಾಗಿದ್ದನ್ನೆಲ್ಲ ಆ ಭಂಗಿ ಸಮುದಾಯಕ್ಕೆ ಮಾಡುವುದಾಗಿ, ಅವರಿಗೆ ಹೊಸ ಬದುಕು ಕಲ್ಪಿಸುವುದಾಗಿ ಭರವಸೆ ನೀಡಿದ್ದರು.

ಆದರೆ ಇವತ್ತು ಆ ಭಂಗಿಗಳು ಏನಾಗಿದ್ದಾರೆ? ಅವರ ಸ್ಥಿತಿ ಹೇಗಿದೆ? ಅವರಿಗೆಂದು ಸರ್ಕಾರ ಏನು ಮಾಡಿದೆ?

ಇದನ್ನು ಅರಿಯಲು ಮಡಿವಾಳರಿಂದ ಭಂಗಿ ಸಮುದಾಯದ ನಾಯಕರಲ್ಲಿ ಒಬ್ಬರಾದ ಮಂಜುನಾಥ್ ಭಂಗಿ ಅವರ ಫೋನ್ ನಂಬರ್ ಪಡೆದು ಅವರೊಂದಿಗೆ ಮಾತನಾಡಿದೆ. ಅವರು ನನಗೆ ಹೇಳಿದ್ದನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಆದರೆ ಅದಕ್ಕೆ ಮುನ್ನ ಒಂದಿಷ್ಟು ಹಿನ್ನೆಲೆ ಇದ್ದರೆ ವಿಷಯ ಸ್ಪಷ್ಟವಾಗುವುದರಿಂದ ಅದನ್ನು ಇಲ್ಲಿ ಮತ್ತೆ ಹೇಳಬೇಕಿದೆ.

ಸ್ವಾತಂತ್ರ್ಯಕ್ಕೆ ಮುನ್ನ ಸವಣೂರು ನವಾಬ ಅಬ್ದುಲ್ ಮಜೀದ್ ಖಾನ್‌ನ ಸಂಸ್ಥಾನದ ಭಾಗವಾಗಿತ್ತು. ಆಗ ನವಾಬನು ಭಂಗಿ ಸಮುದಾಯಕ್ಕೆ ಸವಣೂರಿನಲ್ಲಿ ಸುಮಾರು ಮೂರು ಗುಂಟೆಯಷ್ಟು ಭೂಮಿಯನ್ನು ನೀಡಿ ಅಲ್ಲಿ ಮನೆ ಕಟ್ಟಿಸಿಕೊಳ್ಳಲು ಅನುಮತಿ ನೀಡಿದನು. ಆದರೆ ಇದು ಮೌಖಿಕ ಇನಾಮಾಗಿದ್ದು ಅದಕ್ಕೆ ದಾಖಲೆಗಳೇನು ಇರಲಿಲ್ಲ. ಆದರೂ ಆ ಜಾಗದಲ್ಲಿ ಭಂಗಿಗಳು ನಾಲ್ಕು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡಲಾರಂಭಿಸಿದರು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರಿಂದ ಭಂಗಿಗಳಿಗೇನು ಸ್ವಾತಂತ್ರ್ಯ ಸಿಗಲಿಲ್ಲ. ಬದಲಾಗಿ ನವಾಬನ ಕಾಲದಿಂದ ಬೊಮ್ಮಾಯಿ ಕಾಲದ ತನಕ ಅವರು ಜಾಡಮಾಲಿಗಳಾಗಿಯೇ ಮುಂದುವರೆದರು.

ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮುಂದೆ ಕರ್ನಾಟಕದಲ್ಲಿ ಮಲ ಗುಂಡಿಗಳನ್ನು ಮನುಷ್ಯರು ಸ್ವಚ್ಛ ಮಾಡುವ ಪದ್ಧತಿಯನ್ನು ನಿಲ್ಲಿಸಲಾಗಿದೆ ಎಂದು ಪ್ರಮಾಣ ಮಾಡಿದ್ದರೂ ಇದು ಅಪ್ಪಟ ಸುಳ್ಳು. ಇವತ್ತಿಗೂ ರಾಜ್ಯದ ವಿವಿಧ ಕಡೆ ಈ ಅಮಾನುಷ ಪದ್ಧತಿ ಜಾರಿಯಲ್ಲಿದೆ. ಇದಕ್ಕೆ ಇತ್ತೀಚಿನ ಉದಾಹರಣೆ ಮೊನ್ನೆ ಅಕ್ಟೋಬರ್ 24 ರಂದು ಕೆಜಿಎಫ್ ಕಕ್ಕಸ್ಸು ಗುಂಡಿಯನ್ನು ಸ್ವಚ್ಛ ಮಾಡುತ್ತಿದ್ದ ಮೂವರು ದಲಿತರು ಉಸಿರುಗಟ್ಟಿ ಸತ್ತಿರುವುದು. ಅಂದಹಾಗೆ ಸವಣೂರು ಸೇರಿದಂತೆ ಹಾವೇರಿ ಜಿಲ್ಲೆಯ ಹಲವಾರು ಭಾಗಗಳಲ್ಲಿ ಇವತ್ತಿಗೂ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಅಲ್ಲಿನ ಮನೆಗಳ ಕಕ್ಕಸ್ಸು ಗುಂಡಿಗಳನ್ನು ಸ್ವಚ್ಛ ಮಾಡುವ ಕೆಲಸ ಈ ಭಂಗಿ ಸಮುದಾಯದ್ದು.

ಕಾಲ ಉರುಳಿದಂತೆ ಭಂಗಿ ಸಮುದಾಯದ 14 ಕುಟುಂಬಗಳು ವಾಸಿಸುತ್ತಿದ್ದ, ಕಮಲ್ ಬಂಗಾಡಿಯಲ್ಲಿನ ಮೂರು ಗುಂಟೆ ಪ್ರದೇಶವು ಊರಿನ ಕೇಂದ್ರದ ಭಾಗವಾಗಿ ಅದರ ರಿಯಲ್ ಎಸ್ಟೇಟ್ ಬೆಲೆ ಏರಿತು. ಸಹಜವಾಗಿಯೇ ಸವಣೂರಿನ ನಗರಾಡಳಿತದ ಸದಸ್ಯರ ಕಣ್ಣು ಅದರ ಮೇಲೆ ಬಿದ್ದಿತು. ಅಲ್ಲಿ 14 ಭಂಗಿ ಕುಟುಂಬಗಳು ವಾಸಿಸುತ್ತಿದ್ದರೂ ಸರ್ಕಾರಿ ದಾಖಲೆಗಳಲ್ಲಿ ಆ ಜಾಗ 'ಖಾಲಿ' ಇತ್ತಲ್ಲ, ಅದನ್ನು ಕಬಳಿಸಲು ಭ್ರಷ್ಟ ನಾಯಕರು ಮತ್ತು ಅಧಿಕಾರಿಗಳು ಮುಂದಾದರು. ಅದರಂತೆ ಸವಣೂರು ಮುನಿಸಿಪಾಲಿಟಿ ಸಭೆಯು ಭಂಗಿಗಳು ವಾಸಿಸುತ್ತಿದ್ದ ಜಾಗದಲ್ಲಿ ಒಂದು ಕಾಂಪ್ಲೆಕ್ಸ್ ಕಟ್ಟುವ ನಿರ್ಣಯವನ್ನು ತೆಗೆದುಕೊಂಡಿತು. ಇದರ ಬಗ್ಗೆ ಮುನಿಸಿಪಾಲಿಟಿಯು ಭಂಗಿಗಳ ಅಭಿಪ್ರಾಯವನ್ನು ಕೇಳುವುದಿರಲಿ, ಅವರಿಗೆ ಗೊತ್ತಾಗದಂತೆ ಇದನ್ನು ಮಾಡಿತು. ಕಾನೂನಿನ ಪ್ರಕಾರ ಯಾವುದೇ ಸ್ಥಳದಲ್ಲಿ ಯಾರಾದರೂ ಸತತವಾಗಿ ಮೂವತ್ತು ವರ್ಷಗಳ ಕಾಲ ವಾಸಿಸುತ್ತಿದ್ದರೆ ಆತನಿಗೇ ಆ ಸ್ಥಳದ ಮೇಲೆ ಹಕ್ಕಿರುತ್ತದೆ ಮತ್ತು ಅದರ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮುನ್ನ ಆತನ ಅಭಿಪ್ರಾಯವನ್ನೂ ಆಡಳಿತ ಕೇಳಬೇಕು. ಆದರೆ ಅದ್ಯಾವುದನ್ನೂ ಸವಣೂರಿನ ಮುನಿಸಿಪಾಲಿಟಿ ಮಾಡಲಿಲ್ಲ. ಯಾಕೆಂದರೆ ಅಲ್ಲಿ ಭಂಗಿಗಳು ಕಳೆದ 80 ವರ್ಷಗಳಿಂದ ವಾಸಿಸುತ್ತಿದ್ದಾರೆ ಎಂದು ಒಪ್ಪಿಕೊಂಡಿದ್ದರೆ ಅವರಿಗೆ ಆರ್ಥಿಕ ಪರಿಹಾರವನ್ನು ನೀಡಬೇಕಿತ್ತು ಮತ್ತು ಪರ್ಯಾಯ ವ್ಯವಸ್ಥೆಯನ್ನೂ ಮಾಡಬೇಕಾಗುತ್ತಿತ್ತು.

ಆನಂತರ ಆ ಸ್ಥಳದಿಂದ ಭಂಗಿಗಳನ್ನು ಓಡಿಸಲು ಹಲವಾರು ತಂತ್ರಗಳನ್ನು ಮಾಡಲಾಯಿತು. ಭಂಗಿ ಸಮುದಾಯದ ಮಹಿಳೆಯರಿಗೆ ಧಮಕಿ ಹಾಕಿದರು, ಬೆದರಿಸಿದರು, ಮನೆಗಳ ಮೇಲೆ ಕಲ್ಲು ತೂರಿದರು, ಅವರ ಅಂಗಳದಲ್ಲಿ ಕಸ ಸುರಿದರು. ಇದ್ಯಾವುದಕ್ಕೂ ಭಂಗಿಗಳು ಬಗ್ಗದಿದ್ದಾಗ ಅವರ ಮನೆಗಳಿಗೆ ನೀರು ಸರಬರಾಜು ವ್ಯವಸ್ಥೆಯನ್ನೇ ಮುನಿಸಿಪಾಲಿಟಿ ಕತ್ತರಿಸಿತು.

ಆಗ ಭಂಗಿಗಳು ಆತಂಕಗೊಂಡರು. ಅವರಿಗೆ ತಮ್ಮ ತಲೆ ಮೇಲಿನ ಸೂರನ್ನು ಮುನಿಸಿಪಾಲಿಟಿಯು ಕಸಿದುಕೊಳ್ಳಲು ಯತ್ನಿಸುತ್ತಿರುವುದು ಅರಿವಾಯಿತು. ಅದಕ್ಕಿಂತ ಮುಖ್ಯವಾಗಿ ಅವರು ಆ ಸ್ಥಳದಲ್ಲಿ ತಮ್ಮ ದ್ಯಾಮೋಹ ದೇವರನ್ನು ಸ್ಥಾಪಿಸಿದ್ದು ಮೂರು ವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ. ಆ ಜಾತ್ರೆಯಲ್ಲಿ ಹಾವೇರಿ ಜಿಲ್ಲೆಯಲ್ಲಿರುವ ಎಲ್ಲ ಭಂಗಿಗಳು ಭಾಗವಹಿಸುತ್ತಾರೆ. ಒಂದೆಡೆ ತಮ್ಮ ಮನೆ, ಇನ್ನೊಂದೆಡೆ ತಮ್ಮ ದೇವರು, ಇವೆರಡನ್ನೂ ಕಳೆದುಕೊಳ್ಳುವ ಭೀತಿ ಕಾಡಲಾರಂಭಿಸಿತು. ತಮ್ಮನ್ನು ಅಲ್ಲಿಂದ ಒಕ್ಕಲೆಬ್ಬಿಸಬಾರದೆಂದು ಭಂಗಿಗಳು ಮುನಿಸಿಪಾಲಟಿಯನ್ನು ಬೇಡಿಕೊಂಡರು. ಆದರೆ ಅವರ ಅಹವಾಲುಗಳಿಗೆ ಯಾರೂ ಕೇರ್ ಮಾಡಲಿಲ್ಲ. ತಹಶೀಲ್ದಾರ, ಎಸಿ, ಡಿಸಿಗಳಿಗೆ ಪತ್ರ ಬರೆದು ತಾವು ವಾಸಿಸುತ್ತಿರುವ ಮನೆಗಳಿಗೆ ಹಕ್ಕುಪತ್ರಗಳನ್ನು ಕೊಡಬೇಕೆಂದೂ, ತಾವು ಭಂಗಿ ಜಾತಿಯವರಾಗಿದ್ದು ಸಾರ್ವಜನಿಕ ನಲ್ಲಿಗಳಿಂದ ಕುಡಿಯುವ ನೀರು ಪಡೆಯಲಾಗುವುದಿಲ್ಲವಾದ್ದರಿಂದ ತಮ್ಮ ಮನೆಗಳಿಗೆ ಸ್ಥಗಿತಗೊಳಿಸಿದ್ದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮತ್ತೆ ಆರಂಭಿಸಬೇಕು ಎಂದು ಕೇಳಿಕೊಂಡರು.

ಆದರೆ ಅವರ ಅಹವಾಲುಗಳು ಕಿವುಡು ಕಿವಿಗಳ ಮೇಲೆ ಬಿದ್ದವು. ಯಾರಿಂದಲೂ ಭಂಗಿಗಳಿಗೆ ಒಂದು ಪ್ರತಿಕ್ರಿಯೆಯೂ ಬರಲಿಲ್ಲ. ಇದೆಲ್ಲದರಿಂದ ರೋಸತ್ತ ಭಂಗಿಗಳು ಕೊನೆಗೆ ತಮ್ಮ ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದರು. ಇದಿಷ್ಟು ಈ ಭಂಗಿಗಳ ವಿರುದ್ಧ ನಡೆದ ಷಡ್ಯಂತ್ರದ ಹಿನ್ನೆಲೆ.



ಆದರೆ ಎಲ್ಲರನ್ನು ಬೆಚ್ಚಿಬೀಳಿಸಿದ ಅವರ ಪ್ರತಿಭಟನೆಯ ನಂತರ ಏನಾಯಿತು? ಎಲ್ಲರಿಗೂ ಗೊತ್ತಿರುವಂತೆ ನೀರಾವರಿ ಮಂತ್ರಿ ಬಸವರಾಜ್ ಬೊಮ್ಮಾಯಿ ಸವಣೂರಿಗೆ ಧಾವಿಸಿದರು, ಭಂಗಿಗಳ ಸ್ಥಿತಿ ಕಂಡು ಬಹಿರಂಗವಾಗಿ ಕಣ್ಣೀರಿಟ್ಟರು. ಕೂಡಲೇ ಸ್ಥಳೀಯ ಅಧಿಕಾರಿಗಳನ್ನು ಕರೆದು ತುರ್ತು ಸಭೆ ನಡೆಸಿದರು. ಆ ಸಭೆಯಲ್ಲಿ ಭಂಗಿಗಳನ್ನು ಅವರ ಕಾಲೋನಿಯಿಂದ ಒಕ್ಕಲೆಬ್ಬಿಸಬಾರದೆಂದು, ಅವರಿಗೆ 'ನಮ್ಮ ಮನೆ' ಯೋಜನೆ ಅಡಿ ಪ್ರತಿ ಮನೆಗೆ 1.60 ಲಕ್ಷ ರೂಪಾಯಿಗಳಲ್ಲಿ 13 ಮನೆಗಳನ್ನು ಕಟ್ಟಿಸಬೇಕೆಂದು, ಈಗಿರುವ ಭಂಗಿ ಕಾಲೋನಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕೆಂದು, ಒಂಭತ್ತು ಭಂಗಿಗಳಿಗೆ ಉದ್ಯೋಗ ಕೊಡಬೇಕೆಂದು ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಭಂಗಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವುದಾಗಿಯೂ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ವಿಪರ್ಯಾಸವೆಂದರೆ ಇವತ್ತಿಗೂ ಆ ಭಂಗಿ ಕುಟುಂಬಗಳಿಗೆ ಸರಿಯಾದ ವಸತಿಯೂ ಇಲ್ಲ, ಖಾಯಂ ಉದ್ಯೋಗವೂ ಇಲ್ಲದಂತಾಗಿದೆ.

ಮೊದಲನೆಯದಾಗಿ, ಸವಣೂರಿನಿಂದ ಮೂರು ಕಿಲೋಮೀಟರ್ ದೂರದಲ್ಲಿರುವ ಪ್ರದೇಶದಲ್ಲಿ ಒಂಭತ್ತು ಮನೆಗಳನ್ನು ಸರ್ಕಾರ ಕಟ್ಟಿಸಿತು. ಅಲ್ಲಿರುವ ಪ್ರತಿ ಮನೆಗೆ ರೂ. 1.60 ಲಕ್ಷ ನೀಡಿದ್ದರೂ ಅದರಲ್ಲಿ ಅರ್ಧದಷ್ಟು ಹಣವನ್ನು ಮಾತ್ರ ಉಪಯೋಗಿಸಿ ಉಳಿದ ದುಡ್ಡು ಭ್ರಷ್ಟರ ಜೇಬು ಸೇರಿದೆ. ಅದಕ್ಕೊಂದು ಉದಾಹರಣೆ: ಆ ಮನೆಗಳಲ್ಲಿ ಆರು ಇಂಚಿನ ಸ್ಲಾಬ್ ಬದಲಾಗಿ ಎರಡೂವರೆ ಇಂಚಿನ ಸ್ಲಾಬ್‌ಗಳನ್ನು ಹಾಕಲಾಗಿದೆ. ಆ ಮನೆಗಳ ಕಾಮಗಾರಿ ಅದೆಷ್ಟು ಕಳಪೆ ಆಗಿದೆ ಎಂದರೆ ಅವುಗಳನ್ನು ಭಂಗಿಗಳಿಗೆ ಕೊಡುವ ಮುನ್ನವೇ ಕಟ್ಟಡಗಳಲ್ಲಿ ಬಿರುಕುಗಳು ಮೂಡಿ ಸೂರು ಸೋರತೊಡಗಿತ್ತು.

ಸಾಮಾನ್ಯವಾಗಿ ನಮ್ಮ ಊರು, ನಗರಗಳಲ್ಲಿ ವರ್ಷಗಳು ಕಳೆದಂತೆ ಜನ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಭಂಗಿಗಳ ವಿಷಯದಲ್ಲಿ ಆ ನಿಯಮ ಉಲ್ಟಾಪಲ್ಟಾ ಆಗಿದೆ. ಸರ್ಕಾರಿ ದಾಖಲೆಗಳ ಪ್ರಕಾರ 2001ರಲ್ಲಿ ಸವಣೂರಿನಲ್ಲಿ 17 ಭಂಗಿ ಕುಟುಂಬಗಳಿದ್ದವು. ಆದರೆ 2011ರಲ್ಲಿ ಕುಟುಂಬಗಳ ಸಂಖ್ಯೆ 11ಕ್ಕೆ ಇಳಿದಿತ್ತು. ಇದಕ್ಕೆ ಮುಖ್ಯ ಕಾರಣ ಭಂಗಿಗಳ ಕಸುಬು. ಅವರು ಅದೆಷ್ಟು ಗಲೀಜಿನಲ್ಲಿ ಕೆಲಸ ಮಾಡಬೇಕಾಗುತ್ತೆಂದರೆ ಅವರಿಗೆ ಬೇಗನೆ ರೋಗ ಬಂದು ಸಾಯುತ್ತಾರೆ. ಇವತ್ತಿಗೂ ಸವಣೂರಿನ ಭಂಗಿ ಸಮುದಾಯದಲ್ಲಿ ಯಾರೂ 40 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಇಲ್ಲ.

ಈಗ ಒಟ್ಟು 14 ಭಂಗಿ ಕುಟುಂಬಗಳಿದ್ದರೂ ಸರ್ಕಾರ ಕೇವಲ ಒಂಭತ್ತು ಮನೆಗಳನ್ನು ಕಟ್ಟಿಸಿದೆ. ಈ ಮನೆಗಳಿಗೆ ಶೌಚಾಲಯಗಳಿಲ್ಲ. ಜೊತೆಗೆ ವಿದ್ಯುತ್ ಸಂಪರ್ಕವೂ ಇಲ್ಲ. ಆದರೆ ವಿದ್ಯುತ್ ಸಂಪರ್ಕ ಕೊಡಲು ಈಗಾಗಲೇ ಭಂಗಿಗಳಿಂದ 1,20,000 ರೂಪಾಯಿಗಳನ್ನು ಸರ್ಕಾರ ಸಂಗ್ರಹಿಸಿದೆ. ಆದರೂ ಆ ಪ್ರದೇಶಕ್ಕೆ ವಿದ್ಯುತ್ ಕೊಟ್ಟಿಲ್ಲ. ಯಾಕೆ ಎಂದು ಮಂಜುನಾಥ್ ಭಂಗಿ ಕೇಳಿದರೆ "ಟೆಂಡರ್ ಕರೆಯಬೇಕು. ಸಮಯ ಬೇಕಾಗುತ್ತೆ" ಎಂಬ ಸಬೂಬನ್ನು ಕಳೆದ ಐದು ತಿಂಗಳಿಂದ ಸರ್ಕಾರ ನೀಡುತ್ತಾ ಬಂದಿದೆ.

ಇನ್ನು ಉದ್ಯೋಗದ ವಿಷಯಕ್ಕೆ ಬಂದರೆ ಅಲ್ಲೂ ಭಂಗಿಗಳಿಗೆ ನಿರಾಶೆ ಆಗಿದೆ. ಅವರಲ್ಲಿ ಒಂಭತ್ತು ಜನರಿಗೆ ಖಾಯಂ ಉದ್ಯೋಗ ನೀಡಲಾಗುವುದು ಎಂದು ಬೊಮ್ಮಾಯಿ ಹೇಳಿದ್ದರು, ಕಾನೂನು ಸಚಿವ ಸುರೇಶ್ ಕುಮಾರ್ ಅವರು ಕೂಡ ಕಳೆದ ಮೇ 10ಕ್ಕೆ ಎಲ್ಲ ಪ್ರಕ್ರಿಯೆಗಳು ಮುಗಿದು ಅವರನ್ನು ನೇಮಕ ಮಾಡಬೇಕೆಂದು ಆದೇಶಿಸಿದ್ದರು. ಆದರೆ ಇವತ್ತಿನ ತನಕ ಅವರ್‍ಯಾರಿಗೂ ಖಾಯಂ ಉದ್ಯೋಗ ಸಿಕ್ಕಿಲ್ಲ. ಬದಲಾಗಿ ಭಂಗಿಗಳಿಲ್ಲದಿದ್ದರೆ ಸವಣೂರು ಗಬ್ಬು ನಾರುತ್ತದೆಂದು ಅವರಲ್ಲಿ ಒಂಭತ್ತು ಜನರನ್ನು ಕಾಂಟ್ರಾಕ್ಟ್ ಮೇಲೆ ತೆಗೆದುಕೊಳ್ಳಲಾಗಿದೆ. ಮಂಜುನಾಥ್ ಭಂಗಿ ಅವರು ಹೇಳುವ ಪ್ರಕಾರ "ನಮಗೆ ತಿಂಗಳಿಗೆ 4,820 ರೂಪಾಯಿ ಸಂಬಳ ಎಂದು ನಿಗದಿ ಆಗಿದೆ. ಆದರೆ ನಮ್ಮ ಕೈಗೆ ಸಿಗುವುದು ಕೇವಲ 3,000 ರೂಪಾಯಿ. ಅದೂ ಪ್ರತಿ ತಿಂಗಳು ಸರಿಯಾಗಿ ಕೊಡುವುದಿಲ್ಲ. ಮೂರು-ನಾಲ್ಕು ತಿಂಗಳಿಗೊಮ್ಮೆ ಕೊಡುತ್ತಾರೆ."

ಮೊನ್ನೆ ಮೊನ್ನೆ ಇವರನ್ನು ಖಾಯಂಗೊಳಿಸುವ ನಿಟ್ಟನಲ್ಲಿ ಹನ್ನೆರಡು ಭಂಗಿಗಳನ್ನು 'ಇಂಟರ್‌ವ್ಯೂ' ಮಾಡಲಾಗಿದೆ ಎಂದು ಕೇಳಿ ನನಗೆ ಅಚ್ಚರಿ ಆಯಿತು. "ಭಂಗಿಗಳ ಇಂಟರ್‌ವ್ಯೂ ಅಂದರೆ ಏನು? ನೀವೆಷ್ಟು ಚೆನ್ನಾಗಿ ಸ್ವಚ್ಛ ಮಾಡುತ್ತೀರೆಂದು ಪರೀಕ್ಷಿಸುವುದೇ?" ಎಂದು ಕೇಳಿದೆ. ಅದಕ್ಕೆ ಮಂಜುನಾಥ್ ಅವರು "ಇಲ್ಲ, ಬದಲಾಗಿ ನಿಯಮಾನುಸಾರ ನಮ್ಮನ್ನು ಖಾಯಂ ಹುದ್ದೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ತೋರಿಸಲು ಇಂಟರ್‌ವ್ಯೂ ಎಂಬ ನಾಟಕ" ಎಂದರು. ಅವರ ಮಾತನ್ನು ದೃಢಪಡಿಸುವಂತೆ ಈಗ ಎಲ್ಲ ಭಂಗಿಗಳಿಗೆ ಉದ್ಯೋಗ ನೀಡಲಾಗುವುದಿಲ್ಲ ಎಂದು ಸರ್ಕಾರಿ ಅಧಿಕಾರಿಗಳು ಹೇಳುತ್ತಿದ್ದಾರೆ. ಅದಕ್ಕೆ ಭಂಗಿಗಳು ಎಲ್ಲರಿಗಲ್ಲದಿದ್ದರೂ ತಮ್ಮಲ್ಲಿ ಎಂಟು ಜನರಿಗಾದರೂ ಖಾಯಂ ಉದ್ಯೋಗ ಕೊಡಿ ಎಂದರೆ ಇವತ್ತು ತಹಶೀಲ್ದಾರರಿಲ್ಲ, ಕೇಸ್‌ವರ್ಕರ್ ಇಲ್ಲ, ಅವರಿಲ್ಲ, ಇವರಿಲ್ಲ ಎಂದು ಅಧಿಕಾರಿಗಳು ದಿನಗಳನ್ನು ದೂಡುತ್ತಿದ್ದಾರೆಯೇ ಹೊರತು ಅವರನ್ನು ಖಾಯಂಗೊಳಿಸಿಲ್ಲ.

ಇದೆಲ್ಲದರ ಮಧ್ಯೆ ಒಂದು ಬ್ಲಾಕ್ ಕಾಮಿಡಿ ಪ್ರಸಂಗವೂ ನಡೆದಿದೆ. ಮಂಜುನಾಥ್ ಅವರು ಹೇಳುವಂತೆ "ನಾವು ಮಲ ಸುರಕೊಂಡು ಪ್ರತಿಭಟಿಸಿದ ನಂತರ ಅಂಬೇಡ್ಕರ್ ಅಭಿವೃದ್ಧಿ ನಿಮಗದವರು ನಮಗೆ 35,000 ರೂಪಾಯಿ ಸಾಲದ ಮೇಲೆ ಹಸು, ಕುರಿಗಳನ್ನು ಕೊಟ್ಟರು. ಆಗ ನಾವು ಅವುಗಳನ್ನು ಸಾಕುವುದು, ಅವುಗಳಿಗೆಂದು ಮೇವು ತರುವುದು ನಮ್ಮಿಂದ ಸಾಧ್ಯವಿಲ್ಲ, ಇವು ನಮಗೆ ಬೇಕಿಲ್ಲ ಎಂದೆವು. ಆದರೆ ನಿಗಮದವರು ಸಾಲ ವಾಪಸ್ ಮಾಡುವ ಅಗತ್ಯವಿಲ್ಲ ಎಂದರು. ಆಗ ಒಪ್ಪಿಕೊಂಡೆವು. ಅವರು ಕೊಟ್ಟ ಹಸು, ಕುರಿಗಳು ಎಂತಹವೆಂದರೆ ಅರ್ಧಕ್ಕರ್ಧಕ್ಕೆ ಕಾಲು ಬೇನೆ ಇತ್ತು, ಹಲವು ಕುಂಟುಕುರುಡು ಪ್ರಾಣಿಗಳಾಗಿದ್ದವು. ಸ್ವಲ್ಪ ದಿನಗಳಲ್ಲೇ ಬಹಳಷ್ಟು ಪ್ರಾಣಿಗಳು ಸತ್ತು ಹೋದವು. ಮಿಕ್ಕವನ್ನು ಈಗ ಬೇರೆಯವರಿಗೆ ಸಾಕಲು ಕೊಟ್ಟಿದ್ದೇವೆ. ಈಗ ನಿಗಮದವರು ಹಸು, ಕುರಿಗೆಂದು ಕೊಟ್ಟಿದ್ದ ಸಾಲವನ್ನು ವಾಪಸ್ ಕೊಡಿ ಎನ್ನುತ್ತಿದ್ದಾರೆ. ನಾವೆಲ್ಲಿಂದ ದುಡ್ಡು ಕೊಡುವುದು?"

ಈ ಇಡೀ ವಿವಾದ ಸೃಷ್ಟಿಯಾಗಿದ್ದೇ ಕಮಲ್ ಬಂಗಾಡಿ ಪ್ರದೇಶದಲ್ಲಿರುವ ಭಂಗಿಗಳ ಮನೆಗಳನ್ನು ನೆಲಸಮ ಮಾಡಿ ಅಲ್ಲಿ ಒಂದು ಕಾಂಪ್ಲೆಕ್ಸ್ ಕಟ್ಟಿಸುವ ನಗರ ಸಭೆಯ ಹುನ್ನಾರದಿಂದ. ಈಗ ಅಧಿಕಾರಿಗಳು "ಭಂಗಿಗಳಿಗೆ ಹೊಸ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಅವರೆಲ್ಲ ಹೋಗಿ ಅಲ್ಲಿ ವಾಸ ಮಾಡಲಿ. ಕಮಲ್ ಬಂಗಾಡಿಯಲ್ಲಿರುವ ಜಾಗವನ್ನೂ ಅವರಿಗೆ ಕೊಡಲಾಗುವುದಿಲ್ಲ" ಎನ್ನುತ್ತಿದ್ದಾರೆ. ಅದರ ಅರ್ಥ ಈಗಲೂ ಸವಣೂರಿನ ನಾಯಕರು ಮತ್ತು ಅಧಿಕಾರಿಗಳು ಈಗ ಸುಮಾರು 80 ಲಕ್ಷ ರೂಪಾಯಿ ಬೆಲೆ ಬಾಳುವ ಜಾಗವನ್ನು ಭಂಗಿಗಳಿಂದ ಕಿತ್ತುಕೊಳ್ಳಬೇಕೆಂಬ ಹಠವನ್ನು ಬಿಟ್ಟಿಲ್ಲ.

ಆದರೆ ಭಂಗಿಗಳು ಅದಕ್ಕೆ ಒಪ್ಪುತ್ತಿಲ್ಲ. ಇವತ್ತಿಗೂ ಮಂಜುನಾಥ್ ಭಂಗಿ, ಅವರ ತಾಯಿ ಮತ್ತು ಕೆಲವು ಸಂಬಂಧಿಗಳು ತಮ್ಮ ಹಳೇ ಮನೆಯಲ್ಲೇ ವಾಸಿಸುತ್ತಿದ್ದಾರೆ. ಅಲ್ಲಿಗೀಗ ನೀರು ಸರಬರಾಜು ಆಗುತ್ತಿದೆಯಾದರೂ ವಿದ್ಯುತ್ ಸಂಪರ್ಕವಾಗಲಿ, ಇತರೆ ಸವಲತ್ತುಗಳಾಗಲಿ ಇಲ್ಲ. "ಯಾವ ಕ್ಷಣ ಈ ಪುರಾತನ ಕಟ್ಟಡ ನಮ್ಮ ತಲೆ ಮೇಲೆ ಬೀಳುತ್ತೋ ಗೊತ್ತಿಲ್ಲ. ಆದರೆ ಇದು ನಮ್ಮ ಜಾಗ, ಇಲ್ಲಿ ನಮ್ಮ ಮನೆ ಇದೆ. ಅದೆಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ನಮ್ಮ ದೇವರಿದೆ. ಯಾವ ಕಾರಣಕ್ಕೂ ನಾವು ಇಲ್ಲಿಂದ ಕದಲುವುದಿಲ್ಲ" ಎಂದು ಮಂಜುನಾಥ್ ಭಂಗಿ ಹೇಳಿದರು.


ಇದೆಲ್ಲವು ಏನನ್ನು ಸೂಚಿಸುತ್ತದೆ? ಕಾನೂನು ಪ್ರಕಾರ ಭಂಗಿಗಳು ತಮಗೆ ಸೇರಬೇಕಿದ್ದ ಜಾಗದಲ್ಲಿ ವಾಸಿಸಲು ತಮ್ಮ ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿ ಇಲ್ಲಿಗೆ ಒಂದೂವರೆ ವರ್ಷಗಳಾಗಿದ್ದರೂ ಅವರ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಇದು ಬಿಜೆಪಿ ಸರ್ಕಾರದ ದುಷ್ಟತನಕ್ಕೆ, ಸೊಗಲಾಡಿತನಕ್ಕೆ, ನಿಷ್ಪ್ರಯೋಜನಕ್ಕೆ ಮತ್ತೊಂದು ಉದಾಹರಣೆ ಅಷ್ಟೆ. ಇದೆಲ್ಲದಕ್ಕೆ ಮಂಜುನಾಥ್ ಭಂಗಿ ಅವರು ಹೇಳಿದ ಒಂದು ಸಾಲು ಕನ್ನಡಿಹಿಡಿದಂತಿತ್ತು. ಅವರಂದರು "ಬಸವರಾಜ್ ಬೊಮ್ಮಾಯಿ ನಮಗೆ ಹೊಸ ಬದುಕು ನೀಡುವುದಾಗಿ ಅವತ್ತು ಹೇಳಿದ್ದರು. ಆದರೆ ಇವತ್ತು ಅವರ ಮೊಬೈಲ್ ಸ್ವಿಚ್ ಆಫ್ ಆಗಿದೆ."

ಬಿಜೆಪಿ ಸರ್ಕಾರ ನಮ್ಮ ರಾಜ್ಯವನ್ನು ಕತ್ತಲೆಗೆ ದೂಡಿರುವುದನ್ನು ಸೂಚಿಸಲು ಇದಕ್ಕಿಂತ ಹೆಚ್ಚೇನು ಹೇಳುವ ಅಗತ್ಯವಿಲ್ಲ ಅಲ್ಲವೇ?


## ಅಣ್ಣಾ ಹಜಾರೆ ನೆರಳಲ್ಲಿ

# ಬೇಡಿ-ಅರವಿಂದ್ ಕ್ರೇಜಿ ಕಮಾಯಿ!

ಕಣ್ಣೆದುರಲ್ಲೇ ಭ್ರಷ್ಟಾಚಾರ ವಿಜೃಂಭಿಸುತ್ತಿದ್ದರೂ ಎಲ್ಲಾ ಮಾಮೂಲೆಂಬ ನಿರಸತ್ವ ಸ್ಥಿತಿ ತಲುಪಿದ್ದ ಭಾರತದಲ್ಲಿ ಭ್ರಷ್ಟರ ವಿರುದ್ಧ ಹೋರಾಟದ ಅಲೆ ಎಬ್ಬಿಸಿದವರು ಅಣ್ಣಾ ಹಜಾರೆ. ಅದ್ಯಾವುದೋ ಉನ್ಮಾದದಿಂದ ಕ್ಯಾಂಡಲ್ಲು ಹಿಡಿದು ಬೀದಿ ಗಿಳಿದ ಜನರ ಕಥೆ ಬಿಡಿ. ಅದರಾಚೆಗೂ ಹಬ್ಬಿದ ಭ್ರಷ್ಟಾಚಾರ ವಿರೋಧಿ ದೊಂದಿ ಬಹುತೇಕರ ಮನಸ್ಸುಗಳಲ್ಲಿ ಹೊತ್ತಿ ಉರಿದದ್ದು ನಿಜಕ್ಕೂ ಆಶಾದಾಯಕ ವಿಚಾರ. ಆದರೀಗ ಖುದ್ದು ಅಣ್ಣಾ ಹಜಾರೆ ಮತ್ತವರ ಹಿಂಬಾಲಕರ ಜತಾಪ್ರೋತ ವರ್ತನೆ, ಗುಮಾನಿ ಹುಟ್ಟಿಸುವ ನಡವಳಿಕೆಗಳಿಂದಾಗಿ ಎಲ್ಲವೂ ಅದಲು ಬದಲಾಗಿದೆ.




ಕೇಂದ್ರ ಕಾಂಗ್ರೆಸ್ ಪಕ್ಷದ ಖದೀಮರನೇಕರು ಆರಂಭದಿಂದಲೂ ಅಣ್ಣಾ ತಂಡದ ವಿರುದ್ಧ ನಾನಾ ಷಡ್ಯಂತ್ರ ನಡೆಸಿದ್ದು ನಿಜ. ತರಹೇವಾರಿ ಹಗರಣಗಳಲ್ಲಿ ಮಿಂದೇಳುತ್ತಾ ಬೆಲೆ ಏರಿಕೆ ಮುಂತಾದವುಗಳ ಮೂಲಕ ಜನರನ್ನು ಉಸಿರುಗಟ್ಟಿಸುತ್ತಿರುವ ಕೇಂದ್ರ ಸರ್ಕಾರ ಅಣ್ಣಾ ಅಲೆಗೆ ತತ್ತರಿಸಿದ್ದೂ ಸತ್ಯ. ಹಾಗಂತ ಇಂದು ಹಜಾರೆ ಅಂಡ್ ಟೀಂನ ಬಗ್ಗೆ ದೇಶದ ಪ್ರಜ್ಞಾವಂತರೆಲ್ಲಾ ಸಂಶಯ ಪಡುತ್ತಿದ್ದಾರಲ್ಲಾ? ಇದು ಖಂಡಿತಾ ಕಾಂಗ್ರೆಸ್ ಮಂದಿಯ ಕುತಂತ್ರವಲ್ಲ. ಈ ಗುಮಾನಿಯಲ್ಲಿ ವಾಸ್ತವವಿದೆ. ಅದರಲ್ಲೇ ನಾನಾ ರೀತಿಯ ಆಘಾತಕಾರಿ ವಿಚಾರಗಳೂ ಅಡಗಿವೆ.




ಅಣ್ಣಾ ಮತ್ತವರ ಕೆಲ ಹಿಂಬಾಲಕರ ಸ್ವೇಚ್ಛಾಕಾರದ ವಿರುದ್ಧ ಅವರದ್ದೇ ತಂಡದ ಸದಸ್ಯರು ಸಿಡಿದೆದ್ದು ಹೊರ ಬರುತ್ತಿದ್ದಾರೆ. ಇದರ ಬೆನ್ನಲ್ಲೇ ಕಿರಣ್ ಬೇಡಿ ಹಾಗೂ ಅರವಿಂದ ಕೇಜ್ರಿವಾಲ್‌ಗಳ ಮೇಲೆಯೇ ಹಣ ದುರುಪಯೋಗದಂಥ ಗಂಭೀರ ಆರೋಪಗಳು ಕೇಳಿಬರುತ್ತಿವೆ. ದುರಂತವೆಂದರೆ ಬೇಡಿ ಮತ್ತು ಕೇಜ್ರಿವಾಲ್ ಅವಿವೇಕಿ ಸಬೂಬುಗಳ ಮೂಲಕ ಆರೋಪಗಳನ್ನೆಲ್ಲ ಪರೋಕ್ಷವಾಗಿ ಒಪ್ಪಿಕೊಳ್ಳುತ್ತಿದ್ದಾರೆ!

ಕಿರಣ್ ಬೇಡಿಯದ್ದಂತೂ ತೀರಾ ನಾಚಿಕೆಗೇಡಿನ ನಡವಳಿಕೆ. ದೇಶದ ಪ್ರಪ್ರಥಮ ಮಹಿಳಾ ಐಪಿಎಸ್ ಅಧಿಕಾರಿಣಿಯೆಂಬ ಹೆಗ್ಗಳಿಕೆಯ ಹಾದಿಯಲ್ಲೇ ನಡೆದು ಬಂದ ಈಕೆ ಅದ್ಯಾಕೋ ವಿಪರೀತ ಯಡವಟ್ಟು ಮಾಡಿಕೊಳ್ಳುತ್ತಿದ್ದಾರೆ. ಇಂಥಾ ಬೇಡಿ ಅವಮಾನಕರ ರೀತಿಯಲ್ಲಿ ಹಣ ದುರುಪಯೋಗ ಮಾಡಿ ಸುದ್ದಿಯಲ್ಲಿದ್ದಾರೆ. ಐಪಿಎಸ್ ಅಧಿಕಾರಿಣಿಯಾಗಿದ್ದ ಬೇಡಿ ಶೌರ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಈ ಪ್ರಶಸ್ತಿ ಪಡೆದವರು ವಾಯುಯಾನದ ಸಂದರ್ಭದಲ್ಲಿ ಎಪ್ಪತ್ತೈದು ಪರ್ಸೆಂಟ್ ರಿಯಾಯಿತಿ ಟಿಕೆಟ್ ದರದೊಂದಿಗೆ ಪ್ರಯಾಣಿಸುವಂಥ ವ್ಯವಸ್ಥೆಯೂ ಇದೆ. ಕಿರಣ್ ಬೇಡಿ ಇದೇ ಫೆಸಿಲಿಟಿ ಬಳಸಿಕೊಂಡು ತಮ್ಮ ಎನ್‌ಜಿಓದ ತಿಜೋರಿ ಹಿಗ್ಗಲಿಸಿಕೊಂಡಿದ್ದೀಗ ಪಕ್ಕಾ ಆಗಿದೆ.

ಭ್ರಷ್ಟಾಚಾರ ವಿರೋಧಿ ಹೋರಾಟದ ಹಿನ್ನೆಲೆಯಲ್ಲಿ ಬೇಡಿ ಬೇರೆ ಬೇರೆ ಪ್ರದೇಶಗಳಿಗೆ ತೆರಳಿ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದರಲ್ಲಾ? ಅಂಥ ಸಂದರ್ಭದಲ್ಲೆಲ್ಲಾ ಸಂಘಟಕರಿಂದ ಬಿಜಿನೆಸ್ ಕ್ಲಾಸ್‌ನ ಟಿಕೆಟ್ ದರ ಪಡೆದುಕೊಂಡು ಸಾಮಾನ್ಯ ವರ್ಗದಲ್ಲೇ ಪ್ರಯಾಣಿಸಿದ್ದಾರೆ. ಜೊತೆಗೆ ಶೌರ್ಯ ಪ್ರಶಸ್ತಿಯ ಶೇ. 75 ರ ರಿಯಾಯಿತಿಯನ್ನೂ ಪಡೆದುಕೊಂಡಿದ್ದಾರೆ. ಉಳಿದ ಕಾಸನ್ನು ತಮ್ಮದೇ ತಿಜೋರಿ ತುಂಬಿಸಿಕೊಂಡಿದ್ದಾರೆ. ಆದರೆ ಈ ಮಾಹಿತಿಯನ್ನು ಬಹಿರಂಗಪಡಿಸುವುದು ಹಾಳು ಬಿದ್ದೋಗಲಿ, ಸಂಘಟಕರಿಗೂ ತಿಳಿಸಿಲ್ಲ!

ಈ ತಲೆಗಾರಿಕೆಯಿಂದಲೇ ಬೇಡಿ ಲಕ್ಷಾಂತರ ರೂಪಾಯಿ ಕಲೆ ಹಾಕಿದ್ದಾರೆ. ಈ ಬಗ್ಗೆ ವಿವಾದ ಸ್ಫೋಟಗೊಳ್ಳುತ್ತಲೇ 'ಹಾಗೆ ಉಳಿಸಿದ ಹಣವನ್ನು ನಾನೇನೂ ಉಪಯೋಗಿಸಿಲ್ಲ. ಆ ಹಣವೆಲ್ಲ ಎನ್‌ಜಿಓಗೆ ಜಮೆಯಾಗಿ ಸಮಾಜೋದ್ಧಾರಕ್ಕೆ ಬಳಕೆಯಾಗುತ್ತಿವೆ' ಅಂತೆಲ್ಲ ಕೊಸರಿಕೊಳ್ಳಲೆತ್ನಿಸಿದ್ದಾರೆ. ಆದರೆ ಅವರ ಉದ್ದೇಶ ಸಮಾಜೋದ್ಧಾರವೇ ಆಗಿದ್ದಲ್ಲಿ ಈ ಬಗ್ಗೆ ಬಹಿರಂಗವಾಗಿ ಮೊದಲೇ ಹೇಳಿಕೊಳ್ಳಬಹುದಿತ್ತಲ್ಲಾ? ಈಗ ಪ್ರತಿಯೊಂದು ಸಂದರ್ಭದಲ್ಲೂ ಎಲ್ಲರ ಕೆಂಗಣ್ಣು ತಮ್ಮತ್ತ ಇದೆಯೆಂದು ಹೇಳಿಕೊಳ್ಳುವ ಬೇಡಿಗೆ ಈ 'ಹಣ ಉಳಿಕೆ' ಕಸರತ್ತು ತಪ್ಪು ಸಂದೇಶ ರವಾನಿಸಬಹುದೆಂಬ ಅರಿವಿರಲಿಲ್ಲವೆ? ಅಷ್ಟಕ್ಕೂ ಆ ಹಣದ ಬಗ್ಗೆ ಸೂಕ್ತ ದಾಖಲೆ ಒದಗಿಸಿ ಟೀಕಾಕಾರರಿಗೆ ಉತ್ತರಿಸಬಹುದಲ್ಲಾ?

ಊಹ್ಞೂಂ, ಬೇಡಿ ಇದ್ಯಾವುದನ್ನೂ ಮಾಡುತ್ತಿಲ್ಲ. ಈ ಹೊತ್ತಿಗೆ ಸರಿಯಾಗಿ ಅವರದ್ದೇ ಎನ್‌ಜಿಓ. ಸಂಸ್ಥೆಗಳಾದ ಇಂಡಿಯಾ ವಿಷನ್ ಪ್ರತಿಷ್ಠಾನ್ ಹಾಗೂ ವಿಶ್ವಭಾರತಿಯ ಕೆಲ ಟ್ರಸ್ಟಿಗಳೇ ತಗಾದೆ ಶುರುವಿಟ್ಟಿದ್ದಾರೆ. ಇವರುಗಳೇ ಬೇಡಿಯ ನಡವಳಿಕೆ ಅನುಮಾನಾಸ್ಪದವಾಗಿದೆ ಎಂಬರ್ಥದ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಜೊತೆಗೆ ಇಂಥಾ ಕೆಲಸ ಮಾಡಿ ಎನ್‌ಜಿಓಗೆ ಹಣಹೊಂದಿಸಬೇಕಿಲ್ಲ ಎಂದೂ ಹೇಳಿದ್ದಾರೆ. ಬೇಡಿ ಅದಕ್ಕೂ ಕೂಡ ಸೂಕ್ತ ಸ್ಪಷ್ಟನೆ ಕೊಡುವ ಗೋಜಿಗೆ ಹೋಗಿಲ್ಲ. ಇದು ಎಲ್ಲವನ್ನೂ ಸ್ಪಷ್ಟಪಡಿಸುತ್ತಿದೆ.




ಇನ್ನು ಅಣ್ಣಾ ಹಜಾರೆಯ ಉತ್ತರಾಧಿಕಾರಿಯಂತೆ ವರ್ತಿಸುತ್ತಿರುವ ಅರವಿಂದ್ ಕೇಜ್ರಿವಾಲ್‌ರ ವಿಚಾರ. ಈತನದ್ದು ಆರಂಭದಿಂದಲೂ ಎಳಸು ಹಾಗೂ ವಿಕ್ಷಿಪ್ತ ನಡವಳಿಕೆ. ಅಣ್ಣಾ ಪರವಾಗಿ ಯಾರೊಂದಿಗೋ ಮಾತಾಡುವುದು, ಮಾಧ್ಯಮಗಳ ಮುಂದೆ ಇನ್ನೇನನ್ನೋ ಒದರಾಡುವುದು ಈತನ ಮಾಮೂಲಿ ವರಸೆ. ಇಂಥಾ ಆಸಾಮಿ ಇತ್ತೀಚೆಗೆ 'ಅಣ್ಣಾ ಸಂಸತ್‌ಗಿಂತಲೂ ದೊಡ್ಡೋರು' ಅನ್ನುವ ಮೂಲಕ ದಡ್ಡತನ ಪ್ರದರ್ಶಿಸಿದ್ದ. ಭ್ರಷ್ಟಾಚಾರ ಹನನಕ್ಕೆಂದೇ ಅವತಾರವೆತ್ತಿದವರಂತೆ ಪೋಸು ಕೊಡುವ ಕೇಜ್ರಿವಾಲ್ ಇದೀಗ ಹೋರಾಟಕ್ಕಾಗಿ ಬಂದ ಫಂಡ್‌ಗಳನ್ನು ತನ್ನ ಎನ್‌ಜಿಓ ಬೊಕ್ಕಸ ಸೇರಿಸಿ ಬೆತ್ತಲಾಗಿದ್ದಾರೆ.

ಒಂದು ಮೂಲದ ಪ್ರಕಾರ ಹೋರಾಟದ ಬೆಂಬಲಕ್ಕಾಗಿ ಹರಿದು ಬಂದ 80 ಲಕ್ಷದಷ್ಟು ಹಣ ಕೇಜ್ರಿವಾಲರ ಪರಿವರ್ತನ್ ಟ್ರಸ್ಟ್‌ಗೆ ಜಮೆಯಾಗಿದೆ. ಇದು ಹಾಲಿ ಸಿಕ್ಕ ಲೆಕ್ಕ, ಇನ್ನು ಅದ್ಯಾವ್ಯಾವ ಮೂಲದಿಂದ ಅದೆಷ್ಟು ಮೊತ್ತದ ಹಣ ಅಣ್ಣಾ ಟೀಂಗೆ ಹರಿದು ಬಂದಿತ್ತೋ, ಅದು ಯಾರ್‍ಯಾರ ಸ್ವಂತ ಎನ್‌ಜಿಓ ಸಂಸ್ಥೆಗಳ ಪಾಲಾಗಿದೆಯೋ ಯಾರಿಗೆ ಗೊತ್ತು?

ಒಟ್ಟಾರೆಯಾಗಿ ಹೇಳಬೇಕೆಂದರೆ, ಅಣ್ಣಾ ಟೀಂನೊಳಗೇ ಅದೊಂದು ರೀತಿಯ ಅರಾಜಕ ಪರಿಸ್ಥಿತಿ ತಾಂಡವವಾಡುತ್ತಿವೆ. ಕೇಜ್ರಿವಾಲ್ ಹಾಗೂ ಕಿರಣ್ ಬೇಡಿ ತಾವೇ ಎಲ್ಲವ[…] ನಿಭಾಯಿಸುತ್ತಿದ್ದಾರೆ. ಇದರನ್ವಯ ಅಣ್ಣಾ ಟೀಂನಿಂದ […] ಅನಾಹುತಕಾರಿ ನಿಲುವುಗಳು ಹೊರಬೀಳತೊಡಗಿವೆ. […]ರಿಂದಾಗಿ ಸ್ವಾಮಿ ಅಗ್ನಿವೇಶ್, ರಾಜೇಂದರ್ ಸಿಂಗ್, ಪಿ[…] ರಾಜಗೋಪಾಲ್‌ರಂಥವರು ಅಣ್ಣಾ ತಂಡದಿಂದ ಹೊರ[…]ಲಾರಂಭಿಸಿದ್ದಾರೆ. ಕಿರಣ್ ಬೇಡಿಯಂತೂ ಹೋಗೋ[…] ಹೋಗಬಹುದು, ಬರೋರು ಬರಬಹುದು ಎಂಬ[…] ಅತ್ಯಂತ ಅಸಡ್ಡಾಳ ಹೇಳಿಕೆ ಎಸೆದು ತೆಪ್ಪಗಾಗಿದ್ದಾರೆ.

ಆದರೆ ಪರಿಸ್ಥಿತಿ ಅಷ್ಟು ಸಲೀಸಾಗಿಲ್ಲ. ಹಾಗೆ ಅ[…] ತಂಡದಿಂದ ಹೊರಬಂದ ಮಂದಿ ದಿನಕ್ಕೊಂದೊಂ[…] ಬಾಂಬು ಸ್ಫೋಟಿಸುತ್ತಿದ್ದಾರೆ. ಅದರಲ್ಲಿ ಹಿಸ್ಸಾರ್ ಕ್ಷೇತ್ರ[…] ಅಣ್ಣಾ ಟೀಂ ಕಾಂಗ್ರೆಸ್ ವಿರುದ್ಧ ಪ್ರಚಾರ ನಡೆಸಿದ್ದರ ಹಿಂ[…] ಮಸಲತ್ತುಗಳೂ ಸೇರಿವೆ. ಇದು ಅರವಿಂದ್ ಕೇಜ್ರಿವಾ[…] ಸ್ವಂತ ಊರಿಗೆ ಸೇರುವ ಕ್ಷೇತ್ರ. ಆತನ ನಾನಾ ಹಂಬ[…] ದಿಂದಲೇ ಅಣ್ಣಾ ಹಜಾರೆ ಟೀಮು ಕಾಂಗ್ರೆಸ್ ವಿರುದ್ಧ ಬ[…]ಗಿಳಿದಿದೆ. ಆ ಮೂಲಕ ಭ್ರಷ್ಟಾಚಾರದ ವಿರುದ್ಧದ ಹೋರಾ[…] ಒಂದು ಪಕ್ಷವನ್ನು ನೇರ ಗುರಿಯಾಗಿ[…] ಬೆತ್ತಲಾದದ್ದೀಗ ಬಹಿರಂಗ ಸತ್ಯ. ಅಣ್ಣಾ ಟೀ[…] ಮಾಜಿ ಸದಸ್ಯರಿಂದ ಸ್ಫೋಟಗೊಂಡ ಇನ್ನೊಂ[…] ಬಾಂಬ್ ಆರೆಸ್ಸೆಸ್-ಬಿಜೆಪಿ ಯೊಂದಿಗಿ[…] ಸಂಪರ್ಕದ ಬಗೆಗಿನದ್ದು. ಅಣ್ಣಾ ಹಜಾರೆಯೊಂ[…] ಅಖಂಡ ಇಪ್ಪತ್ತೈದು ವರ್ಷಗಳಿಂದ ನಂ[…] ಹೊಂದಿರುವ ಪ್ರೊಫೆಸರ್ ಎಚ್.ಎಲ್. ದೇಸ[…] ಎಂಬುವರೇ ಇಂತಹುದೊಂದು ಸ್ಫೋಟ[…] ಮಾಹಿತಿ ಹೊರಗೆಡವಿದ್ದಾರೆ. ಅದರ ಪ್ರಕ[…] ಕಿರಣ್ ಬೇಡಿ ಹಾಗೂ ಕೇಜ್ರಿವಾಲ್ ಎಲ್[…] ಅಡ್ವಾಣಿ ಮತ್ತು ಸುಷ್ಮಾ ಸ್ವರಾಜ್‌ರ ಬಳಿ ತೆರಳಿ ಸಲಹೆ ಸೂ[…] ಪಡೆಯುತ್ತಿದ್ದರು. ಆರೆಸ್ಸೆಸ್ ಮುಖ್ಯಸ್ಥರೊಂದಿಗೂ ಇವ[…] ಅಂತಹುದೇ ನಂಟಿತ್ತು. ಇದು ಈ ನೆಲದ ಪ್ರಜ್ಞಾವಂತ[…] ಆರಂಭದಲ್ಲೇ ಗೊತ್ತಿದ್ದ ಸತ್ಯ. ಆದರೆ ಉನ್ಮಾದದ ಅಲೆ[…] ನಡುವೆ ಈ ವಾಸ್ತವ ಮಂಕಾಗಿತ್ತು.

ತೀರಾ ಭ್ರಷ್ಟಾಚಾರದ ವಿರುದ್ಧದ ಹೋರಾಟ ಒಂ[…] ಪಕ್ಷದ ಆಣತಿಯಂತೆ, ಇನ್ನೊಂದು ಪಕ್ಷದ ವಿರೋಧಿಯ[…] ಬಿಂಬಿತವಾದರೆ ಅದು ಹೆಚ್ಚುಕಾಲ ಉಸಿರಾಡುವುದು ಕ[…] ಸದ್ಯ ಅಣ್ಣಾ ಹೋರಾಟ ಈ ವಿಷಮ ಸ್ಥಿತಿಯ ಕಟ್ಟ ಕಡೆ[…] ಹಂತ ತಲುಪಿಕೊಂಡಿದೆ. ಆದರೆ ಕಿರಣ್ ಬೇಡಿಯಾಗ[…] ಕೇಜ್ರಿವಾಲ್ ಆಗಲಿ ಸೋಲಲು ತಯಾರಿಲ್ಲ. ಸಂಸದೀ[…] ವ್ಯವಸ್ಥೆಯನ್ನು ಬಲಿಕೊಟ್ಟರೂ ಸರಿ, ಗೆಲ್ಲಬೇಕೆಂಬ ಹವ[…]ಯಲ್ಲಿದ್ದಾರೆ. ಇವರ ಕಡೆಯಿಂದಾಗುವ ಸಂಭಾವ್ಯ ಅನಾಹ[…]ಗಳು ಮಾತ್ರ ನಿಜಕ್ಕೂ ಭಯ ಹುಟ್ಟಿಸುವಂತಿವೆ.

• ಸಂತೋಷ್

# ಇಸ್ರೇಲ್-ಪ್ಯಾಲೆಸ್ತೀನ್ ಯುದ್ಧ ಭೂಮಿಯಲ್ಲೊಂದು ಭಾವುಕ ಜಗತ್ತು!


ಒಂದೆರಡಲ್ಲ, ಮೂರ್‍ನಾಲ್ಕು ದಶಕಗಳ ಕಾಲ ದ್ವೇಷ, ಯುದ್ಧದ ನೆರಳಲ್ಲಿ ಬದುಕಬೇಕಾಗಿ ಬಂದರೆ ಜನರ ಪರಿಸ್ಥಿತಿ ಹೇಗಾಗಬಹುದು?

ಈ ಪ್ರಶ್ನೆಗೆ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವಣ ಯುದ್ಧ ಜೀವಂತ ಉದಾಹರಣೆಯಾಗಬಲ್ಲದು. ಇವೆರಡೂ ಭಾಗದ ಜನತೆ ಹೆಚ್ಚೂಕಡಿಮೆ ನಲವತ್ತು ವರ್ಷಗಳಿಂದೀಚೆಗೆ ಪ್ರಕ್ಷುಬ್ಧ ಪರಿಸ್ಥಿತಿಯ ಜೊತೆಗೇ ಬದುಕಿದ್ದಾರೆ. ದಿನನಿತ್ಯ ತಮ್ಮವರದ್ದೇ ಜೀವಹರಣದ ದಾರುಣಗಳನ್ನು ನೋಡಿ ಕಂಗಾಲಾಗಿದ್ದಾರೆ. ಯುದ್ಧ ಕೈದಿಗಳಾಗಿ ಸೆರೆಯಾಗಿ ಮನೆ ಮಕ್ಕಳಿಗಾಗಿ ಕಾತರಿಸುತ್ತಾ ಪ್ರತಿ ಕ್ಷಣವನ್ನೂ ಯುಗಗಳಂತೆ ಅನುಭವಿಸಿದ್ದಾರೆ. ಇದು ಯುದ್ಧವೊಂದರ ತಪ್ಪುನೆಪ್ಪುಗಳಾಚೆಯ ಭಾವುಕ ವಿಚಾರ. ಇಂತಹುದೊಂದು ಸ್ಥಿತಿ ತಾಜಾತನದಿಂದ ಹೊರಬಿದ್ದಿದೆ; ಇಸ್ರೇಲ್ ಸರ್ಕಾರ ತನ್ನ ಒಬ್ಬ ಯೋಧನಿಗಾಗಿ ಶತ್ರು ಪಾಳೆಯ ಪ್ಯಾಲೆಸ್ತೀನ್‌ನ 1,027 ಬಂಧಿಗಳನ್ನು ಬಿಟ್ಟು ಕಳಿಸುವ ಮೂಲಕ!




ಹೀಗೆ ಇಡೀ ಇಸ್ರೇಲ್ ಮನೆಮಗನೆಂದು ಭಾವಿಸಿ ಆತನ ಬರುವಿಕೆಗಾಗಿ ಕಾತರಿಸಲು ಕಾರಣನಾದ ಯೋಧ ಗಿಲಾದ್ ಶಾಲಿತ್. ಈತ ಸಂಪ್ರದಾಯದಂತೆ ಹದಿನೆಂಟನೇ ವರ್ಷಕ್ಕೆ ಸರಿಯಾಗಿ ಇಸ್ರೇಲ್ ಸೈನ್ಯ ಸೇರಿದ್ದ. ಪ್ಯಾಲೆಸ್ತೀನ್ ಮತ್ತು ಗಾಜಾಪಟ್ಟಿಯ ಜನರ ಮೇಲೆ ಇಸ್ರೇಲ್ ನಡೆಸಿದ, ನಡೆಸುತ್ತಿರುವ ದಬ್ಬಾಳಿಕೆಗಳಿವೆಯಲ್ಲಾ? ಅವು ಆಧುನಿಕ ಜಗತ್ತಿನ ಕ್ರೂರ ವಿದ್ಯಮಾನ. ಆದರೆ ಇಸ್ರೇಲ್‌ನ ಜನರ ಪಾಲಿಗೆ ಈ ಕ್ರೌರ್ಯವೂ ಕೆಲವೊಮ್ಮೆ ದೇಶಭಕ್ತಿಯಂತೆಯೇ ಕಂಡಿದೆ. ಇದೇ ಮನಸ್ಥಿತಿ ಈ ದೇಶದ ಯುವ ಸಮುದಾಯ ಸೈನ್ಯ ಸೇರಿ ಬಡಿದಾಡಲು ಪ್ರೇರೇಪಿಸುತ್ತಿದೆ. ಇಂತಹುದೇ ಸ್ಥಿತಿಯಲ್ಲಿ ಸೈನ್ಯ ಸೇರಿದವನು ಗಿಲಾದ್ ಶಾಲಿತ್.

2006 ರಲ್ಲಿ ನಡೆದೊಂದು ಯುದ್ಧದ ಸಂದರ್ಭದಲ್ಲಿ ಹಮಾಸ್‌ನ ಇಬ್ಬರು ಯೋಧರು ಅಸುನೀಗಿದ್ದರು. ಗಿಲಾದ್ ಶಾಲಿತ್‌ನ ಸಹವರ್ತಿಗಳೇ ಸತ್ತು ಬಿದ್ದರು. ಇಸ್ರೇಲ್ ದಬ್ಬಾಳಿಕೆಗಳಿಂದ ರೋಸತ್ತು ಹೋಗಿದ್ದ ಹಮಾಸ್ ಯೋಧರ ಕೈಗೆ ಶಾಲಿತ್ ತಗುಲಿಕೊಂಡ. ಇದಾದ ಬಳಿಕ ಆತ ಬದುಕಿದ್ದಾನೆಂಬುದಕ್ಕೂ ಪುರಾವೆಗಳಿಲ್ಲದಂಥ ಸ್ಥಿತಿ ನಿರ್ಮಾಣಗೊಂಡಿತ್ತು. ವಿನಾಕಾರಣ ಪ್ಯಾಲೆಸ್ತೀನಿಗರನ್ನು ಕಾಲಾಂತರಗಳಿಂದ ಬಂಧಿಸಿಟ್ಟುಕೊಂಡಿದ್ದ ಇಸ್ರೇಲ್ ಗಿಲಾದ್‌ನ ಬಿಡುಗಡೆಗಾಗಿ ಶತಪ್ರಯತ್ನ ನಡೆಸಿತು. ಆದರೆ ದಬ್ಬಾಳಿಕೆ, ಮೊಂಡುತನಗಳನ್ನು ಬಿಡಲಿಲ್ಲ. ಈ ನಡುವೆ ವಿಶ್ವಮಟ್ಟದ ವಿವಿಧ ಸಂಘಸಂಸ್ಥೆಗಳು, ಅಮೆರಿಕಾದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ಸೇರಿದಂತೆ ಅನೇಕರು ಉಭಯ ದೇಶಗಳ ನಡುವಿನ ಸಂಧಾನ ನಡೆಸಲು ಶ್ರಮಿಸಿದರು. ಆದರೆ ಹಮಾಸ್ ಯೋಧರು ಪಟ್ಟುಬಿಡಲಿಲ್ಲ. ಆದರೆ 2008 ರ ಹೊತ್ತಿಗೆ ಗಿಲಾದ್ ಕೈಬರಹದ 3 ಪತ್ರಗಳನ್ನು ಬಿಡುಗಡೆಗೊಳಿಸಿದರು. 2009 ರಲ್ಲಿ ವೀಡಿಯೋ ಟೇಪೊಂದನ್ನು ಬಹಿರಂಗಪಡಿಸಿದರು. ಆದರೆ ಆನಂತರದ ಗಿಲಾದ್ ಬದುಕಿದ್ದಾನೆಂಬುದೇ ಡೌಟು ಹೊಡೆಸುವಂಥ ಸನ್ನಿವೇಶಗಳು ನಿರ್ಮಾಣಗೊಂಡವು.




ಇದರಿಂದಾಗಿ ಕಂಗೆಟ್ಟ ಇಸ್ರೇಲ್ 'ಗಿಲಾದ್‌ಗೆ ದೈಹಿಕವಾಗಿ ತೊಂದರೆ ಕೊಟ್ಟರೆ ಸುಮ್ಮನಿರೋದಿಲ್ಲ' ಅಂತ ಗುಟುರು ಹಾಕಿತು. ಪ್ಯಾಲೆಸ್ತೀನ್ ಮತ್ತು ಹಮಾಸ್ ಯೋಧರು 'ವಿನಾಕಾರಣ ಬಂಧಿಸಿಟ್ಟಿರುವ ನಮ್ಮವರನ್ನು ಬಿಡುಗಡೆಗೊಳಿಸಿ, ಗಿಲಾದ್‌ನನ್ನು ಬಿಟ್ಟು ಕಳಿಸುತ್ತೇವೆ' ಅಂತ ನಿಖರವಾಗಿ ಹೇಳಿದರೂ ಇಸ್ರೇಲ್‌ನ ಆಡಳಿತಕಾರರು ಅಹಂಕಾರ ಬಿಟ್ಟುಕೊಡಲಿಲ್ಲ. ಈ ನಡುವೆಯೇ ಗಾಜಾಪಟ್ಟಿಯ ಮೇಲೆ ದಾಳಿ ನಡೆಸಿ ಹುಂಬತನ ಪ್ರದರ್ಶಿಸಿತು. ಈ ಹೊತ್ತಿಗಾಗಲೇ ಶಾಹಿದ್ ಬದುಕಿರುವ ಕುರುಹುಗಳು ಮಾಸತೊಡಗಿದ್ದವು. ಫ್ರಾನ್ಸ್, ಜರ್ಮನಿ, ರಷ್ಯಾ-ಅಷ್ಟೇ ಯಾಕೆ ಖುದ್ದು ಪೋಪ್ ಮನವೊಲಿಸಿದರೂ ಹಮಾಸ್ ನಿಲುವು ಸಡಿಲಿಸಲಿಲ್ಲ. ಇಸ್ರೇಲ್ ಒರಟುತನವನ್ನೂ ಸಡಿಲಿಸಲಿಲ್ಲ.

ಇದೆಲ್ಲವನ್ನು ಕಂಡು ಗಿಲಾದ್‌ನ ತಂದೆ ತಾಯಿಯರು ಕಂಗಾಲಾದರು. ಕೇವಲ 25 ವರ್ಷದ ತಮ್ಮ ಮಗ ಆಡಳಿತಗಾರರ ಹುಂಬತನಕ್ಕೆ ಬಲಿಬೀಳುವುದು ಗ್ಯಾರಂಟಿಯೆಂದು ಹೆತ್ತಕರುಳು ಮರುಗಲಾರಂಭಿಸಿತು. ಆಳುವ ಮಂದಿಗೆ ಎಷ್ಟೇ ಮೊರೆಯಿಟ್ಟರೂ ಪ್ರಯೋಜನವಾಗದಿದ್ದಾಗ ಈ ದಂಪತಿ ಮಗನ ಬಿಡುಗಡೆಯ ಕುರಿತಾಗಿ ಜನಾಭಿಪ್ರಾಯ ಸಂಗ್ರಹಿಸಲು ತಮ್ಮ ಹಳ್ಳಿಯಿಂದ ಜೆರುಸಲೆಂವರೆಗೆ ಪಾದಯಾತ್ರೆ ಹೊರಟರು. ಈ ಸಂದರ್ಭದಲ್ಲಿ ಇಡೀ ದೇಶವೇ ಗಿಲಾದ್‌ನೆಡೆಗಿನ ಪ್ರೀತಿ ಪ್ರಕಟಿಸಲಾರಂಭಿಸಿತು. ಇದೇ ಚಳವಳಿಯ ರೂಪದಲ್ಲಿ ಇಸ್ರೇಲ್ ಅನ್ನು ಆವರಿಸಿಕೊಂಡಿತು. ವಾಹನಗಳು, ಸಾರ್ವಜನಿಕ ಸ್ಥಳಗಳಲ್ಲೆಲ್ಲಾ 'ಫ್ರೀ ಗಿಲಾದ್' ಎಂಬ ಘೋಷಣೆಗಳು ಮೊಳಗಲಾರಂಭಿಸಿದವು. ಇದೆಲ್ಲದರ ನಡುವೆ ಗಿಲಾದ್‌ನ ತಂದೆ-ತಾಯಿ ಪ್ರಧಾನಿ ಬೆಂಜಮಿನ್ ನೆಥನ್‌ಯಾಹೂ ಮನೆ ಮುಂದೆ ನಿರಶನ ಆರಂಭಿಸಿದರು.

ನೋಡನೋಡುತ್ತಲೇ ಗಿಲಾದ್‌ನ ಸುರಕ್ಷಿತ ಬಿಡುಗಡೆಗಾಗಿ ದೇಶದ ಮೂಲೆ ಮೂಲೆಗಳಿಂದ ಜನಾಗ್ರಹಗಳು ಸ್ಫೋಟಗೊಳ್ಳತೊಡಗಿದವು. ಅದಾಗಲೇ ದೇಶಾದ್ಯಂತ ಪ್ರತಿಯೊಬ್ಬರೂ ಶತ್ರು ಪಾಳೆಯದ ಬಂಧಿಯಾಗಿದ್ದ ಗಿಲಾದ್‌ನನ್ನು ಮನೆ ಮಗನೆಂದು ಪರಿಭಾವಿಸಿದ್ದರು. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಖಾಲಿ ತಟ್ಟೆಯೊಂದನ್ನು ಪಂಕ್ತಿಯಲ್ಲಿಟ್ಟು ಗಿಲಾದ್ ಬರುವಿಕೆಗಾಗಿ ಕಾತರಿಸುತ್ತಿದ್ದರು. ಇಂಥಾ ಅಭಿಮಾನ ಗಿಲಾದ್‌ನ ತಂದೆ ತಾಯಿಯರ ಪಾದಯಾತ್ರೆಯ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಪ್ರಕಟವಾಯಿತು. ಇದರನ್ವಯ ಕಳೆದ ವರ್ಷ ಇಡೀ ದೇಶ 5 ನಿಮಿಷಗಳ ಕಾಲ ಮೌನವ್ರತ ಆಚರಿಸಿ ಆತನ ಬಿಡುಗಡೆಗೆ ಪ್ರಾರ್ಥಿಸಿತು. ಒಟ್ಟಾರೆಯಾಗಿ ಇಡೀ ದೇಶ ಗಿಲಾದ್ ಬಿಡುಗಡೆಯ ವಿಚಾರದಲ್ಲಿ ಸಮಾ[…] ಅಭಿಪ್ರಾಯಕ್ಕೆ ಬಂದಿತ್ತು. ಇದರಿಂದ ವಿಚಲಿತನಾದ ಪ್ರಧಾನಿ ಬೆಂಜಮಿನ್ ಹಮಾಸ್‌ನ ಒತ್ತಾಯಕ್ಕೆ ತಲೆ ಬಾಗಲೇ ಬೇಕಾಯಿತು. ಅದರನ್ವಯ ಈ ತಿಂಗ[…] ಎಂಟನೇ ತಾರೀಖಿನಂದು ಸಾವಿರದ ಇಪ್ಪತ್ತೇಳು ಪ್ಯಾಲೆಸ್ತೀನಿ ಖೈದಿಗಳನ್ನು ಬಿಟ್ಟು ಕಳಿಸಿದ ಇಸ್ರೇಲ್ ತನ್ನ ಯೋಧ ಶಾಲಿತ್‌ನನ್ನು ಬರಮಾಡಿಕೊಂಡಿತು.

ಈ ಸಂದರ್ಭದಲ್ಲಿ ಎರಡೂ ಬಣಗಳಲ್ಲಿ ಸೃಷ್ಟಿಯಾದ ಸಂತಸ, ಭಾವುಕತೆಗಳ[…] ದ್ವೇಷ, ಯುದ್ಧಗಳ ವಿಕ್ಷಿಪ್ತ ವಾತಾರವಣವನ್ನು ಅನಾವರಣಗೊಳಿಸುವಂತಿದ್ದವು. ಇಸ್ರೇಲಿಗರು ತಮ್ಮೆಲ್ಲರ ಮನೆ ಮಗ ಗಿಲಾದ್‌ನ ಆಗಮನದಿಂದ ಖುಷಿಯಾದರೆ ಪ್ಯಾಲೆಸ್ತೀನಿಯರು ಅದೆಷ್ಟೋ ವರ್ಷಗಳಿಂದ ಅಗಲಿದ್ದ ಮಗ, ಮಗಳು, ಅಮ[…] ತಮ್ಮ, ತಂದೆ, ತಂಗಿ ಹೀಗೆ ನಾನಾ ಬಂಧುಗಳನ್ನು ಬರಮಾಡಿಕೊಂಡು ಆನಂ[…] ತುಂದಿಲರಾಗಿದ್ದರು. ಆದರೆ 1967 ರ ಸುಮಾರಿಗೆ ಹೊತ್ತಿಕೊಂಡ ಈ ಯು[…] ತಣ್ಣಗಾಗುವ ಯಾವ ಸೂಚನೆಗಳೂ ಇಲ್ಲ. ಇಸ್ರೇಲ್ 60 ರ ದಶಕದಲ್ಲಿ ಆಕ್ರಮಿ[…] ಕೊಂಡ ಪ್ಯಾಲೆಸ್ತೀನ್ ಪ್ರಾಂತ್ಯದ ಭೂಮಿ ಎರಡೂ ಪ್ರದೇಶಗಳ ಜನಜೀವನವನ್ನು ಇಂದಿಗೂ ಕಂಗಾಲಾಗಿಸುತ್ತಿದೆ. ಇಸ್ರೇಲ್‌ನ ದಬ್ಬಾಳಿಕೆಯಂತೂ ಈ ಕ್ಷಣಕ್ಕೂ ನಿಂತಿಲ್ಲ. ಒಂದು ಅಂದಾಜಿನ ಪ್ರಕಾರ ಈ ಕ್ಷಣಕ್ಕೂ ಇಸ್ರೇಲ್ ವಶದಲ್ಲಿ ಐದು ಸಾವಿರದಷ್ಟು ಪ್ಯಾಲೆಸ್ತೀನಿಯರು ಬಂಧಿಗಳಾಗಿದ್ದಾರೆ. ಇದುವರೆಗೆ ಇಸ್ರೇಲ್ ಏಳು ಲಕ್ಷದಷ್ಟು ಅಮಾಯಕ ಪ್ಯಾಲೆಸ್ತೀನಿಯರನ್ನು ಬಂಧನದ ನೆಪದಲ್ಲಿ ಕಾಡಿದ ಚಿತ್ರಹಿಂಸೆ ನೀಡಿದೆ. ಅದೆಷ್ಟು ಜನರನ್ನು ಬಲಿಬೇಳಿಸಿದೆಯೋ ಯಾರಿಗೆ ಗೊತ್ತು!

ಪ್ಯಾಲೆಸ್ತೀನ್ ಪ್ರಾಂತ್ಯ ಇಸ್ರೇಲ್ ಆಕ್ರಮಣದಿಂದ ಯಾವ ಪ[…] ತತ್ತರಿಸಿದೆಯೆಂದರೆ, ಅಲ್ಲಿನ ಪ್ರತಿ ಕುಟುಂಬದ ಕನಿಷ್ಠ ಒಬ್ಬನಾದರೂ ಇಸ್ರೇಲ್ ಜೈಲು ವಾಸ ಅನುಭವಿಸಿರುತ್ತಾನೆ. ಪ್ರತಿಯೊಬ್ಬರೂ ಇಸ್ರೇಲ್ ದುರಾಕ್ರಮಣಕ್ಕೆ ತಮ್ಮ ಬಂಧುಗಳನ್ನು ಕಳೆದುಕೊಂಡಿದ್ದಾರೆ. ಪ್ಯಾಲೆಸ್ತೀನರಿಗೆ ನೆರಳಾಗಬಲ್ಲ ಒಂದು ದೇಶವ[…] ಇಲ್ಲ, ಜೀವಕ್ಕೆ ಖಾತ್ರಿಯೂ ಇಲ್ಲ, ಇಸ್ರೇಲ್ ವಿರುದ್ಧ ಬಡಿದಾಡಿ ಸತ್ತವರಿಗೆ ಸ್ವಾತಂ[…] ಹೋರಾಟಗಾರರೆಂಬ ಬಿರುದು, ಬದುಕಿರುವವರಿಗೆ ಮುಂದೇನಾಗುತ್ತದೋ ಎಂಬ ಚಿಂತೆ. ಬಡ ಪ್ಯಾಲೆಸ್ತೀನಿಯರಿಗೆ ಸದ್ಯ ಇದೇ ಬದುಕು!

ಇಸ್ರೇಲ್‌ನ ಪರಿಸ್ಥಿತಿಯೇ ವಿಚಿತ್ರ. ಇಸ್ರೇಲ್‌ನಲ್ಲಿ ಗಂಡಾಗಲಿ, ಹೆಣ್ಣಾಗ[…] ಹದಿನೆಂಟು ವರ್ಷ ತುಂಬಿದ ಯುವ ಸಮುದಾಯ ಸೈನ್ಯ ತರಬೇ[…] ಪಡೆಯಲೇಬೇಕು. ಪ್ರತಿ ಕುಟುಂಬದಲ್ಲಿ ಒಬ್ಬರಾದರೂ ಸೈನ್ಯ ಸೇರುವುದ[…] ಖಡ್ಡಾಯ. ಹೆತ್ತ ಮಂದಿಗೆ ತಮ್ಮ ಮಕ್ಕಳು ದೇಶಕ್ಕಾಗಿ ಹೋರಾಡುತ್ತಿದ್ದಾರೆಂ[…] ಹೆಮ್ಮೆ, ಪ್ರತೀಕ್ಷಣ ಹೆತ್ತ ಕುಡಿಗಳ ಸಾವಿನ ಭಯ. ಇಂಥಾ ಪರಿಸ್ಥಿತಿ ಇನ್[…] ಒಂದಷ್ಟು ಕಾಲ ಮುಂದುವರೆಯುವುದು ನಿಚ್ಚಳವಾಗಿದೆ.


ಇದೆಲ್ಲದರ ನಡುವೆ ಎರಡೂ ಬಣಗಳ ಭಾವುಕತೆ, ಅನಿವಾರ್ಯತೆ ಮನು[…] ಜಗತ್ತನ್ನು ಆರ್ದ್ರಗೊಳಿಸುತ್ತದೆ. ಇಸ್ರೇಲ್‌ನ ಕೊಲೆಗಡುಕತನ, ಭಂಡತನ ಹೇಸಿ[…] ಹುಟ್ಟಿಸುತ್ತದೆ.


• ಬಾಗಿಲಗದ[…]

# ಬಾಬಿ ಸೆರಗಲ್ಲಿ ಒರಟನ ಒದ್ದಾಟ!

'ಒರಟ' ಪ್ರಶಾಂತ ಎಂಬ ಅರೆಬರೆ ಹೀರೋನ ಪತನವನ್ನು 'ಲಂಕೇಶ್' ಎರಡು ವಾರಗಳ ಹಿಂದೆಯೇ ಬಿಚ್ಚಿಟ್ಟಿತ್ತು. ಇದರ ಬೆನ್ನಿಗೇ ಪ್ರಶಾಂತನ ಇನ್ನೊಂದಿಷ್ಟು ಲಫಡಾ ಚೇಷ್ಟೆಗಳು ಹೊರಬಿದ್ದಿವೆ. ಆ ವಿವರಗಳು ಇಲ್ಲಿವೆ...

ಕಳೆದೊಂದು ತಿಂಗಳಿನಿಂದ ಮನೆಗೂ ಹೋಗದೆ, ಹೆಂಡತಿ ಮಗುವಿನ ಕಡೆಗೆ ಗಮನವನ್ನೂ ಕೊಡದೆ ಪರಾರಿಯಾಗಿದ್ದ ಪ್ರಶಾಂತ ಮೊನ್ನೆ ದಿನ ಖುದ್ದು ತನ್ನ ಪತ್ನಿ ಶಶಿರೇಖಾಳವರ ಕೈಗೇ ಸಿಕ್ಕಿಬಿದ್ದಿದ್ದ.





ಅದು ಸಂಜಯನಗರ, ಆರ್.ಎಂ.ವಿ. 2ನೇ ಹಂತದಲ್ಲಿರುವ ನಂಜೇಗೌಡ ಅಪಾರ್ಟ್‌ಮೆಂಟು. ಮಾಧ್ಯಮದವರ ಸಮೇತ ಅಪಾರ್ಟ್‌ಮೆಂಟ್ ಹೊಕ್ಕ ಶಶಿರೇಖಾ ಆ ಫ್ಲಾಟಿನ ಕದ ಬಡಿದಳು. ಒಳಗಿನಿಂದ ಬಂದು ಬಾಗಿಲು ತೆರೆದದ್ದು ಅದೇ ಸೇಮ್ ಓಲ್ಡ್ ಒರಟ ಪ್ರಶಾಂತ!

ಪತ್ನಿಯನ್ನು ಕಂಡು ಪ್ರಶಾಂತ ಗಾಬರಿಗೊಂಡ. ಆತನ ಎರಡೂ ಕಾಲುಗಳು ಥರಥರಾ ಅಂತ ಬ್ರೇಕ್ ಡ್ಯಾನ್ಸ್ ಮಾಡಲು ಶುರುಮಾಡಿದವು. ಯಾಕೆಂದರೆ ಮನೆಯ ಒಳಗೆ ಪ್ರಶಾಂತನೊಂದಿಗೆ ಮತ್ತೊಬ್ಬ ಹುಡುಗಿ ಇದ್ದಳು. ಆಕೆ ಬೇರೆ ಯಾರೂ ಅಲ್ಲ, ಪ್ರಶಾಂತನ ಎಂಟು ವರ್ಷದ ಸಂಸಾರದ ಯುದ್ಧ ನುಸುಳಿ ಎಲ್ಲ ಅವಾಂತರಗಳಿಗೂ ಕಾರಣಳಾಗಿರುವ ಬಾಬಿ ಗೌಡ ಯಾನೆ ಯುವರಾಣಿ!

ಶಶಿರೇಖಾ, ನಾಪತ್ತೆಯಾಗಿದ್ದ ತನ್ನ ಗಂಡನನ್ನು ಹುಡುಕಲು ಸಿಕ್ಕಸಿಕ್ಕ ಚಾನೆಲ್ಲುಗಳ ಮುಂದೆ ಅನೌನ್ಸ್‌ಮೆಂಟು ಕೊಡುತ್ತಾ, ಎಲ್ಲೆಂದರಲ್ಲಿ ಅಲೆಯುತ್ತಿದ್ದರೆ ಪ್ರಶಾಂತ ಮಾತ್ರ ಜಗತ್ತಿನ ಪರಿವೆಯೇ ಇಲ್ಲದಂತೆ ತನ್ನ ಗರ್ಲ್ ಫ್ರೆಂಡ್ ಬಾಬಿ ಗೌಡ ಜೊತೆ ಮಜಭೂತಾಗಿ ಕುಡಿಯುತ್ತಾ ಮಜಾ ಮಾಡುತ್ತಿದ್ದ.

ತನ್ನ ಗಂಡ ಬೇರೊಬ್ಬಳ ಜೊತೆ ಹೀಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಹಾಕಿಕೊಂಡಿದ್ದರೆ, ಬೇರೆ ಯಾರೇ ಹೆಂಡತಿಯಾದರೂ ಕಾಲಿನ ಮೆಟ್ಟು ಕಿತ್ತುಹೋಗುವ ಹಾಗೆ ಮುಖಕ್ಕೆ ಹೊಡೆಯುತ್ತಿದ್ದರು. ಅಥವಾ ರಸ್ತೆಗಿಳಿದು ರಂಪಾಟ ಮಾಡುತ್ತಿದ್ದರು. ಆದರೆ ಶಶಿರೇಖಾ ಕೂಡಲೇ ಪೊಲೀಸ್ ಕಂಟ್ರೋಲ್ ರೂಮ್‌ಗೆ ಫೋನ್ ಮಾಡಿ ಸಂಜಯನಗರದ ಪೊಲೀಸರನ್ನು ಸ್ಥಳಕ್ಕೆ ಕರೆಸಿಕೊಂಡಳು. "ಪ್ರಶಾಂತನ ವಿರುದ್ಧ ಈಗಾಗಲೇ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ದಯಮಾಡಿ ಈತನನ್ನು ಬಂಧಿಸಿ" ಎಂದು ತನ್ನ ವಕೀಲರ ಮೂಲಕ ಪೊಲೀಸರಿಗೆ ಹೇಳಿಸಿದಳು.

ಹೊಯ್ಸಳ ವ್ಯಾನಿನಲ್ಲಿ ಬಂದ ಅದ್ಯಾರೋ ಡಬಲ್ ಸ್ಟಾರ್ ಪೊಲೀಸಪ್ಪನಿಗೆ ಪ್ರಶಾಂತನ ಮೇಲೆ ಅದೇನು ಅಭಿಮಾನ ಉಕ್ಕಿತೋ? ಸಿಕ್ಕಿಬಿದ್ದ ಪ್ರಶಾಂತನನ್ನು ಹೊಯ್ಸಳ ಜೀಪು ಹತ್ತಿಸುವ ಬದಲು ಬಾಬಿ ಗೌಡಳ ಕಾರಿನಲ್ಲೇ ಪ್ರಶಾಂತನ ಸಮೇತ ಕಾರಿನಲ್ಲಿ ಕೂತುಬಿಟ್ಟ.

ನಂಜೇಗೌಡ ಅಪಾರ್ಟ್‌ನಿಂದ ಸಂಜಯನಗರ ಠಾಣೆಗೆ ಬರುವ ಹೊತ್ತಿಗೆ ಆ ಸಬ್‌ಇನ್ಸ್‌ಪೆಕ್ಟರ್ ಪ್ರಶಾಂತನ ಜೊತೆ ಅದೇನು ಡೀಲು ಕುದುರಿಸಿಕೊಂಡನೋ ಗೊತ್ತಿಲ್ಲ. ಠಾಣೆಗೆ ಬಂದಕೂಡಲೇ ಪ್ರಶಾಂತ ಮತ್ತು ಬಾಬಿ ಗೌಡಳನ್ನು ಸರ್ಕಲ್ ಇನ್ಸ್‌ಪೆಕ್ಟರ್ ಪ್ರಭು ಶಂಕರ್ ಅವರ ಮುಂದೆ ಕೂರಿಸಿದ. ಅಷ್ಟೇ ಅಲ್ಲ, ಕಳೆದೊಂದು ತಿಂಗಳಿನಿಂದ ಹಲಸೂರು ಗೇಟ್ ಪೊಲೀಸರು ಹುಡುಕಲು ಹೆಣಗಾಡಿದ್ದ ಪ್ರಶಾಂತನನ್ನು ಹಿಡಿದು ಪೊಲೀಸರಿಗೊಪ್ಪಿಸಿದ ಶಶಿರೇಖಾಳನ್ನು ಠಾಣೆಯಲ್ಲಿ ಯಾರೂ ಕ್ಯಾರೇ ಅನ್ನಲಿಲ್ಲ. ಐದು ಹತ್ತು ನಿಮಿಷ ಪ್ರಶಾಂತ ಮತ್ತು ಆತನ ಪ್ರಿಯತಮೆ ಬಾಬಿ ಗೌಡಳ ಜೊತೆ ಗುಪ್ತವಾಗಿ ಮಾತಾಡಿದ ಪ್ರಭುಶಂಕರ್ ಸಾಹೇಬರು "ಡೋಂಟ್ ವರಿ. ನೀವಿನ್ನು ಹೊರಡಿ. ನಾಳೆ ಹಲಸೂರು ಗೇಟ್ ಸ್ಟೇಷನ್‌ಗೆ ಹೋಗಿ ಏನಿದ್ದರೂ ಡೀಲ್ ಮಾಡಿಕೊಳ್ಳಿ" ಎಂದು ನಗುನಗುತ್ತಾ ಪ್ರಶಾಂತನನ್ನು ಬೀಳ್ಕೊಟ್ಟುಬಿಟ್ಟರು.

"ಯಾವ ಪೊಲೀಸರಿಗೂ ನನ್ನನ್ನು ಏನೂ ಮಾಡೋಕಾಗೊಲ್ಲ' ಎಂಬ ಗರ್ವದಲ್ಲೇ ಸಂಜಯನಗರ ಪೊಲೀಸ್ ಠಾಣೆಯ ಗೇಟು ಜಿಗಿದ ಪ್ರಶಾಂತ ಸೀದಾ ತನ್ನ ಹೊಸ ಲವರ್ ಬಾಬಿ ಗೌಡಳ ವೆರ್ನಾ ಕಾರು ಏರಿ ಹೊರಟೇ ಬಿಟ್ಟಿದ್ದಾನೆ.

– ಇದು ಅಸಹಾಯಕ ಹೆಣ್ಣು ಮಗಳೊಬ್ಬಳು ಪೊಲೀಸರನ್ನು ನಂಬಿದ್ದಕ್ಕೆ ಸಿಕ್ಕ ಪ್ರತಿಫಲ.

ಹಾಗೆ ಪೊಲೀಸರ ಸಮ್ಮತಿ ಪಡೆದು ತಪ್ಪಿಸಿಕೊಂಡ ಪ್ರಶಾಂತ ಈವರೆಗೂ ಯಾವೊಬ್ಬರ ಕೈಗೂ ಸಿಕ್ಕಿಲ್ಲ.

## ಪತ್ರಕರ್ತನ ಮಗಳಂತೆ!

ಸದ್ಯ ಪ್ರಶಾಂತನ ಜೊತೆಗಾತಿಯಾಗಿರುವ ಬಾಬಿ ಗೌಡ ಉರುಫ್ ಯುವರಾಣಿ 'ಯಾರೋ ಜರ್ನಲಿಸ್ಟ್ ಮಗಳಂತೆ' ಅನ್ನೋ ಮಾತು ಕೇಳಿಬರುತ್ತಿದೆ. ಅದ್ಯಾರಪ್ಪಾ ಆ ಪತ್ರಕರ್ತ ಎಂದು ಹುಡುಕಹೊರಟರೆ ಹಿಂದೆ 'ಕಿಡಿ' ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ರಾಮಚಂದ್ರಗೌಡರ ಮಗಳಂತೆ ಈ ಬಾಬಿ ಗೌಡ.

ಈ ಬಾಬಿ ಗೌಡ ತೀರಾ ಸಣ್ಣ ವಯಸ್ಸಿನ ಹುಡುಗಿಯೇನಲ್ಲ. ಈಕೆಗೆ 37 ವರ್ಷ ವಯಸ್ಸಂತೆ. ಪೇಜ್ ಥ್ರೀ ಪಾರ್ಟಿಗಳಲ್ಲಿ, ಸಿನಿಮಾ ಈವೆಂಟ್‌ಗಳಲ್ಲಿ ಈಕೆಯ ಹಾಜರಾತಿ ಇದ್ದೇ ಇರುತ್ತದೆ. ಕಳೆದ ವರ್ಷ ಈಕೆಯ ಬರ್ತ್ ಡೇ ಪಾರ್ಟಿಗೆ ರೆಬೆಲ್‌ಸ್ಟಾರ್ ಅಂಬರೀಶ್‌ರಿಂದ ಹಿಡಿದು ಲೂಸ್ ಮಾದ, ಮುರಳಿ, ಸೃಜನ್ ಲೋಕೇಶ್, ಆದಿ ಲೋಕೇಶ್, ಡೆಡ್ಲಿ ಆದಿತ್ಯ ಯಶ್, ತರುಣ್, ಮಯೂರ್ ಪಟೇಲ್ ತನಕ ಎಲ್ಲ ನಟರೂ ಹಾಜರಾಗಿದ್ದರು.

ಮಾಡೆಲಿಂಗ್, ರ್‍ಯಾಂಪ್ ಶೋಗಳನ್ನು ಕಂಡಕ್ಟ್ ಮಾಡುವ ಬಾಬಿ ಗೌಡ ತೆರೆಯ ಮೇಲೆ ಎಂದೂ ಬಾರದೇ ಇದ್ದರೂ ಆಕೆಯ ಬಗ್ಗೆ ನಮ್ಮ ಚಿತ್ರರಂಗದವರೇ ಯಾಕಿಷ್ಟು ಅಭಿಮಾನ ಹೊಂದಿದ್ದಾರೋ ಗೊತ್ತಿಲ್ಲ. ಬಾಬ್ಬಿಗೌಡಳ ಪೂರ್ವಾಪರ ಕೆದಕುತ್ತಾ ಹೋದರೆ ಇನ್ನೊಂದು ಘೋರ ಮಾಹಿತಿ ಕೇಳಿಬರುತ್ತಿದೆ. ಅದೇನೆಂದರೆ, ಇದೇ ಬಾಬ್ಬಿಯ ತಾಯಿ ಬೈರಮಂಗಲ ಗಿರಿಜಮ್ಮ ಎಂಬಾಕೆ ಬೆಂಗಳೂರಿನ ಮಾಂಸದ ಅಡ್ಡೆಯ ಹಳೇ ಏಜಂಟಂತೆ.

ಅದೆಲ್ಲ ಏನೇ ಇರಲಿ, ಪ್ರಶಾಂತನೆಂಬ ಹೀರೋ ಈಕೆಯ ಹಿಂದೆ ಬಿದ್ದಮೇಲೆ ತನ್ನ ಪತ್ನಿಗೆ ಕೊಟ್ಟ ಕಾಟ ಇದೆಯಲ್ಲಾ? ಯಾವ ಹೆಣ್ಣುಮಕ್ಕಳೂ ಅಂಥವನ್ನೆಲ್ಲಾ ಸಹಿಸಲು ಸಾಧ್ಯವಿಲ್ಲ.

ಮದುವೆಯಾದ ಎಂಟು ವರ್ಷಗಳಿಂದ ನೆಟ್ಟಗೇ ಇದ್ದ ಪ್ರಶಾಂತ ಈಚೀಚೆಗೆ ಮನೆಗೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದ. ಅಶೋಕ ಪಿಲ್ಲರ್ ಬಳಿ ಆಫೀಸೊಂದನ್ನು ಮಾಡಿಕೊಂಡಿದ್ದ ಪ್ರಶಾಂತ ಅಲ್ಲೇ ಹತ್ತಿರದಲ್ಲೇ ಇದ್ದ ಜಯನಗರ ಮೂರನೇ ಬ್ಲಾಕ್‌ನ ಮನೆಗೇ ಹೋಗುತ್ತಿರಲಿಲ್ಲ. ಮೊದಲು ಮಗುವನ್ನು ಸಿಕ್ಕಾಪಟ್ಟೆ ಪ್ರೀತಿಸುತ್ತಿದ್ದವನು ಆಮೇಲಾಮೇಲೆ ಅದರ ಕಡೆಗೂ ಗಮನ ಹರಿಸುವುದನ್ನು ನಿಲ್ಲಿಸಿದ್ದ. ಮಗ ಹರಿ ಬಹಳ ದಿನಗಳಿಂದ ಉಸಿರಾಟದ ತೊಂದರೆಯಿಂದ ಬಳಲುತ್ತಿದೆ. ಹೀಗಾಗಿ ಶಶಿರೇಖಾ ಮತ್ತು ಮಗುವನ್ನು ಜಯನಗರದಲ್ಲಿದ್ದ ಮನೆಯಿಂದ ಬಿಡಿಸಿ ಶಶಿರೇಖಾಳ ತಾಯಿಯ ಮನೆ ಇರುವ ಮಲ್ಲೇಶ್ವರದ ದೇವಯ್ಯ ಪಾರ್ಕ್ ಬಳಿಯೇ ಹತ್ತೂವರೆ ಸಾವಿರ ರೂಪಾಯಿಗಳ ಬಾಡಿಗೆ ಮನೆಗೆ ಶಿಫ್ಟ್ ಮಾಡಿಸಿದ್ದಾನೆ.




ಅದಾದ ಮೇಲಂತೂ ಪ್ರಶಾಂತನ ಬರುವಿಕೆ ಮತ್ತಷ್ಟು ವಿರಳವಾಗಿದೆ. ಹೀಗಿರುವಾಗ ಕಳೆದ ತಿಂಗಳಿನಲ್ಲಿ ಒಮ್ಮೆ ಮನೆಗೆ ಹೋದವನೇ ಪತ್ನಿಯ ಮೇಲೆ ಜಗಳ ತೆಗೆದಿದ್ದಾನೆ.

"ಐ ಯಾಮ್ ಹಾವಿಂಗ್ ಅನ್ ಅಫೇರ್ ವಿತ್ ಒನ್ ಗರ್ಲ್. ನೀನು ನನ್ನಿಂದ ಎಷ್ಟು ದಿನಾ ಅಂತಾ ಕಷ್ಟ ಪಡುತ್ತೀಯ? ನಾನು ಅವಳನ್ನು ಮದುವೆಯಾಗಬೇಕು. ಆಕೆ ನನ್ನ ಸಿನಿಮಾಗೆ ಬೇಕಾದ ಹಣವನ್ನು ಇನ್‌ವೆಸ್ಟ್ ಮಾಡುತ್ತಾಳೆ" ಎಂದು ಒದರಿದ್ದಾನೆ. ಇದಕ್ಕೆ ಶಶಿರೇಖಾ "ಲೈಫಲ್ಲಿ ನಾವು ಎಷ್ಟೆಲ್ಲಾ ಕಷ್ಟ ಪಟ್ಟಿದ್ದೀವಿ. ಈಗ ಸುಂದರವಾಗಿ ಬದುಕುವ ಕಾಲದಲ್ಲಿ ಯಾಕೆ ಹೀಗೆಲ್ಲಾ ಆಡ್ತಿದ್ದೀಯ? ನೀನು ಹೀಗೆ ನನ್ನ ನಡುನೀರಲ್ಲಿ ಕೈಬಿಟ್ಟರೆ ನಮ್ಮ ಮಗುವಿನ ಗತಿ ಏನಾಗಬೇಡ?" ಎಂದು ಪ್ರಶ್ನಿಸಿದ್ದಾಳೆ. ಇಷ್ಟಕ್ಕೇ ಆಕೆಯನ್ನು ಹಿಡಿದು ದೈಹಿಕವಾಗಿ ಥಳಿಸಿದ ಪ್ರಶಾಂತ "ನಿನಗೆ, ನಿನ್ನ ಮಗುವಿಗೆ ಏನಾದರೂ ಹೆಚ್ಚು ಕಮ್ಮಿ ಆದರೆ ಅದಕ್ಕೆ ನಾನು ಜವಾಬ್ದಾರನಲ್ಲ. ಬೇಕಿದ್ದರೆ ಡೈವೋರ್ಸ್ ನೀಡಿ ಹೇಗಾದರೂ ಬದುಕಿಕೋ" ಎಂದು ಅಬ್ಬರಿಸಿ ಮನೆಯಿಂದ ಹೊರಟಿದ್ದಾನೆ. ಇದಾದ ಮೇಲೆ ಈತ ಮನೆಯತ್ತ ಸುಳಿದೇ ಇಲ್ಲ. ಯಾರೋ ಪುಂಡ, ಪೋಕರಿಗಳನ್ನು ಆಕೆಯ ಮನೆ ಬಾಗಿಲಿಗೆ ಕಳುಹಿಸಿ 'ಡೈವೋರ್ಸ್‌ಗೆ ಸಹಿ ಹಾಕು' ಎಂದು ಬೆದರಿಸಿದ್ದಾನೆ.

## ಮನೆಗೆ ಮಾರಿಯಾದ ಒರಟ

'ಒರಟ' ಸಿನಿಮಾದ ನಂತರ ಏಳೆಂಟು ತೋಪು ಚಿತ್ರಗಳಲ್ಲಿ ನಟಿಸಿದ್ದರೂ ಪ್ರಶಾಂತ ಉತ್ತಮ ಸಂಭಾವನೆಯನ್ನೇ ಪಡೆಯುತ್ತಾ ಬಂದಿದ್ದಾನೆ. 'ಹೃದಯಗಳಾ ವಿಷಯ' ಮತ್ತು 'ಒಲವಿನ ಗೆಳತಿ' ಎಂಬೆರಡು ಚಿತ್ರಗಳಿಗೆ ಎಂಟು ಲಕ್ಷ ಸಂಭಾವನೆ ಪಡೆದ ಈತ ಮಿಕ್ಕೆಲ್ಲಾ ಚಿತ್ರಗಳಲ್ಲಿ ಹನ್ನೆರಡರಿಂದ ಹದಿನೈದು ಲಕ್ಷ ರೂಪಾಯಿಗಳನ್ನು ಎಣಿಸಿಕೊಂಡಿದ್ದಿದೆ. ಆದರೆ ಹೆತ್ತವರನ್ನಾಗಲಿ, ಕೈಹಿಡಿದ ಹೆಂಡತಿ ಮತ್ತು ಮಗುವನ್ನಾಗಲಿ ಈತ ಸಾಕಿ ಸಲಹಿದ್ದು ಅಷ್ಟರಲ್ಲೇ ಇದೆ.



ವಿರೂ ಪಾಕ್ಷಯ್ಯ

ಈತನ ತಂದೆ ವಿರೂಪಾಕ್ಷಯ್ಯ ಇವತ್ತಿಗೂ ಸಂಜಯ ಗಾಂಧಿ ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ದುಡಿಯುತ್ತಿದ್ದಾರೆ. ಮೂಲತಃ ಕನಕಪುರದ ಮರಳವಾಡಿಯವರಾದ ಇವರು ಕೋಣನಕುಂಟೆಯಲ್ಲೊಂದು ಸ್ವಂತ ಮನೆ ಕಟ್ಟಿಕೊಂಡು ಬದುಕುತ್ತಿದ್ದಾರಾದರೂ, ಪ್ರಶಾಂತನಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಇನ್ನು ಶಶಿರೇಖಾ ಈಗ ಒಂದಿಷ್ಟು ಮಕ್ಕಳಿಗೆ ಭರತನಾಟ್ಯ ವಿದ್ಯೆ ಕಲಿಸುತ್ತಾ ಜೀವನ ನಡೆಸುತ್ತಿದ್ದಾಳೆ. ಆದರೂ ನೆರೆಯವರು 'ಹೀರೋ ಹೆಂಡತಿಯ ಬದುಕು ನೋಡಿ ಹೇಗಿದೆ' ಎಂದು ಮೂದಲಿಸುವಂತಾಗಿದೆ. ಪ್ರಶಾಂತ ತಾನು ದುಡಿದ ಹಣವನ್ನೆಲ್ಲಾ 'ಚಿರಾಯು' ಸಿನಿಮಾಕ್ಕಾಗಿ ವ್ಯಯಿಸಿ, ಅದನ್ನೂ ಪೂರ್ಣಗೊಳಿಸದೆ ಬಾಬಿಯ ಬಾಲ ಹಿಡಿದು ಹೊರಟುಬಿಟ್ಟಿದ್ದಾನೆ.

ಇಂಥ ಉಢಾಳ ನಟರ ಕೈಹಿಡಿದ ಹೆಣ್ಣುಮಕ್ಕಳಿಗೆ ಧೈರ್ಯ ಹೇಳಲು ತಾನೆ ಯಾರಿದ್ದಾರೆ ಈ ಬಣ್ಣದ ಜಗತ್ತಿನಲ್ಲಿ?

• ಅರುಣ್ ಕುಮಾರ್.ಜಿ

# ಜನಿವಾರ ಪ್ರಜ್ಞೆಯ ಜಾಗೃತಿಗೊಂದು ಜಾಥಾ!

ಕಟ್ಟಿಕೊಂಡ ಹೆಂಡತಿಗೆ ಹೀನಾಮಾನ ಹೊಡೆದು ಜೈಲೂಟ ಉಂಡು ಹೊರಬಂದ ದರ್ಶನ್ ಅದೇನೋ ಘನಂಧಾರಿ ಕೆಲಸ ಮಾಡಿದವನಂತೆ ಯಾತ್ರೆ ಹೊರಟಿದ್ದೀಗ ಹಳೆಯ ಸುದ್ದಿ. ತಿನ್ನಬಾರದ್ದು ತಿಂದು ಮಾನ ಉಳಿಸಿಕೊಳ್ಳಲು ಮಂಡೆ ಬೋಳಿಸಿಕೊಂಡು ಓಡಾಟ ನಡೆಸಿದ ಮೆಂಟಲ್ ಶ್ರೀರಾಮುಲನ ಪ್ರವರವೂ ಇದೀಗ ಹಳತಾಗಿದೆ. ಪ್ರತಿಯೊಂದಕ್ಕೂ ಯಾತ್ರೆ ಹೊರಡುವ ತಲುಬು ಸಮೂಹ ಸನ್ನಿಯಂತೆ ಹರಡಿರುವ ಇಂಥಾ ಸಂದರ್ಭದಲ್ಲಿ ತಲೆಮಾಸಿದ ಬ್ರಾಹ್ಮಣ ವಟುಗಳೊಂದಷ್ಟು ತಮ್ಮ ಸಮುದಾಯಕ್ಕೆ ಸುತ್ತಿಕೊಂಡ ನಾನಾ ಕಂಟಕಗಳ ನಿವಾರಣೆಗಾಗಿ ಪಾದ ಯಾತ್ರೆ ಹೊರಟಿವೆ.



ಕಳೆದ ಹಲವು ದಶಕಗಳಿಂದ ಬ್ರಾಹ್ಮಣ ಜನಾಂಗ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು, ಆಂತರಿಕ ಕಲಹ, ಅದೇ ಸಮುದಾಯದ ಯುವಕರಲ್ಲಿ ಕ್ಷೀಣಿಸುತ್ತಿರುವ ಜನಿವಾರ ಪ್ರಜ್ಞೆ, ದಿನೇದಿನೇ ಕ್ಷೀಣಿಸುತ್ತಿರುವ ಜನಸಂಖ್ಯೆ ಜನಸಂಖ್ಯೆ ಕ್ಷೀಣಗೊಂಡಿರುವ ಸಮಸ್ಯೆಯನ್ನು ಹೋಗಲಾಡಿಸಲು ತುದಿಗಾಲಲ್ಲಿ ನಿಂತ ವಟುಗಳಿಗೆ ಯೋಗ್ಯ ವಧು ಸಿಗದ ವಿಕಟ ಪರಿಸ್ಥಿತಿ... ಇವೇ ಮೊದಲಾದ ಸಮಸ್ಯೆ ಪರಿಹಾರ ಸದರಿ ಜಾಥಾದ ಘನ ಉದ್ದೇಶವಾಗಿದೆ! ಈ ಕ್ರಾಂತಿಕಾರಕ(?) ಜಾಥಾಕ್ಕೆ ಬ್ರಾಹ್ಮಣ ಜಾಗೃತಿ ಸಮನ್ವಯ ಪಾದಯಾತ್ರೆ ಅಂತ ಹೆಸರಿಡಲಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಅಡ್ನಾಡಿ ಹಾದಿಬಿಟ್ಟ ಬ್ರಾಹ್ಮಣ ಕುಲೋತ್ತಮರಿಗೆ ತಿಳಿಹೇಳಿ ಸರಿದಾರಿಗೆ ತರುವುದು, ಬ್ರಾಹ್ಮಣತ್ವದ ಶ್ರೇಷ್ಠತೆಯನ್ನು ನೆನಪುಮಾಡಿಕೊಡುವುದು ಸದರಿ ಪಾದಯಾತ್ರೆಯ ಮಹತ್ವಾಕಾಂಕ್ಷೆ.

ಅಂದಹಾಗೆ ಇಡೀ ಜಾಥಾ ಯಾವುದೋ ವ್ಯಕ್ತಿ ಅಥವಾ ಸಂಘಟನೆಯಿಂದ ಪ್ರಾಯೋಜಿತವಾದುದಲ್ಲ, ಬದಲಾಗಿ ಇದು ಇಡೀ ಬ್ರಾಹ್ಮಣ ಸಮುದಾಯದ್ದಂತೆ. ಹೀಗಂತ ತಲೆ ಕೆಟ್ಟವನೂ, ಬ್ರಾಹ್ಮಣ ಸಮುದಾಯದ ಸ್ವಯಂಘೋಷಿತ ಸಾಮಾಜಿಕ ಕಾರ್ಯಕರ್ತನೂ ಆಗಿರುವ ಟಿ.ಆರ್.ಆನಂದನೆಂಬಾತ ಪುಟಗಟ್ಟಲೇ ಒದರಿಕೊಂಡಿದ್ದಾನೆ.


ಈ ಜಾಥಾದ ಉದ್ದೇಶ, ಹಳಹಳಿಕೆಗಳನ್ನು ಗಮನಿಸಿದರೆ ಇದರ ಹಿಂದೆ ಬ್ರಾಹ್ಮಣದ ವಿಷ ಉಲ್ಬಣಿಸಿದ ವಿಕೃತ ಮಿದುಳುಗಳಿರುವುದು ಸ್ಪಷ್ಟವಾಗುತ್ತದೆ. ಇದೀಗ ಬ್ರಾಹ್ಮಣ ಸಮುದಾಯದ ಅನೇಕರು ಕರ್ಮಠ ಸಿದ್ಧಾಂತಗಳನ್ನು ತೊರೆದು ಸಮಾಜದ ಇತರರೊಂದಿಗೆ ಬೆರೆಯುತ್ತಿದ್ದಾರೆ. ಇದರಿಂದಾಗಿಯೇ ಮನುಷ್ಯ, ಮನುಷ್ಯರ ನಡುವಿನ ಕಂದಕವೂ ಕೂಡಿಕೊಳ್ಳುತ್ತಾ ಬಂದಿದೆ. ಬುದ್ಧಿ, ವರ್ತನೆಗಳಿಂದ ಶ್ರೇಷ್ಠತ್ವ ಪಡೆಯುವ ಯೋಗ್ಯತೆಯಿಲ್ಲದ, ಬ್ರಾಹ್ಮಣನಾಗಿ ಹುಟ್ಟಿದ್ದೇ ಬದುಕು ಕರುಣಿಸಿದ ಬಹುದೊಡ್ಡ ಇನಾಮೆಂದು ನಂಬಿರುವಂದಿಷ್ಟು ವಟುಗಳಿಗೆ ಉರಿತರಿಸಿದೆ.

ಅದರ ಪರಿಣಾಮವೆಂಬಂತೆ ಈ ಜಾಥಾದ ಹೆಸರಿನಲ್ಲಿ ಅಡ್ನಾಡಿ ಐಡಿಯಾಗಳೆಲ್ಲ ಜಾರಿಗೆ ಬಂದಿವೆ. ಇದರ ಹಿಂದಿರುವ ವಿಕೃತ ಮಿದುಳುಗಳ ಪ್ರಮುಖ ಸಮಸ್ಯೆ ಯುವ ಜನಾಂಗದಲ್ಲಿ ಕಡಿಮೆಯಾಗುತ್ತಿರುವ ಬ್ರಾಹ್ಮಣ ಪ್ರಜ್ಞೆ ಮತ್ತು ಅದರ ಪರಿಣಾಮದಂತಿರುವ ಅಂತರ್ಜಾತಿ ವಿವಾಹ. ಇನ್ನೊಂದು ಸಮಸ್ಯೆ: ಈ ಪೀಳಿಗೆಯ ವಟುಗಳಿಗೆದುರಾಗಿರುವ ವಧುಗಳ ಸಮಸ್ಯೆ.

ನಿಜ, ಇದೀಗ ಬ್ರಾಹ್ಮಣ ಸಮುದಾಯದಲ್ಲಿ ವಧುಗಳ ಕೊರತೆ ತಾಂಡವವಾಡುತ್ತಿದೆ. ಹೆಣ್ಣು ಹುಡುಕಿ ಹೈರಾಣಾದ ವಟುಗಳನೇಕರು ಜನಿವಾರ ಕಿತ್ತು ಬಿಸಾಡಿಯಾದರೂ ಮದುವೆ ಅಂತೊಂದಾದರೆ ಸಾಕೆಂಬ ಧಾವಂತಕ್ಕೆ ಬಿದ್ದಿದ್ದಾರೆ. ತೀರಾ ಕರ್ಮಠ ಬ್ರಾಹ್ಮಣರೂ ಕೂಡಾ ತಂತಮ್ಮ ಮಾಣಿಗಳ 'ಆರೋಗ್ಯ'ದ ದೃಷ್ಟಿಯಿಂದ ಮಡಿಮೈಲಿಗೆಗಳನ್ನು ಸಡಿಲಿಸಿದ್ದಾರೆ. ಇದರ ಪರಿಣಾಮವಾಗಿ ಲಿಂಗಾಯತರು, ಶೂದ್ರ ಸಂಕುಲದೊಂದಿಗೆ ನೆಂಟಸ್ತಿಕೆ ಬೆಳೆಸಲೂ ಮನಸ್ಸು ಮಾಡಿದ್ದಾರೆ. ಇದು ಅನಿವಾರ್ಯತೆಯಿಂದ ಸೃಷ್ಟಿಯಾದ ಆರೋಗ್ಯಕರ ವಾತಾವರಣ!


ಆದರೆ ಮೇಲುಕೀಳೆಂಬ ಗಬ್ಬು ವಾತಾವರಣದಲ್ಲೇ ಸುಖ ಕಾಣುವ ಬ್ರಾಹ್ಮಣ್ಯದ ಮನಸ್ಸುಗಳಿಗೆ ಈ ಸಹಜ ವಾತಾವರಣವೇ ಮಹಾನ್ ಕಂಟಕವೆಂಬಂತೆ ಕಂಡಿದೆ. ಆದುದರಿಂದಲೇ ಸದರಿ ಪಾದಯಾತ್ರೆ ಮುಂದಿನ ತಿಂಗಳ 11ನೇ ತಾರೀಕಿನಂದು ಮೇಲುಕೋಟೆಯಿಂದ ಹೊರಟು ಉಡುಪಿಯನ್ನು ಬಳಸಿಕೊಂಡು ಶೃಂಗೇರಿಯಲ್ಲಿ ಪರ್ಯಾವಸಾನ ಹೊಂದಲಿದೆ.

ಇದೆಲ್ಲ ಏನೇ ಇದ್ದರೂ ಈ ಪಾದಯಾತ್ರೆಯ ಪರಿಕಲ್ಪನೆಯೇ ಸಂವಿಧಾನ ವಿರೋಧಿ, ಜೀವ ವಿರೋಧಿಯಾದದ್ದು. ಆ ಸಮುದಾಯದ ಪ್ರಜ್ಞಾವಂತರು ಈ ಹುಚ್ಚಾಟದಿಂದ ದೂರವಿದ್ದು ವಿಕೃತ ಆಲೋಚನೆಗಳಿಗೆ ಸೆಡ್ಡು ಹೊಡೆಯಬೇಕಿದೆ.



# ಶಾರುಖ್‌ನ ಸೂಪರ್ ಅವತಾರ್ ರಾ.ಒನ್

ಈ ದೀಪಾವಳಿಗೆ ಶಾರುಖ್‌ನ ದುಬಾರಿ ಅವತಾರ್ ಇದು. ಅನುಭವ್ ಸಿನ್ಹಾನ ನಿರ್ದೇಶನದಲ್ಲಿ ತನ್ನದೇ ಪ್ರೊಡಕ್ಷನ್ ಸಂಸ್ಥೆಯಾದ 'ರೆಡ್ ಚಿಲ್ಲೀಸ್ ಎಂಟರ್‌ಟೈನ್‌ಮೆಂಟ್'ನ ದುಡ್ಡು ಸುರಿದು ಖುದ್ದು ಖಾನ್ ಸೂಪರ್ ಹೀರೋ ಆಗಿ ಕಾಣಿಸಿಕೊಂಡ 'ರಾ.ಒನ್' ಚಿತ್ರವು ಅನಾಮತ್ತು 3500 ದೇಶೀಯ ಹಾಗೂ ಅಂದಾಜು 1500 ವಿದೇಶಿ ಥಿಯೇಟರ್ ಸ್ಕ್ರೀನ್‌ಗಳಿಗೆ ಅಕ್ಟೋಬರ್ 26 ರಂದು ಅದ್ದೂರಿಯಾಗೆ ಅಪ್ಪಳಿಸಿದೆ. ಬಿಡುಗಡೆ ವಿಚಾರದಲ್ಲಿ ಇದು ಹೊಸ ದಾಖಲೆ. ಈ ಹಿಂದೆ ಸಲ್ಮಾನ್‌ಖಾನ್‌ನ 'ಬಾಡಿಗಾರ್ಡ್' ಚಿತ್ರವು 2700 ಥಿಯೇಟರ್‌ಗಳಲ್ಲಿ ತೆರೆಕಾಣುವ ಮೂಲಕ ದೇಶದಲ್ಲಿ ಅತಿ ಹೆಚ್ಚು ಥಿಯೇಟರ್‌ಗಳಲ್ಲಿ ರಿಲೀಸ್ ಆದ ಸಿನಿಮಾ ಎನಿಸಿತ್ತು. 'ರಾ.ಒನ್' ಚಿತ್ರವಾದರೂ ರೋಬೋಟಿಕ್ ಹಿನ್ನೆಲೆಯ ಕಥಾವಸ್ತು ಹಾಗೂ ದುಬಾರಿ ತಂತ್ರಜ್ಞಾನಗಳೊಂದಿಗೆ ಸಂಪೂರ್ಣ 'ತ್ರೀಡೀ'ಕರಣಗೊಂಡು ಅನಾವರಣವಾಗಿರುವುದರಿಂದ ನೋಡುಗರಲ್ಲಿ ನೋಡಲೇಬೇಕೆಂಬ ಕ್ರೇಜ್ ಅನ್ನು ಸೃಷ್ಟಿಸಿದೆ. ಇನ್ನೇನಿದ್ದರೂ ಶಾರುಖ್ ಅಂಡ್ ಟೀಮಿನ ಕೆಲಸ ಈ ಕ್ರೇಜ್‌ಅನ್ನು ಅದೆಷ್ಟು ದಿನ ಕ್ಯಾರಿ ಮಾಡುತ್ತದೆಂಬುದೇ ಪ್ರಶ್ನೆ. ಈಗಾಗಲೇ ಆಡಿಯೋ ಅಂಡ್ ಟಿವಿ ರೈಟ್ಸ್‌ಗೆ ಸಂಬಂಧಿಸಿದಂತೆ 130 ಕೋಟಿಗೂ ಮೀರಿದ ವ್ಯವಹಾರವನ್ನು ಮುಗಿಸಿರುವ ಚಿತ್ರಕ್ಕೆ ಲಾಭಾಂಶಕ್ಕಿಂತ ಕಮೆಂಟುಗಳೇ ನಿಜವಾದ ಫಲಿತಾಂಶ.



'ರಾ.ಒನ್' ಹೆಸರೇ ಹೇಳುವಂತೆ ಇದು ಹಾಲಿವುಡ್ ಶೈಲಿಯ ಸಿನಿಮಾ. ಕಥೆಗಾರ ಕಂ ನಿರ್ದೇಶಕ ಸಿನ್ಹಾ ಕರ್ಷಿಯಲ್ ಜಾಹೀರಾತೊಂದನ್ನು ನೋಡಿ ಸ್ಫೂರ್ತಿಗೊಂಡು 2004 ರಲ್ಲೇ ಬರೆದಿಟ್ಟಿದ್ದ ಮೂರು ಪುಟಗಳಷ್ಟು ಪುಟ್ಟ ಕತೆಯೇ ಇದರ ಜೀವಾಳ. ಹಾಲಿವುಡ್‌ನಲ್ಲಿ ಆಕ್ಷನ್ ಹಾಗೂ ಅದ್ಭುತ ಶಕ್ತಿಯ ಸೂಪರ್ ಹೀರೋಗಳ ಚಿತ್ರಗಳು ಬಾಕ್ಸ್ ಆಫೀಸ್ ಕೊಳ್ಳೆಹೊಡೆಯುತ್ತಿರುವುದನ್ನು ಕಂಡಿದ್ದ ಶಾರುಖ್ ತಾನೂ ಅಂತಹ ಚಿತ್ರದಲ್ಲಿ ಅಭಿನಯಿಸಬೇಕು, ಸಾಧ್ಯವಾದರೆ ತನ್ನ ಸಂಸ್ಥೆಯಿಂದಲೇ ನಿರ್ಮಿಸಬೇಕು ಎಂಬ ಆಲೋಚನೆಯಲ್ಲಿದ್ದಾಗಲೇ ಸಿನ್ಹಾನ ಈ ಕಥೆ ಸಿಕ್ಕಿತ್ತು. 2007ರಲ್ಲಿ ಚಿತ್ರ ಅಧಿಕೃತವಾಗಿ ಆರಂಭವಾಗಿತ್ತಾದರೂ ಚಿತ್ರೀಕರಣಕ್ಕಿಂತ ಪ್ರೀ ಪ್ರೊಡಕ್ಷನ್ ಮತ್ತು ಪೋಸ್ಟ್ ಪ್ರೊಡಕ್ಷನ್ ಕೆಲಸಗಳೇ ವಿಪರೀತವೆನಿಸಿದ್ದರಿಂದ ಬರೋಬ್ಬರಿ ನಾಲ್ಕು ವರ್ಷಗಳ ತರುವಾಯ ಸಿನಿಮಾ ತೆರೆಗೆ ಬಂದಿರುವುದೇ ಅದರ ಮೊದಲ ವಿಶೇಷ.

## ಯಾರೆಲ್ಲಾ? ಏನೆಲ್ಲಾ?

ಶಾರುಖ್‌ಗೆ ನಾಯಕಿಯಾಗಿ ಕರೀನಾ ನಟಿಸಿದ್ದರೆ, ರೋಬೋಟಿಕ್ ವಿಲನ್ ಆಗಿ ಕಾಣಿಸಿಕೊಂಡಿರುವುದು ಅರ್ಜುನ್ ರಾಮ್‌ಪಾಲ್. ಮಾಸ್ಟರ್ ಅರ್ಮಾನ್ ವರ್ಮಾ ಶಾರುಖ್‌ನ ಮಗನಾಗಿ ನಟಿಸಿದ್ದಾನೆ. ಇಡೀ ಚಿತ್ರದಲ್ಲಿ ತಂತ್ರಜ್ಞಾನದ ಹೊರತಾಗಿ ಹೈಲೈಟಾಗಿರುವುದೇ ಖಾನ್, ಅರ್ಮಾನ್‌ರ ತಂದೆ ಮಗನ ನಡುವಿನ ಕೆಮಿಸ್ಟ್ರಿ ಎಂಬ ಪ್ರಶಂಸೆಗಳು ಈಗಾಗಲೇ ದಟ್ಟವಾಗಿ ಕೇಳಿಬರುತ್ತಿವೆ. ಒಂದು ವಿಶೇಷ ಪಾತ್ರದಲ್ಲಿ ಹಾಲಿವುಡ್-ಚೀನಿ ನಟ ಟಾಮ್ ವೂ ಕಾಣಿಸಿಕೊಂಡಿದ್ದಾರೆ. ಅಸಲಿಗೆ ಈ ಪಾತ್ರದಲ್ಲಿ ಜಾಕಿ ಚಾನ್ ನಟಿಸಬೇಕಿತ್ತಂತೆ. ಈ ಕುರಿತಾಗಿ ಖಾನ್-ಚಾನ್ ನಡುವೆ ಹಲವು ಸುತ್ತಿನ ಮಾತುಕತೆಗಳೂ ಮುಗಿದಿದ್ದವಾದರೂ ಕುಂಗ್-ಫೂ ನಟನ ಡೇಟ್ಸ್ ಸಮಸ್ಯೆಯಿಂದಾಗಿ ಅದು ಟಾಮ್ ವೂ ಪಾಲಾಯಿತು.

ಚಿತ್ರದಲ್ಲಿ ಶಾರುಖ್ ದ್ವಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾನೆ. ಶೇಖರ್ ಹೆಸರಿನ ಪಾತ್ರ ಖಾನ್‌ನ ರೆಗ್ಯುಲರ್ ದಾಟಿಯ ಲವಿಂಗ್ ಹಸ್ಬೆಂಡ್, ಕೇರಿಂಗ್ ಪಪ್ಪಾನ ರೋಲ್ ನಿಭಾಯಿಸುವುದಾಗಿದ್ದರೆ 'ಜಿ.ಒನ್' ಪಾತ್ರವೇ ಕಥೆಯ ಸೂಪರ್ ಹೀರೋ. ರಾ.ಒನ್ ಅನ್ನೋದು ವೀಡಿಯೋ ಗೇಮ್ ವಿಲನ್ ಹೆಸರು, ಅದು ಸೃಷ್ಟಿಸುವ ಸಮಾಜಘಾತುಕ ಅವಾಂತರಗಳಿಗೆಲ್ಲಾ ಪ್ರತಿಯಾಗಿ ನಿಂತು ರಕ್ಷಕನಾಗಿ ಕಾಣಿಸಿಕೊಳ್ಳುವ ಜವಾಬ್ದಾರಿ ಜಿ.ಒನ್‌ನದ್ದು.

ವಿಚಿತ್ರವಾದ ಬ್ರೇಕ ವಾಯ್ಸ್ ನಟನಾಗಿ ಶಾರುಖ್ ಈಗಾಗಲೇ ಗೆದ್ದಾಗಿದೆ. ಆದರೆ ಈ ಬಾರಿ ಆ್ಯಕ್ಟಿಂಗ್ ಅಲ್ಲದೇ ಮೇಕಿಂಗ್, ಮಾರ್ಕೆಟಿಂಗ್ ಹಾಗೂ ಪಬ್ಲಿಸಿಟಿಯಲ್ಲೂ ಬಲು ಮುತುವರ್ಜಿ ವಹಿಸಿದ್ದಾನೆ.




ಇಂಗ್ಲಿಷ್‌ನ ಸ್ಪೈಡರ್ ಮ್ಯಾನ್, ಬ್ಯಾಟ್ ಮ್ಯಾನ್, ಹಿಂದಿಯ ಕ್ರಿಷ್ ಸೇರಿದಂತೆ ಸೂಪರ್ ಹೀರೋಗಳ ಕುರಿತಾದ ಜಗತ್ತಿನ ಬೇರೆ ಬೇರೆ ಭಾಷೆಯ 600 ಕ್ಕೂ ಹೆಚ್ಚು ಸಿನಿಮಾಗಳನ್ನು ನೋಡಿದ ನಂತರವಷ್ಟೆ ಕತೆಗೆ ಏನೇನೆಲ್ಲಾ ಬೇಕು ಎಂಬುದನ್ನು ಖಾನ್ ನಿರ್ಧರಿಸಿದ್ದು. ಹಾಲಿವುಡ್ ಮಟ್ಟದ ದುಬಾರಿ ತಂತ್ರಜ್ಞಾನಗಳನ್ನೆಲ್ಲಾ ಬಳಸಿಕೊಂಡಿರುವುದರಿಂದ ಚಿತ್ರದ ಒಟ್ಟಾರೆ ಬಜೆಟ್ 175 ಕೋಟಿಗೆ ಬಂದು ತಲುಪಿದೆ. ಮೊದಲು ಕೆಲ ದೃಶ್ಯಗಳನ್ನು ಮಾತ್ರ '3ಡಿ' ಗೆ ಪರಿವರ್ತಿಸಲು ಯೋಜಿಸಲಾಗಿತ್ತಾದರೂ ಕಥೆಯ ಸೈಂಟಿಫಿಕ್ ಮೂವಿಂಗ್‌ನಿಂದಾಗಿ ಸಂಪೂರ್ಣ ಚಿತ್ರವನ್ನೇ 3ಡಿ ಮಯಗೊಳಿಸಲಾಗಿದೆ. 'ದಿ ಕ್ರೋನಿಕಲ್ಸ್ ಆಫ್ ನಾರ್ನಿಯಾ', 'ಟ್ರಾನ್ಸ್‌ಫಾರ್ಮರ್' ನಂತಹ ಹಾಲಿವುಡ್ ಸಿನಿಮಾಗಳ ಉಸ್ತುವಾರಿ ನಿಭಾಯಿಸಿದ್ದ ಫ್ರೈಮ್ ಫೋಕಸ್ ಸಂಸ್ಥೆಗೆ ಈ ಜವಾಬ್ದಾರಿಯನ್ನು ವಹಿಸಲಾಗಿತ್ತು. ರಾಷ್ಟ್ರ ಪ್ರಶಸ್ತಿ ವಿಜೇತ ರಸೂಲ್ ಪೂಕುಟ್ಟಿ ಚಿತ್ರಕ್ಕೆ ಸೌಂಡ್ ಎಫೆಕ್ಟ್ ನೀಡುವ ಕೆಲಸವನ್ನು ಮಾಡಿದ್ದಾರೆ. ಒಟ್ಟಾರೆ ಶಾರುಖ್ ಹಾಗೂ ಗೌರಿ ದಂಪತಿಯ ಹೋಮ್ ಪ್ರೊಡಕ್ಷನ್ ಚಿತ್ರಕ್ಕೆ ಪ್ರಪಂಚದಾದ್ಯಂತದ 6000ಕ್ಕೂ ಹೆಚ್ಚು ಸಿನಿ ಕಾರ್ಮಿಕರ ಶ್ರಮ ಜಮೆಯಾಗಿದೆ.

## 'ರಾ'ಗೆ 'ಎಂದಿರನ್'ನ 'ಬಿಗ್' ಸಾಥ್

ಕಳೆದ ವರ್ಷ ರಜನಿಕಾಂತ್-ಐಶು ನಟಿಸಿದ್ದ ಶಂಕರ್ ನಿರ್ದೇಶನದ ಚಿತ್ರ 'ಎಂದಿರನ್' (ರೋಬೋ) ಸಹಾ ರೋಬೋಟಿಕ್ ಮತ್ತು ಡಬಲ್ ಆ್ಯಕ್ಟಿಂಗ್ ಸಾಮ್ಯತೆ ಹೊಂದಿತ್ತಾದ್ದರಿಂದ 'ರಾ.ಒನ್'ಗೆ ಆರಂಭದಲ್ಲೇ ವಿವಾದಗಳು ಸುತ್ತಿಕೊಂಡಿದ್ದವು. ಇದನ್ನು ನಿಭಾಯಿಸಲು ರಜನಿಕಾಂತ್‌ರನ್ನೆ ಅತಿಥಿ ನಟನಾಗಿ, ಅದರಲ್ಲೂ ಎಂದಿರನ್‌ನ ಚಿಟ್ಟಿ ಪಾತ್ರದಲ್ಲೆ ಕಾಣಿಸಿಕೊಳ್ಳುವಂತೆ ಮಾಡಿ ಸಿನಿಮಾಗೆ ಪುಶ್ ನೀಡುವಲ್ಲಿ ಖಾನ್‌ನ ಬುದ್ಧಿವಂತಿಕೆಯನ್ನು ಮೆಚ್ಚಿಕೊಳ್ಳಬೇಕಾದ್ದೆ.





ಅನಾರೋಗ್ಯದ ಕಾರಣ ರಜನಿ ಮಲೇಷ್ಯಾದ ಆಸ್ಪತ್ರೆ ಸೇರಿದ್ದರಿಂದ ಚಿತ್ರ ಮತ್ತಷ್ಟೂ ಡಿಲೇ ಆಗಿತ್ತು, ಆದರೆ ಅಕ್ಟೋಬರ್ 2 ರಂದು ಸ್ವಲ್ಪ ಸುಸ್ತಿನ ನಡುವೆಯೂ ರಜನಿ ತನ್ನ ಪಾತ್ರದ ದೃಶ್ಯಗಳನ್ನು ಮುಗಿಸಿಕೊಟ್ಟಿದ್ದರಿಂದ ಚಿತ್ರ ಅಂತೂ ತೆರೆಗೆ ಬರಲು ಸಿದ್ಧವಾಗಿಯಿತು. ಶಾರುಖ್ ಮತ್ತು ರಜನಿ ಜೊತೆಯಾಗಿ ಚಿತ್ರದಲ್ಲಿ ಕಾಣಿಸಿಕೊಳ್ಳೋದು ಒಂದೇ ದೃಶ್ಯದಲ್ಲಿ, ಆ ಒಂದು ದೃಶ್ಯಕ್ಕೆ ಹಿನ್ನೆಲೆ ಸಂಗೀತವನ್ನು ಎ.ಆರ್ ರೆಹಮಾನ್‌ನಿಂದ ಕೊಡಿಸಲಾಗಿದೆ. ರಜನಿಯಲ್ಲದೆ ಸಂಜಯ್ ದತ್, ಪ್ರಿಯಾಂಕ ಚೋಪ್ರಾ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರೋದು, ಮುಖ್ಯವಾದ ಸನ್ನಿವೇಶವೊಂದಕ್ಕೆ ಅಮಿತಾಬ್ ಬಚ್ಚನ್ ಧ್ವನಿ ನೀಡಿರುವುದು ಚಿತ್ರದ ವಿಶೇಷ. ಇತ್ತೀಚೆಗೆ ಹಳಸಿಕೊಂಡಿದ್ದ ಬಿಗ್ ಬಿ ಹಾಗೂ ಶಾರುಖ್ ನಡುವಿನ ಬಾಂಧವ್ಯವನ್ನು ಮತ್ತೆ ಚಿಗುರಿಸುವಲ್ಲಿ ಇದು ಖಾನ್‌ನ ಜಾಣ್ಮೆಯ ನಡೆ ಎಂದೇ ಬಣ್ಣಿಸಲಾಗಿದೆ.

ತನ್ನ 'ಓಂ ಶಾಂತಿ ಓಂ'ನ ಅತಿಥಿ ಸ್ಟಾರ್ ಟ್ರೆಂಡನ್ನು ಇಲ್ಲೂ ಮುಂದುವರೆಸಿರುವ ಖಾನ್‌ನ 'ರಾ.ಒನ್'ಗೆ ವಿವಾದವೂ ಹೊರ ತಾಗಿಲ್ಲ, ಮುಂಬೈನ ಟಿವಿ ಸ್ಕ್ರಿಪ್ಟ್‌ರೈಟರ್ ಯಶ್ ಪಟ್ನಾಯಕ್ ಎಂಬಾತ ಕಥೆ ತನ್ನ ಐಡಿಯಾದಿಂದ ಕದ್ದದ್ದು ಎಂದು ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ್ದಾನೆ. ಇಂಡಿಯನ್ ಸೂಪರ್ ಹೀರೋ ಕಲ್ಪನೆಯನ್ನು ತಾನೇ ಖುದ್ದು ತಯಾರಿಸಿ ಅದಕ್ಕೆ 'ಒನ್' ಅಂತ ನಾಮಕರಣವನ್ನೂ ಮಾಡಿ 2006 ರಲ್ಲೇ ಫಿಲ್ಮ್ ರೈಟರ್ಸ್ ಅಸೋಸಿಯೇಷನ್‌ನಲ್ಲಿ ದಾಖಲು ಮಾಡಿಸಿರುವು ದಾಗಿ ಪಟ್ನಾಯಕ್ ಹೇಳಿದ್ದಾನೆ. ಈ ಕುರಿತು ಪಟ್ನಾಯಕ್ ಮುಶ್ತಾಕ್ ಶೇಕ್ ಎಂಬಾತನ ಜೊತೆ ಚರ್ಚೆಯನ್ನೂ ನಡೆಸಿದ್ದನಂತೆ. ಈಗ ಅದೇ ಮುಶ್ತಾಕ್ ಶೇಕ್ 'ರಾ.ಒನ್'ನ ಸ್ಕ್ರೀನ್ ಪ್ಲೇ ಬರೆದಿದ್ದದರಿಂದ ಹೈಕೋರ್ಟ್ ಶಾರುಖ್ ಟೀಮಿಗೆ ಒಂದು ಕೋಟಿ ಸೇಫ್ಟಿ ಬಾಂಡ್ ಇಟ್ಟ ನಂತರವಷ್ಟೇ ಫಿಲ್ಮ್ ರಿಲೀಸ್ ಮಾಡಿಕೊಳ್ಳುವಂತೆ ತಾಕೀತು ಮಾಡಿತ್ತು. ಅದರ ಪ್ರಕಾರವೇ ಈಗ ಹಣ ಡೆಪಾಸಿಟ್ ಮಾಡಿ ಬಿಡುಗಡೆ ಮಾಡಲಾಗಿದೆ. ವಿಚಾರಣೆ ಇನ್ನೂ ಬಾಕಿ ಇದ್ದು ಪಟ್ನಾಯಕ್‌ನ ಆಪಾದನೆ ಸಾಬೀತಾದರೆ ಆತ ಕೇಳುತ್ತಿರುವಂತೆ ಚಿತ್ರದ ಲಾಭಾಂಶದ ಶೇ.10 ರಷ್ಟು ಅಮೌಂಟು ಖಾ[...] ಕೈ ಬಿಡಲಿದೆ.



## ದುಬಾರಿ ಅಂಡ[...] ಭಾರಿ ಭಾರೀ[...]


'ರಾ.ಒನ್' ಭಾರತೀಯ ಸಿನಿಮಾ ಇತಿಹಾಸದ[...] ಅತಿ ದೊಡ್ಡ ಬಜೆಟ್‌ನ ಚಿತ್ರ. 175 ಕೋಟಿ ರೂಪಾ[...] ಸುರಿಯುವುದರ ಮೂಲಕ ಈ ಹಿಂದೆ 162 ಕೋ[...] ಖರ್ಚಿನೊಂದಿಗೆ ಈ ರೆಕಾರ್ಡು ಹೊಂದಿದ್ದ 'ಎಂದಿರನ್[...] ದಾಖಲೆ ಮುರಿದಿದೆ. ಮಾರಾಟದಲ್ಲೂ ಇದು ಹಲ[...] ದಾಖಲೆಯನ್ನು ಬ್ರೇಕ್ ಮಾಡಿದೆ. ಸ್ಟಾರ್ ಇಂಡಿಯಾ[...] ಇದರ ಟಿವಿ ಹಕ್ಕನ್ನು 40 ಕೋಟಿಗೆ ಖರೀದಿಸು[...] ದರೊಂದಿಗೆ 'ತ್ರೀ ಈಡಿಯಟ್ಸ್'ನ 33 ಕೋಟಿ ದಾಖ[...] ಯನ್ನೂ ಅಳಿಸಿ ಹಾಕಿದೆ. ಆಡಿಯೋ ರೈಟ್ಸ್‌ಅನ್ನು [...] ಸೀರೀಸ್‌ಗೆ ಮಾರಾಟ ಮಾಡಿ ರೆಡ್ ಚಿಲ್ಲಿಗೆ ಸಿಕ್ಕಿರೋ[...] ಬರೋಬ್ಬರಿ 15 ಕೋಟಿ. ಸಿನಿಮಾ [...] ರಣೆಯು ಎರೋಸ್ ಎಂಟರ್‌ಟೈನ್‌ಮೆಂಟ[...] 77 ಕೋಟಿಗೆ ಮಾರಾಟವಾಗಿದೆ. ತಮಿ[...] ನಾಡು ಹಾಗೂ ಕೇರಳ ವಿಭಾಗದ ವಿತ[...] ಯನ್ನು ಪ್ರತ್ಯೇಕವಾಗಿ ಭಾರೀ ಬೆಲೆಗೆ ಮಾರ[...] ಮಾಡಲಾಗಿದೆ. ಇನ್ನು ಪ್ರಚಾರಕ್ಕೆಂದು ಶಾರು[...] ಖಾನ್ ಸೋನಿ ಕಂಪ್ಯೂಟರ್ ಎಂಟರ್‌ಟೇ[...] ಮೆಂಟ್ ಯುರೋಪ್ ಸಂಸ್ಥೆಯೊಂ[...] ಒಡಂಬಡಿಕೆ ಮಾಡಿಕೊಂಡು 'ರಾ.ಒ[...] ಹೆಸರಿನ ಕಂಪ್ಯೂಟರ್ ವೀಡಿಯೋ ಗೇ[...] ಸರಣಿ ಯೊಂದನ್ನು ಬಿಡುಗಡೆ ಮಾಡಿದ[...] ಬರೀ ಪಬ್ಲಿಸಿಟಿಯ ಉದ್ದೇಶ ಆದಕ್ಕಿತ್ತಾದ[...] ಬಿಡುಗಡೆಯಾದ ಒಂದು ತಿಂಗಳಿನ ಒಳಗೆ [...] ಸಾವಿರ ಡಿಸ್ಕ್‌ಗಳು ಮಾರಾಟವಾಗಿದ್ದು ಚಿತ್ರ ಬಿಡು[...] ಯಾದ ಒಂದು ವಾರದ ಒಳಗೆ ಈ ಸೇಲ್ ಒಂ[...] ಲಕ್ಷವನ್ನೂ ಮೀರುವ ಅಂದಾಜಿದೆ. ಒಟ್ಟಿನಲ್ಲಿ ರಿಲೀಸ್‌[...] ಮುನ್ನವೆ 132 ಕೋಟಿಯಷ್ಟು ವಹಿವಾ[...] ನಡೆಸುವುದರೊಂದಿಗೆ ಮತ್ತೊಂದು ಹೊಸ ದಾಖ[...] ಯನ್ನೇ ಈ ಸಿನಿಮಾ ಈ ಸೃಷ್ಟಿಸಿದೆ. ಈ ಮೊದಲು [...] ಈಡಿಯಟ್ಸ್' ಬಿಡುಗಡೆಗೂ ಮುನ್ನವೆ 85 ಕೋ[...] ವ್ಯವಹಾರ ನಡೆಸಿ ದಾಖಲೆಯನ್ನು ಹೊಂದಿತ್ತು.



## ಹೀರೋಗಳ ಸೂಪರ್ ಹಿಟ[...]


ಗಿರ್ರನೆ ಗಿರಕಿ ಹೊಡೆಯುತ್ತಾ ಭೂಮಿಯನ್ನು [...] ಏಟಿಗೆ ಸುತ್ತಿ ಬರುವ, ಒಂದೇ ಸ್ಟೆಪ್ಪಿಗೆ ಗಗನಚುಂಬಿ[...] ಚುಂಬಿಸಿ ಏರುವ, ಅಮಾನುಷ ಸಮಾಜಘಾತುಕ ಶಕ್ತಿ[...] ಟಾಂಗ್ ನೀಡುವ ಸೂಪರ್ ಪವರ್ ಹೀರೋಗಳ ಸಿ[...] ಗಳು ಇವತ್ತು ಮಿನಿಮಮ್ ಗ್ಯಾರಂಟಿ ಟ್ರೆಂಡಾಗಿವೆ. [...] ಮೊದಲು ಮಕ್ಕಳನ್ನು ಕೇಂದ್ರೀಕರಿಸಿಕೊಂಡು ಹುಟ್ಟಿಕೊ[...] ಇಂತಹ ಚಿತ್ರಗಳು ಕ್ರಮೇಣ ಇಡೀ ಪ್ರೇಕ್ಷಕ ವರ್ಗವನ್ನೆ[...] ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿವೆ. 'ಒಂದಾನೊ[...] ಕಾಲದಾಗೆ' ಇಲ್ಲವೆ 'ಒಂದೂರಿನಲ್ಲಿ' ಎಂದೆಲ್ಲಾ ಆ[...] ವಾಗುತ್ತಿದ್ದ ಅಜ್ಜಿ ಕಥೆಗಳಿಂದ ಬಾಲ್ಯಗಳು ವಂಚಿತವಾಗ[...] ಸಮಯಕ್ಕೆ ಸರಿಯಾಗಿ ಆರಂಭವಾದ ಈ ಗ್ರಾಫಿಕ್ಸ್ ಮಾ[...] ಜಾಲಗಳು, ಕೇಳಿ ಕಲ್ಪನೆಯಲ್ಲಿದ್ದ ದೃಶ್ಯಗಳನ್ನು ಕಣ್[...] ಇರಿಸಿದಾಗ ಸಹಜವಾಗೇ ಇಷ್ಟವಾಗಿದ್ದವು.


ಆಧುನೀಕರಣದ ಭರಾಟೆ ಬಾಲ್ಯವನ್ನೇ ಕ್ಷಣಿಸಿ ಹ[...] ವುದರಿಂದ ಈಗೇನಿದ್ದರೂ ಬಾಲ್ಯವೆಂದರೆ ಸ್ಕೂಲು, ಟ್ಯೂ[...] ಎಕ್ಸಾಮು, ಸಮ್ಮರ್ ಕ್ಯಾಂಪು ಇವಷ್ಟೇ ಆಗಿ ಹೋ[...] ಹಾಗಾಗಿ ಮಕ್ಕಳಿಗಿರಲಿ, ಇಂತದೇ ಬಾಲ್ಯವನ್ನು ತಳ್ಳಿ ಯ[...] ಅಲಿಯಾಸ್ ಪೋಷಕತನಕ್ಕೂ (ಪರಿಸ್ಥಿತಿ ಹಾಗಿದೆ) ಕಾ[...] ರುವ ವರ್ಗಕ್ಕೂ ಇವು ಇಷ್ಟವಾಗಿವೆ. ಹಾಲಿವುಡ್‌ನಲ್ಲಿ [...] ವಲ್ಲದೆ ಬಾಲಿವುಡ್‌ನಲ್ಲೂ ಈ ಟ್ರೆಂಡು ಹೊಸದೇ[...] 'ಕೋಯಿ ಮಿಲ್ ಗಯಾ', 'ಕ್ರಿಷ್'ನಿಂದ ಹಿಡಿದು ಇತ್ತೀ[...] ಬಿಡುಗಡೆಯಾದ 'ಎಂದಿರನ್' ಸಹಾ ಚಿತ್ರದ ಹೀರೋ[...] ಅಭಿಮಾನಿಗಳನ್ನಲ್ಲದೆ ಕ್ಲಾಸ್ ವರ್ಗವನ್ನೂ ಸೂರೆಗೊಳ[...] ಯಶಸ್ವಿಯಾಗಿದ್ದವು. ಇಷ್ಟೆಲ್ಲಾ ಲೆಕ್ಕಾಚಾರದ ನಂತರ[...] ಶಾರುಖ್ 'ರಾ.ಒನ್' ಗೆ ದುಡ್ಡು ಸುರಿದು ಬಾಲಿವುಡ್‌ನ [...] ಶ್ರೀಮಂತ ಚಿತ್ರವನ್ನು ಹಿಂದಿ ಮಾತ್ರವಲ್ಲದೆ ತೆ[...] ತಮಿಳಿನಲ್ಲೂ ಏಕ ಕಾಲಕ್ಕೆ ನಿರ್ಮಿಸಲು ಮುಂದಾಗಿ[...] ರಾ.ಒನ್ ನ ಬಿಡುಗಡೆ ಪೂರ್ವದ ವ್ಯವಹಾರ[...] ಗಮನಿಸಿದರೆ ಬಂಡವಾಳಕ್ಕೇನೂ ಮೋಸವಿಲ್ಲ, ಆದರೆ [...] ಏಳು-ಬೀಳು ಸೂಪರ್ ಹೀರೊ ಟ್ರೆಂಡಿಗೆ ಮತ್ತೊಂದು [...] ಸಿಗ್ನಲ್ ಅಥವಾ ಫೈನಲ್ ಯು ಟರ್ನ್ ನೀಡೋ[...] ಗ್ಯಾರಂಟಿ.



ಗೈಡ್ ಕೋಚಿಂಗ್ ಸೆಂಟರ್ ಬಸವನಗುಡಿ, ಬೆಂಗಳೂರು
KAS
ಪೂರ್ವಭಾವಿ ಪರೀಕ್ಷಾ ತರಬೇತಿ
ನೂತನ ಪಠ್ಯಕ್ರಮದಂತೆ ತರಬೇತಿ
ನುರಿತ ತಜ್ಞರಿಂದ ಮಾರ್ಗದರ್ಶನ
ನವೆಂಬರ್ 6ರಿಂದ ಆರಂಭ....
ಸಂಪರ್ಕಿಸಿ: 8971330131
ಸಂಪರ್ಕಿಸಿ
ಗೈಡ್ ಕೋಚಿಂಗ್ ಸೆಂಟರ್
ನಂ.9, ಲಂಕೇಶ್ ಕಟ್ಟಡ
ಇ.ಎ.ಟಿ. ರಸ್ತೆ, ಬಸವನಗುಡಿ,
ಬೆಂಗಳೂರು-4
ಫೋನ್: 8971330131,
080-26622652
E-mail :
guidecoachingcentre@gmail.com

# VIMS ಡಾ. ವಿನಾಯಕ ಕಾಪಿ ಕೇಂದ್ರ





ಇದೊಂದು ಘನ ಘೋರ ಪಾತಕ.

ಮೆಡಿಕಲ್ ಓದಿ ಡಾಕ್ಟರ್ ಎನಿಸಿಕೊಂಡ ದೊಡ್ಡ ಮನುಷ್ಯರೇ ಕಾಪಿ ಹೊಡೆದು, ಲಂಚ ಕೊಟ್ಟು ಪಿಜಿ ಸೀಟ್ ಪಟಾಯಿಸಲು ಹೋಗಿ ಸಿಕ್ಕಿಬಿದ್ದಿದ್ದಾರೆ. ಆಕಸ್ಮಾತ್ ಇವರ ಲೆಕ್ಕಾಚಾರ ಎಲ್ಲಾ ವರ್ಕ್‌ಔಟ್ ಆಗಿದಿದ್ದರೆ ಇನ್ನೆರಡು ವರ್ಷದಲ್ಲಿ ಇವರು ಪೋಸ್ಟ್ ಗ್ರಾಜುಯೇಷನ್ ಕೋರ್ಸ್ ಮುಗಿಸಿಬಿಡುತ್ತಿದ್ದರು. ಆದರೀಗ ತಮ್ಮ ಚೋರ ಗುರು ಡಾ. ವಿನಾಯಕ ಪ್ರಸನ್ನನ ಜೊತೆಗೆ ಈ ವಂಚಕ ಶಿಷ್ಯರು ಜೈಲು ಸೇರಿದ್ದಾರೆ. ಇಷ್ಟು ಸಾಲದೆಂಬಂತೆ ವಿನಾಯಕ ಪ್ರಸನ್ನನ ಹೆಂಡತಿ ಡಾ. ಅರ್ಚನಾ ಕೂಡ ಈಗ ಕಂಬಿ ಕೌಂಟ್ ಗಿರಾಕಿಯೆ.

ಬಳ್ಳಾರಿಯ ಕೌಲ್ ಬಜಾರ್ ಪೊಲೀಸರ ವರದಿಯನ್ನೇ ಫೈನಲ್ ಎಂದು ನಂಬಿ ಸುಮ್ಮನಾಗಿದಿದ್ದರೆ ಈ ಹಗರಣ ಹೊರ ಬರುತ್ತಲೇ ಇರಲಿಲ್ಲ, ಆದರೆ ಡಾ. ವಿನಾಯಕನ ಗ್ಯಾಂಗು ತಾನಾಗಿಯೇ ಅಪಾಯ ಆಹ್ವಾನಿಸಿಕೊಂಡರು. ತಮ್ಮ ಕಳ್ಳತನ, ಮೋಸ ಯಾರಿಗೂ ಗೊತ್ತಾಗಲಾರದೆಂದು ನಂಬಿ ಎಡವಿಬಿದ್ದರು. ಹಾಗೆ ಬಿದ್ದವರಾದರು ಯಾರೆನ್ನುತ್ತೀರಿ?

ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ರೇಡಿಯಾಲಜಿ ವಿಭಾಗದ ಡಾ. ಭಾರತಿ, ಬೆಂಗಳೂರು ಮೆಡಿಕಲ್ ಕಾಲೇಜಿನ ಡಾ. ಸಂಕೀರ್ತ, ಡಾ. ಫಿರ್ದೋಸ್ ಸುಲ್ತಾನ, ಡಾ. ರೇಣುಕಾ, ಹುಬ್ಬಳ್ಳಿ ಕಿಮ್ಸ್‌ನ ಡಾ. ವಿನೋದ್ ಕರ್ಗಿ, ಬಳ್ಳಾರಿ ವಿಮ್ಸ್‌ನ ಸಿಬ್ಬಂದಿಯಾಗಿದ್ದ ಡೇವಿಡ್ ಪ್ರಭಾಕರ್, ಮಲ್ಲಿಕಾರ್ಜುನ ಜೋಗಳೇಕರ್, ಡಾ. ಸುರೇಶ್, ಡಾ. ಧನಂಜಯ....... ಹೀಗೆ ಈ ಪಟ್ಟಿಯಲ್ಲಿ ಹದಿನೇಳು ವಂಚಕರಿದ್ದಾರೆ.

ಇವರೆಲ್ಲಾ ಎಂ.ಬಿ.ಬಿ.ಎಸ್ ಮುಗಿಸಿ ಮುಂದೆ ಸ್ನಾತಕೋತ್ತರ ಕೋರ್ಸ್‌ಗಾಗಿ ಅಂದರೆ ಎಂಡಿ ಅಥವಾ ಎಂ.ಎಸ್‌ಗಾಗಿ ಓದಲು **2010** ರ ಜನವರಿಯಲ್ಲಿ ಪ್ರವೇಶ ಪರೀಕ್ಷೆ ಬರೆದಿದ್ದರು. ರಾಜೀವ್ ಗಾಂಧಿ ವೈದ್ಯ ವಿಜ್ಞಾನ ವಿಶ್ವವಿದ್ಯಾಲಯ ಪ್ರತಿವರ್ಷ ಈ ಪ್ರವೇಶ ಪರೀಕ್ಷೆಯನ್ನು ಜನವರಿ ತಿಂಗಳಲ್ಲಿ ನಡೆಸುತ್ತದೆ. ಕರ್ನಾಟಕದ **48** ಮೆಡಿಕಲ್



ಕಾಲೇಜಿನ ವಿದ್ಯಾರ್ಥಿಗಳು ಈ ಪ್ರವೇಶ ಪರೀಕ್ಷೆ ಬರೆಯುತ್ತಾರೆ. ಗಳಿಸುವ ಮಾರ್ಕ್ಸ್ ಹಾಗೂ ಮೀಸಲಾತಿ ನಿಯಮಾನುಸಾರ ಸೀಟುಗಳ ಹಂಚಿಕೆಯಾಗುತ್ತದೆ. ರಾಜ್ಯದ ಸರ್ಕಾರಿ ಮೆಡಿಕಲ್ ಕಾಲೇಜು ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿರುವ ಸರ್ಕಾರಿ ಕೋಟಾದಡಿ ಅಲಭ್ಯವಿರುವ ಈ ಪಿಜಿ ಕೋರ್ಸ್ ಬಗ್ಗೆ **1994** ರಲ್ಲೇ ಒಂದು **RGUMS Act** ಅನ್ನು ರೂಪಿಸಲಾಗಿದೆ.

ಆ ಪ್ರಕಾರ ಎಲ್ಲವೂ ನಡೆಯುತ್ತಿತ್ತು. ಆದರೆ ಕಳೆದ **2-3** ವರ್ಷಗಳಿಂದ ಇಲ್ಲೂ ಮೋಸ, ವಂಚನೆಗಳು ನಡೆದಿರುವುದು ಈಗ ಬೆಳಕಿಗೆ ಬರುತ್ತಿದೆ. ರಾಜೀವ್ ಗಾಂಧಿ ವಿ.ವಿ ನಡೆಸುವ ಪಿಜಿ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯು ರಾಜ್ಯದ ಹನ್ನೊಂದು ಕೇಂದ್ರಗಳಲ್ಲಿ ನಡೆಯುತ್ತದೆ. ಬಳ್ಳಾರಿಯ ವಿಜಯನಗರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಕಾಲೇಜೂ ಕೂಡ ಅದರಲ್ಲೊಂದಾಗಿತ್ತು.


ಡಾ. ವಿನಾಯಕ ಪ್ರಸನ್ನ ಇದ್ದದ್ದು ಇಲ್ಲೇ.....!

## ಹಗರಣದ ಮೂಲ

**2011-12** ನೇ ಸಾಲಿನ ಪಿಜಿ ಕೋರ್ಸ್‌ಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು **2011**ರ ಜನವರಿ **30** ರಂದು ಪ್ರವೇಶ ಪರೀಕ್ಷೆ ನಡೆಸಲಾಗಿತ್ತು, ಪರೀಕ್ಷೆ ನಡೆದ ಒಂದು ವಾರದ ನಂತರ ಕೆಲವು ಅಭ್ಯರ್ಥಿಗಳು ರಾಜೀವ್ ಗಾಂಧಿ ವಿವಿಯ ರಿಜಿಸ್ಟ್ರಾರ್‌ಗೆ ದೂರು ನೀಡಿ ಪರೀಕ್ಷೆಯಲ್ಲಿ ಅಕ್ರಮಗಳಾಗಿವೆ ಎಂದಿದ್ದರು. ಇನ್ನೂ ಕೆಲವರು ಲೋಕಾಯುಕ್ತರಿಗೂ ದೂರು ಕೊಟ್ಟರು. ಈ ನಡುವೆ ಪ್ರವೇಶ ಪರೀಕ್ಷೆಯ ರಿಜಲ್ಟ್ ಬಂದೇ ಬಂತು. ನೋಡಿದರೆ ಬಳ್ಳಾರಿಯ ವಿಮ್ಸ್ ಕಾಲೇಜಿನ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದವರ ಪೈಕಿ ಒಂದೇ ರೂಮ್‌ನಲ್ಲಿದ್ದ ಹನ್ನೊಂದು ಮಂದಿ ಮೊದಲ ಹನ್ನೊಂದು ರ್‍ಯಾಂಕ್ ಪಡೆದಿದ್ದರು.

ಡಾ. ವಿನಾಯಕ ಪ್ರಸನ್ನನೇ ಆ ರೂಮ್‌ನ ಪರೀಕ್ಷಾ ಮೇಲ್ವಿಚಾರಕನಾಗಿದ್ದ. ಇದರ ಬಗ್ಗೆ ಅನುಮಾನಪಟ್ಟ ವಿವಿ ರಿಜಿಸ್ಟ್ರಾರ್ ಬಳ್ಳಾರಿಯ ಕೌಲ್ ಬಜಾರ್ ಪೊಲೀಸರಿಗೆ ಫೋರ್ಜರಿ, ವಂಚನೆ, ಕಾಪಿ ಆರೋಪದ ದೂರೊಂದನ್ನು ಕೊಟ್ಟರು. ಬಹುಶಃ ಠಾಣಾ ಇನ್ಸ್‌ಪೆಕ್ಟರ್‌ನೂ ಕಾಪಿ ಹೊಡೆದೇ ಪಾಸಾಗಿದ್ದನೇನೋ 'ಈ ಆರೋಪದಲ್ಲಿ ಹುರುಳಿಲ್ಲ' ಎಂದವನೇ ಬಿ ರಿಪೋರ್ಟ್ ಬರೆದು ನಿದ್ದೆ ಹೋಗಿ ಬಿಟ್ಟ.

ಈ ಮಧ್ಯೆ ಲೋಕಾಯುಕ್ತರಿಗೆ ದೂರು ಬಂದಿತ್ತಲ್ಲ, ಅದನ್ನು ಆಧರಿಸಿ ಲೋಕಾಯುಕ್ತರು ಡಾ. ಹನುಮಂತಪ್ಪ, ಡಾ. ಚಂದ್ರಶೇಖರ ಹಾಗೂ ಡಾ. ಕಾಮತ್ ಎಂಬ ತ್ರಿಸದಸ್ಯ ಸಮಿತಿಯನ್ನು ತನಿಖೆಗಾಗಿ ನೇಮಿಸಿದರು. ಈ ಸಮಿತಿಯು ಬಳ್ಳಾರಿಯ ವಿಮ್ಸ್ ಪರೀಕ್ಷಾ ಕೇಂದ್ರದಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿತು. ಕೊನೆಗೆ ಈ ವರದಿಯು ಲೋಕಾಯುಕ್ತರ ಮೂಲಕ ರಾಜೀವ್ ಗಾಂಧಿ ವಿವಿ ಕೈ ಸೇರಿತು. ಮೊದಲ ಹನ್ನೊಂದು ರ್‍ಯಾಂಕ್ ಲಪಟಾಯಿಸಿದ್ದ ಅಭ್ಯರ್ಥಿಗಳ ಫಲಿತಾಂಶ ತಡೆಹಿಡಿಯ ಲಾಯಿತು.



ಆಗಲೇ ಈ ಅಭ್ಯರ್ಥಿಗಳು ತಾವು ಮಹಾನ್ ಸತ್ಯ ಹರಿಶ್ಚಂದ್ರನ ಪಿಂಡಗಳಂತೆ ಹೈಕೋರ್ಟ್‌ಗೆ ಹೊರಟರು. ಕೋರ್ಟ್ ಸಿಐಡಿ ತನಿಖೆಗೆ ಆದೇಶ ನೀಡಿತು. ಈಗ ನೋಡಿದರೆ ಸಿಐಡಿ ಪೊಲೀಸರು ಇಡೀ ಹಗರಣದ ತಲೆಬುಡ ಶೋಧಿಸಿದ್ದಾರೆ. 'ತಮಗೆ ಅನ್ಯಾಯವಾಗಿದೆ' ಎಂದು ಕೋರ್ಟ್‌ಗೆ ಹೋದವರೆ ಈಗ ಜೈಲಿಗೂ ಹೋಗಿದ್ದಾರೆ.


## ಡಾ. ವಿನಾಯಕನ ಕಾಪಿ ಕೇಂದ್ರ

ಸಿಐಡಿ ಐಜಿಪಿ ಎನ್.ಎಸ್. ಮೇಘರಿಕ್, ಎಸ್.ಪಿ. ಡಾ. ಬಿ.ಎಸ್. ಮಹೇಶ್, ಡಿವೈಎಸ್‌ಪಿಗಳಾದ ಚಲಪತಿ ಹಾಗೂ ಕೈಸರ್ ಈ ಕೇಸನ್ನು ಕೈಗೆತ್ತಿಕೊಂಡು ಅಖಾಡಕ್ಕಿಳಿದಾಗ ಡಾ. ವಿನಾಯಕ ನಿರಾಳವಾಗೇ ಇದ್ದ. ತನ್ನ ವಂಚನೆ ಬ್ರಹ್ಮನಿಗೂ ಗೊತ್ತಾಗಲಾರದೆಂಬ ಹುಂಬ ಧೈರ್ಯ ಅವನದ್ದು.

ಆದರೆ ಸಿಐಡಿ ಪೊಲೀಸರು ನಿಜಕ್ಕೂ ದಕ್ಷತೆ ಮೆರೆದರು.

ಮೊದಲ ರ್‍ಯಾಂಕ್ ಲಪಟಾಯಿಸಿದ್ದ ಎಲ್ಲಾ ಹನ್ನೊಂದು ಜನರ ಮನೆಗೆ ನುಗ್ಗಿ ಅವರೆಲ್ಲರಿಗೆ ಸೇರಿದ್ದ **29** ಮೊಬೈಲ್‌ಗಳು, **25** ಲ್ಯಾಪ್‌ಟಾಪ್, **20** ಪೆನ್ ಡ್ರೈವ್‌ಗಳನ್ನು ಹೊತ್ತು ತಂದರು. ಏನು ನಡೆದಿತ್ತೆಂಬುದರ ಮುಕ್ಕಾಲಂಶ ಮಾಹಿತಿಯನ್ನು ಇವೇ ತೋರಿಸಿದವು.

ಬಳ್ಳಾರಿಯ ವಿಮ್ಸ್ ಮೆಡಿಕಲ್ ಕಾಲೇಜಿನ ಫೊರೆನ್ಸಿಕ್ ಮೆಡಿಸನ್ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದ ಡಾ. ವಿನಾಯಕ ಪ್ರಸನ್ನ ಈ ಹಗರಣದ ಕಿಂಗ್‌ಪಿನ್ ಆಗಿದ್ದ.



ಅರೆಸ್ಟಾದ ವೈದ್ಯರು: ಸಂತೋಷ್, ಕೃಷ್ಣಮೂರ್ತಿ, ಹೇಮಂತರಾವ್

'ತಾನು ಯಾವ ಪರೀಕ್ಷಾ ಕೊಠಡಿಗೆ ರೂಮ್ ಸೂಪರ್‌ವೈಸರ್ ಆಗಿ ಹೋಗಬೇಕಿತ್ತೊ ಅದೇ ರೂಂನಲ್ಲಿ ತನಗೆ ಬೇಕಾದ ಅಭ್ಯರ್ಥಿಗಳು ಪರೀಕ್ಷೆ ಬರೆಯುವಂತೆ ವಿನಾಯಕ ವ್ಯವಸ್ಥೆ ಮಾಡಿಕೊಂಡಿದ್ದ. ಇವತ್ತು ಪಿಜಿ ಕೋರ್ಸ್‌ಗೆ ಪೇಮೆಂಟ್ ಸೀಟ್ ಕೋಟಾದಲ್ಲಿ ಖಾಸಗಿ ಮೆಡಿ ಕಲ್ ಕಾಲೇಜುಗಳಲ್ಲಿ **50** ಲಕ್ಷದಿಂದ ಒಂದೂ ವರೆ ಕೋಟಿ ರೂಪಾಯಿತನಕ ಹಣ ಕೀಳುತ್ತಿದ್ದಾರೆ. ಆದರೆ ವಿನಾಯಕ ತಲಾ **25** ರಿಂದ **50** ಲಕ್ಷದೊಳಗೆ ಡೀಲ್ ಕುದುರಿಸಿ ಪಿಜಿ ಸೀಟ್ ಆಕಾಂಕ್ಷಿ ಗಳನ್ನು ಸೆಳೆಯುತ್ತಿದ್ದ. ಹಾಗೆ ತನ್ನ ಸಂಪರ್ಕಕ್ಕೆ ಬಂದವರೆಲ್ಲಾ ಒಂದೇ ಪರೀಕ್ಷಾ ಕೊಠಡಿಯಲ್ಲಿ ಕೂರುವಂತೆ ನೋಡಿಕೊಳ್ಳಲು ರಾಜೀವ್ ಗಾಂಧಿ ವಿವಿಯ ಪರೀಕ್ಷಾ ಸಿಬ್ಬಂದಿಗೂ ಹಣ ತಿನ್ನಿಸುತ್ತಿದ್ದ.

**2011** ರ ಜನವರಿ **30** ರಂದು ಪಿಜಿ ಪ್ರವೇಶ ಪರೀಕ್ಷೆ ಶುರುವಾದಾಗ ಬಳ್ಳಾರಿಯ ವಿಮ್ಸ್ ಕಾಲೇಜಿನ ಒಂದು ರೂಮ್‌ನಲ್ಲಿ ಈ ಡಾಕ್ಟರ್‌ಗಳಾದ ಭಾರತಿ, ಹೇಮಂತ ರಾವ್, ಸಂತೋಷ್, ಕೃಷ್ಣಮೂರ್ತಿ, ಸೋಮಶೇಖರ, ಮುರಹರಿ, ಡೇವಿಡ್ ಪ್ರಭಾಕರ್, ಮಲ್ಲಿಕಾರ್ಜುನ ಜೋಗಳೇಕರ್, ಭರತ್ ಕುಮಾರ್, ಸಂಕೀರ್ತ, ಫಿರ್ದೋಸಾ ಸುಲ್ತಾನ, ಅಭಿಜಿತ್ ಪಟೇಲ್, ಬಸವರಾಜ್, ಧನಂಜಯ್, ವಿನೋದ್ ಕರ್ಗಿ, ಡಾ. ಶಿಲ್ಪ ಹಾಗೂ ಡಾ. ರೇಣುಕಾ ಬಂದು ಕುಳಿತರು. ಬೆಳಗ್ಗೆ **10** ಕ್ಕೆ ಪರೀಕ್ಷೆ ಶುರುವಾಗುವುದಿತ್ತು. ಅಷ್ಟರಲ್ಲಿ ಡಾ. ವಿನಾಯಕ್ ಮಾಸ್ ಕಾಪಿಗೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದ.

ಈ ಪರೀಕ್ಷೆಯ ಪ್ರಶ್ನಪತ್ರಿಕೆಗಳು ಮಣಿಪಾಲ್ ಪ್ರೆಸ್‌ನಲ್ಲಿ ಪ್ರಿಂಟ್ ಆಗಿದ್ದವು. ಜನವರಿ **30** ರ ಪರೀಕ್ಷೆಯ ದಿನ ಬೆಳಗ್ಗೆ **7.45** ಕ್ಕೆ ಸೀಲ್ ಆಗಿದ್ದ ಕವರ್‌ನಲ್ಲಿ ಇವು ವಿಮ್ಸ್ ಪ್ರಿನ್ಸಿಪಾಲರ ಕೈ ಸೇರಿದ್ದವು. ಏನೇನೊ ಲಾಬಿ ಮಾಡಿ ರೂಮ್ ಸೂಪರ್‌ವೈಸರ್ ಆಗಿ ನೇಮಕಗೊಂಡಿದ್ದ ಡಾ. ವಿನಾಯಕ ಇಬ್ಬರ ಸಮ್ಮುಖದಲ್ಲಿ **9.55** ಕ್ಕೆ ಕವರ್ ತೆರೆಯಬೇಕಿತ್ತು, ಆದರೆ ಅವನು ಬೆಳಗ್ಗೆ **9** ಕ್ಕೆ ಕವರ್ ತೆಗೆದು ಡಿಜಿಟಲ್ ಕ್ಯಾಮರಾ ಮೂಲಕ ಪ್ರಶ್ನೆಪತ್ರಿಕೆಗಳ ಫೋಟೋ ತೆಗೆದುಕೊಂಡ. ನಂತರ ಪುನಃ ಕವರ್‌ನ ಸೀಲ್ ಅಂಟಿಸಿ ಮಳ್ಳಿಯಂತೆ ಇದ್ದು ಕ್ಯಾಮರಾವನ್ನು ಹೊರಗಡೆಗೆ ಕಳಿಸಿಬಿಟ್ಟ.

ಪರೀಕ್ಷಾ ಅಭ್ಯರ್ಥಿಯೊಬ್ಬರ ಮನೆಗೆ ಕ್ಯಾಮರಾ ತಲುಪಿತು. ಅಲ್ಲಿ ಕ್ಯಾಮರಾದ ಚಿಪ್ ಹೊರತೆಗೆದು ಡೌನ್ ಲೋಡ್ ಮಾಡಿ ಪ್ರಶ್ನಪತ್ರಿಕೆಗಳ ಪ್ರಿಂಟ್‌ಔಟ್ ತೆಗೆದರು. ಡಾ. ವಿನಾಯಕ ಅದೆಂತಾ ಖದೀಮನೆಂದರೆ ಪ್ರಶ್ನೆಗಳಿಗೆ ಸರಿಯುತ್ತರ ಹುಡುಕಲೂ ಕೆಲವು ಎಕ್ಸ್‌ಪರ್ಟ್‌ಗಳನ್ನು ಹಣ ನೀಡಿ ಕರೆಸಿಕೊಂಡಿದ್ದ. ಅವರೆಲ್ಲಾ ಅಲ್ಲೇ ಕುಳಿತು ಪುಸ್ತಕ ತಿರುವಿ, ಇಂಟರ್‌ನೆಟ್‌ನಲ್ಲಿ ಹುಡುಕಿ ಕೇವಲ ಒಂದೂವರೆ ಗಂಟೆಯಲ್ಲಿ **200** ಪ್ರಶ್ನೆಗಳಿಗೂ ಉತ್ತರ ಹುಡುಕಿದರು. ಇವೆಲ್ಲಾ **multiple choice** ರೀತಿಯ ಪ್ರಶ್ನೆಗಳಾಗಿದ್ದುದರಿಂದ ಉತ್ತರ ಸಿಕ್ಕ ಮೇಲೆ ಓಎಂಆರ್ ಶೀಟ್‌ನಲ್ಲಿ **A,B,C,D** ಗಳಲ್ಲಿ ಒಂದಕ್ಕೆ ಗುರುತು ಮಾಡುವ ಕೆಲಸವಷ್ಟೇ ಬಾಕಿ ಇರುತ್ತದೆ. ಅತ್ತ ಪರೀಕ್ಷಾ ಹಾಲ್‌ನಲ್ಲಿದ್ದ **17** ಮಂದಿ ಪೈಕಿ **11** ಜನ ವಿನಾಯಕ ತರಿಸಿಕೊಡುವ ಸರಿ ಉತ್ತರಕ್ಕಾಗಿ ಕಾಯುತ್ತಾ ಇದ್ದರೆ ವಿನಃ ಉತ್ತರ ಪತ್ರಿಕೆಯಲ್ಲಿ ಒಂದಕ್ಷರವನ್ನೂ ಬರೆದಿರಲಿಲ್ಲ, ಕೊನೆಗೆ ಉತ್ತರಗಳು ಹೊರಗಿನಿಂದ ಸಪ್ಲೈ ಆದಾಗ ಅಷ್ಟೂ ಜನ ಒಂದೇ ಸಾರಿಗೆ ಒಂದೇ ರೀತಿಯ ಉತ್ತರ ಗುರುತು ಮಾಡಿದರು. ಅದೇ ರೀತಿ ತಮಗೆ ಸಿಕ್ಕ ತಪ್ಪು ಉತ್ತರಗಳನ್ನೂ ಹಿಂದೆಮುಂದೆ ನೋಡದೆ ಒಂದೇ ರೀತಿ ದಾಖಲಿಸಿ ಹೋಲ್‌ಸೇಲಾಗಿ ಸಿಕ್ಕಿಬಿದ್ದಿದ್ದಾರೆ.

ಸಿಐಡಿ ಪೊಲೀಸರು ಇದನ್ನೆಲ್ಲಾ ಕಂಡುಹಿಡಿಯಲು ಏನೇನು ಸರ್ಕಸ್ ಮಾಡಿದ್ದಾರೆಂದರೆ ಇಂಫಾಲದಿಂದ ಉತ್ತರ ಸಿದ್ಧಪಡಿಸಲು ಬಂದಿದ್ದ ಡಾ. ಸಂತೋಷ್‌ನ ವಿಮಾನಯಾನದ ವಿವರಗಳನ್ನೆಲ್ಲಾ ಹುಡುಕಿ ತೆಗೆದಿದ್ದಾರೆ.

## 25 ಕೋಟಿ ರೂ. ಡೀಲ್

ಈ ದಂಧೆಯ ಕಿಂಗ್‌ಪಿನ್ ಡಾ. ವಿನಾಯಕ ಪ್ರಸನ್ನ **2009** ರಿಂದಲೂ ಈ ಕಾಪಿ ಕೇಂದ್ರ ನಡೆಸುತ್ತಿರುವ ಸಾಧ್ಯತೆಗಳಿವೆ. **2009, 2010** ನೇ ಸಾಲಿನ ಪಿಜಿ ಪ್ರವೇಶ ಪರೀಕ್ಷೆಯಲ್ಲಿ ಬಳ್ಳಾರಿಯ ವಿಮ್ಸ್ ಸೆಂಟರಿನಿಂದ ಆಯ್ಕೆಯಾದವರ ವಿವರ ಕೆದಕಿದರೆ ಇದರ ಗುಟ್ಟು ಬಯಲಾಗುತ್ತದೆ. ಇಷ್ಟೇ ಅಲ್ಲದೆ ಎಂಬಿಬಿಎಸ್ ಪರೀಕ್ಷೆಗಳಲ್ಲೂ ಡಾ. ವಿನಾಯಕ ಇದೇ ರೀತಿ ಕಾಪಿ ಹೊಡೆಯಲು ಶಾಮೀಲಾಗಿರುವ ಬಗ್ಗೆ ಸುದ್ದಿಗಳಿವೆ. ಸಿಓಡಿ ಪೊಲೀಸರು ಇದನ್ನು ಕೆದಕಿದರೆ ವಾಸಿ.

ಇವನೆಂತಾ ಪಳಗಿದ ಕ್ರಿಮಿನಲ್ ಎಂದರೆ ಉತ್ತರ ರೆಡಿ ಮಾಡಿಕೊಟ್ಟ ತಜ್ಞರಿಗೆ ಹಣ ಕೊಡುವ ಬದಲಿಗೆ ಜಮೀನು ಕೊಟ್ಟಿದ್ದಾನೆ. ಬಳ್ಳಾರಿ-ಬೆಂಗಳೂರು ರಸ್ತೆಯಲ್ಲಿ ಗಣಿ ದಂಧೆಯವನೊಬ್ಬನಿಗೆ ಸೇರಿದ್ದ **20** ಎಕರೆ ಭೂಮಿಯನ್ನು ತಾನು ಖರೀದಿಸಿ ನಂತರ ತನ್ನ ಕಾಪಿ ಕೇಂದ್ರದ ವಿದ್ಯಾರ್ಥಿಗಳಿಗೆ ನೆರವಾದವರಿಗೆ ತಲಾ ಒಂದೆಕರೆಯಂತೆ ಕೊಟ್ಟು ರಿಜಿಸ್ಟರ್ ಕೂಡ ಮಾಡಿಕೊಟ್ಟಿದ್ದಾನೆ.

ಒಟ್ಟಾರೆ ಈ ವ್ಯವಹಾರದಲ್ಲಿ ಡಾ. ವಿನಾಯಕ ಪ್ರಸನ್ನ **2011** ನೇ ಸಾಲಿನಲ್ಲೇ **25** ಕೋಟಿ ರೂ. ನುಂಗಿದ್ದಾನೆ. **2009** ರಿಂದ ಪಿಜಿ ಸೀಟ್ ಹಾಗೂ ಎಂಬಿಬಿಎಸ್ ಹಗರಣವನ್ನು ಲೆಕ್ಕ ಹಾಕಿದರೆ?

ಡಾ. ವಿನಾಯಕ ಪ್ರಸನ್ನನ ಕಾಪಿ ಕೇಂದ್ರವು ಕನಿಷ್ಠ **100** ಕೋಟಿ ರೂ. ವಸೂಲಿ ಮಾಡಿರುವ ಅಂದಾಜಿದೆ.

ಈ ವಿನಾಯಕನೇನೊ ಈಗ ಜೈಲಿಗೆ ಹೋಗಿದ್ದಾನೆ ಸರಿ. ಆದರೆ ಹಣ ಕೊಟ್ಟು, ಕಾಪಿ ಹೊಡೆದು ದೊಡ್ಡ ಡಾಕ್ಟರ್‌ಗಳು ಎನಿಸಿಕೊಳ್ಳಲು ಹೊರಟಿದ್ದರಲ್ಲ ಆ ಲೋಫರ್‌ಗಳ ಕೈಗೆ ಸಿಗುವ ಜನರ ಗತಿ ಏನಾಗುತ್ತಿತ್ತು ಯೋಚಿಸಿ ನೋಡಿ.

• ಪಾರ್ವತೀಶ

## ಸಿಬಿಐನವರೂ ಬರುತ್ತಿದ್ದಾರೆ ಹುಷಾರ್!

ಕರ್ನಾಟಕದ ಮೆಡಿಕಲ್ ಕಾಲೇಜುಗಳ ಪಿಜಿ ಸೀಟು ಹಗರಣ ಕೇವಲ ಸಿಓಡಿ ಮಾತ್ರವಲ್ಲದೆ ಸಿಬಿಐನವರ ಕೈಗೂ ಹೋಗಿದೆ.

ಕಳೆದ ಅಕ್ಟೋಬರ್ **18**ರಂದು ಡಾ. ರಜನಿಕಾಂತ್ ಹಾಗೂ ಗೌರವ್ ಶಾಲಿನ ಎಂಬುವವರನ್ನು ಸಿಬಿಐ ಡಿಐಜಿ ಮಹೇಶ ಅಗರವಾಲ್ ಅರೆಸ್ಟ್ ಮಾಡಿದ್ದಾರೆ. ಜನವರಿ **30**ರಂದು ಪಿಜಿ ಪ್ರವೇಶ ಪರೀಕ್ಷೆಯಲ್ಲಿ ಉತ್ತರ ಭಾರತದ ಡಾ.ಅಮಿತ್ ಮೂಸಳೆ ಎಂಬುವವನ ಬದಲಿಗೆ ಈ ಡಾ.ರಜನಿಕಾಂತ್ ಪ್ರಾಕ್ಸಿಯಾಗಿ ಪರೀಕ್ಷೆ ಬರೆದಿದ್ದ. ಇದು ಸಿಬಿಐ ಕುಣಿಕೆಗೆ ಒಳಪಟ್ಟು, ಈಗಲೂ ತನಿಖೆ ಚಾಲೂ ಇದೆ.

ಡಾ.ವಿನಾಯಕ, ಡಾ. ರಜನಿಕಾಂತ್ ಇವರ ಅರೆಸ್ಟ್ ಅನ್ನು ಗಮನಿಸಿದವರಿಗೆ ದೆಹಲಿ, ಇಂಫಾಲ, ಮಣಿಪಾಲ, ಬಳ್ಳಾರಿ, ಗುಲ್ಬರ್ಗಾ, ಬೆಂಗಳೂರು... ಹೀಗೆ ಇಂಡಿಯಾ ಉದ್ದಗಲಕ್ಕೂ ವಂಚಕರ ಜಾಲ ಹಬ್ಬಿರುವುದನ್ನು ನೋಡಿದರೆ ಇದರ ಆಳದಲ್ಲಿ ಇನ್ನಷ್ಟು ವಂಚನೆಗಳಿದ್ದೇ ಇರಬೇಕು.

ಸಿಬಿಐನವರೇ ಇದನ್ನು ಹುಡುಕಬೇಕು.

**ಜೈಲಿನಲ್ಲಿ ಹಾಜರಿ ತೆಗೆದುಕೊಳ್ಳಲಾಗುತ್ತಿತ್ತು:**

ಕಟ್ಟಾ? ಎಸ್ ಸಾರ್.
ರೆಡ್ಡಿ? ಎಸ್ ಸಾರ್.
ಯಡ್ಡಿ? ಎಸ್ ಸಾರ್.
ಶೆಟ್ಟಿ? ಎಸ್ ಸಾರ್.
ಶ್ರೀರಾಮುಲು? ಆಬ್ಸೆಂಟ್ ಸಾರ್.
ಸೋಮಣ್ಣ? ಇನ್ನೂ ಬಂದಿಲ್ಲ ಸಾರ್.
ಯೋಗೇಶ್ವರ? ಇನ್ನೇನು ಬಂದ್ಬಿಡುತ್ತಾರೆ ಸಾರ್.
ಅಶೋಕ್? ನಿರಾಣಿ? ಮುಂದಿನ ವಾರ ಬರ್ತಾರೆ ಸಾರ್!

**ಜೋಕ್ಸ್**

ಲೈಬ್ರರಿಯಲ್ಲಿ ಕಂಡು ಬಂದ ನೋಟಿಸ್:

'ದಯವಿಟ್ಟು ಎಲ್ಲರೂ ತಮ್ಮ ಮೊಬೈಲ್‌ಗಳನ್ನು ಮನಮೋಹನ್ ಸಿಂಗ್ ಮೋಡ್‌ನಲ್ಲಿ ಇಟ್ಟುಕೊಳ್ಳಬೇಕು!'



ವಾಗಿ ಪ್ರಯತ್ನಿಸುತ್ತೇನೆಂದು ಹೇಳಿದ್ದರಲ್ಲದೆ ರೈಲು ಇಲಾಖಾ ಮಂತ್ರಿಗೂ ಮನವರಿಕೆ ಮಾಡಿಕೊಡುವುದಾಗಿ ಭರವಸೆ ನೀಡಿದ್ದರು. ಅಂದರೆ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗಕ್ಕಾಗಿ ಪ್ರಯತ್ನ ಶುರುವಾಗಿ ಬರೋಬ್ಬರಿ 42 ವರ್ಷಗಳೇ ಕಳೆದುಹೋಗಿವೆ. ಆ ನಂತರ ಹುಬ್ಬಳ್ಳಿ-ಶಿರಸಿ-ಉತ್ತರಕನ್ನಡದ ಇತರೆಡೆಯ ವಾಣಿಜ್ಯ ಸಂಘಟನೆಗಳು-ಜನಸಾಮಾನ್ಯರು-ಸಾಮಾಜಿಕ ಕಾರ್ಯಕರ್ತರು ವರ್ಷಂಪ್ರತಿ ಆಗ್ರಹಿಸುವುದೊಂದು ವಾಡಿಕೆಯಾಗಿ ಹೋಯ್ತು....

### ಈ ರೈಲಿನಿಂದೇನು ಪ್ರಯೋಜನ?

ಸದ್ರಿ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣವಾಗಿದ್ದೇ ಆದರೆ, ಬಳ್ಳಾರಿಯ ಅದಿರನ್ನು ಪರಿಸರ ಮಾಲಿನ್ಯವಾಗದಂತೆ ಕಾರವಾರ ಬಂದರಿಗೆ ರವಾನಿಸಿ ಅಲ್ಲಿಂದ ವಿದೇಶಕ್ಕೆ ಭರ್ಪೂರ್ ಕಳಿಸಬಹುದು. ಪ್ರಪಂಚದಲ್ಲೇ ಸಂಪದ್ಭರಿತ, ಜೀವ ವೈವಿಧ್ಯತೆಯ ಕಾಡು ಹೊಂದಿರುವ ಅಪರೂಪದ ಉತ್ತರ ಕನ್ನಡಕ್ಕೆ ಈ ರೈಲು ಮಾರ್ಗದಿಂದ ದೇಶದ ಎಲ್ಲ ಭಾಗದ ಸಂಪರ್ಕ ಏರ್ಪಡುತ್ತದೆ. ಉತ್ತರ ಕನ್ನಡ ದೇಶದ ಉಳಿದ ಪ್ರದೇಶದ ರೈಲುಗಳಿಗೆ ಹೆಬ್ಬಾಗಿಲು ತೆರೆದಂತಾಗುತ್ತದೆ. ಇದರಿಂದ ಪಕ್ಕದ ಗೋವಾ ರಾಜ್ಯವೂ ಸೇರಿದಂತೆ ಇಡೀ

### ಪರಿಸರ ವ್ಯಾದಿಗಳ ರೆಡ್ ಸಿಗ್ನಲ್

ಹುಬ್ಬಳ್ಳಿ-ಕಾರವಾರ ರೈಲು ಮಾರ್ಗದ ಅವಶ್ಯಕತೆ ಹೆ ದಂತೆ ಕರಾವಳಿ ಮತ್ತು ಉತ್ತರ ಕರ್ನಾಟಕದಲ್ಲಿ ಸಾಂಘಿ ಹೋರಾಟಗಳೂ ಜೋರಾಯಿತು. ರಾಜ್ಯ-ಕೇಂ ಸರ್ಕಾರಗಳ ಮುಂದೆ ಹಕ್ಕೊತ್ತಾಯ ಮಂಡಿಸಲು ಆಲ್ಲಿ ಕ್ರಿಯ ಸಮಿತಿಗಳು ರಚಿತವಾದವು. ಜನರ ಬೇಡಿಕೆಗೆ ಅನಿವಾಯ ವಾಗಿ ಒಪ್ಪಿ ಸರ್ಕಾರಗಳು 'ಹುಬ್ಬಳ್ಳಿ-ಕಾರವಾರ ರೈಲು' ಎಂ ಹೆಸರನ್ನು ಬದಲಾಯಿಸಿ 'ಹುಬ್ಬಳ್ಳಿ-ಕಾರವಾರ ರೈಲು ಮಾರ್ಗ ಎಂಬ ನಾಮಕರಣ ಮಾಡಿ ಅನುಷ್ಠಾನದ ಮಾತಾಡತೊ ಗಿದವು. ಎನ್‌ಡಿಎ ಸರ್ಕಾರ ಇರುವಾಗ ಅಂದಿನ ಪ್ರಧಾನಿಯ ಕೈಯಿಂದಲೇ ರೈಲು ಮಾರ್ಗದ ಶಿಲಾನ್ಯಾಸ ಸಹ ನಡೆ ಲಾಯ್ತು.

ಸುಮಾರು 1000 ಕೋಟಿ ರೂ.ಗಳ 120 ಕಿ.ಮಿ ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗ ಯೋಜ ಸಿದ್ದಪಡಿಸಲಾಗಿತ್ತು. ಬಂದರು ನಗರಿ ಕಾರವಾರ ಮತ ವಾಣಿಜ್ಯ ನಗರಿ ಹುಬ್ಬಳ್ಳಿಗೆ ನೇರ-ಪಕ್ಕ ವಾಣಿಜ್ಯ-ವಹಿವಾಟ ಕೈಗೂಡುವ ನಿರೀಕ್ಷೆಯಿಂದ ಕರಾವಳಿ-ಉತ್ತರ ಕರ್ನಾಟಕ ಮಂದಿ ಖುಷಿಗೊಂಡಿದ್ದರು. ಎಲ್ಲಾ ಸಮಸ್ಯೆ ಬಗೆಹರಿಯ ತೆಂದು ಜನ ನಿರಾಳರಾಗುತ್ತಿದ್ದಂತೆಯೇ 'ಅಸಲಿ ಅಡ್ಡಿ' ಒಂದ


# ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ರೆಡ್‌ಸಿಗ್ನಲ್!


# ಈ ರೈಲು ಏಕಿಷ್ಟು ದೂರ... ದೂರ...?!

ಓ ಉತ್ತರ ಕನ್ನಡಾ
ನೀ ಹಿಂಗೆ ತೀಡಡಾ

ಇಂಥದೊಂದು ಹವ್ಯಕ (ಬ್ರಾಹ್ಮಣ) ಕನ್ನಡದಲ್ಲಿ ಹಾಡುವ ಪದ್ಯವಿದೆ. ಉತ್ತರಕನ್ನಡ ಜಿಲ್ಲೆಯ ಸ್ಥಿತಿಗತಿ ತೋರಿಸುವ ತಮಾಷೆ ಹಾಡಿದು. ದುರಂತವೆಂದರೆ ಉತ್ತರಕನ್ನಡ ಅಲ್ಲಿಂದಿಲ್ಲಿಗೂ ತೀಡು(ಅಳು)ತ್ತಲೇ ಇದೆ; ತಮಾಷೆಗೀಡಾಗುತ್ತಲೇ ಇದೆ.

ಉತ್ತರಕನ್ನಡದ ಈ ದಯನೀಯತೆ-ದೌರ್ಭಾಗ್ಯ-ದುರಂತಕ್ಕೆ ಯಾರು ಕಾರಣ? ಮತ್ತ್ಯಾರು ಅಲ್ಲ!! ಉತ್ತರ ಕನ್ನಡವೇ ಹೆತ್ತ 'ಮಾತೃದ್ರೋಹಿ' ಅಧಿಕಾರಸ್ಥ ಪುಂಡ ಪುಢಾರಿಗಳ ಪುಂಡತನವೇ ಇವತ್ತು ಜಿಲ್ಲೆ ಉತ್ತರವೇ ಕಾಣದ ತಾಣವಾಗಿರಲು ಪ್ರಮುಖ ಕಾರಣ!! ಜನನಾಯಕ-ದಾರ್ಶನಿಕ ದಿನಕರ ದೇಸಾಯಿ ಒಬ್ಬರನ್ನು ಬಿಟ್ಟು ಉತ್ತರಕನ್ನಡದಲ್ಲಿ ಈ ಆರು ದಶಕದಲ್ಲಾದ ಯಾವ ಎಂಪಿ-ಎಮ್ಮೆಲ್ಲೆ-ಮಂತ್ರಿ ಮಾಂಡಲೀಕನಿಗೂ ಜಿಲ್ಲೆ ಉದ್ಧಾರ ಮಾಡುವ ಇಚ್ಛಾಶಕ್ತಿ ಎಂಬುದೇ ಇರಲಿಲ್ಲ!!




ಕರಾವಳಿ-ಮಲೆನಾಡು-ಅರೆಬಯಲು ಸೀಮೆಗಳ ಈ ವಿಶಿಷ್ಟ ಜಿಲ್ಲೆಯ ಅಕ್ಕಪಕ್ಕದ ಧಾರವಾಡ, ಬೆಳಗಾವಿ, ಉಡುಪಿ ಮತ್ತು ದಕ್ಷಿಣ ಕನ್ನಡದ ಅಭಿವೃದ್ಧಿ-ಬದಲಾವಣೆಗೆ ಹೋಲಿಸಿದರೆ ಉತ್ತರಕನ್ನಡ ಶತಮಾನಗಳಷ್ಟು ಹಿಂದೆ ಬಿದ್ದಿದೆ. ದುಡಿವ ಕೈಗಳಿಗೆ ಕೆಲಸ ಕೊಡುವ-ತುತ್ತಿನ ಚೀಲ ತುಂಬುವ ನೀರಾವರಿ ಯೋಜನೆಗಳಾಗಲಿ, ಕಾರ್ಖಾನೆಗಳಾಗಲಿ, ಮತ್ಸ್ಯೋದ್ಯಮಕ್ಕೆ ಬೇಕಾದ ಸವಲತ್ತಾಗಲಿ ಉತ್ತರ ಕನ್ನಡದಲ್ಲಿ ಇಲ್ಲ. ಸರ್ಕಾರಿ ಯೋಜನೆಗಳ ಪ್ರಯೋಗಶಾಲೆಯಂತಾಗಿರುವ ಈ ಜಿಲ್ಲೆಯಲ್ಲಿ ಮೂಲಭೂತವಾಗಿ ಬೇಕಾದ ರಸ್ತೆ-ರೈಲು ಮಾರ್ಗಗಳೂ ಇಲ್ಲ. ಇದೊಂದು ಸಾಕು, ಉತ್ತರ ಕನ್ನಡದ ಗತಿಗೇಡಿತನದ ಗೋಳು ಗೊತ್ತುಮಾಡಿಕೊಳ್ಳಲು....

ಉತ್ತರ ಕನ್ನಡ ಜಿಲ್ಲೆಗೆ ಅತೀ ಅವಶ್ಯವಿರುವ ಹುಬ್ಬಳ್ಳಿ-ಕಾರವಾರ (ಅಂಕೋಲ) ರೈಲು ಮಾರ್ಗಕ್ಕೆ ಬಿದ್ದಿರುವ ರೆಡ್‌ಸಿಗ್ನಲ್ ರಗಳೆಯನ್ನೇ ತೆಗೆದುಕೊಳ್ಳಿ. ಬರೋಬ್ಬರಿ ನಾಲ್ಕು ದಶಕದಿಂದ ಈ ಮಹತ್ವಾಕಾಂಕ್ಷೆಯ ಯೋಜನೆಗೆ ಬಾಲಾಗ್ರಹ ಪೀಡೆ ಬಾಧಿಸುತ್ತಿದೆ! ಈ ಯೋಜನೆ ಮಂಜೂರಾಗಿದ್ದರು ಏಕೆ ಕೈಗೂಡುತ್ತಿಲ್ಲ? ಯಾರು ಅಡ್ಡಗಾಲು ಹಾಕಿ ಕೂತಿದ್ದಾರೆ? ಈ ಜನಾಗ್ರಹದ ಯೋಜನೆಗೆ ಇರುವ ತೊಂದರೆ-ತೊಡಕಾದರೂ ಏನು? ಇಂಥ ಪ್ರಶ್ನೆಗಳ ಜಾಡು ಹಿಡಿದು ಹೊರಟರೆ ಪರಿಸರವ್ಯಾಧಿ ಬ್ರಾಹ್ಮಣಶಾಹಿ ಮಸಲತ್ತು, ಅರಣ್ಯ ಇಲಾಖೆಯಲ್ಲಿನ ಅಧಿಕಾರ ಶಾಹಿ ಅಧಿಕಪ್ರಸಂಗ ಮತ್ತು ಈ ಪಿಶಾಚಿಗಳಿಗೆ ಅಂಕುಶವಿಡುವ ಜ್ಞಾನ-ಜಾಣ್ಮೆಯಿಲ್ಲದ ಜಿಲ್ಲೆಯ ದಡ್ಡಶಿಖಾಮಣಿ ಜನಪ್ರತಿನಿಧಿಗಳ ಹೇತ್ಲಾಂಡಿತನವೆಲ್ಲ ಒಟ್ಟೊಟ್ಟಿಗೆ ಕಣ್ಣಿಗೆ ರಾಚುತ್ತವೆ.

### ಹುಬ್ಬಳ್ಳಿ-ಅಂಕೋಲಾ ರೈಲು


ಉತ್ತರಕನ್ನಡ ಜಿಲ್ಲೆಯಿಂದ ರಾಜಧಾನಿ ಬೆಂಗಳೂರು ಮತ್ತು ಉತ್ತರ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ ಹುಬ್ಬಳ್ಳಿ-ಕಾರವಾರ(ಅಂಕೋಲಾ) ರೈಲು ಮಾರ್ಗದ ಕನಸು ಇಂದು-


> 'ಹಗಲುವೇಷ'ದ ಹರಾಮಿ ಪುಢಾರಿಗಳಿಂದ ಹುಬ್ಬಳಿ-ಅಂಕೋಲಾ ಬಹುಪಯೋಗಿ-ಅತೀ ಅವಶ್ಯ ರೈಲು ಮಾರ್ಗ ನಿರ್ಮಾಣ ಮಾಡಿಸಲು ಸಾಧ್ಯವೇ ಇಲ್ಲ!! ಕರಾವಳಿ -ಉತ್ತರ ಕರ್ನಾಟಕದ ಜನ ಮತ್ತೊಂದು ಸುತ್ತಿನ ಹೋರಾಟಕ್ಕೆ ಅಣಿಯಾಗುವ ಅನಿವಾರ್ಯತೆ ಇದೆ. ಪ್ರತಿಗಾಮಿ ನಕಲಿ ಪರಿಸರವಾದಿಗಳಿಗೆ ಅಂಕುಶ ಇಟ್ಟರೆ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ಬಿದ್ದಿರುವ ರೆಡ್ ಸಿಗ್ನಲ್ ಹೋಗಿ ಹಸಿರು ನಿಶಾನೆ ತಂತಾನೆ ಬೀಳುತ್ತದೆ.

ನಿನ್ನೆಯದಲ್ಲ, ಬ್ರಿಟಿಷ್ ಆಡಳಿತದಲ್ಲೇ ಅಂಥದೊಂದು ಪರಿಕಲ್ಪನೆ ಮೂಡಿ ಬಂದಿತ್ತು. ಹುಬ್ಬಳ್ಳಿ-ಕಾರವಾರ ರೈಲಿನ ವ್ಯಾಪಕ ಪ್ರಯೋಜನ ಮೊಟ್ಟಮೊದಲು ಗ್ರಹಿಸಿದ್ದು ಬ್ರಿಟಿಷ್ ಆಡಳಿತಗಾರ ಸರ್ ಥಾಮಸ್ ಮನ್ರೋ ಎಂಬಾತ. ಈ ಯೋಜನೆಯ ರೂಪು-ರೇಷೆ ಬ್ರಿಟಿಷ್ ಆಡಳಿತ ಸಿದ್ಧಪಡಿಸಿ ಅಂದೇ ತನ್ನ ಸರ್ಕಾರಕ್ಕೆ ರವಾನಿಸಿತ್ತು. ಆ ಬಳಿಕ ಹುಬ್ಬಳ್ಳಿಯ 'ಚೇಂಬರ್ ಆಫ್ ಕಾಮರ್ಸ್' ಕೇಂದ್ರ ಸರ್ಕಾರಕ್ಕೆ ಸದ್ರಿ ಯೋಜನೆ ಅನುಷ್ಠಾನಗೊಳಿಸುವಂತೆ ಒತ್ತಾಯಿಸುತ್ತಲೇ ಬಂದಿತ್ತು.

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗದಿಂದ ಉತ್ತರ ಕರ್ನಾಟಕದ ಯಾವ್ಯಾವ ಭಾಗ ಎಷ್ಟೆಷ್ಟು ಅಭಿವೃದ್ಧಿ ಆಗಲಿದೆ ಎಂಬ ಚರ್ಚೆ-ವಾದ ಅಂದಿನಿಂದ ಇಂದಿನವರೆಗೆ ನಡೆಯುತ್ತಲೇ ಇದೆ. ಲೋಕಸಭೆಯಲ್ಲಿ ಈ ರೈಲು ಮಾರ್ಗದ ಅವಶ್ಯಕತೆ ಬಗ್ಗೆ ಮೊದಲು ದನಿ ಎತ್ತಿದ್ದು ಉತ್ತರಕನ್ನಡದ ವರಪುತ್ರನೆಂಬ ಖ್ಯಾತಿಯ ಡಾ.ದಿನಕರ ದೇಸಾಯಿ. ಈ ರೈಲು ಮಾರ್ಗ ಜೋಡಣೆಯಿಂದ ಜಗತ್ತಿನಲ್ಲೇ ಅಪರೂಪದ್ದಾದ ಕಾರವಾರ ನೈಸರ್ಗಿಕ ಬಂದರು ಎಷ್ಟೆಲ್ಲ ಆದಾಯ ತರಬಲ್ಲದೆಂದು ದೇಸಾಯಿ ಕರಾರುವಕ್ಕಾಗಿ ಲೋಕಸಭೆಗೆ ಮನವರಿಕೆ ಮಾಡಿಕೊಟ್ಟದ್ದರು. ಇದರ ಹೊರತಾದ ಇನ್ನಷ್ಟು ಲಾಭ-ಪ್ರಯೋಜನ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗದಿಂದ ಆಗುತ್ತದೆಂದು ಅಧಿಕಾರವಾಣಿಯಿಂದ ವಿವರಿಸಿದ್ದರು.

ದೇಸಾಯಿ ವಾದವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿತ್ತು. 1968 ಫೆಬ್ರವರಿ 3ರಂದು ಅಂದಿನ ಬಂದರು ಮತ್ತು ಸಾರಿಗೆ ಮಂತ್ರಿ ಪ್ರೊ.ವಿ.ಕೆ. ಆರ್.ವಿ ರಾವ್ ಖುದ್ದು ಕಾರವಾರಕ್ಕೆ ಬಂದು ಪರಿಶೀಲಿಸಿದ್ದರು. ಅವರಿಗೂ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗದ ಅವಶ್ಯಕತೆ-ಅನಿವಾರ್ಯತೆ ಅರ್ಥವಾಗಿತ್ತು. ಪ್ರೊ.ರಾವ್ ತಾನು ಈ ರೈಲು ಮಾರ್ಗ ನಿರ್ಮಾಣದ ಬಗ್ಗೆ ಪ್ರಾಮಾಣಿಕ




ಕೊಂಕಣ ಪಟ್ಟಿಯಲ್ಲಿ ಪ್ರವಾಸೋದ್ಯಮ ಬೆಳೆಯುತ್ತದೆ. ಕರಾವಳಿ ಸೆರಗು ಹೊಂದಿರುವ ಎಲ್ಲಾ ರಾಜ್ಯಗಳ ಆದಾಯ ಹೆಚ್ಚುತ್ತದೆ. ಈ ಅಭಿವೃದ್ಧಿ ಅಂಶಗಳನ್ನೆಲ್ಲ ದಿನಕರ ದೇಸಾಯಿ ಎಂಪಿಗಿರಿ ಅವಧಿಯಲ್ಲೇ ಕೇಂದ್ರ ಸರ್ಕಾರದ ಮುಂದೆ ಮಂಡಿಸಲಾಗಿತ್ತು.

ದಿನ ಕಳೆದಂತೆ ಕಾಲ ಬದಲಾದಂತೆ ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ ಅನಿವಾರ್ಯತೆ ಹೆಚ್ಚಾಯಿತು. ಅದರ ಪ್ರಯೋಜನ ಹಲವು ಆಯಾಮ ಪಡೆದುಕೊಂಡಿತು. ಉತ್ತರ ಕರ್ನಾಟಕ ಮತ್ತು ಕರಾವಳಿಗೆ ಕೊಂಡಿಯಾಗಲಿರುವ ಈ ರೈಲು ಮಾರ್ಗ ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳ ಜನರಿಗೆ ಅನಿವಾರ್ಯ ಆಯ್ತು. ಏಷ್ಯಾದಲ್ಲೇ ದೊಡ್ಡದಾದ ಕಾರವಾರದ 'ಕದಂಬ' ನೌಕಾನೆಲೆ, ಕೈಗಾ ಅಣು ವಿದ್ಯುತ್ ಸ್ಥಾವರ ಮತ್ತು ಕಾರವಾರ ಹಾಗೂ ಬೇಲೇಕೇರಿ ವಾಣಿಜ್ಯ ಬಂದರುಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗ ಇದೆನಿಸಿಕೊಂಡಿತು. ಹೀಗಾಗಿ ಹುಬ್ಬಳ್ಳಿ-ಕಾರವಾರ ಮಾರ್ಗಕ್ಕೆ ಮತ್ತಷ್ಟು ಮಹತ್ವ ಬಂದುಬಿಟ್ಟಿತು.

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣವಾದರೆ ಪ್ರತಿವರ್ಷ ಹೆದ್ದಾರಿ ರಿಪೇರಿಗೆ ವ್ಯಯಿಸುವ ಕೋಟಿ-ಕೋಟಿ ರೂ.ನಲ್ಲಿ ದೊಡ್ಡ ಮೊತ್ತ ಉಳಿತಾಯವಾಗುತ್ತದೆ! ಹೆದ್ದಾರಿ ಅವಘಡದಲ್ಲಿ ಪ್ರತಿವರ್ಷವಾಗುತ್ತಿರುವ ನೂರಾರು ಜೀವಹಾನಿ ತಪ್ಪುತ್ತದೆ. ವಾಹನಗಳಿಂದಾಗುತ್ತಿರುವ ಮಾಲಿನ್ಯವೂ ಗಣನೀಯವಾಗಿ ಕಮ್ಮಿಯಾಗುತ್ತದೆ. ಹುಬ್ಬಳ್ಳಿ-ಅಂಕೋಲಾ- ಕಾರವಾರ ನಡುವಿನ ರಾಷ್ಟ್ರೀಯ ಹೆದ್ದಾರಿ 63 ಮತ್ತು 17ರಲ್ಲಿನ ರಸ್ತೆ-ಸೇತುವೆ ಮುಕ್ಕಾಗಿವೆ. ಇದರ ರಿಪೇರಿಗೆ ಸರ್ಕಾರ 1,700 ಕೋಟಿ ವ್ಯಯಿಸಬೇಕಾಗಿದೆ. ಇದರಲ್ಲಿ ರಸ್ತೆ ಅಭಿವೃದ್ಧಿ ಆಗುತ್ತದೋ ಇಂಜಿನಿಯರ್ -ಗುತ್ತಿಗೆದಾರ -ರಾಜಕಾರಣಿ ಗ್ಯಾಂಗ್ ಪ್ರಗತಿ ಹೊಂದು ತ್ತದೋ ಆ ಮಾತು ಬೇರೆ. ಬೊಕ್ಕಸಕ್ಕಂತೂ ಹಾನಿ. ಹುಬ್ಬಳ್ಳಿ ಅಂಕೋಲ ರೈಲು ಯೋಜನೆ ಕಾರ್ಯಗತವಾದರೆ ಈ ಲಾಸ್ ಅಂತೂ ಆಗದು. ಕರಾವಳಿ ಮತ್ತು ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿಯ ಹೊಸ ಶಕೆ ಶುರುವಾಗುವುದಂತೂ ಖರೆ.



ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗದ ನಕ್ಷೆ

ದುತ್ತನೆ ಎದುರಾಯ್ತು! ಪರಿಸರವಾದಿ ವೇಷದ ಒಂದಿಷ ಪುರೋಹಿತ ಶಾಹಿ ಚೆಡ್ಡಿ ವಿಪ್ರರು ಈ ರೈಲು ಮಾರ್ಗದಿಂ ಪಶ್ಚಿಮ ಘಟ್ಟದ ಸಂಪದ್ಭರಿತ ಅರಣ್ಯ ನಾಶವಾಗುತ್ತವೆ ಎಂದ ಕಿರಿಕ್ ಮಾಡತೊಡಗಿದರು. ಆ ವೇಳೆಗಾಗಲೇ ಹುಬ್ಬಳ್ಳಿ ಕಲಘಟಗಿ ನಡುವಿನ 30 ಕಿ.ಮೀ. ಹಳಿ ಜೋಡಣೆ ಕಾಮ ಗಾರಿ ಮುಗಿದುಹೋಗಿತ್ತು.

ಪರಿಸರ ಹಾರಾಟದಿಂದ ಹಣ-ಹೆಸರು ಎರಡೂ ಮಾ ಕೊಂಡಿದ್ದ ಶಿರಸಿ-ಯಲ್ಲಾಪುರ ಭಾಗದ ಹಾರವರು ಜ ಪರವಾದ ಈ ಯೋಜನೆಗೆ ಆಡ್ಡಗಾಲು ಹಾಕಿ ಕೂತುಬಿಟ್ಟರು ಪರಿಸರವಾದಿ ಎಂಬ ಗೆಟಪ್‌ನಿಂದ ರಾಜಕೀಯ ಲೈಮ್‌ಲೈಟ್‌ಗೆ ಬಂದಿರುವ ಅನಂತ ಹೆಗಡೆ ಆಶೀಸರ ಎಂ ಪಕ್ಕಾ ಚೆಡ್ಡಿ ಈ ಹುಬ್ಬಳ್ಳಿ-ಅಂಕೋಲ ರೈಲು ಮಾಗ ವಿರೋಧಿ ಕಿತಾಪತಿಯ ಸೂತ್ರಧಾರ. ತಮಾಷೆಯೆಂದ ಪಶ್ಚಿಮ ಘಟ್ಟ ಕಾರ್ಯ ಪಡೆ ಎಂಬ ಬೋಗಸ್ ಮಂಡಳಿಯ ಗೂಟದ ಕಾರು ಹೊಡೆದುಕೊಂಡಿರುವ ಈ ನಿರ್ಲಜ್ಜ ಆಶೀಸರನೇ ತನ್ನೂರಲ್ಲಿ ಎಕರೆಗಟ್ಟಲೇ ಅರಣ್ಯ ಕಬಳಿ ತೋಟ ಮಾಡಿಕೊಂಡಿದ್ದಾನೆ. ಇಂಥ ಅನಾಹುತಕಾ ಆಶೀಸರ ಸ್ವಜಾತಿ ಹೈಗರ ಗ್ಯಾಂಗೊಂದು ಕಟ್ಟಿ ಜನ ಸಾಮಾನ್ಯ ನ್ಯಾಯೋಚಿತ ಬೇಡಿಕೆಗೆ ಕಲ್ಲುಹಾಕಿ ಕೇಕೆ ಹಾಕುತ್ತಿದ್ದಾನೆ.

ಈ ಬ್ರಾಹ್ಮಣರ ಭಂಡಾಟದ ಹೊತ್ತಲ್ಲೇ ಶಿರಸಿ ಅರ ಸರ್ಕಲ್‌ನಲ್ಲಿದ್ದ ಅವಾಂತರಕಾರಿ ಐಎಫ್‌ಎಸ್ ಅಧಿಕಾ ಯೊಬ್ಬ ಸದ್ರಿ ರೈಲು ಯೋಜನೆ ಬಗ್ಗೆ 'ಅಡ್‌ವಸ್ ರಿಪೋರ್ಟ್' ಕಳಿಸಿದ್ದ. ತಾನೊಬ್ಬ ಮಹಾನ್ ಅರಣ್ಯರಕ್ಷ ನೆಂದು ಕೇಂದ್ರ ಸರ್ಕಾರದ ಅಧಿಕಾರಿಗಳೆದುರು ಬಿಂಬಿ ಕೊಳ್ಳುವ ತೆವಲಿಂದ ಈ ಅಧಿಕಾರಿ ದೊಡ್ಡ ಅನಾಹುತವನ್ನ ಮಾಡಿಬಿಟ್ಟಿದ್ದ. ಈ ಅಡ್ನಾಡಿ ಐಎಫ್‌ಎಸ್ ಮತ್ತು ಅಸಡ್ಡಾ ಪರಿಸರ ಪುರುಷೋತ್ತಮರ ತಪ್ಪು ವರದಿ, ಕೋರ್ಟ್-ಕಚೇ ಕ್ಯಾತೆಯಿಂದ ಬಹುಪಯೋಗಿ ಹುಬ್ಬಳ್ಳಿ-ಅಂಕೋಲಾ ರೈಲ

...ರ್ಗಕ್ಕೆ ರೆಡ್ ಸಿಗ್ನಲ್ ಬಿದ್ದಿದೆ. ಜನ ಈ ಖೋಟಾ ಪರಿಸರ ...ಯೇಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಹುಬ್ಬಳ್ಳಿ-ಅಂಕೋಲ ...ಲು ಮಾರ್ಗಕ್ಕಾಗಿ ಬಹುದಿನದಿಂದ ಹೋರಾಡುತ್ತಿರುವ ...ವಳಿ-ಉತ್ತರ ಕರ್ನಾಟಕದ ಮುಗ್ಧ ಮಂದಿಗೆ ಚಿಡ್ಡಿಗಳ ...ಗಾಮಿತನದ ಅಸಲಿ ಅವತಾರ ಢಾಳಾಗಿ ಗೋಚರಿಸಿ ...ತ್ತಿದೆ!!

## ಮತ್ತೆ ಹೋರಾಟ

... ಮನುವಾದಿಗಳ ಪರಿಸರ 'ಕಾಳಜಿ'ಯಿಂದ ಹುಬ್ಬಳ್ಳಿ-...ಕೋಲಾ ರೈಲು ನಿರ್ಮಾಣ ಆಗುವ ಆಸೆಯಲ್ಲಿದ್ದ ಜನರಿಗೆ ... ಬಂದ ತುತ್ತು ಬಾಯಿಗೆ ಬರದಂತಾಗಿತ್ತು. ಇದರಿಂದ ...ವಳಿ-ಉತ್ತರ ಕರ್ನಾಟಕದ ಜನ ಕೆರಳಿ ಮತ್ತೆ ಹೋರಾಟದ ...ದಿ ಹಿಡಿದರು. ಜನರ ಹಕ್ಕೊತ್ತಾಯದ ಪ್ರತಿಭಟನೆ, ಜಾಥಾ, ...ರವಣಿಗೆ, ರಸ್ತೆ ತಡೆ, ನೈರುತ್ಯ ರೈಲ್ವೇ ಕಚೇರಿ ಎದುರು ...ಣಿ ಸರಣಿಯಾಗಿ ನಡೆಯಿತು. ಇತ್ತ ಉತ್ತರ ಕನ್ನಡದಲ್ಲಿ ...ಭಾವಿತ ಇಮೇಜಿನ ಮಾಜಿ ಜಿ.ಪಂ.ಅಧ್ಯಕ್ಷ ರಮಾನಂದ ...ಯಕ್ ನೇತೃತ್ವದಲ್ಲಿ ರೈಲಿಗಾಗಿ ಹೋರಾಟ ನಡೆದರೆ, ಅತ್ತ ...ಬ್ಬಳ್ಳಿಯಲ್ಲಿ ಹಿರಿಯ ಪತ್ರಕರ್ತ-ಸಾಮಾಜಿಕ ಹೋರಾಟ ...ರ ಪಾಟೀಲ ಪುಟ್ಟಪ್ಪನಂಥವರು ಪ್ರತಿಭಟನೆಗೆ ಧುಮು...ದರು. ನಾಡಿನ ನಾಮಾಂಕಿತರನೇಕರು ಈ ಹುಬ್ಬಳ್ಳಿ

ಹಳಿಗಾಗಿ ಸುಮಾರು 769 ಹೆಕ್ಟೇರ್ ಅರಣ್ಯ ನಾಶವಾಗುತ್ತದೆ. ಇದಕ್ಕೆ ಪರ್ಯಾಯವಾಗಿ 720 ಹೆಕ್ಟೇರ್ ಅರಣ್ಯ ಬೆಳೆಸಲು ರಾಮಚಂದ್ರ ವರದಿಯಲ್ಲಿ ಹೇಳಿಕೆ ನೀಡಲಾಗಿದೆ.

## ವಾಸ್ತವ ಏನು?

ಸೋಕಾಲ್ಡ್ ಪರಿಸರ ಪ್ರೇಮಿಗಳು ಮತ್ತು ಅವಾಂತರಕಾರಿ ಅರಣ್ಯ ಇಲಾಖೆಯ ಐಎಫ್‌ಎಸ್ ಪಂಡಿತರು ಸುಳ್ಳು-ಸುಳ್ಳೇ ಹುಯಿಲೆಬ್ಬಿಸುತ್ತಿದ್ದಾರೆ. ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗದ ಉದ್ದ 120 ಕಿಮೀಗಿಂತ ಜಾಸ್ತಿ, ಇದು ದಟ್ಟ ಅರಣ್ಯ ಪ್ರದೇಶವೆಂದು ಅಮಾಯಕರನ್ನು ದಾರಿ ತಪ್ಪಿಸಿ ಹೀರೋಗಳಾಗಲು "ಅಡ್ಡಕಸುಬಿ" ನಡೆಸಲು ಸ್ಕೆಚ್ ಹಾಕಿಕೊಂಡಿದ್ದಾರೆ. ವಾಸ್ತವವೆಂದರೆ ನಿರ್ಮಾಣವಾಗುವ ರೈಲು ಹಳಿ ಉದ್ದವೇ ಬರೀ 120 ಕಿ.ಮೀ.ಅಷ್ಟೇ! ಇದರಲ್ಲಿ ಈಗಾಗಲೇ ಹುಬ್ಬಳ್ಳಿ-ಕಲಘಟಗಿ ನಡುವಿನ 30 ಕಿ.ಮೀ. ಮಾರ್ಗದ ಕಾಮಗಾರಿ ಹೆಚ್ಚುಕಮ್ಮಿ ಎಲ್ಲ ಮುಗಿದಿದೆ. ಈಗಾಗಬೇಕಿರುವುದು 90 ಕಿ.ಮೀ. ಹಳಿ ನಿರ್ಮಾಣ ಮಾತ್ರ.

ಕಾಮಗಾರಿ ನಡೆಯಬೇಕಿರುವ 90 ಕಿ.ಮೀ. ಉದ್ದಳತೆಯಲ್ಲಿ ನಿಯೋಜಿತ ರೈಲುಮಾರ್ಗ 50 ಕಿ.ಮೀ.ನಷ್ಟು ಅರಣ್ಯ ಇಲ್ಲದ ಸಮತಟ್ಟಾದ ಪ್ರದೇಶ ಬರುತ್ತದೆ. 16 ಕಿ.ಮೀ.ನಷ್ಟು ಮಾರ್ಗ ಸುರಂಗಗಳ ಮೂಲಕ ಹಾದು ಹೋಗಬೇಕಾಗುತ್ತದೆ. ನಿಜವಾದ ಸಮಸ್ಯೆಯಿರುವುದು 10-12 ಕಿ.ಮೀ.ಉದ್ದದ



...ಕೋಲಾ ರೈಲು ಮಾರ್ಗ ಬೇಡಿಕೆ ನ್ಯಾಯೋಚಿತ, ಅತೀ ...ಶ್ಯವೆಂದು ಹೇಳತೊಡಗಿದರು. ಪರಿಸರ ಪುಂಡರ-ಅರಣ್ಯ ...ಕಾರಿಗಳ ಆಕ್ಷೇಪ ಅತಿರೇಕದ ಬೋಗಸ್ ಕಂತೆಪುರಾಣ ...ದು ಹೋರಾಟಗಾರರು ಸಾಕ್ಷ್ಯಾಧಾರ-ದಾಖಲೆ ಸಮೇತ ...ರಿಸತೊಡಗಿದ್ದರು.


ಇದರಿಂದ ಬೆಚ್ಚಿಬಿದ್ದ ಕೇಂದ್ರ-ರಾಜ್ಯ ಸರ್ಕಾರಗಳ ...ತಿಗಳು ಹುಬ್ಬಳ್ಳಿ -ಅಂಕೋಲಾ ರೈಲು ಮಾರ್ಗದ ...ಧಕ-ಬಾಧಕದ ಅಧ್ಯಯನಕ್ಕೆ ಟೀಮ್ ರಚಿಸಿ ಕಳಿಸಿದರು. ...ದ್ರ ರೈಲ್ವೇ ಇಲಾಖೆಯ ಸಹಾಯ ಸಚಿವರಾಗಿ ರಾಜ್ಯದ ...ಚ್.ಮುನಿಯಪ್ಪ ಅಧಿಕಾರ ವಹಿಸಿಕೊಂಡಾಗ ಎಲ್ಲ ...ತಡೆ ಬಗೆಹರಿಸುವ ಆಶಾಭಾವನೆ ಮೂಡಿತ್ತು. ಕೇಂದ್ರ ...ಸರ ಮಂತ್ರಿಯಾಗಿದ್ದ ಜೈರಾಮ ರಮೇಶ ಅರಣ್ಯ-ಪರಿಸರ ...ವಾಲಯದ ಹೆಚ್ಚುವರಿ ನಿರ್ದೇಶಕ ಡಾ.ಗಂಗೋಪಧ್ಯಾಯ ...ತ್ತು ಕೇಂದ್ರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ...ಎಸ್.ರೆಡ್ಡಿಗಳ ತಂಡವನ್ನು ...ವೀಕ್ಷಣೆಗೆ ಕಳಿಸಿದ್ದರು. ...ತಂಡದ ಎದುರು ಎಲ್ಲ ...ಯೂ ಸದ್ರಿ ರೈಲು ...ರ್ಗ ನಿರ್ಮಾಣ ...ಡಲೇಬೇಕೆಂದು ...ರಾಟಗಾರರು-...ನಸಾಮಾನ್ಯರು-ವಾಣಿಜ್ಯ ...ಭದವರು ...ಗ್ರಹಿಸಿದ್ದಾರೆ.

ಇದಕ್ಕೆ ಸಮಾನಾಂತರ ...ಗಿ ರಾಜ್ಯ ಸರ್ಕಾರವೂ ...ಬ್ಬಳ್ಳಿ-ಅಂಕೋಲ ರೈಲು ...ರ್ಗದ ಲಾಭ-ನಷ್ಟದ ಅಧ್ಯಯನಕ್ಕೆಂದು ಬೆಂಗಳೂರಿನ ...ರತೀಯ ವಿಜ್ಞಾನ ಸಂಸ್ಥೆಯ ಡಾ. ರಾಮಚಂದ್ರ ನೇತೃತ್ವದ ...ಡವನ್ನು ನೇಮಿಸಿತ್ತು. ಈ ವಿಜ್ಞಾನಿಗಳ ತಂಡ ಹಲವು ...ಗಳ್‌ನಲ್ಲಿ ಅಧ್ಯಯನ ನಡೆಸಿತ್ತು. ಈ ಟೀಮ್ ಕೊಟ್ಟಿರುವ ...ಸದಿ ರೈಲು ಮಾರ್ಗ ನಿರ್ಮಾಣಕ್ಕೆ ಪೂರಕವಾಗಿದೆ. ...ಬ್ಬಳ್ಳಿಯಿಂದ ಕಲಘಟಗಿವರೆಗೆ ಬಯಲು ಪ್ರದೇಶವಿದ್ದರೆ, ...ಲಘಟಗಿಯಿಂದ ಉತ್ತರ ಕನ್ನಡದ ರಾಮನಗುಳಿ ತನಕ ...ರಣ್ಯವಿದೆ. ಯಲ್ಲಾಪುರ ತಾಲ್ಲೂಕಿನ ದಟ್ಟ ಅರಣ್ಯದಲ್ಲಿ ...ಪಾರ ಜೀವವೈವಿಧ್ಯ, ಗಿಡ-ಮರಗಳು ಇದೆ. ಇಲ್ಲಿಯ ...ಡಿಗೆ ದೊಡ್ಡ ಹಾನಿಯಾಗದಂತೆ ಎಚ್ಚರವಹಿಸಿ ರೈಲುಹಳಿ ...ರ್ಮಾಣ ಮಾಡಬಹುದೆಂದು ವರದಿಯಲ್ಲಿ ಹೇಳಲಾಗಿದೆ.

ಕಲಘಟಗಿ-ರಾಮನಗುಳಿ ಮಧ್ಯೆ ಅನೇಕ ಸುರಂಗಗಳು ...ರ್ಮಾಣ. ಆಗಲಿರುವುದರಿಂದ ಅದರ ಪರಿಣಾಮಗಳ ...ಧ್ಯಯನವೂ ನಡೆದಿದೆ. ಆನೆಗಳು ಸಂಚರಿಸುವ ದಾರಿಗೆ ...ಂದರೆ ಆಗದಂತೆ ಕಾರಿಡಾರ್‌ನಿಂದ ಹಾದುಹೋಗುವ ...ಲ್ವೆ ಮಾರ್ಗವನ್ನು ಮೇಲಿಂದ ಮುಚ್ಚಲು ಸಲಹೆ ...ಡಲಾಗಿದೆ. ಆನೆಗಳು ತಿನ್ನುವ ಮರ-ಗಿಡ ಬೆಳೆಸಿದರೆ ...ಚ್ಚಿನ ಹಾನಿಯಾಗದೆಂದು ವರದಿಯಲ್ಲಿ ಉಲ್ಲೇಖಿಸ...ಗಿದೆ. ಇದಕ್ಕೆ ಆಧಾರವಾಗಿ 100 ವರ್ಷ ಇತಿಹಾಸವಿರುವ ...ಸರ್ ರೈಲು ಮಾರ್ಗದುದ್ದಕ್ಕೂ ಇರುವ ಸುರಂಗಗಳ ...ರಿವರ ವಿವರಿಸಲಾಗಿದೆ. ಹುಬ್ಬಳ್ಳಿ- ಅಂಕೋಲಾ ರೈಲು

ಅರಣ್ಯ ಭಾಗದಲ್ಲಿ ಮಾತ್ರ. ಈ ಏರಿಯಾದಲ್ಲಿ ಕಡಿಯುವ ಒಂದು ಗಿಡ-ಮರಕ್ಕೆ ಬದಲಾಗಿ ಹತ್ತು ಗಿಡಮರ ಬೆಳೆಸುವ ಹೊಣೆಗಾರಿಕೆ ಅರಣ್ಯ ನಾಶದ ಹುಸಿಗುಮ್ಮ ತೋರಿಸುವ ಐಎಫ್‌ಎಸ್ ಅಧಿಕಾರಿಗಳ ಹೆಗಲಿಗೆ ಆಳ್ವಿಕರು ಕಟ್ಟುನಿಟ್ಟಾಗಿ ಹೊರಿಸಿದರೆ ಅದೊಂದು ಸಮಸ್ಯೆ ಅಲ್ಲ! ಈ 10-12 ಕಿ.ಮೀ. ಅರಣ್ಯದಲ್ಲಿ ಅಪರೂಪದ ಪ್ರಾಣಿ-ಪಕ್ಷಿ ಸಂಕುಲವಿದೆ ಎಂಬ 'ಆತಂಕ' ನಕಲಿ ಪರಿಸರವಾದಿಗಳಿಗೆ, ಬಂಡಲ್ ಅರಣ್ಯ ಅಧಿಕಾರಿಗಳೇನಾದರೂ ಇದ್ದರೆ ಆ ಭಾಗದಲ್ಲಷ್ಟೆ ರೈಲು ಮಾರ್ಗ ಬದಲಿಸಲೂಬಹುದು.

ಯಲ್ಲಾಪುರದ ಕಿರವತ್ತಿಯಿಂದ ರಾಮನಗುಳಿವರೆಗಿನ ರಾಷ್ಟ್ರೀಯ ಹೆದ್ದಾರಿ 63ರ ಪಕ್ಕದಲ್ಲಿ ಅಥವಾ ಇನ್ಯಾವುದೇ ಅನುಕೂಲಕರ ಪ್ರದೇಶದಲ್ಲಿ ಹಳಿ ಜೋಡಣೆ ಮಾಡಬಹುದು. ಹಾಗೆ ಸುತ್ತಿ ಬಳಸಿ ರೈಲು ಮಾರ್ಗ ನಿರ್ಮಿಸಿದರೆ ಅಬ್ಬಬ್ಬಾ ಅಂದರೆ 10-12 ಕಿ.ಮೀ.ನಷ್ಟು ಉದ್ದವಾಗಬಹುದು.



ಆನೆಗಳಿಗೆ ಹಾದುಹೋಗಲು ಅನುಕೂಲವಾಗುವಂತೆ ನಿರ್ಮಿಸಬಹುದಾದ ಲೀನಿಯರ್ ಸುರಂಗ (ಕ್ಯಾಪಲ್‌ರಾಕ್)


ಜಗತ್ತಿನಲ್ಲೇ ಅತೀ ಹೆಚ್ಚು ಆದಾಯ ತರುವ ಭಾರತೀಯ ರೈಲ್ವೇ ಇಲಾಖೆಗೆ ಈ ಹೆಚ್ಚುವರಿ ಆರ್ಥಿಕ ಹೊರೆ ಹೆಚ್ಚೇನೂ ಅಲ್ಲ; ಹಾಗೆಯೇ ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗದಿಂದ ಆಗುವ ಅನುಕೂಲ-ಪ್ರಯೋಜನ-ಲಾಭದ ಮುಂದೆ ಈ 'ಹಾನಿ' ಲೆಕ್ಕಕ್ಕೆ ಇಲ್ಲ ಅಲ್ಲವಾ?

ಇದನ್ನೆಲ್ಲ ಮೊದಲು ಸ್ವಯಂ ಮನನ ಮಾಡಿಕೊಂಡು ಕೇಂದ್ರ ಪರಿಸರ ಅರಣ್ಯ ಮತ್ತು ರೈಲು ಮಂತ್ರಿಗಳ ಮೇಲೆ ಒತ್ತಡ ಹಾಕುವ ಇಚ್ಛಾಶಕ್ತಿ ಜಾಣ್ಮೆ ಉತ್ತರ ಕನ್ನಡದ ಬೆಂಕಿ ನವಾಬ ಸಂಸದ ಅನಂತಕುಮಾರ್ ಹೆಗಡೆ ಮತ್ತು ಪಕ್ಕಾ ಪಾತಕಿ ಚಿಡ್ಡಿ ಧಾರವಾಡದ ಸಂಸದ ಪ್ರಹ್ಲಾದ್ ಜೋಶಿ, ನಾಜೂಕಯ್ಯ ಕಾಗೇರಿ ಮತ್ತು ಜಡಭರತನಂಥ ಜಗದೀಶ್ ಶೆಟ್ಟರ್‌ಗಳಿಗೆ ಬರಬೇಕು. ಹುಕ್ಕಿ ಬಂದಾಗೊಮ್ಮೆ ಅನಂತ್ಮಾಣಿ, ಜೋಶಿಜೀ, ಶೆಟ್ಟರ್ ಹುಬ್ಬಳ್ಳಿ-ಅಂಕೋಲಾ ರೈಲು ಬೇಕೆಬೇಕು ಎಂದು ಶೋ ಮಾಡಿ ತಣ್ಣಗಾಗುತ್ತಿದ್ದಾರೆ. ಕಾಗೇರಿ ಮಾಣಿ ಮುಗುಮ್ಮಾಗಿದ್ದಾರೆ. ಅಸ್ನೋಟಿಕರ್‌ಗೆ ಇದೆಲ್ಲ ಅರ್ಥವೂ ಆಗದು. ಉತ್ತರ ಕರ್ನಾಟಕದ ಎಮ್ಮೆಲ್ಲೆಗಳಿಗೆ ಈ ರೈಲು ಮಾರ್ಗದ ಬೇಕು-ಬೇಡದ ಅರಿವೆ ಇದ್ದಂತಿಲ್ಲ.

ಇಂಥ 'ಹಗಲುವೇಷದ' ದ ಹರಾಮಿ ಪುಢಾರಿಗಳಿಂದ ಹುಬ್ಬಳ್ಳಿ-ಅಂಕೋಲಾ ಬಹುಪಯೋಗಿ-ಅತೀ ಅವಶ್ಯ ರೈಲು ಮಾರ್ಗ ನಿರ್ಮಾಣ ಮಾಡಿಸಲು ಸಾಧ್ಯವೇ ಇಲ್ಲ!! ಕರಾವಳಿ -ಉತ್ತರ ಕರ್ನಾಟಕದ ಜನ ಮತ್ತೊಂದು ಸುತ್ತಿನ ಹೋರಾಟಕ್ಕೆ ಅಣಿಯಾಗುವ ಅನಿವಾರ್ಯತೆ ಇದೆ. ಪ್ರತಿಗಾಮಿ ನಕಲಿ ಪರಿಸರವಾದಿಗಳಿಗೆ ಅಂಕುಶ ಇಟ್ಟರೆ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ಬದ್ದಿರುವ ರೆಡ್ ಸಿಗ್ನಲ್ ಹೋಗಿ ಹಸಿರು ನಿಶಾನೆ ತಂತಾನೆ ಬೀಳುತ್ತದೆ.


• ನಹುಷ

# ಅವ್ವಾ ಮಾದೇಶನ ಮುಗಿಸಲು ಫೀಲ್ಡಿಗಿಳಿದ ಪಂಟರ್ಸ್



"ಚಾಮರಾಜ ಕ್ಷೇತ್ರದ ಮುಂದಿನ ಎಮ್ಮೆಲ್ಲೆ ನಾನೇ" ಎಂದು ಅಬ್ಬರದಿಂದ ಮೆರೆದಾಡುತ್ತಿರುವ ಅವ್ವಾ ಮಾದೇಶ ಎಂಬ ಹಳೇ ಕ್ರಿಮಿಯನ್ನು ಹೊಸಕಿಹಾಕಲು ಮೈಸೂರಿನ ಅಂಡರ್‌ವರ್ಲ್ಡ್‌ನ ಗುಂಪೊಂದು ತಹತಹಿಸುತ್ತಿದೆ!

ತನ್ನ ಜೀವಕ್ಕೆ ಸಂಚಕಾರ ಬರಬಹುದು ಎಂಬ ಸೂಚನೆ ಖುದ್ದು ಮಾದೇಶನಿಗೆ ಗೊತ್ತಾಗಿರುವುದರಿಂದಲೋ ಏನೋ ಬೆಂಗಳೂರಿನ ಪುಡಿ ರೌಡಿಗಳನ್ನೆಲ್ಲಾ ದಂಡಿಯಾಗಿ ತುಂಬಿಕೊಂಡು ಹೋಗಿ ತನ್ನ ಸುತ್ತ ಕಾವಲಿಗೆ ನಿಲ್ಲಿಸಿಕೊಂಡಿದ್ದಾನೆ. ಸೈಲೆಂಟ್ ಸುನೀಲ, ಒಂಟೆ ಇತ್ಯಾದಿ ರೌಡಿಗಳ ಜೈಲು ಖರ್ಚನ್ನು ನಿಭಾಯಿಸುತ್ತಿರುವ ಮಾದೇಶ ಬೆಂಗಳೂರಿನ ರೌಡಿ ಶೀಟರ್ ಡಬಲ್ ಮೀಟರ್ ಮೋಹನ್‌ನನ್ನೂ ತನ್ನೊಂದಿಗೆ ಸಾಕಿಕೊಂಡಿದ್ದಾನೆ. ಕಳೆದ ವರ್ಷ ಯಲಹಂಕದಲ್ಲಿ ನಡೆದ ಬುಲೆಟ್ ರವಿ ಕೊಲೆಯಲ್ಲಿ ನೇರವಾಗಿ ಪಾಲ್ಗೊಂಡಿದ್ದರೂ ಅದರಲ್ಲಿ ಫಿಟ್ ಆಗದೇ ಉಳಿದವನೇ ಈ ಡಬಲ್ ಮೀಟರ್ ಮೋಹನ.



ದೇವು

ಕಳೆದ ವಾರ ಮೈಸೂರು ಸಿಟಿ ಬಸ್‌ಸ್ಟಾಂಡ್ ಎದುರಿಗೇ ಇರುವ ಕಾರ್ಪೊರೇಷನ್ ಕಚೇರಿ ಬಳಿ ಮಾದೇಶನ ಜೀವ ಸ್ವಲ್ಪದರಲ್ಲೇ ಬದುಕುಳಿದಿದೆ. ಮಾದೇಶ ಅಂದು ಪಾಲಿಕೆ ಕಚೇರಿ ಬಳಿ ಬಂದೇ ಬರುತ್ತಾನೆ ಎಂಬ ಖಚಿತ ಮಾಹಿತಿಯ ಮೇಲೆ ನವೀನ, ದೀಪು, ಕೆಆರ್‌ಎಸ್‌ನ ಒಂದಷ್ಟು ಹುಡುಗರು-ಮತ್ತು ಪಡುವಾರಳ್ಳಿಯ ನಾಲ್ಕು ಮಂದಿ ಹಂತಕರು ಹಾಜರಾಗಿ ಮಾದೇಶನ ಜೀವ ತೆಗೆಯುವ ಸ್ಕೆಚ್ಚು ರೂಪಿಸಿದ್ದರು. ಆದರೆ ಕಾರು ಇಳಿದ ಮಾದೇಶನ ಸುತ್ತ ಹೆಚ್ಚು ಜನರ ಪಹರೆ ಇದ್ದುದರಿಂದ ಅಟ್ಯಾಕ್ ಸ್ಕೆಚ್ಚು ಮಿಸ್ ಆಗಿದೆ.

## ಸುನಿಲ-ದೇವು ಜೊತೆ ಜಂಟಿ ದುಷ್ಮನಿ!

ಇವತ್ತು ಮಾದೇಶನನ್ನು ಮುಗಿಸಿಯೇ ತೀರಬೇಕು ಎಂದು ಜೈಲಿನಲ್ಲಿದ್ದೇ ಮಚ್ಚು ಮಸೆಯುತ್ತಿರುವ ದೇವು ಮತ್ತು ಸುನಿಲರದ್ದು ನಾಲ್ಕು ವರ್ಷದ ಹಳೇ ದುಷ್ಮನಿ.

2008ರ ಸುಮಾರಿಗೆ ಮೈಸೂರಿನ ವಿಜಯನಗರ ಏರಿಯಾದಲ್ಲಿ ಮಾರ್ವಾಡಿಯೊಬ್ಬನ ಜಾಗವನ್ನು ಕಬಳಿಸಲು ಮಾದೇಶ ಪ್ಲಾನು ಮಾಡಿದ್ದ. ಆದರೆ ಆ ಮಾರ್ವಾಡಿ ಅವ್ವಾ ಮಾದೇಶನನ್ನೇ ಮುಗಿಸಲು ಇದೇ ದೇವುಗೆ ಸುಪಾರಿ ನೀಡಿದ್ದ. ಈ ವಿಚಾರ ಮಾದೇಶನಿಗೆ ಅದು ಹೇಗೋ ಗೊತ್ತಾಗಿ ಬಿಟ್ಟಿತ್ತು. ದೇವು ಗ್ಯಾಂಗ್ ಹುಣಸೂರು ಬಳಿಯ ತೋಟದ ಮನೆಯಲ್ಲಿ ಆಶ್ರಯ ಪಡೆದು ತನ್ನನ್ನು ಮುಗಿಸುವ ಪ್ಲಾನು ಮಾಡುತ್ತಿದೆ



ಕಾರ್ಪೊರೇಷನ್ ಕಚೇರಿ

ಎಂಬ ಖಚಿತ ಸುಳಿವು ಮಾದೇಶನಿಗೆ ರವಾನೆಯಾಗಿತ್ತು. ಆಗ ಮಾದೇಶ ಸೀದಾ ಹುಣಸೂರಿನ ತೋಟದ ಮನೆಗೆ ತನ್ನ ತಮ್ಮ ಅವ್ವಾ ಮಂಜ ಮತ್ತು ಕರಿಯಪ್ಪನ ಪಡೆಯನ್ನು ಕರೆದೊಯ್ದು ದೇವು ತಂಡದ ಮೇಲೆ ಮುಗಿಬಿದ್ದಿದ್ದ. ಈ ದಾಳಿಯಲ್ಲಿ ಮಾದೇಶನ ಗ್ಯಾಂಗು ಗಾಂಧಿ ಅಲಿಯಾಸ್ ರಾಮು ಮತ್ತು ರಾಜೇಶ್ ಎಂಬ ಇಬ್ಬರನ್ನು ಬರ್ಬರವಾಗಿ ಕೊಚ್ಚಿ ಕೆಡವಿತ್ತು. ದೇವು, ಸುನೀಲ, ಅಶೋಕ ಮತ್ತು ಕುಂಟ ಸೀನ ತೋಟದ ಮನೆಯ ಹೆಂಚು ತೆಗೆದು ಹೊರನೆಗೆದು ಪರಾರಿ ಆಗಿದ್ದರು. ನಂತರ ಪೊಲೀಸರಿಗೆ ಶರಣಾದ ಮಾದೇಶ ಜೈಲು ಸೇರಿದ್ದ. ಕೊನೆಗೆ ಅವ್ವಾ ಮಾದೇಶ 2009ರಲ್ಲಿ ಹೊರಬಂದ.

ಈ ಸೇಡು ಇಲ್ಲಿಗೇ ಕೊನೆಯಾಗಲಿಲ್ಲ.

ಅದು 2010ರ ಅಕ್ಟೋಬರ್‌ನಲ್ಲಿ ನಡೆದ ಕರಿಯಪ್ಪನ ಕೊಲೆಯೊಂದಿಗೆ ಮತ್ತಷ್ಟು ಸುಕ್ಕುಗಟ್ಟಿಕೊಂಡಿತು.

ತೊಣಚಿಕೊಪ್ಪಲಿನಲ್ಲಿ ಸೆಂಟ್ರಿಂಗ್ ಮಟೀರಿಯಲ್ಲು ಮಾರಿಕೊಂಡು ಕಾಂಕ್ರೀಟ್ ಮಷಿನ್‌ಅನ್ನು ಬಾಡಿಗೆಗೆ ಕೊಡುತ್ತಿದ್ದ ಕರಿಯಪ್ಪ ಅವ್ವಾ ಮಾದೇಶನೊಂದಿಗೆ ಹುಣಸೂರಿನ ತೋಟದ ಮನೆ ಮೇಲೆ ದಾಳಿ ಮಾಡಿದ್ದೇ ಆತನ ಅಂತ್ಯಕ್ಕೆ ಕಾರಣವಾಯಿತು. ಅವ್ವಾ ಮಾದೇಶನ ಬಲಗೈ ಬಂಟನಂತಿರುವ ಕರಿಯಪ್ಪನನ್ನು ಕೊಂದು ಬಿಸಾಡಿದರೆ ಮಾದೇಶನ ಸೊಕ್ಕಡಗಿಸಬಹುದು ಎಂದು ಲೆಕ್ಕ ಹಾಕಿದ ದೇವು ಅದಕ್ಕೆಂದೇ ಹೇಮಂತ, ಪಲ್ಲಿ ರಮೇಶ, ಅಶೋಕ, ಮಂಜೇಶ, ಕರಿ ಚಂದ್ರ, ಮಹೇಶ, ಪಡುವಾರಹಳ್ಳಿ ಲಾಯರ್ ರಾಮಕೃಷ್ಣ, ಸುನೀಲರ ಗ್ಯಾಂಗು ಕಟ್ಟಿಕೊಂಡು ಕರಿಯಪ್ಪನ ಆಫೀಸಿಗೇ ನುಗ್ಗಿ ಕೊಲೆ ಮಾಡಿಸಿದ್ದ. ನಂತರ ಪೊಲೀಸರಿಗೆ ಸಿಕ್ಕು ಜೈಲು ಸೇರಿದ ದೇವು ಟೀಂ ಹೊರ ಬರುವ ವೇಳೆಗೆ ಅವ್ವಾ ಮಾದೇಶನನ್ನು ಭೂಮಿ ಮೇಲೆ ಉಳಿಸಬಾರದು ಎಂದು ಶಪಥ ಮಾಡಿಬಿಟ್ಟಿದೆ. ಅವ್ವಾ ಮಾದೇಶ ಕೂಡಾ ತನ್ನನ್ನು ಯಮರೂಪಿಯಾಗಿ ಕಾಡುತ್ತಿರುವ ದೇವು ಮತ್ತು ಸುನೀಲ ಇಬ್ಬರೂ ಜೈಲಿನಿಂದ ಹೊರಬರುತ್ತಿದ್ದಂತೇ ಅವರ ತಲೆ ಉರುಳಿಸಬೇಕು ಎಂಬ ಸಿದ್ಧತೆಯಲ್ಲಿದ್ದಾನೆ. ಈ ಕಾರಣಕ್ಕೇ ಮಾದೇಶ ಬೆಂಗಳೂರು ಪಾತಕಿ ಡಬಲ್ ಮೀಟರ್ ಮೋಹನನನ್ನು ಪಳಗಿಸಿಟ್ಟುಕೊಂಡಿರುವುದು.

ಇತ್ತ ಅವ್ವಾ ಮಾದೇಶನ ತಲೆ ತೆಗೆಯಲು ಕಚ್ಚೆ ಕಟ್ಟಿ ನಿಂತಿರುವ ದೇವು ಗ್ಯಾಂಗ್‌ಗೆ ಮೈಸೂರಿನ ಹಳೇ ಪಂಟರ್ ಗಣೇಶ ಬೆಳಗಾವಿ ಜೈಲಿನಲ್ಲಿದ್ದುಕೊಂಡೇ ಸರ್ವರೀತಿಯ ಬೆಂಬಲ ಕರುಣಿಸುವುದಾಗಿ ಘೋಷಿಸಿದ್ದಾನೆ. ಸದ್ಯ ದೇವು ಮತ್ತು ಸುನೀಲ ಅವ್ವಾ ಮಾದೇಶ, ಆತನ ಸಹೋದರ ಮಂಜ ಮತ್ತು ಮಾದೇಶನ ಬೆನ್ನೆಲುಬಂತಿರುವ ಟೆಂಟ್ ರವಿ – ಈ ಮೂವರ ಮೇಲೆ ಕಣ್ಣಿಟ್ಟು ಕಾಯುತ್ತಿದೆ. ಸ್ವಭಾವತಃ ರಣ ಹೇಡಿಯಾಗಿದ್ದರೂ ಕಳೆದೆರಡು ದಶಕಗಳಲ್ಲಿ ಮಂಡ್ಯ ಮತ್ತು ಮೈಸೂರಿನ ಹತ್ತಾರು ರಾಜಕಾರಣಿಗಳು, ರೌಡಿಗಳ ಪ್ರಾಣವನ್ನು ಅಪೋಷನ ಪಡೆದ, ಸುಪಾರಿ ಕೊಲೆಗಳಿಗೆ ಕಾರಣನಾದ ಅವ್ವಾ ಮಾದೇಶನನ್ನು ಕೊಂದರೆ ಫೀಲ್ಡಲ್ಲಿ ತಮಗೆ ಸಖತ್ ಹೆಸರು ಬರುತ್ತದೆ ಎಂಬ ನಂಬಿಕೆಯಿಂದ ಚಿಳ್ಳೆ ಪಿಳ್ಳೆ ಹುಡುಗರೂ ಅವ್ವಾ ಮಾದೇಶನನ್ನು ಮುಗಿಸಲು ಹತಾರ ರೆಡಿ ಮಾಡಿಕೊಂಡಿದ್ದಾರೆ.

ಒಟ್ಟಾರೆ ಈ ಎರಡೂ ಗುಂಪುಗಳು ಒಬ್ಬರ ಮೇಲೆ ಒಬ್ಬರು ಹಗೆ ಬೆಳೆಸಿಕೊಂಡು ರಕ್ತ ಚೆಲ್ಲಾಡುವ ಆತುರದಲ್ಲಿವೆ. ಮೈಸೂರು ಪೊಲೀಸರು ಒಂದಿಷ್ಟು ಮೈಮರೆತರೂ ಇಲ್ಲಿ ರೌಡಿಗಳ ಗ್ಯಾಂಗ್‌ವಾರ್‌ಗಳು ನಡೆದು ಹಲವಾರು ಹೆಣಗಳು ಉರುಳುವುದು ಖಚಿತ.

• ಅರುಣ್

# ರೈತಕಂಟಕ ನಿರಾಣಿ

# ಜೈಲಿಗಿನ್ನು ಮೂರೇ ಗೇಣು




ನಿರಾಣಿಯ ಪಾಪದ ಕೊಡ ತುಂಬಿಬಂದಿದೆ. ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನ ಮೋಸ, ನೂರಾರು ಬಡರೈತರ ಕಣ್ಣೀರು, ಅರ್ಧಡಜನ್ ನಕಲಿ ಕಂಪನಿಗಳನ್ನು ಹುಟ್ಟುಹಾಕಿ ಸಾವಿರಾರು ಎಕರೆ ರೈತರಭೂಮಿ ದೋಚುವ ಹುನ್ನಾರ, ನೂರಾರು ಎಕರೆಗಳಷ್ಟು ಕೆಐಎಡಿಬಿಯ ಜಮೀನು ಡೀನೋಟಿಫಿಕೇಷನ್, ಕೆಐಎಡಿಬಿಯನ್ನು ಕಳ್ಳರ ಗೂಡನ್ನಾಗಿಸಿದ ಪಾಪ, ಪಾಪದ ದುಡ್ಡಲ್ಲಿ ಹತ್ತಾರು ಹೆಣ್ಣುಮಕ್ಕಳನ್ನು ವಂಚಿಸಿದ ಶಾಪ; ಎಲ್ಲವೂ ಒಟ್ಟೊಟ್ಟಿಗೆ ಕೈಗೂಡುವ ಕಾಲ ಸನ್ನಿಹಿತವಾಗಿದೆ.

ನಿರಾಣಿ ಪಾಲಿಗಿನ್ನು ಜೈಲು ಮೂರೇ ಗೇಣು!

ಉದ್ಯಮಿ ಆಲಂಪಾಷಾ ಓರ್ವ ವಂಚಕ ಆತ ತನ್ನ ವಿರುದ್ಧ ನಕಲಿ ದಾಖಲೆ ಸೃಷ್ಟಿಸಿದ್ದಾನೆ. ಆತನ ವಂಚನೆಯನ್ನು ಬಯಲಿಗೆಳೆಯುತ್ತೇನೆ ಆತನ ವಿರುದ್ಧ ಮಾನನಷ್ಟದ ಕೇಸು ಹಾಕುತ್ತೇನೆ ಎಂದೆಲ್ಲಾ ಟಿವಿಯವರನ್ನು ಕರೆಸಿ ಬೊಬ್ಬಿಟ್ಟ ನಿರಾಣಿಗೆ ಬಹುಶಃ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟನಲ್ಲಿ ತಾನೇ ಸಹಿಹಾಕಿದ ದಾಖಲೆಗಳು ಮರೆತಿರಬೇಕು. ತಾನೇ ನಿಂತು ತನ್ನ ತಮ್ಮನ ಹೆಸರಲ್ಲಿ ಹುಟ್ಟುಹಾಕಿದ ಭೋಗಸ್ ಕಂಪನಿಗಳಿಗೆ ಮಂತ್ರಿಯಾಗಿ ತಾನೇ ನೂರಾರು, ಸಾವಿರಾರು ಕೋಟಿಯ ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡಿದ್ದು, ತನ್ನದೇ ಅಧ್ಯಕ್ಷತೆಯ ಕಮಿಟಿಯಲ್ಲಿ ಅನುಮೋದನೆ ಸಲ್ಲಿಸಿದ್ದು ಮತ್ತು ತಾನೇ ಸಾವಿರಾರು ಎಕರೆ ರೈತರ ಭೂಮಿಯನ್ನು ಮಂಜೂರು ಮಾಡುವಂತೆ ಆದೇಶಿಸಿದ್ದು; ಇತ್ಯಾದಿ ಯಾವುದೂ ನೆನಪಾಗುತ್ತಿಲ್ಲವೆಂದಲ್ಲ.

ಅದು ಕಳ್ಳನೊಬ್ಬನ ಕೊನೆಯ ತಂತ್ರ. ತಾನಿನ್ನು ಜೈಲು ಪಾಲಾಗುವುದು ಗ್ಯಾರಂಟಿ ಎನ್ನುವಾಗಲೇ ತನ್ನ ವಿರುದ್ಧ ದೂರು ಕೊಟ್ಟವರ ಮೇಲೆ ಗೂಬೆ ಕೂರಿಸುವುದು. ನಿರಾಣಿಯ ವಂಚನೆ, ಭ್ರಷ್ಟಾಚಾರ ಮತ್ತು ಹೆಣ್ಣುಬಾಕತನದ ವಿರುದ್ಧ ಪತ್ರಿಕೆ ಶುರುವಿನಿಂದಲೂ ತನಿಖಾ ವರದಿಗಳ ಮೇಲೆ ತನಿಖಾ ವರದಿಗಳನ್ನು ಪ್ರಕಟಿಸಿದೆ. ಈ ಪೈಕಿ ನಿರಾಣಿ ಹುಟ್ಟುಹಾಕಿದ ಭೋಗಸ್ ಕಂಪನಿಗಳು ಮತ್ತು ಅವುಗಳ ಹೆಸರಲ್ಲಿ ದೋಚಿದ ಬಡರೈತರ ಭೂಮಿಯದ್ದೇ ಭಯಾನಕ ಭ್ರಷ್ಟ ಪುರಾಣವಾಗುತ್ತದೆ.

## ಐದು ಭೋಗಸ್ ಕಂಪನಿಗಳು

**• ರಾ. ಸೋಮನಾಥ್**

ಇಲ್ಲಿಗೆ ವರ್ಷದ ಹಿಂದೆ ಅಂದರೆ 2010ರ ಜೂನ್ 3 ಮತ್ತು 4ರಂದು ಮುಖ್ಯಮಂತ್ರಿಯಾಗಿದ್ದ ಯಡ್ಡಿ ಮತ್ತು ಭಾರೀ ಕೈಗಾರಿಕಾ ಮಂತ್ರಿ ನಿರಾಣಿ ಸೇರಿಕೊಂಡು ವಿಶ್ವ ಹೂಡಿಕೆದಾರರ ಅರ್ಥಾತ್ ಜಾಗತಿಕ ಬಂಡವಾಳಗಾರರ ಸಮ್ಮೇಳನವೆಂದು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ (GIM) ಜಾತ್ರೆ ನಡೆಸಿದ್ದು ನೆನಪಿರಬೇಕಲ್ಲವೇ? ಇದೇ ಜಾಗತಿಕ ಬಂಡವಾಳದಾರರ ಸಮ್ಮೇಳನದಲ್ಲಿ ಮಂತ್ರಿ ನಿರಾಣಿ ಐದು ನಿಗೂಢ ಕಂಪನಿಗಳ ಸಾವಿರಾರು ಕೋಟಿಯ ತರಹೇವಾರಿ ಪ್ರಾಜೆಕ್ಟುಗಳಿಗೆ ಸಹಿ ಹಾಕುತ್ತಾರೆ. ಈ ಐದು ಕಂಪನಿಗಳ್ಯಾವುದೆಂದರೆ–

1. ಎಂಆರ್‌ಎನ್ ಶುಗರ್ಸ್ ಅಂಡ್ ಪವರ್ಸ್ ಲಿಮಿಟೆಡ್, 2. ಶ್ರೀ ಸಾಯಿಪ್ರಿಯಾ ಶುಗರ್ಸ್, 3.ಮೇ॥ ಶಕ್ತಿ ಸ್ಟೀಲ್ ಅಂಡ್ ಪವರ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ 4. ವಿಜಯಶ್ರೀ ಶುಗರ್ಸ್ ಅಂಡ್ ಪವರ್ ಲಿಮಿಟೆಡ್ ಮತ್ತು 5. ನಿರಾಣಿ ಸಿಮೆಂಟ್ಸ್ ಪ್ರೈ.ಲಿ.



ಈ ಐದೂ ಕಂಪನಿಗಳು ಕೇವಲ ಹೆಸರಿನಲ್ಲಷ್ಟೇ ಅಲ್ಲ, ಅವುಗಳ ಮಾಲೀಕತ್ವದ ವಿಷಯದಲ್ಲೂ ಮಂತ್ರಿ ನಿರಾಣಿಯ ಬೇನಾಮಿ ಕಂಪನಿಗಳೆ. ಸದ್ಯ ನಿರಾಣಿ ಶುಗರ್ಸ್‌ನ ಕಾರ್ಪೋರೇಟ್ ಕಚೇರಿ ವಿಳಾಸವಾದ ಪ್ಲಾಟ್ ನಂ.003, 4/2, ಸಿದ್ದ ಎನ್‌ಕ್ಲೇವ್, ಮೊದಲನೇ ಮಹಡಿ, ನೆಹರೂನಗರ, ಶೇಷಾದ್ರಿಪುರಂ ಮುಖ್ಯರಸ್ತೆ, ಬೆಂಗಳೂರು-20 ವಿಳಾಸದಲ್ಲೇ ಈ ಐದೂ ಕಂಪನಿಗಳು ಕಾರ್ಯನಿರ್ವಹಿಸುತ್ತವೆಯಂತೆ. ಹಾಗಂಥ ಈ ಐದೂ ಕಂಪನಿಗಳು ಅಸ್ತಿತ್ವದಲ್ಲಿವೆಯೆಂದಾಗಲಿ, ಸಾವಿರಾರು ಕಾರ್ಮಿಕರಿಗೆ ಕೆಲಸ ಕೊಟ್ಟಿವೆಯೆಂದಾಗಲಿ, ಸಕ್ಕರೆ, ವಿದ್ಯುತ್, ಸಿಮೆಂಟ್, ಉಕ್ಕು ಇತ್ಯಾದಿ ಏನೇನನ್ನೋ ಉತ್ಪಾದಿಸಿ ಕನ್ನಡಿಗರ ಹೆಮ್ಮೆ, ಕೀರ್ತಿಯನ್ನು ದೇಶ-ವಿದೇಶಗಳ ಮಟ್ಟದಲ್ಲಿ ಮೆರೆದಿವೆಯೆಂದಾಗಲಿ ಅರ್ಥವಲ್ಲ.

ಹೆಸರಿಗಷ್ಟೇ ಇವು ಕೇರಾಫ್ ಅಡ್ರೆಸ್ ಕೊಟ್ಟು ಕಲ್ಪನೆಗಷ್ಟೇ ರೂಪುಗೊಂಡ ಲೆಟರ್‌ಹೆಡ್ ಕಂಪನಿಗಳೇ ಹೊರತು ವಾಸ್ತವದಲ್ಲಿ ಇವ್ಯಾವುವೂ ಅಸ್ತಿತ್ವದಲ್ಲೇ ಇಲ್ಲ. ಹೇಗೆ ನಿರಾಣಿ ಶುಗರ್ಸ್‌ನ ಕಾರ್ಪೋರೇಟ್ ಕಚೇರಿಯ ವಿಳಾಸ ಕೊಟ್ಟು ಈ ಕಂಪನಿಗಳ ಲೆಟರ್‌ಹೆಡ್ ಮುದ್ರಿಸಲಾಗಿದೆಯೋ ಹಾಗೇ ನಿರಾಣಿಯ ಅಧಿಕೃತ ಧರ್ಮಪತ್ನಿ ಕಮಲಾ ನಿರಾಣಿ ಈ ಪೈಕಿ ನಿರಾಣಿ ಸಿಮೆಂಟ್ಸ್ ಮತ್ತು ನಿರಾಣಿ ಶುಗರ್ಸ್‌ಗೆ ಮ್ಯಾನೇಜಿಂಗ್ ಟ್ರಸ್ಟಿಯಾದರೆ ಉಳಿಕೆ ನಾಲ್ಕೂ ಕಂಪನಿಗಳಿಗೆ ನಿರಾಣಿಯ ಖಾಸಾ ತಮ್ಮ ಹೆಚ್.ಆರ್.ನಿರಾಣಿ ಅಂದರೆ ಹನುಮಂತ್ ರುದ್ರಪ್ಪಾ ನಿರಾಣಿಯೇ ಮ್ಯಾನೇಜಿಂಗ್ ಡೈರೆಕ್ಟರ್, ಚೇರ್ಮನ್, ಪ್ರೊಮೋಟರ್, ಪ್ರೊಪ್ರೈಟರ್ ಎಲ್ಲವೂ ಹೌದು. ನಿರಾಣಿಯ ಮತ್ತೊಬ್ಬ ತಮ್ಮ ಸಂಗಮೇಶ್ ನಿರಾಣಿ ಕೂಡ ಈ ಎಲ್ಲಾ ಕಂಪನಿಗಳಿಗೂ ಡೈರೆಕ್ಟರ್!

## ನೌಕರರೇ ಡೈರೆಕ್ಟರ್ಸ್

ಮಿಕ್ಕಂತೆ ಸದ್ಯ ಸಮಯ ಟಿವಿಯನ್ನು ನಿಭಾಯಿಸುವ ಹಿರಿಯ ಬಿಜೆಪಿ ನಾಯಕ ಬಿ.ಬಿ.ಶಿವಪ್ಪನವರ ಸೊಸೆ ಶಾಂತಾ ಸುಧೀರ್ ಬೇಲೂರು, ಸದ್ಯ ನಿರಾಣಿ ಶುಗರ್ಸ್‌ನ ತಾಂತ್ರಿಕ ಡೈರೆಕ್ಟರ್ ಆಗಿರುವ ರುದ್ರಪ್ಪಾ ವೀರಪ್ಪಾ ಯತ್ನಾಳ್, ಈ ಹಿಂ[...] ರಿಜಿಸ್ಟ್ರಾರ್ ಆಫ್ ಕೋಆಪರೇಟಿವ್ ಸೊಸೈಟೀಸ್ ಆಗಿ[...] ಸದ್ಯ ನಿವೃತ್ತಿಯಾಗಿ ನಿರಾಣಿ ಶುಗರ್ಸ್‌ನಲ್ಲೇ ಕೆಲಸಕ್ಕಿರುವ ಶರ[...] ಬಸಪ್ಪ ಕರಿಯಣ್ಣನವರ್, ನಿರಾಣಿ ಶುಗರ್ಸ್ ಜನರ[...] ಮ್ಯಾನೇಜರ್ ಮೋಹನ್ ಹಿರೇಮಠ್, ಬೆಂಗಳೂರಿ[...] ಮಲ್ಲೇಶ್ವರದ ಬೇಗೂರು ರಾಮಮೂರ್ತಿ, ಕೆಂಗೇ[...] ಉಪನಗರದ ಎಸ್. ಪಾಲಾಕ್ಷ, ಮಂಜುನಾಥ್ ನಗರ[...] ನಿರಾಣಿಯ ಪರಮಾಪ್ತ ಎಂ.ರೋಸಿ ಮುಂತಾದವರು [...] ಎಲ್ಲಾ ಕಂಪನಿಗಳಿಗೆ ಡೈರೆಕ್ಟರ್‌ಗಳು!

2010ಜೂನ್‌ನಲ್ಲಿ ನಡೆದ ವಿಶ್ವ ಹೂಡಿಕೆದಾರ[...] ಸಮ್ಮೇಳನವೆಂಬುದು ಎಂಥ ಮೋಸವಾಗಿತ್ತೆಂಬುದ[...] ನಿರಾಣಿಯ ಭೋಗಸ್ ಕಂಪನಿಯಾದ ಎಂಆರ್‌ಬಿ[...] ಶುಗರ್ಸ್ ಅಂಡ್ ಪವರ್ಸ್ ಲಿಮಿಟೆಡ್‌ನ 300 ಕೋಟಿ[...] ಪ್ರಾಜೆಕ್ಟ್ ಒಂದಕ್ಕೆ ಮಂತ್ರಿ ನಿರಾಣಿಯೇ ಮಂಜೂರಾ[...] ನೀಡುತ್ತಾರೆ. ಅದು ಬಿಜಾಪುರದ ನಿರಾಣಿ ಶುಗರ್ಸ್[...] ಕೂಗಳತೆಯಲ್ಲಿ ಅಂದರೆ ಬಿಜಾಪುರ ತಾಲ್ಲೂಕಿನ ಹಲಗ[...] ಮತ್ತು ಶಿಗುಣಸಿ ಗ್ರಾಮಗಳ ರೈತರ ಭೂಮಿ ಕಿತ್ತು ಅ[...]ರೆ ಕಾರ್ಖಾನೆ ಶುರುಮಾಡುವ ಕಳ್ಳ ಪ್ರಾಜೆಕ್ಟು!

ಹಕೀಕತೇನೆಂದರೆ ಈ ಎಂಆರ್‌ಎನ್ ಶುಗರ[...] ಎಂಬುದೇ ಅಸ್ತಿತ್ವದಲ್ಲಿಲ್ಲದ, ಕಂಪನಿ ಕಾಯ್ದೆ ಪ್ರಕಾ[...] ರಿಜಿಸ್ಟರಾಗದ ಲೆಕ್ಕಪಕ್ಕ ಕಚೇರಿ ಏನೊಂದೂ ಇಲ್ಲ[...] ಲೆಟರ್‌ಹೆಡ್ ಕಂಪನಿಯಾಗಿತ್ತು. ಸದ್ಯ ಕಟ್ಟಾ ಹೇಗೆ ನಕ[...] ಇಟಾಸ್ಕಾ ಕಂಪನಿಯ ಹೆಸರಿಗೆ ಪ್ರಾಜೆಕ್ಟ್ ಮಂಜೂರ[...] ಮಾಡಿ ಭೂಮಿ ಕಬಳಿಸಿ ಜೈಲು ಪಾಲಾಗಿದ್ದಾನೋ[...] ಅದೇರೀತಿಯ ಅನಾಚಾರ ನಿರಾಣಿಯಿಂದಲ[...] ನಡೆದಿತ್ತು. 2010ರ ಜೂನ್ ಳರಂದು ನಿರಾಣಿಯ[...] ಎಂಆರ್‌ಎನ್ ಶುಗರ್ಸ್‌ನ ಪ್ರಾಜೆಕ್ಟ್ ಅನ್ನು ಕ್ಲಿಯ[...] ಮಾಡುತ್ತಾರೆ. ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನ[...] ಭಾಗವಹಿಸುವ ಯಾವುದೇ ಅರ್ಹತೆ, ಸಾಮರ್ಥ್ಯ[...] ಕಾನೂನು ಬದ್ಧತೆಯಿಲ್ಲದ ಈ ಕಂಪನಿಯ ಪ್ರಾಜೆಕ್ಟನ[...] ಸರ್ಕಾರದ ಹೈಲೆವೆಲ್ ಕ್ಲಿಯರೆನ್ಸ್ ಕಮಿಟಿಯ ಅಧ್ಯ[...] ಸ್ಥಾನದಲ್ಲಿದ್ದ ಮಂತ್ರಿ ನಿರಾಣಿ ಸಹಿ ಹಾಕಿ ಮಂಜೂರಾ[...] ಕೊಟ್ಟರೆ ಕಂಪನಿ ಪರವಾಗಿ ಸರ್ಕಾರದ ಜೊತೆ ಒಪ್ಪಂದ[...] ಸಹಿ ಹಾಕಿದವನು ನಿರಾಣಿಯ ಖಾಸಾ ತಮ್ಮ ಸಂಗಮೇಶ್[...] ಆರ್.ನಿರಾಣಿ!


## ಅಣ್ಣನ ಹೆಸರು ತಮ್ಮ ಮಾಲೀಕ

ಇಲ್ಲಿ ಕಂಪನಿಯ ಹೆಸರಲ್ಲಿರುವ ಎಂಆರ್‌ಎ[...] ಎಂಬುದು ಏನು ಗೊತ್ತೇ?

ಮುರುಗೇಶ್ ರುದ್ರಪ್ಪಾ ನಿರಾಣಿ!

ಅಣ್ಣನ ಹೆಸರಿನ ಕಳ್ಳ ಕಂಪನಿಗೆ ತಮ್ಮನೇ ಮಾಲೀ[...] ಅದಕ್ಕೆ ಮಂತ್ರಿ ಅಣ್ಣ ಮಂಜೂರಾತಿ ಕೊಡುತ್ತಾನೆ. ತಮ್ಮನ[...] ಅಣ್ಣನ ಜೊತೆ ಅಂದರೆ ಸರ್ಕಾರದ ಜೊತೆ ಒಪ್ಪಂದ[...] ಸಹಿಹಾಕುತ್ತಾನೆ.

ಅದೇನಾಯಿತೋ ಗೊತ್ತಿಲ್ಲ. 2011ರ ಹೊತ್ತಿ[...] ಎಂಆರ್‌ಎನ್ ಶುಗರ್ಸ್ ಸರ್ಕಾರಕ್ಕೆ ಅಂದರೆ ಕೈಗಾರಿ[...] ಮಂತ್ರಿಗೆ ವಿಚಿತ್ರ ಅರ್ಜಿಯೊಂದನ್ನು ಸಲ್ಲಿಸಿ ತಮ್ಮ 30[...] ಕೋಟಿಯ ಪ್ರಾಜೆಕ್ಟನ್ನು ವಿಜಯಶ್ರೀ ಶುಗರ್ಸ್ ಅಂಡ್[...]


For M/s. Shakti Steel and Power Industries Pvt. Ltd.

For Government of Karnatak[...]

Flat No.003 4/2,
Sidda Enclave, First Floor,
Left Wing, Nehru Nagar,
Seshadripuram Main Road.
BANGALORE - 560 020.

Commerce & Industries Departm[...]

ಅಣ್ಣನ ಇಲಾಖೆಯ ಜ[...]
ತಮ್ಮ ಎಚ್.ಆರ್. ಒ[...]

ಪವರ್ಸ್ ಲಿಮಿಟೆಡ್ ಎಂಬ ಮತ್ತೊಂದು ಕಂಪನಿ[...] ವಹಿಸುತ್ತಿದ್ದೇವೆಂದು, 300 ಕೋಟಿ ರೂಪಾಯಿಗಳ [...] ಯೋಜನೆಗೆ ಬಿಜಾಪುರ ತಾಲ್ಲೂಕು ಶೇಗುಣ ಗ್ರಾಮ[...] ವಿವಿಧ ಸರ್ವೆ ನಂಬರ್‌ಗಳ 300 ಎಕರೆಗಳಷ್ಟು ರೈತ[...] ಭೂಮಿಯನ್ನು ಸ್ವಾಧೀನಪಡಿಸಿಕೊಡುವ ಇಡೀ ಯೋಜ[...]ಯನ್ನು ವಿಜಯಶ್ರೀ ಶುಗರ್ಸ್‌ಗೆ ವರ್ಗಾಯಿಸಬೇಕೆಂದು 2011ರ ಜನವರಿ 6ರಂದು ಮನವಿ ಸಲ್ಲಿಸುತ್ತಾರೆ. ಕಾನೂನ[...] ರೀತ್ಯ ಕಂಪನಿಯೊಂದಕ್ಕೆ ಮಂಜೂರಾದ ಪ್ರಾಜೆಕ್ಟ್‌ಅನ[...] ಮತ್ತೊಂದು ಕಂಪನಿಗೆ ವಹಿಸುವಂತಿಲ್ಲ. ವಹಿಸಿದರು[...] ಅದನ್ನು ಕೆಐಎಡಿಬಿ ಮನ್ನಿಸುವಂತಿಲ್ಲ.

ಇಲ್ಲೂ ಕೂಡ ನಿರಾಣಿ ತಮ್ಮ ಹೆಚ್.ಆರ್.ನಿರಾ[...] ವಿಜಯಶ್ರೀ ಶುಗರ್ಸ್‌ಗೆ ಮ್ಯಾನೇಜಿಂಗ್ ಡೈರೆಕ್ಟರ್. ಈತ[...] ಅಕ್ರಮ ಪ್ರಾಜೆಕ್ಟ್ ವರ್ಗಾವಣೆಗೆ ಅಣ್ಣ ನಿರಾಣಿಯ[...] ಅನುಮೋದಿಸಿ ಸಹಿ ಹಾಕುತ್ತಾರೆ.

ಈ ಎರಡೂ ಪ್ರಕರಣಗಳಲ್ಲಿ ಮಂತ್ರಿ ನಿರಾಣಿ ತಮ್ಮ[...] ಹೆಸರಲ್ಲಿ ರೈತರ ಭೂಮಿ ನುಂಗಲು ಹೊರಟಿರುವುದ[...] ನಿಚ್ಚಳವಾಗಿ ಸಾಬೀತಾಗಿದೆ. ಇದೇ ರೀತಿ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಹೆಸರಲ್ಲಿ ನಿರಾಣಿ ಎಸಗಿದ ಮೂರನ[...] ಪಾಪವೆಂದರೆ ಸಾಯಿಪ್ರಿಯಾ ಶುಗರ್ಸ್ ಹೆಸರಲ್ಲಿ ರೈತವಂಚ[...] ಇದು ಕೂಡ ನೆಹರೂ ನಗರದ ನಿರಾಣಿ ಶುಗರ್ಸ್ ವಿಳಾಸದ[...] ಸೃಷ್ಟಿಗೊಂಡ ಮತ್ತೊಂದು ಭೋಗಸ್ ಕಂಪನಿ.

ನೆಟ್ಟಗೊಂದು ಆಫೀಸಿಗೂ ಗತಿಯಿಲ್ಲದ, ಬಂಡವಾ[...]






## ಡೀನೋಟಿಫಿಕೇಷನ್: ಕಟ್ಟಾ, ಯಡ್ಡಿಗಿಂತಲೂ ನಿರಾಣಿಯೇ ಮುಂದೆ

ಮುಖ್ಯಮಂತ್ರಿ ಯಡ್ಡಿ ಮಾಡಿದ ಡೀನೋಟಿಫಿಕೇಷನ್ನಿಗೆ ಹೋಲಿಸಿದರೆ ನಿರಾಣಿಯದ್ದು ಬಿಜೆಪಿಯ ಯಾವೊಬ್ಬ ಮಂತ್ರಿಯೂ ಮಾಡಲಾಗದ, ಮಾಡಿರದ ಭಯಾನಕ ಭೂಕೊಳ್ಳೆ. ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (BIAL) ಮತ್ತು ಅದರ ಹಿಂಭಾಗದ ಹಾರ್ಡ್‌ವೇರ್ ಪಾರ್ಕ್ ಮಧ್ಯದ 20 ಎಕರೆ ಕೆಐಎಡಿಬಿಯ ಸೊತ್ತೆಂದೇ 200 ಕೋಟಿ ರೂಪಾಯಿಗಳ ಭಾರೀ ಡಿನೋಟಿಫಿಕೇಷನ್ ಹಗರಣಕ್ಕೆ ಮೂಲವಾಗಿದೆ.

ದೇವನಹಳ್ಳಿ ತಾಲ್ಲೂಕು ಹೂವಿನಾಯಕನಹಳ್ಳಿಯ ಸರ್ವೆ ನಂಬರ್ 124, 125 ಮತ್ತು 126 ರಲ್ಲಿರುವ 20 ಎಕರೆಯನ್ನು ಹಾರ್ಡ್‌ವೇರ್ ಪಾರ್ಕ್‌ಗೆಂದು ಭೂಸ್ವಾಧೀನ ಮಾಡಿಕೊಂಡು ಯಾವುದೋ ಕಾಲವಾಗಿತ್ತು. ಕೆಐಎಡಿಬಿಯ ಅಂತಿಮ ಅಧಿಸೂಚನೆಯೂ ಆಗಿ ಎಲ್ಲಾ ಕಾನೂನು ಪ್ರಕ್ರಿಯೆ ಮುಗಿದಿದ್ದಾಗ್ಯೂ ನಿರಾಣಿ ರಿಯಲ್ ಎಸ್ಟೇಟ್ ಖದೀಮನೊಬ್ಬನ ಮೂಲಕ ಡೀಲು ಕುದುರಿಸಿಕೊಂಡು 2010 ನವೆಂಬರ್‌ನಲ್ಲಿ ಅದನ್ನು ಡೀನೋಟಿಫೈ ಮಾಡುತ್ತಾರೆ. ಹಾಗೇ ಡೀನೋಟಿಫೈ ಮಾಡಲು ಯಾವುದೇ ಸಕಾರಣವಿಲ್ಲ. ಹಾರ್ಡ್‌ವೇರ್ ಪಾರ್ಕ್‌ಗೆಂದು ರಸ್ತೆ ವಿದ್ಯುತ್, ಒಳಚರಂಡಿ, ಪವರ್‌ಗ್ರಿಡ್, ರಿಂಗ್ ರಸ್ತೆ ಎಲ್ಲಕ್ಕೂ ಕೆಐಎಡಿಬಿ ಕೋಟಿಗಟ್ಟಲೆ ಸುರಿದಿದೆ. ಇಷ್ಟಾಗೂ ನಿರಾಣಿ ಅದನ್ನು ಡೀನೋಟಿಫೈ ಮಾಡುತ್ತಾರೆಂದರೆ ಅದು ರಿಯಲ್ ಎಸ್ಟೇಟ್ ದುರಾಶೆಯಲ್ಲದೆ ಮತ್ತೇನಲ್ಲ.

ಎಕರೆಗೆ ಕನಿಷ್ಠ 10 ಕೋಟಿಯೆಂದರೂ 20 ಎಕರೆಗೆ 200 ಕೋಟಿಯಾಯ್ತು. ಪ್ರಶ್ನೆಯೆಂದರೆ ಇದರಲ್ಲಿ ನಿರಾಣಿಯ ಪಾಲೆಷ್ಟು?

ಹೂವಿನಾಯಕನಹಳ್ಳಿಯ ಡೀನೋಟಿಫೈ ಹಗರಣಕ್ಕೆ ಹೋಲಿಸಿದರೆ ಡಾಬಸ್‌ಪೇಟೆ ಕೈಗಾರಿಕಾ ಪ್ರದೇಶದ 150 ಎಕರೆಯದ್ದು ಏಳೂವರೆ ಪಟ್ಟು ದೊಡ್ಡದು. ನೆಲಮಂಗಲ ತಾಲ್ಲೂಕು ಡಾಬಸ್‌ಪೇಟೆ ಸಮೀಪದ ಕೆಂಗಲ್ ಕೆಂಪೋಹಳ್ಳಿ, ಅಲ್ಲೀರಹಳ್ಳಿ ಮತ್ತು ಚಂದನವಾಸಹಳ್ಳಿಯ 150 ಎಕರೆ ಭೂಮಿ ಕೂಡ ಕೈಗಾರಿಕಾ ಪ್ರದೇಶದ ಹೆಸರಲ್ಲಿ ಕೆಐಎಡಿಬಿಗೆ ಸ್ವಾಧೀನಗೊಂಡಾಗಿತ್ತು. ವರ್ಷದ ಹಿಂದಷ್ಟೇ ಯಾವುದೇ ಕಾರಣವಿಲ್ಲದೆ ನಿರಾಣಿ ಈ ನೂರೈವತ್ತೂ ಎಕರೆಯನ್ನು ನೆಲಗಳ್ಳರೊಂದಿಗೆ ಶಾಮೀಲಾಗಿ ಡೀನೋಟಿಫೈ ಮಾಡಿಬಿಟ್ಟರು. ಒಂದು ಮೂಲದ ಪ್ರಕಾರ ಈ ಒಂದೇ ಡೀಲಿನಿಂದ ನಿರಾಣಿ ಗಳಿಸಿದ್ದು ಹತ್ತಾರು ಕೋಟಿ. ಅಂದ ಹಾಗೆ ಕೆಐಎಡಿಬಿಗೆ ಇದರಿಂದ ಆದ ನಷ್ಟ ಕೂಡ 200 ಕೋಟಿ!

ಇದಲ್ಲದೇ ನಿರಾಣಿ ಇನ್ನೂ ಒಂದು ಡೀನೋಟಿಫಿಕೇಷನ್ನಿಗೆ ಕಾರಣವಾಗಿದ್ದು ನೆಲಮಂಗಲ ತಾಲ್ಲೂಕಿನ ಮಾರ್ಕನಕುಪ್ಪೆಯಲ್ಲಿ. ಅದು ಸುದರ್ಶನ್ ಎಕ್ಸ್‌ಟ್ರಾಕ್ಷನ್ ಕಂಪನಿ, ಹೈ ಹಿಂಡಾಲ್ ಕಂಪನಿ ಮತ್ತು ಆರ್‌ಕೆಎಸ್ ಎಂಟರ್‌ಪ್ರೈಸಸ್ ಕಂಪೆನಿಗಳ ಲಾಭಕ್ಕಾಗಿ ನಿರಾಣಿ ಮಾಡಿದ ಡೀನೋಟಿಫಿಕೇಷನ್ನು. ಎಕರೆಗೆ 10 ಕೋಟಿಯ ಲೆಕ್ಕ ಹಾಕಿದರೂ ನಿರಾಣಿ ಇದೊಂದರಿಂದಲೇ 70 ಕೋಟಿ ಕಬಳಿಸಿದ್ದಾರೆ.

ಹೂವಿನಾಯಕನಹಳ್ಳಿ, ಡಾಬಸ್‌ಪೇಟೆ ಮತ್ತು ಮಾರ್ಕನಕುಪ್ಪೆಯ ಈ ಮೂರೂ ಡೀನೋಟಿಫೀಕೇಷನ್ನುಗಳಿಗೆ ಹೋಲಿಸಿದರೆ ಯಡ್ಡಿ ಮಾಡಿದ್ದು ಯಾವ ಲೆಕ್ಕ? ಕಟ್ಟಾನ ಇಟಾಸ್ಕಾ ಹಗರಣಕ್ಕೆ ಹೋಲಿಸಿದರೆ ಇದು ಐದು ಪಟ್ಟು ದೊಡ್ಡದು. ನಿರಾಣಿ ಜೈಲು ಪಾಲಾಗಲು ಇದಕ್ಕಿಂತ ಬೇಕೇ?

IN THE COURT OF THE LOKAYUKTHA BANGALORE
AT: BANGALORE
PCR NO. /2011
IN
C.C. NO. /2011

A. Alam Pasha,
Late. P. Ameer Saheb,
576, 1st Floor, 9th 'A' Main,
Stage, 1st Cross,
...nagar, Bangalore-01 .......Complainant

1) Shri. Murugesh R Nirani
Hon'ble Minister for Industries, (GOK)
44/13, Fair field Layout,
Race Course Road, Bangalore – 560001. .......Accussed
H.R. Nirani
Flat No. 003, 4/2, Sidda Enclave,
First Floor, Left Wing, Nehru Nagar,
Sheshadripuram Main Road,
Bangalore-560020. .......Accussed
Sharanabasappa V.Kriyannavar
S/o. Veerabhadrappa Rudrappa,
Kariyannavar, # 4, Lakhsmi layout,
Gokul Road, Basaveshwar,
Hubli-580030. .......Accussed
Rudrappa Veerappa Vatnal,
S/o. Veerappa Mallappa Vatnal,
# MIG, 237, Church Road, Navanagar,
Hubli-580025. .......Accussed
Begur Rudramoorthy Purnachandra,
S/o. Begur Rudramoorthy,
# 109 (New) Old No.; 30, 11th Main, Near 15th Cross,
Malleshwaram, Bangalore-560003. .......Accussed
Shantha Sudhir Beloor,
D/o. Veerbhadriah Channaveerappa,
#102, 26, R.V. Apartments, Bhim Jyothinagar,
Bangalore-560079. .......Accussed
S Palaksha,
S/o. Late V. Savandappa,
#64, 3rd Main, Kengeri Satellite Town,
Bangalore-560060. .......Accussed
Mohan M. Heremath
S/o. Mirugappa Hiremath,
#200, 2nd Main, 2nd Cross,
Kumareshwarnagar, PB Road,
Dharwad-580001. .......Accussed
M. Rosy,
P.P. Mohan,
#150, 4th Cross, 4th Main, 2nd Phase,
Near Maruthi Medical, Manjunathnagar,
Bangalore-560010. .......Accussed

## ಲೋಕಾಯುಕ್ತಕ್ಕೆ ನಿರಾಣಿ ವಿರುದ್ಧ ದೂರು

..., ಫ್ಯಾಕ್ಟರಿ ಏನೊಂದೂ ಇಲ್ಲದ ಸಾಯಿ ಪ್ರಿಯಾ ...ನ 300 ಕೋಟಿಯ ಭೋಗಸ್ ಪ್ರಾಜೆಕ್ಟ್‌ಗೆ ಅದೇ ...ಪುರ ತಾಲ್ಲೂಕಿನ 200 ಎಕರೆ ರೈತರ ಭೂಮಿ ...ಪಡಿಸಿಕೊಡುವಂತೆ ಮಂತ್ರಿ ನಿರಾಣಿಯೇ ಸಹಿಹಾಕಿ ...ಪಲ್ ಕೊಟ್ಟರೆ ಕಂಪನಿ ಪರವಾಗಿ ತಮ್ಮ ಹನುಮಂತ್ ...ಯೇ ಅರ್ಜಿ ಹಾಕುತ್ತಾನೆ ಮತ್ತು ಅಣ್ಣನ ಜೊತೆ ...ಒಪ್ಪಂದಕ್ಕೆ ಸಹಿಹಾಕುತ್ತಾನೆ.

### 2200 ಎಕರೆ?

...ಣಿಯ ಭೂದಾಹ ಇಷ್ಟಕ್ಕೆ ತಂಗಲಿಲ್ಲ. ಗ್ಲೋಬಲ್ ...ಸ್ಟರ್ಸ್ ಮೀಟ್‌ನ ಕಳ್ಳರ ಸಂತೆಗೆ ತಕ್ಕಂತೆ ಈ ಎಲ್ಲಾ ...ಗಳಿಗಿಂತಲೂ ಅಸಾಹುತಕಾರಿಯಾದ ನಾಲ್ಕನೇ ...ಒಂದನ್ನು ಸೃಷ್ಟಿಸುತ್ತಾರೆ. ಅದು ಶಕ್ತಿ ಸ್ಟೀಲ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್. ಇದಕ್ಕೂ ತಮ್ಮ ...ರ್ ನಿರಾಣಿಯೇ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಪ್ರೊಮೋಟರ್. ತಾವು ಉಕ್ಕಿನ ಕಾರ್ಖಾನೆ ...ವೆಂದೂ, ಇದಕ್ಕೆಂದೆ 1500 ಕೋಟಿ ರೂಪಾಯಿಗಳ ...ರೂಪಿಸಿದ್ದೇವೆಂದು ತಮಗೆ 2200 ಎಕರೆಗಳಷ್ಟು ...ಮಿಯನ್ನು ಬಿಜಾಪುರದಲ್ಲಿ ಮಂಜೂರು ...ಬೇಕೆಂದೂ ಸೃಷ್ಟಿಸಿದ ಸುಳ್ಳಿಗೆ ಮಂತ್ರಿ ನಿರಾಣಿಯೇ ...ಜೂರಾತಿ ನೀಡುತ್ತಾನೆ. 2200 ಎಕರೆಗಳ ಪೈಕಿ ...ಹಂತದಲ್ಲಿ 500 ಎಕರೆಗಳ ಸ್ವಾಧೀನಕ್ಕೆ ಆದೇಶವನ್ನೂ ...ತ್ತಾನೆ.

...ಚೇರಿಯಲ್ಲದೆ, ನಯಾಪೈಸೆಯ ಬಂಡವಾಳವಿಲ್ಲದೆ, ...ವ, ಆಸ್ತಿ, ಫ್ಯಾಕ್ಟರಿ ಮೆಷಿನರಿ, ಏನೊಂದೂ ಇಲ್ಲದೆ ...ಲೆಟರ್‌ಹೆಡ್ ಕಂಪನಿಯೊದಕ್ಕೆ 2200 ಎಕರೆಗಳಷ್ಟು ಭೂಮಿ ಆಕ್ರಮಿಸಿ ಕೊಡಲು ನಿರಾಣಿ ...ಸುತ್ತಾರೆಂದರೆ ಅದಿನ್ನೆಂಥಾ ಹಗಲುದರೋಡೆ?

...ಲ್ಲಿ ಶಕ್ತಿ ಸ್ಟೀಲ್ಸ್‌ನ 1500 ಕೋಟಿಯ ಪ್ರಾಜೆಕ್ಟೇ ...ಸ್. ಅದಕ್ಕೆ ಮುಂಗಡವಾಗಿ 500 ಎಕರೆ ಮಂಜೂರು ... ಉಳಿಕೆ 1700 ಎಕರೆ ಸ್ವಾಧೀನಪಡಿಸಿ ಕೊಡುವ ...ಹಸಕ್ಕೆ ಕೈಯಿಟ್ಟ ನಿರಾಣಿಗೆ ಯಾವ ಶಿಕ್ಷೆ ತಾನೆ ಸರಿ ...ಬೀತು?

...ದು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಹೆಸರಲ್ಲಿ ...ಕಾ ಮಂತ್ರಿ ನಿರಾಣಿ ನಡೆಸಿದ ಹಗಲು ದರೋಡೆಯ ... ಸ್ಯಾಂಪಲ್ ಮಾತ್ರ. ಇಷ್ಟೆಲ್ಲಕ್ಕೂ ಚೇರ್ಮನ್ ಆಗಿ ...CC ಅಂದರೆ ಹೈಲೆವೆಲ್ ಕ್ಲಿಯರೆನ್ಸ್ ಕಮಿಟಿಗೂ ... ಅಧ್ಯಕ್ಷರಾಗಿ ತನ್ನದೇ ಬೇನಾಮಿ ಕಂಪನಿಗಳ ಕಳ್ಳ ...ಕ್ಟ್‌ಗಳಿಗೆ ಅಪ್ರೂವಲ್ ಕೊಟ್ಟ ನಿರಾಣಿ ಪಾಲಿಗೆ ಆತ ...ಸ ಸಹಿಂಗಳೇ ಕುತ್ತಾಗಿ ಪರಿಣಮಿಸಿವೆ. ಲೋಕಾಯುಕ್ತ ...ನ ನ್ಯಾಯಾಧೀಶ ಸುಧೀಂದ್ರ ರಾವ್ ಇಂಥದ್ದೇ ...ದಲ್ಲೀಗ ಮಾಜಿ ಕೈಗಾರಿಕಾ ಮಂತ್ರಿ ಕಟ್ಟಾ ...ವನ್ನು ಜೈಲಿಗೆ ಕಳಿಸಿದ್ದಾರೆ.

...ಗ ನಿರಾಣಿ ಕಟ್ಟಾಗಿಂತಲೂ ನಿಚ್ಛಳವಾಗಿ ...ದ್ದಾನೆ. ಕೇವಲ ಕಳ್ಳ ಪ್ರಾಜೆಕ್ಟುಗಳ ಮಂಜೂರಾತಿ ...ಷ್ಟೇ ಅಲ್ಲ ಭೋಗಸ್ ದಾಖಲೆ ಸೃಷ್ಟಿಸಿ ನೂರಾರು ... ಸಾಲ ಎತ್ತಿದ್ದು, ತನ್ನ ಅಧಿಕಾರದ ಬಲದಿಂದ ಬ್ಯಾಂಕ್ ...ಪನ್ನು ಅಕ್ರಮವೆಸಗಿದ್ದು (ಬಾಕ್ಸ್ ನೋಡಿ) ಎಲ್ಲವೂ ... ಸಮೇತ ಬಯಲಾಗಿದೆ.

...ನ್ನೊಂದೇ; ಮೊದಲು ಗೃಹಮಂತ್ರಿ ಅಶೋಕ್ ... ಪಾಲಾಗುತ್ತಾನಾ, ಅಥವಾ ಅದಕ್ಕೂ ಮುನ್ನ ...ಣಿಯೇ ಕಂಬಿ ಎಣಿಸುತ್ತಾನಾ?. ...ಗೆ ಜೈಲಿನಲ್ಲಿ ಮೊದಲ ಕಂಪನಿ ಕೊಡುವವರ್‍ಯಾರು?

# ಭೂಗಳ್ಳ ರಾಮದಾಸ ಕಾದಿದೆ ಜೈಲುವಾಸ



**'ಲಂಕೇಶ್' ಕಳೆದ ನಾಲ್ಕು ವರ್ಷದಿಂದಲೂ ರಾಮದಾಸನ ಭೂಗಳ್ಳತನ, ಅವ್ಯವಹಾರಗಳ ಬಗ್ಗೆ ಡಜನ್‌ಗಟ್ಟಲೆ ತನಿಖಾ ವರದಿಗಳನ್ನು ಪ್ರಕಟಿಸಿದೆ. ಇದೆಲ್ಲದರ ತಾರ್ಕಿಕ ಅಂತ್ಯವೆಂಬಂತೆ ಈ ಭೂವಂಚನೆಯ ಕೇಸುಗಳೀಗ ಲೋಕಾಯುಕ್ತರ ವ್ಯಾಪ್ತಿಗೆ ಬಂದಿದೆ. ಮೈಸೂರಿನ ಎಲ್. ಕರುಣಾಕರ ಎಂಬುವರು ಮೊನ್ನೆ ಅಕ್ಟೋಬರ್ 20 ರಂದು ರಾಮದಾಸನ ಭೂಗಳ್ಳತನದ ವಿರುದ್ಧ ಲೋಕಾಯುಕ್ತರಿಗೆ ಒಂದು ಲಿಖಿತ ದೂರು ನೀಡಿದ್ದಾರೆ. ದಾಖಲೆ ಪುರಾವೆ ಸಮೇತ!**

ನ್ಯಾಯ ದೇವತೆಯು ತನ್ನ ದಂಡಯಾತ್ರೆಯನ್ನು ಇದೇ ರೀತಿ ಮುಂದುವರೆಸಿಕೊಂಡು ಹೋದಲ್ಲಿ ಇನ್ನು ಕೆಲವೇ ದಿನಗಳಲ್ಲಿ ಮಂತ್ರಿ ರಾಮದಾಸ್ ಜೈಲುವಾಸಿಯಾಗುತ್ತಾನೆ.

ಅಪ್ಪಟ ಆರ್‌ಎಸ್‌ಎಸ್ ಹೈದ, ಹಿಂದೂ ಧರ್ಮದ ಕುಲತಿಲಕ, ದೇಶಪ್ರೇಮಿ, ವೈದ್ಯಕೀಯ ಶಿಕ್ಷಣ ಸಚಿವ ಎ. ರಾಮದಾಸ್ ಬೇರೆಲ್ಲಾ ಬಿಜೆಪಿಗಳಂತೆಯೇ ಎರಡು ನಾಲಿಗೆಯವನು. ಮೇಲೆಮೇಲೆ ಮಾತೃಭೂಮಿಯ ಮಾತಾಡುತ್ತಲೇ ಒಳಗಿಂದೊಳಗೆ ಭೂಮಿ ನುಂಗುವ ಹೀನ ಚಾಳಿ ಇವನಿಗಿದೆ.

ಅದೀಗ ಲೋಕಾಯುಕ್ತರ ಹತ್ತಿರ ಕೇಸಾಗಿದೆ!

ಮೈಸೂರಿನ ಎಲ್. ಕರುಣಾಕರ ಎಂಬುವರು ಮೊನ್ನೆ ಅಕ್ಟೋಬರ್ 20 ರಂದು ರಾಮದಾಸನ ಭೂಗಳ್ಳತನದ ವಿರುದ್ಧ ಲೋಕಾಯುಕ್ತರಿಗೆ ಒಂದು ಲಿಖಿತ ದೂರು ನೀಡಿದ್ದಾರೆ. ದಾಖಲೆ ಪುರಾವೆ ಸಮೇತ!



'ಲಂಕೇಶ್' ಕಳೆದ ನಾಲ್ಕು ವರ್ಷದಿಂದಲೂ ರಾಮದಾಸನ ಭೂಗಳ್ಳತನ, ಅವ್ಯವಹಾರಗಳ ಬಗ್ಗೆ ಡಜನ್‌ಗಟ್ಟಲೆ ತನಿಖಾ ವರದಿಗಳನ್ನು ಪ್ರಕಟಿಸಿದೆ. ಇದೆಲ್ಲದರ ತಾರ್ಕಿಕ ಅಂತ್ಯವೆಂಬಂತೆ ಈ ಭೂವಂಚನೆಯ ಕೇಸುಗಳೀಗ ಲೋಕಾಯುಕ್ತರ ವ್ಯಾಪ್ತಿಗೆ ಬಂದಿದೆ.

### ಕೃಷಿ ಭೂಮಿನ ಸೈಟು ಅಂತ ಮಾರಿದ

ಮೈಸೂರು ತಾಲ್ಲೂಕು ಕಸಬಾ ಹೋಬಳಿಯ ಮಳಲವಾಡಿ ಗ್ರಾಮದ ಸರ್ವೆ ನಂಬರ್ 32/2, 32/3, 33/2, 33/3, 34/2 ರ ಜಮೀನುಗಳು ನಗರ ಭೂಮಿತಿ ಕಾಯಿದೆಯ ವ್ಯಾಪ್ತಿಗೆ ಒಳಪಟ್ಟಿದ್ದವು. ಆದರೆ ಆಗ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕನಾಗಿದ್ದ ರಾಮದಾಸ್ ಭೂಮಾಲೀಕರಾದ ಎ. ನೀಲಕಂಠಪ್ಪ ಮತ್ತಿತರರಿಂದ ಜನರಲ್ ಪವರ್ ಆಫ್ ಅಟಾರ್ನಿ ಮಾಡಿಸಿಕೊಂಡವನೇ ಸೈಟಿನ ರೀತಿ ವಿಂಗಡಿಸಿ ಮಾರಿಕೊಂಡ. ನಿಯಮಾನುಸಾರ ಒಂದು ಕೃಷಿ ಭೂಮಿಯನ್ನು ಮೊದಲು ಭೂಪರಿವರ್ತನೆ ಮಾಡಿಸಿ, ನಿಯಮಾನುಸಾರ ಸಕ್ರಮ ಲೇಔಟ್ ರಚಿಸಿ ಸರ್ಕಾರದ ಒಪ್ಪಿಗೆ ಪಡೆದು ಸೈಟ್ ಮಾರಬೇಕಾಗುತ್ತದೆ. ಆದರೆ ರಾಜಕೀಯ ಅಧಿಕಾರವಿದ್ದ ರಾಮದಾಸ್ ಅದ್ಯಾವುದನ್ನೂ ಕೇರ್ ಮಾಡದೆ ಮುಗ್ಧ ಜನರಿಗೆ ಸೈಟ್ ಮಾರಿ ಜೇಬು ಭರ್ತಿ ಮಾಡಿಕೊಂಡಿದ್ದ. ಸೈಟುಗಳನ್ನು ರಿಜಿಸ್ಟರ್ ಮಾಡಿಸುವಾಗ ಆ ಜಾಗಗಳಲ್ಲಿ ಮನೆಗಳಿವೆ ಎಂತಲೂ ಸಬ್ ರಿಜಿಸ್ಟ್ರಾರ್‌ಗೆ ಸುಳ್ಳು ಮಾಹಿತಿ ಕೊಟ್ಟಿದ್ದ. ಇವೆಲ್ಲಾ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಸೆಕ್ಷನ್ 79 ಎ ಹಾಗೂ 79 ಬಿ ಯ ನೇರ ಉಲ್ಲಂಘನೆಯಾಗಿದ್ದವು.

ನಂತರ ಇದು ವಿವಾದವಾಯಿತು. ಆಗಿನ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ವಿಜಯಭಾಸ್ಕರ್ ಈ ಬಗ್ಗೆ ತನಿಖೆ ನಡೆಸಿ ಒಂದು ವರದಿ ನೀಡಿದ್ದರು. (ಸಂಖ್ಯೆ EST(2)CR-3195-96) ಅದರಂತೆ ರಾಮದಾಸ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಅಶೋಕಪುರಂ ಪೊಲೀಸರಿಗೂ ಸೂಚನೆ ನೀಡಲಾಗಿತ್ತು.

ಆದರೆ ಅದುವರೆಗೂ ವೇಗವಾಗಿ, ಸರಾಗವಾಗಿ ನಡೆದ ತನಿಖೆ ಅಶೋಕಪುರಂ ಪೊಲೀಸ್ ಠಾಣೆಗೆ ಬಂದ ನಂತರ ತಣ್ಣಗಾಗಿ ಹೋಗಿತ್ತು.

ಡಿಸಿಯವರ 545 ಪುಟಗಳ ಬೃಹತ್ ತನಿಖಾ ವರದಿಯ ಮಹತ್ವ ವಿರೋಧ ಪಕ್ಷಗಳಾಗಿದ್ದ ಕಾಂಗ್ರೆಸ್ ದಳದವರಿಗೂ ಅರ್ಥವಾಗಿರಲಿಲ್ಲ. ಈ ರಾಮದಾಸನ ಭೂ ವಂಚನೆ ಬಗ್ಗೆ ಡಿಸಿಯವರ ತನಿಖಾ ವರದಿಯು ಈಗಾಗಲೇ ರಾಜ್ಯ ಗೆಜೆಟ್‌ನಲ್ಲೂ ಪ್ರಕಟಗೊಂಡಿದೆ.



ಈ ಮಧ್ಯೆ ಪೊಲೀಸರು ರಾಮದಾಸ್ ವಿರುದ್ಧದ ಕೇಸ್ ಅನ್ನು ಬಿ ರಿಪೋರ್ಟ್ ಹಾಕಿ ಕ್ಲೋಸ್ ಮಾಡಿದ್ದಾರೆಂಬ ರೂಮರ್ ಹಬ್ಬಿತು. ಆದರೆ ಮೈಸೂರಿನ ಪತ್ರಕರ್ತ ಸ್ನೇಹಮಯಿ ಕೃಷ್ಣ ವಂಚಕ ರಾಮದಾಸನ ಬೆನ್ನು ಹತ್ತಿದರು. ಆಗಲೇ ರಾಮದಾಸ್ ಮತ್ತವನ ತಮ್ಮ ಶ್ರೀಕಾಂತನ ಒಂದಷ್ಟು ಭೂಹಗರಣಗಳು ಹೊರಬಂದದ್ದು.

### ಟೆಲಿಕಾಂ ಲೇಔಟ್‌ನಲ್ಲೂ ತಿಂದ

ದಿ ಟೆಲಿಕಾಂ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಎಂಬ ಗುಂಪು ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಲೇಔಟ್ ನಿರ್ಮಾಣಕ್ಕೆ ಕೈಹಾಕಿತ್ತು. ಈ ಸಂಘಕ್ಕೆ ಬಿಎಸ್‌ಎನ್‌ಎಲ್ ನೌಕರರು ಮೆಂಬರ್‌ಗಳಾಗಿ ಸಾರ್ವಜನಿಕರು ಅಸೋಸಿಯೇಟೆಡ್ ಮೆಂಬರ್‌ಗಳಾದರು. ಇವರೆಲ್ಲರ ಒಟ್ಟು ಸಂಖ್ಯೆ ನಾಲ್ಕೈದು ಸಾವಿರ ಮೀರುತ್ತಿತ್ತು. ನೀವು ನಂಬುತ್ತಿರೋ ಇಲ್ಲವೋ ಹಣ ನಾನ್ನೂರು ಕೋಟಿ ರೂಪಾಯಿಗಿಂತಾ ಹೆಚ್ಚು ಸಂಗ್ರಹವಾಗಿತ್ತು.

ಈ ಸಂಘಕ್ಕೆ ಭಕ್ತವತ್ಸಲನೆಂಬ ಅವಿವೇಕಿ ಅಧ್ಯಕ್ಷನಾಗಿದ್ದ.

ಈ ಹಂತದಲ್ಲೇ ರಾಮದಾಸ್ ಹಾಗೂ ಮಾಲೂರಿನ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ ಸೀನ್‌ನಲ್ಲಿ ಕಾಣಿಸಿಕೊಂಡರು.

ಮಡಿಕೇರಿ ರಸ್ತೆಯ ಇಲವಾಲ ಹೋಬಳಿಗೆ ಸೇರಿದ್ದ ಇಲವಾಲ, ಬೆಳವಾಡಿ, ಹುಯಿರಾಳು, ಬೊಮ್ಮನಹಳ್ಳಿ, ನಾಗವಾರ ಕೆ. ತಮ್ಮೇನಹಳ್ಳಿ, ಮೈದನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ಸುಮಾರು 900 ಎಕರೆ ಪ್ರದೇಶದಲ್ಲಿ ಟೆಲಿಕಾಂ ಲೇಔಟ್ ನಿರ್ಮಿಸುವುದೆಂದು ಪ್ಲಾನ್ ಮಾಡಲಾಗಿತ್ತು. ಸಂಘದ ಅಧ್ಯಕ್ಷ ಭಕ್ತವತ್ಸಲ ರಾಮದಾಸನೊಂದಿಗೆ ಅದೇನು ಡೀಲ್ ಕುದುರಿಸಿಕೊಂಡಿದ್ದನೋ ಏನೋ ಸಂಗ್ರಹವಾಗಿದ್ದ ನೂರಾರು ಕೋಟಿ ಹಣವನ್ನು ರಾಮದಾಸರ ಕೈಗಿಟ್ಟ.

ರಾಮದಾಸನ ತಮ್ಮ ಶ್ರೀಕಾಂತನ ಕಂಪನಿಗಳಾದ ವೆಲ್‌ಕಂ ಗ್ರೂಪ್‌ಗೆ 15.41 ಕೋಟಿ, ಎಸ್ ಎಂಡ್ ಎಸ್ ಇನ್‌ಫ್ರಾಸ್ಟ್ರಕ್ಚರ್‌ಗೆ 111.08 ಕೋಟಿ, ಐಎಸ್‌ಆರ್ ಎಂಟರ್‌ಪ್ರೈಸಸ್‌ಗೆ 19.50 ಕೋಟಿ, ಶಾಂಭವಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ಗೆ 35.10 ಕೋಟಿ, ಅಕ್ಷಯ ಭರಣಿ ಗ್ರೂಪ್‌ಗೆ 3.70 ಕೋಟಿ ಕೊಡಲಾಯಿತು. ಇದಲ್ಲದೆ ಮಾಲೂರಿನ ಕೃಷ್ಣಯ್ಯ ಶೆಟ್ಟಿಗೆ ಸೇರಿರುವ ಬಾಲಾಜಿ ಕೃಪಾ ಎಂಟರ್‌ಪ್ರೈಸಸ್‌ಗೆ 78.95 ಕೋಟಿ ರೂಪಾಯಿ ಮತ್ತು ವೆಂಕಟೇಶ್ವರ ಧರಣಿ ಗ್ರೂಪ್‌ಗೆ 4.50 ಕೋಟಿ ರೂಪಾಯಿ ಪಾವತಿಯಾಯಿತು.

ಇದೆಲ್ಲಾ ಟೆಲಿಕಾಂ ನೌಕರರು ಹಾಗೂ ಸಾರ್ವಜನಿಕರ ಹಣವಾಗಿತ್ತು.

ರಾಮದಾಸ್‌ನಿಗೂ, ಕೃಷ್ಣಯ್ಯ ಶೆಟ್ಟಿಗೂ ಈ ಟೆಲಿಕಾಂ ನೌಕರರ ಸಂಘಕ್ಕೂ ನೇರ ಸಂಬಂಧವೇ ಇರಲಿಲ್ಲ. ಆದರೂ ಖದೀಮರು ತಮಗೆ ಹಣ ಕೊಟ್ಟರೆ ತಾವೇ ಜಮೀನು ಖರೀದಿಸಿ ಲೇಔಟ್ ನಿರ್ಮಿಸಿ ಕೊಡುತ್ತೇವೆಂದು ನಂಬಿಸಿ ನೂರಾರು ಕೋಟಿ ರೂಪಾಯಿ ಹಣ ಕಿತ್ತರು.

ಆದರೆ ಇದಾಗಿ ಈಗ ನಾಲ್ಕು ವರ್ಷ ಮುಗಿಯುತ್ತಿದೆ. ಇದುವರೆಗೂ ಒಂದು ಎಕರೆ ಇರಲಿ ಸಿಂಗಲ್ ಸೈಟನ್ನು ಜನರಿಗೆ ಕೊಡದೆ ಪೂರಾ ಹಣವನ್ನೆಲ್ಲಾ ತಿಂದು ಹಾಕಿದ್ದಾರೆ.


ಕರುಣಾಕರ

### ಈಗ ಕೇಸ್‌ಗೆ ಜೀವ ಬಂತು

ಮಳವಾಡಿಯ ಭೂಹಗರಣಕ್ಕೆ ಸಂಬಂಧಿಸಿದಂತೆ ಯಾವಾಗ ಎಲ್. ಕರುಣಾಕರ ಲೋಕಾಯುಕ್ತಕ್ಕೆ ದೂರು ಕೊಟ್ಟರೋ ಆವಾಗಿನಿಂದ ರಾಮದಾಸನ ಬೇರೆಲ್ಲಾ ಹುಳುಕುಗಳೂ ಹೊರಬರುತ್ತಿವೆ.

ಆಗಿನ ಡಿಸಿ ವಿಜಯಭಾಸ್ಕರ್ ಅಶೋಕಪುರಂ ಠಾಣೆಗೆ ನೀಡಿದ್ದ ಕಂಪ್ಲೇಂಟ್ ವಾಸ್ತವವಾಗಿ ಕ್ಲೋಸ್ ಆಗಿಲ್ಲ. ಬಿ ರಿಪೋರ್ಟ್ ಆಗಿಲ್ಲ. ಅದಕ್ಕಿನ್ನೂ ಜೀವವಿದೆ. 2011 ರ ಸೆಪ್ಟೆಂಬರ್ 23 ನೇ ತಾರೀಖು ಅಶೋಕಪುರಂ ಪೊಲೀಸರು ರಾಮದಾಸ್ ವಿರುದ್ಧ ಐಪಿಸಿ ಸೆಕ್ಷನ್ 420, 468 ರನ್ವಯ ಚೀಟಿಂಗ್ ಕೇಸ್ ದಾಖಲಿಸಿಕೊಂಡಿದ್ದಾರೆ.

ರಾಮದಾಸನ ವಂಚನೆಗಳ ಬಗ್ಗೆ ಈಗ ಲೋಕಾಯುಕ್ತರೂ ತನಿಖೆ ನಡೆಸುತ್ತಿದ್ದಾರೆ.

ರಾಮದಾಸನಿಗೆ ಜೈಲು ವಾಸ ದೂರವಿಲ್ಲ.

ಅಂದಹಾಗೆ ರಾಮದಾಸ್ ಈಗಲೂ ಬಿಜೆಪಿಯ ನಾಯಕನೆ!

ಕಾನೂನು ಇವನನ್ನು ಜೈಲಿಗೆ ತಳ್ಳಿದರೂ ಸಹ ಬಿಜೆಪಿಗಳು ಜೈಲಿನಲ್ಲಿರುವ ಯಾವನನ್ನು ಪಕ್ಷದಿಂದ ಹೊರಹಾಕಿದೆ?

ಇದಲ್ಲವಾ ಆಶ್ಚರ್ಯ?

---

ಜಿಲ್ಲಾಧಿಕಾರಿಗಳ ಕಾರ್ಯಾಲಯ ಮೈಸೂರು ಜಿಲ್ಲೆ ಮೈಸೂರು
ದಿನಾಂಕ 19.04.2008
ಇಎಲ್ ಎನ್ 08: 2007.08

ವೃತ್ತ ನಿರೀಕ್ಷಕರು
ಲಕ್ಷ್ಮೀಪುರಂ ಪೋಲಿಸ್ ಠಾಣೆ
ಮೈಸೂರು

ಮಾನ್ಯರೇ

ವಿಷಯ: ಶ್ರೀ ಎ .ರಾಮದಾಸ್ ಮಾಜಿ ವಿಧಾನ ಸಭಾ ಸದಸ್ಯರು ಕೃಷ್ಣರಾಜ ಕ್ಷೇತ್ರ, ಮೈಸೂರು ಇವರ ವಿರುದ್ಧ ಸಲ್ಲಿಸಿರುವ ದೂರು ಬಗ್ಗೆ
ಉಲ್ಲೇಖ: ಶ್ರೀ ಸ್ನೇಹ ಮಯಿ ಕೃಷ್ಣ ಸುದ್ದಿ ಸುಗ್ಗಿ ಪಾಕ್ಷಿಕ ಪತ್ರಿಕೆ ಮೈಸೂರು ಇವರ ದಿನಾಂಕ 11 04.2008 ರ ದೂರು ಅರ್ಜಿ

.....

ಶ್ರೀ ಎ.ರಾಮದಾಸ್ ಮಾಜಿ ವಿಧಾನ ಸಭಾ ಸದಸ್ಯರು ಕೃಷ್ಣರಾಜ ಕ್ಷೇತ್ರ, ಇವರು, ಮೈಸೂರು ತಾಲ್ಲೂಕು ಕಸಬಾ [illegible] ಮಳಲವಾಡಿ ಗ್ರಾಮದ ಸರ್ವೆ ನಂಬರ 32/2.32/3.33/2.33/3.34/2 ರ ಜಮೀನುಗಳು ನಗರ ಭೂಮಿತಿ ಕಾಯಿದೆಯ [illegible] ಸದರಿ ಜಮೀನನ್ನು ಭೂ ಮಾಲೀಕರಾದ ಶ್ರೀ ಎ.ನೀಲಕಂಠಪ್ಪ ಮತ್ತಿತರರಿಂದ [illegible] ಅಕ್ರಮವಾಗಿ ನಿವೇಶನಗಳನ್ನು ರಚಿಸಿ ಮಾರಾಟ ಮಾಡುವುದರ ಮೂಲಕ ,ನಗರ ಭೂ ಮಿತಿ ಕಾಯಿದೆಯನ್ನು ಉಲ್ಲಂಘನೆ ಮಾಡಿರುತ್ತಾರೆಂದು, ಅನ್ಯಕ್ರಾಂತ ಮಂಜೂರಾತಿ [illegible]

# ಬದುಕಿಗಾಗಿ ಮಹಿಳೆಯರ ಹೋರಾಟ



ದಿನಾಂಕ 30.9.2011 ಮತ್ತು 1.10.2011 ರಂದು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಮತ್ತು ಕನ್ನಡ ಭಾಷಾಭಿವೃದ್ಧಿ ಯೋಜನೆ ಇವುಗಳ ಸಂಯುಕ್ತ ಆಶ್ರಯದಲ್ಲಿ 'ಮಹಿಳಾ ಚಳವಳಿಗಳು ಮತ್ತು ಹೋರಾಟಗಳು' ಎಂಬವಿಷಯದ ಕುರಿತು ವಿಚಾರ ಸಂಕಿರಣವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಉದ್ಘಾಟನೆಯನ್ನು ಬೆಂಗಳೂರಿನ ವಿಮೋಚನಾ ಸಂಸ್ಥೆಯ ನಿರ್ದೇಶಕಿ ಡೋನಾ ಫರ್ನಾಂಡೀಸ್ ನೆರವೇರಿಸಿದರು. ವಿಶ್ವವಿದ್ಯಾನಿಲಯದ ಕುಲಪತಿಗಳು ಅಧ್ಯಕ್ಷ ಸ್ಥಾನ ವಹಿಸಿದ್ದರು.

ಇಂದು ಹೆಣ್ಣುಮಕ್ಕಳ ಶೋಷಣೆ ಯಾವ್ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದರ ಕುರಿತು ವಿವರಿಸಿದ ಡೋನಾ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಗಳಿಗಾಗಿಯೇ ಕೆಲವು ಮಾತುಗಳನ್ನಾಡಿದರು. "ವರದಕ್ಷಿಣೆಗಾಗಿ ವಿದ್ಯಾವಂತ, ಉತ್ತಮ ಉದ್ಯೋಗದಲ್ಲಿದ್ದು ಕೈತುಂಬಾ ಹಣ ಪಡೆಯುವ ಸಾಫ್ಟ್‌ವೇರ್ ಇಂಜಿನಿಯರ್ ಕೂಡಾ ಕೈ ಚಾಚುತ್ತಾರೆ. ಕಾರು, ಸೈಟು, ಮನೆ ಎಂದು ಅವರ ಬೇಡಿಕೆಗಳಿಗೆ ಕೊನೆ ಇಲ್ಲ, ಎಲ್ಲವನ್ನೂ ನೀಡಿದರೂ ಹೆಂಡತಿಯ ಮೇಲೆ ಮತ್ತೂ ಒತ್ತಡ ಹೇರಿ ದೌರ್ಜನ್ಯ ನಡೆಸಲಾಗುತ್ತದೆ. ಸಾಫ್ಟ್‌ವೇರ್ ಎಂಬುದು ಅಷ್ಟು ಸಾಫ್ಟ್ ಅಲ್ಲ. ಮದುವೆಯೇ ಹೆಣ್ಣಿನ ಬದುಕಿನ ಏಕೈಕ ಗುರಿಯಾಗಬಾರದು. ಮದುವೆಯಾಗಿ ನರಳುವಂತಾಗಬಾರದು. ಮದುವೆಗೆ ಮೊದಲು ಚೆನ್ನಾಗಿ ಯೋಚನೆ ಮಾಡಿ" ಎಂದರು.

ಕುಲಪತಿಗಳು ಅಧ್ಯಕ್ಷ ಭಾಷಣದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಹೇಗೆ ಕಡೆಗಣಿಸಲ್ಪಡುತ್ತಾರೆ ಎಂಬುದರ ಕುರಿತು ವಿವರಿಸಿದರು. ಮ್ಯಾಡಂ ಮೇರಿ ಕ್ಯೂರಿಗೆ ಆಕೆಯ ಗಂಡನ ಬೆಂಬಲ ವಿತ್ತು. ಹೀಗಾಗಿ ಆಕೆ ನೊಬೆಲ್ ಪಾರಿತೋಷಕ ಪಡೆಯುವಂತಾಯಿತು ಎನ್ನುತ್ತಾ ಮತ್ತೂ ಒಂದೆರಡು ಮಹಿಳೆಯರ ಉದಾಹರಣೆ ನೀಡಿದರು. ಇನ್ನೋರ್ವ ಮಹಿಳೆಗೆ ಆಕೆಯ ಸ್ನೇಹಿತನ ಬೆಂಬಲವಿತ್ತು, ಹಾಗೆ ಬೆಂಬಲ ವಿಲ್ಲದ ಹೆಣ್ಣುಮಕ್ಕಳ ಸಂಶೋಧನೆಯನ್ನು ಪುರುಷರೇ ಎಗರಿಸಿಕೊಂಡು ತಮ್ಮ ಹೆಸರಿನಲ್ಲಿ ಪ್ರಕಟಿಸಿ ಪ್ರಶಸ್ತಿ ಪಡೆದ ಉದಾಹರಣೆಗಳನ್ನು ವಿವರಿಸಿದರು.

ಕಾರ್ಯಕ್ರಮದ ಪ್ರಥಮ ದಿನ ಎರಡು ಗೋಷ್ಠಿಗಳನ್ನು ಹಮ್ಮಿಕೊಂಡಿದ್ದು ಅಂಗನವಾಡಿ ಕಾರ್ಯಕರ್ತೆಯರ ಹೋರಾಟದ ಕುರಿತು ಯು. ವರಲಕ್ಷ್ಮಿ ಎಂಬವರು ಭಾಷಣ ಮಾಡಿದರು. ತಮ್ಮ ನ್ಯಾಯಯುತ ವೇತನಕ್ಕಾಗಿ ಹಾಗೂ ಕೆಲಸ ಖಾಯಂಗೊಳಿಸಲು ಕೈಗೊಂಡ ತಮ್ಮ ಪ್ರತಿಭಟನೆ ಮತ್ತು ಮುಖ್ಯಮಂತ್ರಿಯನ್ನು ಗೆರಾವ್ ಮಾಡಿದುದೆಲ್ಲವನ್ನೂ ಇವರು ವಿವರಿಸಿದರು. ಅಂತಹ ಸಂದರ್ಭಗಳಲ್ಲಿ ತಾವು ಪೊಲೀಸರಿಂದ ಏಟು ತಿಂದದ್ದನ್ನು ವಿವರಿಸುತ್ತಾ "ಪೊಲೀಸರ ಏಟು ತಾಗದ ಒಂದೇ ಒಂದು ಇಂಚು ಸ್ಥಳವೂ ನನ್ನ ದೇಹದಲ್ಲಿ ಇಲ್ಲ" ಎಂದರು. ಸುಮಾರು ಇಪ್ಪತ್ತೈದು ಸಾವಿರ ಕಾರ್ಯಕರ್ತೆಯರು ಬೆಂಗಳೂರಿನಲ್ಲಿ ಜಮಾಯಿಸಿದ ಕುರಿತು ಹೇಳುತ್ತಾ, "ನಮ್ಮ ಕಾರ್ಯಕರ್ತೆಯರು ಗುಲ್ಬರ್ಗಾದಂತಹ ದೂರ ಪ್ರದೇಶಗಳಿಂದಲೂ ಬರುತ್ತಾರೆ. ಹಾಗೆ ಬರಲು ಅವರ ಕೈಯಲ್ಲಿ ಟ್ರೈನ್ ಟಿಕೆಟ್ಟಿಗೂ ಹಣವಿರುವುದಿಲ್ಲ, ನಮ್ಮ ಸಮ್ಮೇಳನಗಳಲ್ಲಿ ಊಟ ತಿಂಡಿಗಳೂ ಇರುವುದಿಲ್ಲ, ನಾವು ಬರೇ ನೀರನ್ನು ಮಾತ್ರ ಕೊಡುತ್ತೇವೆ. ಆದುದರಿಂದ ಒಂದೆರಡು ದಿನಗಳಿಗೆ ಬೇಕಾಗುವಷ್ಟು ರೊಟ್ಟಿಗಳನ್ನೂ, ಚಪಾತಿಗಳನ್ನೂ ಮಾಡಿ ಕಟ್ಟಿಕೊಂಡು ಬರಬೇಕಾಗುತ್ತದೆ. ಅವುಗಳನ್ನೂ ಬಟ್ಟೆಯ ಗಂಟನ್ನೂ ತಲೆಯ ಮೇಲಿಟ್ಟುಕೊಂಡು, ಸೊಂಟದಲ್ಲಿ ಮಗುವನ್ನೆತ್ತಿಕೊಂಡು ಇವರು ಟ್ರೈನ್ ಟಿಕೆಟ್ಟೂ ಕೊಂಡುಕೊಳ್ಳದೆ ಪ್ರಯಾಣ ಮಾಡುತ್ತಾರೆ. ಕೆಲವೊಮ್ಮೆ ಟಿಟಿಇ ಇವರನ್ನು ಹಿಡಿದು ಪೊಲೀಸರಿಗೊಪ್ಪಿಸುವುದೂ, ಪೊಲೀಸರ ಹೊಡೆತ ತಿನ್ನುವುದೆಲ್ಲವೂ ನಡೆಯುತ್ತದೆ. ಆದರೂ ಈ ಎಲ್ಲ ಕಷ್ಟ ಕೋಟಲೆಗಳನ್ನ ಅನುಭವಿಸುತ್ತಾ ಈ ಮಹಿಳೆಯರು ನಾಲ್ಕು ಕಾಸಿಗಾಗಿ, ಬದುಕಿಗಾಗಿ ಹೋರಾಟ ಮಾಡುತ್ತಾರೆ. ಮಂತ್ರಿಗಳು ಮತ್ತು ರಾಜಕಾರಣಿಗಳು ಸರ್ಕಾರದ ಖರ್ಚಿನಲ್ಲಿ ದೆಹಲಿಗೆ ವಿಮಾನ ಪ್ರಯಾಣ ಮಾಡುವುದನ್ನೂ, ಅಲ್ಲಿನ ತಾರಾ ಹೋಟೆಲುಗಳಲ್ಲಿ ಇವರ ವಾಸ್ತವ್ಯದ ಖರ್ಚುಗಳನ್ನೂ ಊಹಿಸಿಕೊಳ್ಳಿ. ಅಂಗನವಾಡಿ ಕಾರ್ಯಕರ್ತೆಯರನ್ನು ಇತರೆ ಹಲವು ಬಿಟ್ಟಿ ಸೇವೆಗಳಿಗೆ ನಿಯೋಜಿಸಲಾಗುತ್ತಿದ್ದರೂ ಸರ್ಕಾರ ಕೊಡಮಾಡಿದ ವೇತನ ಕೂಡಾ ಸಮನಾಗಿ ಇವರ ಕೈಗೆ ದೊರೆಯುವುದಿಲ್ಲ! ಈಗ ಕೇಂದ್ರ ಸರ್ಕಾರ ಇವರಿಗೆ ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿ ನೀಡಬೇಕೆಂದು ನಿಯಮ ಮಾಡಿದೆ. ಆದರೆ ಸರ್ಕಾರಿ ಕೆಲಸವೆಂದರೆ ಎಂಟು ಗಂಟೆ ಕೆಲಸ. ಅಂಗನವಾಡಿ ಕೆಲಸವೆಂದರೆ ಎರಡೂವರೆ ವರ್ಷದಿಂದ ಐದು ವರ್ಷಗಳೊಳಗಿನ ಮಕ್ಕಳನ್ನು ನೋಡಿಕೊಳ್ಳುವುದಾಗಿದೆ. ಮೂರು ವರ್ಷ ಪ್ರಾಯದ ಮಕ್ಕಳನ್ನು ಬೆಳಗಿನಿಂದ ಸಂಜೆಯವರೆಗೆ ಹೀಗೆ ಬಂಧನದಲ್ಲಿಡುವುದು ಎಷ್ಟು ಸರಿ? ಅವರು ತಾಯಿಯ ಬಳಿ ಓಡಾಡಿ ಆಡಿಕೊಂಡಿರಬೇಕಾದ ಪ್ರಾಯದಲ್ಲಿ ಹೀಗೆ ಬಂಧನದಲ್ಲಿಟ್ಟು ಚಿತ್ರ ತೋರಿಸಿ 'ನಿದ್ರೆ ಮಾಡು, ಊಟ ಮಾಡು, ಎದ್ದೇಳು' ಎಂದೆಲ್ಲಾ ಶಿಸ್ತು ಕಲಿಸ ತೊಡಗಿದರೆ ಅವರ ಮಾನಸಿಕ ಬೆಳವಣಿಗೆಯೇ ಕಾಳತಪ್ಪದೇ? ಎಂಬ ಪ್ರಶ್ನೆಯನ್ನೂ ಒಬ್ಬರು ಎತ್ತಿದರು. ಆದರೆ ಕೃಷಿ ಕಾರ್ಮಿಕರಿಗೆ ಇದೊಂದು ಸೌಲಭ್ಯವಾಗಿ ಕಂಡಿದೆ. ಇಡೀ ದಿನ ಗದ್ದೆಯಲ್ಲಿ ಕೆಲಸ ಮಾಡಿ ಮನೆಗೆ ಹೋಗುವಾಗ ಮಕ್ಕಳನ್ನೆತ್ತಿಕೊಂಡು ಹೋದರಾಯಿತು. ಹೀಗೆ ಈ ಎಂಟು ಗಂಟೆಯ ಕೆಲಸದಲ್ಲಿ ಒಳಿತು ಕೆಡುಕುಗಳೆರಡೂ ಇವೆ ಎನ್ನುತ್ತಾರೆ ಈ ಕಾರ್ಯಕರ್ತೆಯರು.

ಆಸಿಡ್ ದಾಳಿಗೊಳಗಾದವರ ಕುರಿತು ಮಾತನಾಡಿದವರು ಬೆಂಗಳೂರಿನ ಮಲ್ಲಿಗೆ. ಆಸಿಡ್ ದಾಳಿಗೆ ಬೆಂಗಳೂರು ಮತ್ತು ಮೈಸೂರಿನಲ್ಲಿ ಐವತ್ತಕ್ಕಿಂತ ಹೆಚ್ಚು ಮಹಿಳೆಯರು ತುತ್ತಾಗಿದ್ದಾರೆ. ಸುಂದರಿಯಾದ ಶಾಹಿನಾ ಎಂಬ ಹೆಣ್ಣುಮಗಳು ಕಂಪ್ಯೂಟರ್ ಸೆಂಟರಿನಲ್ಲಿ ಕೆಲಸಕ್ಕಿದ್ದವಳು ಅದರ ಮಾಲೀಕನ ಉಪಟಳ ತಾಳಲಾರದೆ ಬೇರೆಡೆಯಲ್ಲಿ ಕೆಲಸಕ್ಕೆ ಸೇರಿದಳು. ಆದರೆ ಆ ಮಾಲೀಕ, ಆಕೆ ತನ್ನ ಬಳಿಯೇ ಕೆಲಸ ಮಾಡಬೇಕೆಂದು ಹಟಹಿಡಿದನು. ರಕ್ಷಣಾ ಇಲಾಖೆಯಲ್ಲಿದ್ದ ಆತನು ಐದು ಲೀಟರ್ ಸಲ್ಫೂರಿಕ್ ಆಸಿಡ್ ಸಂಗ್ರಹಿಸಿ, ಅದರಿಂದ ಎರಡು ಲೀಟರನ್ನು ಒಂದು ಜಗ್ಗಿನಲ್ಲಿ ಹಾಕಿ ಆಕೆಯ ಮನೆಯೊಳಗೆ ಹೋಗಿ ಅದನ್ನು ಆಕೆಯ ಮೇಲೆ ಎರಚಿದನು. ಆಕೆಯ ಆ ಸುಂದರ ಮುಖ ವಿಕಾರವಾಗಿ ಮಾಂಸದ ಮುದ್ದೆಯಂತಾಯಿತು. ಆಕೆಯ ಕಣ್ಣುಗಳೂ ಹೋದವು. ಆಕೆಯ ತಂದೆ ಶ್ರೀಮಂತರೇನೂ ಅಲ್ಲ, ಸಾಧ್ಯವಿದ್ದಷ್ಟು ಖರ್ಚು ಮಾಡಿ, ಇದ್ದ ಮನೆಯನ್ನೂ ಮಾರಾಟ ಮಾಡಿ ಆಕೆಗೆ ಚಿಕಿತ್ಸೆ ನೀಡಿದರು. ಕೆಲವು ತಿಂಗಳ ಬಳಿಕ ಆಕೆಯ ಒಂದು ಕಿವಿಯೂ ಶ್ರವಣ ಶಕ್ತಿ ಕಳೆದುಕೊಂಡಿತು. ಆಸಿಡ್ ದಾಳಿಯ ದುಷ್ಪರಿಣಾಮ ಎಷ್ಟಿದೆಯೆಂದರೆ ಅದು ನಿಧಾನವಾಗಿ ದೇಹದ ಇತರ ಅಂಗಗಳನ್ನೂ ನಾಶಪಡಿಸುತ್ತದೆ. ಅದಕ್ಕಾಗಿ ಆಗಾಗ ಡಾಕ್ಟರ್ ಬಳಿ ಹೋಗಿ ಪರೀಕ್ಷಿಸಿಕೊಳ್ಳಬೇಕಾಗುತ್ತದೆ. ಆಕೆಯ ಹೃದಯಕ್ಕೆ ತಲಪುವುದನ್ನು ಸಕಾಲದ ವೈದ್ಯ ಪರೀಕ್ಷೆಯಿಂದ ತಪ್ಪಿಸಿಕೊಳ್ಳಲಾಯಿತು. ಹೀಗೆ ಓರ್ವ ಗಂಡಿನ ಅಸಹನೆ ಮತ್ತು ನೀಚ ಕೃತ್ಯದಿಂದ ಓರ್ವ ಹೆಣ್ಣು ಮಗಳು ಬದುಕು ಪೂರ್ತಿ ನರಳುವಂತಾಯಿತು. 'ಆಕೆ ಯಾಕೆ ಮನೆಯಿಂದ ಹೊರಗೆ ಹೋಗಿ ಕೆಲಸ ಮಾಡಬೇಕಾಗಿತ್ತು' ಎಂಬುದು ಮುಸ್ಲಿಮಳಾದ ಆಕೆಯ ಬಂಧುಗಳ ಪ್ರಶ್ನೆ. ಮಗಳ ವಿಕಾರವಾದ ಮುಖ ನೋಡುತ್ತಾ ಹೆತ್ತವರು ಪಡುವ ನೋವನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವೇ?



ಈ ಮೊಕದ್ದಮೆ ನ್ಯಾಯಾಲಯದಲ್ಲಿ ನಡೆದು ತೀರ್ಪು ಹೊರಬರುವಾಗ ಐದು ವರ್ಷಗಳೇ ಕಳೆದವು. ನ್ಯಾಯಾಲಯದ ತೀರ್ಪು ಈ ರೀತಿ ಇದೆ:

"ಆಕೆ ಆತನ ಸಂಸ್ಥೆಯಲ್ಲೇ ಕೆಲಸದಲ್ಲಿದ್ದಿದ್ದರೆ ಆತನು ಆಸಿಡ್ ಎರಚುತ್ತಿರಲಿಲ್ಲ, ಈಗಲೂ ಆಕೆ ಚೆನ್ನಾಗಿಯೇ ಇರುತ್ತಿದ್ದಳು. ಅವಳನ್ನು ನೋಡುವಾಗ ತಂದೆತಾಯಿಗಳಿಗೆ ವೇದನೆಯಾಗುತ್ತದೆ. ಆದರೆ ಆಗಲೇ ಆಕೆ ಸತ್ತಿದ್ದರೆ ಅವರು ಇಷ್ಟೊಂದು ನೋವನ್ನನುಭವಿಸಬೇಕಾಗಿರಲಿಲ್ಲವಲ್ಲ?" ಎಂದು ಆಕೆಗೆ ಒಂದು ಲಕ್ಷ ರೂಪಾಯಿ ಮಂಜೂರು ಮಾಡಿದ ನ್ಯಾಯಾಧೀಶರು ಆಸಿಡ್ ಧಾಳಿ ನಡೆಸಿದವನಿಗೆ ಮೂರು ಲಕ್ಷ ರೂಪಾಯಿ ಮಂಜೂರು ಮಾಡಿದರು! ಅದಕ್ಕೆ ಅವರು ಕೊಡುವ ಕಾರಣ "ಅವನಿಗೆ ವಯಸ್ಸಾದ ತಂದೆತಾಯಿಗಳಿದ್ದಾರೆ. ಅವನು ಅವರನ್ನು ನೋಡಿಕೊಳ್ಳಬೇಕು. ಈಗಾಗಲೇ ಅವನು ಜೈಲಿನಲ್ಲಿ ಐದು ವರ್ಷ ಕಳೆದಿದ್ದಾನೆ. ಅದಕ್ಕಾಗಿ ಅವನಿಗೆ ಮೂರು ಲಕ್ಷ ರೂಪಾಯಿ ಕೊಡಬೇಕು."

> ತೀರಾ ಬಡವರಾದ, ಅನಕ್ಷರಸ್ಥರಾದ ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಹೋರಾಟಗಳ ಮೇಲೆ ಬೆಳಕು ಚೆಲ್ಲುವಂತಹ ಇಂತಹ ಒಂದು ವಿಚಾರ ಸಂಕಿರಣವನ್ನು ಹಮ್ಮಿಕೊಂಡು ನೆರವೇರಿಸಿದ ಮಂಗಳೂರು ವಿಶ್ವವಿದ್ಯಾಲಯಕ್ಕೆ ಅಭಿನಂದನೆಗಳು.

ಆಸಿಡ್ ದಾಳಿಯ ಇಷ್ಟೊಂದು ಪ್ರಕರಣಗಳಿವೆಯೆಂದಾಗಲಿ, ಅದರಿಂದ ಇಂತಹ ದುಷ್ಪರಿಣಾಮಗಳಿವೆಯೆಂದಾಗಲಿ ಮಂಗಳೂರಿಗರಿಗೆ ತಿಳಿದಿರಲಿಲ್ಲ. ಆಸಿಡ್ ಇಷ್ಟು ಸುಲಭದಲ್ಲಿ ದೊರೆಯುತ್ತಿದೆಯೇ? ಓರ್ವ ಹೆಣ್ಣು ತನ್ನನ್ನು ಪ್ರೀತಿಸಲಿಲ್ಲವೆಂದು, ಓರ್ವ ಗಂಡ ತನಗೆ ಈ ಹೆಂಡತಿ ಬೇಡವೆಂದು, ಏನೇನೊ ಕಾರಣಗಳಿಗಾಗಿ ಹೆಣ್ಣುಮಕ್ಕಳ ಬದುಕನ್ನು ಆಸಿಡ್ ದಾಳಿ ನಡೆಸಿ ನರಕವಾಗಿಸುವುದಾದರೆ ಅಂತಹ ಗಂಡಸರಿಗೆ ಗಲ್ಲು ಶಿಕ್ಷೆಯಾಗಬೇಕು. ನ್ಯಾಯಾಲಯದಲ್ಲಿ ಇಂತಹ ತೀರ್ಪು ಬಂದಾಗ, ಹಿಂದೆ ಜೆಸ್ಸಿಕಾ ಲಾಲ್ ಕೊಲೆ ಪ್ರಕರಣದಲ್ಲಾದಂತೆ, ಮಹಿಳಾ ಸಂಘಟನೆಗಳೂ ಪತ್ರಿಕೆಗಳೂ ಅಂತಹ ತೀರ್ಪುಗಳ ವಿರುದ್ಧ ಪ್ರತಿಭಟಿಸಿ ನ್ಯಾಯಾಲಯದಲ್ಲಿ ಮತ್ತೊಮ್ಮೆ ವಿಚಾರಣೆ ನಡೆಸಲು ಒತ್ತಡ ಹೇರಬೇಕು ಎಂಬುದು ನನ್ನ ಅಭಿಪ್ರಾಯ.

ಬಿಸಿಯೂಟ ಮತ್ತು ಆಶಾ ಕಾರ್ಯಕರ್ತೆಯರ ಹೋರಾಟದ ಕುರಿತು ಯಮುನಾ ಗಾಂವ್‌ಕರ್ ಎಂಬವರು ಪ್ರಬಂಧ ಮಂಡಿಸಿದರು. ಬಡತನವೆಂದರೇನೆಂಬುದನ್ನು ಇವರು ಸ್ವತಃ ಚೆನ್ನಾಗಿ ಅನುಭವಿಸಿದ್ದಾರೆ. ಬಸ್ಸಿನ ಮುಖ ಕಾಣಲು ತಮ್ಮೂರಿನಿಂದ ಮೂವತ್ತು ಕಿಲೋಮೀಟರ್ ನಡೆಯಬೇಕಾಗಿದ್ದ ಹಳ್ಳಿಯಲ್ಲಿ ಇವರ ಹುಟ್ಟು. ಶಿಕ್ಷಣಕ್ಕಾಗಿ ಬೇರೆ ಊರಿನಲ್ಲಿ ಮನೆಗೆಲಸಕ್ಕೆ ನಿಂತು ಅಲ್ಲಿಂದ ಶಾಲೆಗೆ ಹೋಗಿ ಶಿಕ್ಷಣ ಪಡೆದು ಕೊನೆಗೆ ನ್ಯಾಯವಾದಿಯೂ ಆಗಿದ್ದಾರೆ. ಈಗ ಇವರು, "ನಾನು ನ್ಯಾಯವಾದಿಯ ಪದವಿ ಪಡೆದು ನ್ಯಾಯವಾದಿಯಾಗಿದ್ದೇನೆ. ಆದರೆ ನ್ಯಾಯಾಲಯಕ್ಕೆ ಹೋಗಿ ವಾದಿಸುವುದಿಲ್ಲ, ಹಾಗೆ ವಾದಿಸುವುದರಿಂದ ನಮ್ಮ ಈ ಬಡ ಮಹಿಳೆಯರಿಗೆ ಏನೂ ಪ್ರಯೋಜನವಾಗುವುದಿಲ್ಲ, ಅದಕ್ಕಿಂತಲೂ ಇವರೊಡನೆ ಬೀದಿಗಿಳಿದು ಹೋರಾಟ ಮಾಡುವುದೇ ಒಳ್ಳೆಯದೆನ್ನಿಸಿ ಹಾಗೆ ಮಾಡುತ್ತಿದ್ದೇನೆ" ಎಂದರು.

1925 ರಲ್ಲಿ ಮದ್ರಾಸ್ ನಗರದಲ್ಲಿ ಬಿಸಿಯೂಟ ಪ್ರಾರಂಭವಾಯಿತು. ಆ ಬಳಿಕ ಕೇರಳದಲ್ಲಿ 1957 ರಲ್ಲಿ ಕಮ್ಯುನಿಸ್ಟ್ ಸರ್ಕಾರ ಬಂದಾಗ ಆ ರಾಜ್ಯದಲ್ಲೂ ಅದನ್ನು ಪ್ರಾರಂಭಿಸಲಾಯಿತು. ಅಲ್ಲಿ ಆಗ ಸರ್ಕಾರ ಹೆಚ್ಚು ಕಾಲ ಆಡಳಿತ ನಡೆಸಲಾಗದೆ ಸರ್ಕಾರ ಬಿದ್ದಾಗ ಅದರೊಡನೆ ಬಿಸಿಯೂಟವೂ ನಿಂತಿತ್ತು. (ಈಗ ಅಲ್ಲಿನ ಶಾಲೆಗಳಲ್ಲೂ ಬಿಸಿಯೂಟದ ವಿರ್ಪಾಡಿದೆ). ಈ ಬಿಸಿಯೂಟದಿಂದಾಗಿ ಎಷ್ಟೋ ಮಹಿಳೆಯರಿಗೆ ಉದ್ಯೋಗವಿತ್ತು. ಈಗ ಅದನ್ನೂ ಖಾಸಗೀಕರಣ ಮಾಡಿ ಇಸ್ಕಾನ್‌ನಂತಹ ಸಂಸ್ಥೆಗೆ ವಹಿಸಿದ್ದರಿಂದ ಈ ಬಡಮಹಿಳೆಯರು ಉದ್ಯೋಗ ಕಳೆದುಕೊಳ್ಳುವಂತಾಯಿತು. ಈ ಸಂಸ್ಥೆಗಳಿಂದ ಕ್ಯಾಲರಿ ಲೆಕ್ಕ ಮಾಡಿ ಊಟ ತಿಂಡಿಗಳನ್ನು ಪ್ಯಾಕ್ ಮಾಡಿ ಕಳುಹಿಸುತ್ತಿರುವುದನ್ನು ಮಕ್ಕಳು ಮುಟ್ಟುವುದಿಲ್ಲ. ದಿನನಿತ್ಯ ಮನೆಯಲ್ಲಿ ತಯಾರಿಸುವಂತಹ ಆಹಾರವೇ ಅವರಿಗಿಷ್ಟವಾಗುವುದಾದರೂ ಇಸ್ಕಾನ್‌ನಂತಹ ಸಂಸ್ಥೆಗಳು ಅದನ್ನು ವ್ಯಾಪಾರೀಕರಣ ಮಾಡಿ ಮಹಿಳೆಯರಿಗೆ ಉದ್ಯೋಗವೂ ಇಲ್ಲ; ಮಕ್ಕಳಿಗೆ ಸಮನಾದ ಆಹಾರವೂ ಇಲ್ಲ ಎಂಬಂತಾಗಿದೆ ಎಂದು ಇವರಂದರು.

ಇನ್ನು ಆಶಾ ಕಾರ್ಯಕರ್ತೆಯರೆಂದು ಅವರಿಗೆ ಕಾರ್ಡು ನೀಡಲಾಗಿದೆ. ಈ ಕಾರ್ಡು ಇದ್ದರೆ ಇವರು ಸಾರ್ವಜನಿಕರ ಯಾವ ಕೆಲಸಕ್ಕೂ, ಯಾವ ಹೊತ್ತಿಗೂ ಸೇವೆಗೆ ಸಿದ್ಧರಾಗಬೇಕು. ಗರ್ಭಿಣಿ ಹೆಂಗಸರನ್ನು ಪ್ರತಿ ತಿಂಗಳೂ ಡಾಕ್ಟರ್ ಬಳಿಗೆ ಕರೆದೊಯ್ದು ಪರೀಕ್ಷೆ ಮಾಡಿಸುವಲ್ಲಿಂದ ಹಿಡಿದು, ನೋವು ಬಂದಾಕೆಯನ್ನು ಆಸ್ಪತ್ರೆಗೆ ಸೇರಿಸಿ ಒಂದೆರಡು ದಿನ ಬಾಣಂತಿಯೊಡನಿರಬೇಕು. ಈ ರೀತಿಯ ಇಡೀ ವರ್ಷದ ಸೇವೆಗಾಗಿ ಸರ್ಕಾರ ಆಕೆಗೆ ನೀಡುವ ಸಂಭಾವನೆ ಕೇವಲ ನೂರು ರೂಪಾಯಿ!

ಯಮುನಾ ಎಂಬುವರು ಈ ಆಶಾ ಕಾರ್ಡುದಾರರು ಎದುರಿಸುತ್ತಿರುವ ಸಮಸ್ಯೆಗಳ ಇನ್ನೊಂದು ಉದಾಹರಣೆಯನ್ನೂ ನೀಡಿದರು. ಅರ್ಧ ರಾತ್ರಿಯಲ್ಲಿ ಒಬ್ಬರಿಗೆ ಹಾವು ಕಚ್ಚಿತು. ಕಾರ್ಡಿರುವ ಆಶಾ ಮಹಿಳೆಗೆ ಕರೆ ಹೋಯಿತು. ಅರ್ಧ ರಾತ್ರಿಯಲ್ಲಿ ಆಕೆ ಪರಿಚಯದವರೊಬ್ಬರ ಜೀಪ್ ಏರ್ಪಾಡು ಮಾಡಿ ಹಾವು ಕಚ್ಚಿದಾಕೆಯನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಅರ್ಧ ದಾರಿಯಲ್ಲಿ ಆಕೆ ಪ್ರಾಣ ಬಿಟ್ಟಳು. ಅಲ್ಲಿಂದಲೇ ಜೀಪನ್ನು ಹಿಂತಿರುಗಿಸಿ ಆಕೆಯ ಮನೆಗೆ ಹೋಗುತ್ತಿದ್ದಂತೆ, ಹೆಣ[...] ಸಾಗಿಸುತ್ತಾರೆಂಬ ಕಾರಣದಿಂದ ಪೊಲೀಸರು ಜೀಪನ್ನು ತ[...] ಪ್ರಶ್ನಿಸತೊಡಗಿದರು. ಈ ಎಲ್ಲಾ ಸಮಸ್ಯೆ ಗೊಂದಲಗಳ[...] ಹೊರಬಂದು ಆಕೆ ಮನೆ ಸೇರುವಾಗ ಬೆಳಗಾಗಿತ್ತು. ಮು[...] ದಿನಗಳ ಬಳಿಕ ಜೀಪಿನ ಮಾಲೀಕರು ಬಂದು ಬಾ[...] ಕೇಳಿದರು! ಇಂತಹ ಸಮಸ್ಯೆಗಳನ್ನೆಲ್ಲ ಆಶಾ ಕಾರ್ಯ[...] ಯರು ಎದುರಿಸಬೇಕಾಗುತ್ತದೆ. ಹಾಗೂ ಅಧಿಕಾರಿ[...] ನೀಡುವ 'ಸಂಭಾವನೆ' ಎಂಬ ಹೆಸರಿನ ಸಣ್ಣ ಮೊತ್ತವನ್ನು ಇವರು ಪಡೆಯುತ್ತಾರೆ. ಸರ್ಕಾರ ಗೌರವ ಸಂಭಾವನೆ ಎಂ[...] ನಿಗದಿ ಪಡಿಸಿದಷ್ಟು ಮೊತ್ತ ಯಾವತ್ತೂ ಯಾರಿ[...] ದೊರೆಯುವುದಿಲ್ಲ!

ಸುಮತಿ ಉಪ್ಪಿನಂಗಡಿ ಎಂಬುವರದು ಮದ್ಯಪಾ[...] ವಿರುದ್ಧದ ಹೋರಾಟ. ನವಸಾಕ್ಷರಳಾದ ಆಕೆ ಅ[...] ಕಲಿಯಲು ಗಂಡನಿಗೆ ಕಾಣದಂತೆ ಪುಸ್ತಕ ಪೆನ್ಸಿಲ್‌ಗಳ[...] ಸೆರಗಿನಲ್ಲಿ ಬಚ್ಚಿಟ್ಟುಕೊಂಡು ಹೋಗಬೇಕಾಯಿತೆನ್ನುತ್[...] ಹಾಗೆ ನಾಲ್ಕಕ್ಷರ ಕಲಿತದ್ದರಿಂದಲೇ ಇತರ ಮಹಿಳೆಯರ[...] ಸಂಘಟಿಸಿ ಮದ್ಯಪಾನದ ವಿರುದ್ಧ ಹೋರಾಡಲು ಸ[...] ವಾಯಿತೆನ್ನುತ್ತಾಳೆ. ಆಕೆಯ ಹಳ್ಳಿಯಲ್ಲಿದ್ದ ಮದ್ಯಪಾ[...] ಅಂಗಡಿಯನ್ನು ಕಿತ್ತೆಸೆದು ಬೆಂಕಿ ಹಚ್ಚಲಾಯಿತು. ಈಗ[...] ಊರಿನಲ್ಲಿ ಗಂಡಸರ ಮದ್ಯಪಾನದ ಹಿಂಸೆ ಇಲ್ಲ, ಆಕೆ[...] ಸಮಾಜ ಸೇವೆಯಿಂದಾಗಿ ಗಂಡ ಆಕೆಯನ್ನು ಬಿಟ್ಟು ಹೋ[...] ಬೇರೆ ಮದುವೆಯಾದನು. "ಗಂಡ ನನ್ನನ್ನು ಬಿಟ್ಟು ಹೋದ[...] ಪರವಾಗಿಲ್ಲ. ಊರಿನ ಇತರ ಮಹಿಳೆಯರು ನೆಮ್ಮದಿಯಿ[...] ಬದುಕುತ್ತಿದ್ದಾರಲ್ಲ. ಅದರಿಂದ ನನಗೆ ಸಂತೋಷವಾಗಿ[...] ಎನ್ನುತ್ತಾಳೆ ಆಕೆ. ಮದ್ಯವ್ಯಸನಿಯಾದ ಗಂಡನಿಂದ ಆಕೆ ಸಾ[...] ಕಿರುಕುಳವನ್ನನುಭವಿಸಿ ಕೊನೆಗೆ ಮೂರು ಚಿಕ್ಕ ಮಕ್ಕ[...] ಕರೆದುಕೊಂಡು ಹೋಗಿ ನದಿಗೆ ಹಾರಿ ಆತ್ಮಹ[...] ಮಾಡಿಕೊಳ್ಳಲು ಹೊರಟವಳನ್ನು ನೋಡಿದ ಊ[...] ಸಹೃದಯರು ತಡೆದು ಆಕೆಗೆ ಸಾಂತ್ವನ ನೀಡಿದ್ದರು. ಗಂಡನ ನೆರವಿಲ್ಲದೆ ಮೂರು ಚಿಕ್ಕ ಮಕ್ಕಳನ್ನು ಕಟ್ಟಿಕೊಂ[...] ಸಂಸಾರ ಸಾಗರದಲ್ಲಿ ಈಜಿ ದಡ ಸೇರಿದ್ದಾಳೆ. ಈಗ ಮ[...] ಲ್ಲರೂ ಮದುವೆಯಾಗಿದ್ದಾರೆ. ಆರ್ಥಿಕವಾಗಿ ಹಿಂದು[...] ಕಾರಣ ಮಕ್ಕಳಿಗೂ ಶಿಕ್ಷಣ ನೀಡಲು ಸಾಧ್ಯವಾಗಲಿಲ್ಲ ಎ[...] ಕೊರಗು ಆಕೆಯದು.

ಪೌರಕಾರ್ಮಿಕರ ಹೋರಾಟವನ್ನು ಆ ಸಮಾಜದಿಂ[...] ಬಂದವರು, ಸರಸ್ವತಿ ಮುಂದಿಟ್ಟರು. ಪೌರ ಕಾರ್ಮಿ[...] ಬಡತನ, ಒಳಚರಂಡಿ ಮತ್ತು ಕಕ್ಕಸುಗುಂಡಿ ಶುಚಿಗೊ[...] ವಂತಹ ಕೆಲಸ ಮಾಡುತ್ತಾ ದಿನಗಳೆಯುವ ಇವರ ಬದು[...] ಎಂತಹ ಬೆಳಕಿರಲು ಸಾಧ್ಯ? ಬೀದಿಕಸ ಮತ್ತು ಒಳಚ[...] ಗಳಲ್ಲಿ ಗಾಜಿನ ಚೂರುಗಳೂ ಸೇಫ್ಟಿಪಿನ್‌ಗಳೂ ಇದ್ದು [...] ಇವರ ಕೈಗೆ ಚುಚ್ಚಿದಾಗ ಟೆಟಾನಸ್‌ನಂತಹ (ಧನುವಾ[...] ಖಾಯಿಲೆಗಳಿಗೆ ತುತ್ತಾಗಿ ಐವತ್ತೈದು ವರ್ಷಗಳಿಗಿಂತ [...] ಕಾಲ ಪೌರಕಾರ್ಮಿಕರು ಬದುಕಿದ್ದೇ ಇಲ್ಲವೆನ್ನುತ್ತಾರೆ ಇ[...] ಪೌರಕಾರ್ಮಿಕರು ತಮ್ಮ ಮೈಮೇಲೆ ಅಮೇಧ್ಯ ಸು[...] ಕೊಂಡು ಪ್ರತಿಭಟಿಸಿದ ಉದಾಹರಣೆ ನಮ್ಮ ಕಣ್ಣಮುಂ[...]

1.10.2011 ರಂದು ಎರಡು ಗೋಷ್ಠಿಗಳಿದ್ದು ಮೊ[...] ಗೋಷ್ಠಿಯಲ್ಲಿ ರೈತ ಮಹಿಳೆಯರ ಹೋರಾಟ ಕುರಿತು ಅನಸೂಯಮ್ಮ ಅವರೂ, ಮೀನುಗಾರ ಮಹಿಳೆ[...] ಹೋರಾಟದ ಕುರಿತು ಸೀತಮ್ಮ ಪುತ್ರನ್ ಅವರು, ಲೈ[...] ಅಲ್ಪಸಂಖ್ಯಾತರ ಹೋರಾಟದ ಕುರಿತು ಎ. ರೇವತಿ ಅವ[...] ತಲೆ ಹೊರೆ ಮಾರಾಟಗಾರರ ಹೋರಾಟದ ಕು[...] ಅಪೊಲಿನಾ ಗೋಮ್ಸ್ ಅವರೂ, ಕೊಳೆಗೇರಿ ಮಹಿಳೆ[...] ಹೋರಾಟದ ಕುರಿತು ಕಮಲಮ್ಮ ಅವರೂ ಮಾತ[...] ದರು. ಈ ದಿನದ ಕಾರ್ಯಕ್ರಮದಲ್ಲಿ ನಾನು ಭಾಗವಹಿ[...] ಕಾರಣ ಆ ಭಾಷಣಗಳ ವರದಿ ನೀಡಲು ನನ್ನಿ[...] ಸಾಧ್ಯವಾಗಲಿಲ್ಲ.

ತೀರಾ ಬಡವರಾದ, ಅನಕ್ಷರಸ್ಥರಾದ ಮತ್ತು ಆರ್ಥಿಕ[...] ಹಿಂದುಳಿದ ಮಹಿಳೆಯರ ಹೋರಾಟಗಳ ಮೇಲೆ ಬೆ[...] ಚೆಲ್ಲುವಂತಹ ಇಂತಹ ಒಂದು ವಿಚಾರ ಸಂಕಿರಣ[...] ಹಮ್ಮಿಕೊಂಡು ನೆರವೇರಿಸಿದ ಮಂಗಳೂರು ವಿಶ್ವವಿ[...] ಲಯಕ್ಕೆ ಅಭಿನಂದನೆಗಳು. ಈ ಕಾರ್ಯಕ್ರಮದ ಸಂಯೋ[...] ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಪ್ರಾಧ್[...] ರಾದ ಡಾ. ಸಬಿಹಾ ಅವರಾಗಿದ್ದಾರೆ.

• ಸಾರಾ ಅಬೂಬಕ್[...]

# ವ್ಯವಸ್ಥೆಯ ಗರ್ಭದೊಳಗೆ ಲೀನವಾಗುವ ಧ್ವನಿಗಳು

ಏನಾರು?" ದೆವ್ವ ಅವನನ್ನು ಕೇಳಿತು.

ಹುಟ್ಟಿನಿಂದ ನಾನೊಬ್ಬ ದಲಿತ, ಎಲ್ಲ ಬಡವರೂ ನನ್ನ ಒಡಹುಟ್ಟಿದವರು. ಭೂಮಿ ಎಷ್ಟು ಕುರೂಪವಾಗಿದೆ! ಜನರೆಷ್ಟು ದುಃಖಿಗಳಾಗಿದ್ದಾರೆ!"

ಕ್ತದ ತರುಣ ನಾಯಕ ಜನರ ದುಃಖಕ್ಕೆ ಕಾರಣವಾಗಿರುವ ರಾಜನನ್ನು ವ ಮಹಲು, ಆ ವ್ಯವಸ್ಥೆಯನ್ನು ನಾಶ ಮಾಡಬೇಕೆಂಬ ಛಲದೊಡನೆ ಹುತ್ತಾನೆ. ಆದರೆ ರಾಜನಿರುವ ಜಾಗಕ್ಕೆ ಹೋಗಬೇಕಾದರೆ ಮೂರು ಉಪ್ಪರಿಗೆ ಹೋಗಬೇಕು. ಪ್ರತಿ ಉಪ್ಪರಿಗೆಯ ಬಾಗಿಲಲ್ಲಿ ಕಾವಲಿಗೆ ಒಂದು ದೆವ್ವವಿದೆ. ಟಿ ಬಾಗಿಲಿಗೂ ಲಂಚ ಕೇಳುತ್ತದೆ. ಲಂಚ ಕೊಟ್ಟರೂ ಅಡ್ಡಿಯಿಲ್ಲ, ಉಪ್ಪರಿಗೆ ರಾಜನ ಬಳಿ ಹೋಗಬೇಕೆಂದು ತರುಣನ ಹಠ. ಸರಿ. ಮೊದಲ ಉಪ್ಪರಿಗೆ ನ ದೆವ್ವ ಅವನ ಕಿವಿಯನ್ನು ಕೇಳುತ್ತದೆ. ಅವ ಕಿವಿಯನ್ನು ಕೊಡುತ್ತಾನೆ. ಟ್ಟೊಡನೆ ಅವನಿಗೆ ಕೆಳಗೆ ಹಾಹಾಕಾರಪಡುತ್ತಿರುವ ಜನರ ಧ್ವನಿ ತಾಗುತ್ತದೆ. ಎರಡನೇ ಉಪ್ಪರಿಗೆ ಮೆಟ್ಟಲಿನ ದೆವ್ವ ಅವನ ಕಣ್ಣನ್ನು ಕೇಳುತ್ತದೆ. ಡುತ್ತಾನೆ. ಜನರ ರಕ್ತ ಬಸಿಯುವ ಬೆತ್ತಲೆ ದೇಹಗಳು ಕಾಣದಾಗುತ್ತವೆ. ಡೇ ಉಪ್ಪರಿಗೆ ಮೆಟ್ಟಲ ದೆವ್ವ ಈ ಒಂದೇ ಉಪ್ಪರಿಗೆ ಹತ್ತಿದರೆ ಸೇಡು ಳ್ಳುತ್ತೀಯ ಇದಕ್ಕಾಗಿ ಎರಡರಷ್ಟು ಲಂಚ ಕೊಡಬೇಕಾಗುತ್ತದೆ. ನಿನ್ನ ಮತ್ತು ನೆನಪುಗಳನ್ನು ಕೊಡು ಎನ್ನುತ್ತದೆ. ರಾಜನ ಮೇಲೆ ಸೇಡು ಳ್ಳಲು ಏನು ಕೇಳಿದರೂ ಕೊಡಲು ಸಿದ್ಧವಾಗಿದ್ದ ಆತ ಹೃದಯ ಮತ್ತು ಳನ್ನು ನೀಡುತ್ತಾನೆ. ಜನರಿಗೆ ತೀವ್ರವಾಗಿ ಮಿಡಿಯುತ್ತಿದ್ದ ಹೃದಯವನ್ನು, ಸಮುದಾಯದ ಜೊತೆಗಿನ ಎಲ್ಲ ಅನುಭವಗಳ ನೆನಪನ್ನು ಂಡುಬಿಡುತ್ತಾನೆ. ಹಾಗೆ ಕೊನೆ ಮೆಟ್ಟಲನ್ನು ಜಿಗಿದು ರಾಜನೊಂದಿಗೆ ರಾಜನ ಒಡ್ಡೋಲಗವನ್ನು ನೋಡುತ್ತಾನೆ. ರಾಜನ ವಿರುದ್ಧ ಕೂಗುತ್ತಿದ್ದ ನರ ಅಸಭ್ಯ ಗುಂಪನ್ನೂ ನೋಡುತ್ತಾನೆ. ಅವನಿಗೆ ಪ್ರತಿಭಟಿಸಬೇಕು ಪ್ರದಿಲ್ಲ. ರಾಜನ ಸ್ನೇಹ ಮಾಡಬೇಕೆನಿಸುತ್ತದೆ. ಆಗ...

ನಾರು?" ದೆವ್ವ ಅವನನ್ನು ಕೇಳಿತು.

ಟ್ಟಿನಿಂದ ನಾನೊಬ್ಬ ರಾಜಕುಮಾರ! ದೇವತೆಗಳು ನನ್ನ ಟ್ಟಿದವರು. ಓ... ಈ ಭೂಮಿ ಎಷ್ಟು ಸುಂದರವಾಗಿದೆ. ಜನರು ಎಷ್ಟು ಾಗಿದ್ದಾರೆ!"

ಮ ಪ್ರೊ.

ಪ್ರಪ್ಪನವರು

ದಿಸಿರುವ

ಮಾದ

ಯಾ


ಮೂರು


ಕಥೆ'ಯ

ದೂಪ.

ಬಲ್ಲಿ ಶಕ್ತಿ

ದಣವು





ಚಳವಳಿಗಳನ್ನು ಚಳವಳಿಗಾರರನ್ನು ಪಳಗಿಸಿ, ತನ್ನ ಪರವಾಗಿ ತೆ ಮಾಡಿರುವುದನ್ನು ಈ ಕಥೆ ಮಾರ್ಮಿಕವಾಗಿ ಸುತ್ತದೆ. ಡಾ.ರಹಮತ್ ತರಿಕೆರೆಯವರು, ಪ್ರಭುತ್ವಗಳನ್ನು ಗಿ ವಿಡಂಭಿಸುತ್ತಿದ್ದ, ಜನರ ಅಸಂತೋಷಗಳಿಗೆ ನೆಯ ರೂಪ ಕೊಡುತ್ತಿದ್ದ ಎಷ್ಟೋ ಸೂಫಿ ಸಂತರಿಗೆ ಲೀನ ದೊರೆಗಳು ಅರಮನೆಯಿಂದ ಸಕಲ ಸೌಲಭ್ಯಗಳನ್ನು ಅವರ ಗಂಟಲನ್ನು ಪ್ರಭುತ್ವ ಪರವಾಗಿರುವಂತೆ ಮಾಡಿ, ದರ ಬಗ್ಗೆ ದಾಖಲಿಸುತ್ತಾರೆ.

ಮೇಲಿನ ಕಥೆಯ ನಾಯಕನಂತೆ ಯಾವುದನ್ನು ಧಿಸಲಾಗುತ್ತಿತ್ತೋ ಅದೇ ತಾನಾಗಿಬಿಡುವ, ವ್ಯವಸ್ಥೆಯೊಂದಿಗೆ ರಾಜಿಯಾದ ಚಳವಳಿಗಾರರೆಷ್ಟೋ. ನಮ್ಮ ಮುಂದಿರುವ ದಲಿತ ಚಳವಳಿ ಮತ್ತದರ ಮು ಇದಕ್ಕೊಂದು ನಿದರ್ಶನ. ದಲಿತ ಚಳವಳಿ ಹುಟ್ಟಿದಾಗಿನ ಹೋರಾಟದ ಅದರ ಘೋಷಣೆ, ಅದು ಕೊಟ್ಟ ಸಾಹಿತ್ಯ ಗಮನಿಸಿದರೆ, ಈ ಕಥೆಯ ನಾಯಕನಾಡಿದ ಮೊದಲ ಮಾತಿನಂತೆ ಕೇಳುತ್ತದೆ. 'ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾಂತಂತ್ರ್ಯ?' ಎಂದು ಈ ಸ್ವಾತಂತ್ರ್ಯವೇ ಒಂದು ಕಪಟ ಎನ್ನುತ್ತಿತ್ತು, 'ಭೂಮಿ ದಕ್ಕದೆ ಬಾಧೆ ತೀರದು' ಎಂದು ಭೂ ಹೋರಾಟಕ್ಕೆ ಕರೆ ನೀಡುತ್ತಿತ್ತು, 'ಮತದ ಮದದಲ್ಲಿ ಮಣ್ಣಾಗಬೇಡ' ಎಂದು ಮತಾಂತರ ವಿಮೋಚನೆಯ ದಾರಿಯಲ್ಲವೆನ್ನುತ್ತಿತ್ತು, 'ಯಾವ ದೇಶವಾದರೂ, ಯಾವ ಭಾಷೆಯಾದರೂ ಬಡವರೆಲ್ಲರೂ ಒಂದೇ, ಬಾಧೆ ಎಲ್ಲವೂ ಒಂದೇ' ಎಂದು ದುಡಿಯುವ ಜನರೆಲ್ಲಾ ಒಟ್ಟಾಗಬೇಕಾದ ಅನಿವಾರ್ಯ ಹಾಗೂ 'ಓಟು ಹಾಕುವುದ ಬಿಟ್ಟು ಹೋರಾಟ ಮಾಡಿರಣ್ಣ' ಎಂದು ಪ್ರತಿಭಟನೆಗೆ ಜನರನ್ನು ಅಣಿಗೊಳಿಸುತ್ತಿತ್ತು, ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ ಕರಾಳ ನೆನಪನ್ನು ಹೊತ್ತು 'ಸಮ ಸಮಾಜದೆಡೆಗೆ ನಮ್ಮ ನಡಿಗೆ' ಎಂದು ಅಸಮಾನತೆಯನ್ನು ಹೂತುಬಿಡಲು ಭುಗಿಲೆದ್ದ ಬೆಂಕಿಯ ಜ್ವಾಲೆಗಳಾಗಿ ಚಳವಳಿ ಸಾಗುತ್ತಿತ್ತು. ಆಗ ಚಳವಳಿಗೆ ಜನಸಮುದಾಯದೊಂದಿಗೆ ಒಡನಾಟವಿತ್ತು. ನಾಯಕರು ಜನರೊಳಗೆ ಹುಟ್ಟಿ ಬರುತ್ತಿದ್ದರು.

ಆದರೆ ವ್ಯವಸ್ಥೆ ಈ ಕಥೆಯ ದೆವ್ವದಂತೆ ತನಗೆದುರಾಗುವ ಧ್ವನಿಯನ್ನು ಬಹಳ ಜಾಣತನದಲ್ಲಿ ಪಳಗಿಸಿ ತನ್ನ ಪರವಾಗಿರುವಂತೆಯೂ ಜನರನ್ನು ದ್ವೇಷಿಸುವಂತೆಯೂ ಪರಿವರ್ತಿಸಿಬಿಡುತ್ತದೆ. ಈ ಮೂರು ದಶಕಗಳಲ್ಲಿ ದಲಿತ ಚಳವಳಿ ಸಾಗಿ ಬಂದ ಹಾದಿಯನ್ನು ಗಮನಿಸಬೇಕು. ಚಳವಳಿಯ ದುರ್ಬಲ ಜಾಗಗಳನ್ನು ಪತ್ತೆ ಮಾಡಿದ ವ್ಯವಸ್ಥೆ ಚಳವಳಿಯನ್ನು ಭ್ರಷ್ಟಗೊಳಿಸಿದ್ದಷ್ಟೇ ಅಲ್ಲ, ನಾಯಕರ ನಾಲಿಗೆಗೆ ಸುಖಭೋಗದ ಸಿಹಿಯನ್ನು ತಾಗಿಸಿತು. ಪರಿಣಾಮವಾಗಿ ನಾಯಕರೆಲ್ಲ ರಾಜಕೀಯ ಪಕ್ಷದಲ್ಲಿ ಟಿಕೆಟ್ ಗಿಟ್ಟಿಸಿಕೊಂಡು ಶಾಸಕ, ಮಂತ್ರಿಗಳಾದರು. ದಲಿತ ಬುದ್ಧಿಜೀವಿಗಳೆನಿಸಿಕೊಂಡವರು ಅಕಾಡೆಮಿ, ನಿಗಮ ಮಂಡಳಿ, ಪ್ರಾಧಿಕಾರದ ಅಧ್ಯಕ್ಷರಾಗಿ, ವಿಧಾನಪರಿಷತ್‌ನ ಸದಸ್ಯರಾಗಿ ಗೂಟದ ಕಾರು ಪಡೆದುಕೊಂಡರು. ದಲಿತ ಕವಿ ಸಾಹಿತಿಗಳೆಲ್ಲ ಪ್ರಭುತ್ವದ ಆಸ್ಥಾನ ಪಂಡಿತರಾಗಿ ಜನರ ನೋವಿಗೆ ಕಿವಿ, ಕಣ್ಣು, ಹೃದಯ ಮತ್ತು ನೆನಪುಗಳನ್ನು ಕಳೆದುಕೊಳ್ಳುತ್ತಾ ಸಾಗಿದರು. ಹಂತಹಂತವಾಗಿ ತನ್ನತನ ಕಳೆದುಕೊಂಡು ವ್ಯವಸ್ಥೆಯೊಂದಿಗೆ ಪ್ರತಿರೋಧ ಕಟ್ಟಿಕೊಳ್ಳದೆ ರಾಜಿಯಾದರು. ನಂತರ ಅವರೊಳಗಿನಿಂದ ಬಂದ ಧ್ವನಿ 'ದಲಿತರೆಲ್ಲ ಬೌದ್ಧ ಧರ್ಮಕ್ಕೆ ಮತಾಂತರವಾಗಬೇಕು', 'ದಲಿತರ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕು', 'ದಲಿತರು ಬಂಡವಾಳಶಾಹಿಗಳಾಗಬೇಕು', 'ಜಾಗತೀಕರಣ ದಲಿತರಿಗೆ ವರ, ಜಾಗತೀಕರಣ ವಿರೋಧಿಗಳನ್ನು ಗಲ್ಲಿಗೇರಿಸಬೇಕು', 'ಗ್ರಾಮಕ್ಕೊಂದು ಬೌದ್ಧವಿಹಾರ ಕಟ್ಟಿಸಿ, ದಲಿತರು ಧ್ಯಾನ ಮಾಡಲು ಅನುವು ಮಾಡಿಕೊಡಬೇಕು', 'ದಲಿತರು ರಾಜಕೀಯ ಪಕ್ಷ ಕಟ್ಟಿ ದಲಿತ ರಾಜಕಾರಣಿಗಳಿಗೆ ಓಟು ಹಾಕುವುದರ ಮೂಲಕ ರಾಜ್ಯಾಧಿಕಾರ ಹಿಡಿಯಬೇಕು', 'ಖಾಸಗೀಕರಣವಿರಲಿ, ಖಾಸಗಿಯಲ್ಲಿ ಮೀಸಲಾತಿ ನೀಡಿ', 'ದಲಿತರು ಉನ್ನತ ಶಿಕ್ಷಣ ಪಡೆದು ಉನ್ನತ ಸರ್ಕಾರಿ ಹುದ್ದೆಗಳಿಗೇರಬೇಕು', 'ಈಗಿನ ವ್ಯವಸ್ಥೆ ವಿರೋಧಿಸಬಾರದು, ವಿರೋಧಿಸಿದರೆ ಸಂವಿಧಾನ ವಿರೋಧಿಸಿದಂತೆ, ಸಂವಿಧಾನ ವಿರೋಧಿಸಿದರೆ ಅಂಬೇಡ್ಕರರನ್ನೇ ವಿರೋಧಿಸಿದಂತೆ' ಇತ್ಯಾದಿ ಈ ಧ್ವನಿಗಳೆಲ್ಲ ಕಥೆಯ ನಾಯಕ ಕೊನೆಯಲ್ಲಿ ರಾಜನೊಂದಿಗೆ ರಾಜಿಯಾಗಿ ನುಡಿದ ನುಡಿಗಳಂತೆಯೇ ಕೇಳಿಸುತ್ತವೆ.

ವ್ಯವಸ್ಥೆಗೆ ತಾನು ಮಾಡಬಹುದಾದ ತಪ್ಪುಗಳನ್ನು ತನಗೆ ಹೇಳಬಲ್ಲ ಪಳಗಿದ ಹೋರಾಟಗಾರರು ಬೇಕು. ಅವರು ತೋರಿಸುವ ತನ್ನ ದೋಷಗಳನ್ನು ಸರಿಪಡಿಸಿಕೊಂಡು ಅದು ಮತ್ತಷ್ಟು ಸ್ಥಿರವಾಗುತ್ತದೆ. ತಾನು ಶೋಷಿತರ ಪರವಾಗಿದ್ದೇನೆ. ತಾನು ತಂದಿರುವ ಯೋಜನೆಗಳು ಕಾಯ್ದೆಗಳು ಎಲ್ಲಾ ಶೋಷಿತರ ಪರವಾಗಿದೆ ಎಂಬ ಭ್ರಮೆಯನ್ನು ಜನರಲ್ಲಿ ಹುಟ್ಟಿಸಬೇಕಾದ ಅನಿವಾರ್ಯತೆಯಿದೆ. ಅದಕ್ಕೆ ಅದು ಜನರ ಒಳಗಿನಿಂದಲೇ ನಾಯಕರನ್ನು ಬೇರ್ಪಡಿಸಿ ಪಳಗಿಸಿ, ತಾನು ಹೇಳಬೇಕಾದುದ್ದನ್ನು ಅವರಿಂದ ಹೇಳಿಸುತ್ತದೆ. ದಲಿತ ಚಿಂತಕ ಆನಂದ್ ತೇಲ್‌ತುಂಬ್ಡೆಯವರು ವ್ಯವಸ್ಥೆಯೊಂದಿಗೆ ಸೇರಿ ಹೋಗುವ ಅಪಾಯವನ್ನು ಕುರಿತು ಈ ರೀತಿ ಹೇಳುತ್ತಾರೆ: "ಆಡಳಿತ ಯಂತ್ರಾಂಗದಲ್ಲಿರುವ ದಲಿತ ವ್ಯಕ್ತಿಯು ಇಡೀ ವ್ಯವಸ್ಥೆಯು ದಲಿತ ಪರವಾಗಿರುವಂತೆ ಪ್ರಭಾವ ಬೀರಬಲ್ಲನೆಂದು ನಂಬುವುದು ಅಮಾಯಕತನ. ಬದಲಾಗಿ ವ್ಯವಸ್ಥೆಯೊಂದರಲ್ಲಿ ವ್ಯಕ್ತಿಯೊಬ್ಬ ಏಳಿಗೆಯ ಏಣಿ ಏರುತ್ತಾ ಹೋಗುತ್ತಾನೆಂದರೆ ಅದು ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿ ಹಿಡಿದದ್ದಕ್ಕಾಗಿ ವ್ಯವಸ್ಥೆ ಆತನಿಗೆ ಮಾಡುವ ಸನ್ಮಾನವಷ್ಟೇ ಆಗಿರುತ್ತದೆ. ಹೀಗಾಗಿ ಹಲವಾರು ಬಾರಿ ದಲಿತರೇ ಇತರರಿಗಿಂತ ಹೆಚ್ಚಿನ ಉತ್ಸಾಹದಿಂದ ವ್ಯವಸ್ಥೆಯನ್ನು ಎತ್ತಿ ಹಿಡಿಯುತ್ತಾರೆ. ವ್ಯವಸ್ಥೆಯು ವ್ಯಕ್ತಿಯನ್ನು ತನ್ನ ನಿಷ್ಠಾವಂತ ಸೇವಕನನ್ನಾಗಿ ರೂಪಾಂತರಿಸಿಕೊಳ್ಳುತ್ತದೆ. ವರ್ಗದ ದೃಷ್ಟಿಯಿಂದ ಹೇಳುವುದಾದರೆ, ದಲಿತ ರಾಜಕಾರಣಿಗಳು, ದಲಿತ ಅಧಿಕಾರಿಗಳು, ದಲಿತಪರ ಮಿತ್ರವರ್ಗವಾಗಿಯೇನೂ ಉಳಿಯುವುದಿಲ್ಲ. ಅವರ ಈ ರೀತಿಯ ವರ್ಗಪರಿವರ್ತನೆಯು ಅವರನ್ನು ರಾಜಕೀಯವಾಗಿ ನಿಷ್ಕ್ರಿಯಗೊಳಿಸುತ್ತದೆ."

ಈ ನಿಟ್ಟಿನಲ್ಲಿ ದಲಿತ ಚಳವಳಿಯೊಂದು ಉದಾಹರಣೆಯಷ್ಟೇ. ಇದು ಜಾಗತಿಕ ಚೌಕಟ್ಟುಳ್ಳವಂತದ್ದು. ಜಗತ್ತಿನೆಲ್ಲೆಡೆ ರೈತ, ಕಾರ್ಮಿಕ, ಮಹಿಳಾ, ರಾಷ್ಟ್ರೀಯತಾ ಹೋರಾಟ, ಬಂಡಾಯ ಸಾಹಿತ್ಯ ಮುಂತಾದ ಜನಪರ ಚಳವಳಿಗಳೆಲ್ಲಾ ರಾಜಿಯಾಗಿ ಶೋಷಕರ ಪರ ವಕಾಲತ್ತು ವಹಿಸುತ್ತಿರುವುದು ಗೋಚರಿಸುತ್ತದೆ. ಈ ಇಡೀ ಕತೆ ಜನರಿಂದ ಬೇರ್ಪಟ್ಟು ವ್ಯವಸ್ಥೆಯೊಳಗೆ ಸೇರಿ ಅದನ್ನು ಬದಲಾಯಿಸಬಹುದೆಂದು ಹೊರಡುವ ಅಪಾಯದ ಎಚ್ಚರಿಕೆಯನ್ನು ಕೊಡುತ್ತದೆ. ಇದು ಚಳವಳಿಯಲ್ಲಿರುವ ಯುವ ಪೀಳಿಗೆಗೊಂದು ಪಾಠವಾಗಬೇಕಾಗಿದೆ.

• ರಾಜೇಶ್ ಸಾಲುಮರ

---


# (ಗಾ)ಂಧಿಯ ಹೆಸರೆತ್ತದೆ ಗಾಂಧಿಯ ನೆನಪನ್ನು ಉದ್ದೀಪಿಸುವ ಕೃತಿ

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'ಮೌಲ್ಯಾಗ್ರಹ' ರವಿಕೃಷ್ಣಾ ರೆಡ್ಡಿಯವರು ಈಚೆಗಷ್ಟೆ ಡ ಹೊಸ ಪ್ರಕಾಶನದ ಹೆಸರು. ಈ ಹಿಂದೆ ವಿಧಾನಸಭಾ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ಮು ಹಣದ ಹೊಳೆಯಲ್ಲಿ ಕೊಚ್ಚಿಕೊಂಡು ತ್ತಿದ್ದುದನ್ನು ವಿರೋಧಿಸಿ ಇದೇ ಗ್ರಹ'ದ ಹೆಸರಿನಲ್ಲಿ ಜನತೆ ಣ ಹಣ ಸಂಗ್ರಹಿಸಿ ಜಯನಗರ ದ ಚುನಾವಣಾ ಕಣಕ್ಕೂ ಇಳಿದ ಲಿಸ ರುಚಿಯನ್ನು ಉಂಡರು. ವರ ಸೋಲು ನಿರೀಕ್ಷಿತವಾಗಿತ್ತು, ಾಲಾಗಿ ಹರಿದ ಹಣದ ಹೊಳೆ ಾರದ ರೂಪ ತೊಟ್ಟಿದೆ. ಬರಹದ ಮೋಹ ಹಾಗೂ ಸಾಮಾಜಿಕ ನ್ನು ಮಾಧ್ಯಮದಲ್ಲೂ ವಿಸ್ತರಿಸುವ ಿ ರವಿ 'ವಿಕ್ರಾಂತ ಕರ್ನಾಟಕ', www.ravikrisddy.com <http://www.ravikrishna .com/> ಎಂಬ ಪ್ರಯತ್ನಗಳಿಗೂ ಕೈಹಾಕಿದರು. ರಲ್ಲಿ ಅವರು ಎಷ್ಟು ಯಶಸ್ಸು ಕಂಡರೋ ಸದ್ಯಕ್ಕೆ ಕನ್ನಡದ ಬ್ಲಾಗು, ವೆಬ್‌ಗಳೂ ರಂಗಶಂಕರ, ಕಲಾಕ್ಷೇತ್ರಗಳ ನೋಟಿಸ್ ಬೋರ್ಡ್‌ಗಳಂತೆ ಿಂಚುತ್ತಿರುವಾಗ ಅವರ www.vartamaana.com <http://www.vartamaana.com/> ಸದ್ದಿಲ್ಲದೆ ತನ್ನ ಸಂಭಾವಿತ ಭಾಷೆಯಿಂದಲೇ ಅಂತರ್ಜಾಲ ಬಳಸುವ ಕೆಲವರಲ್ಲಾದರು ಕುತೂಹಲ ಹುಟ್ಟಿಸಿದೆ.



'ಏನೇ ಆಗಲಿ, ಒಳ್ಳೆಯದನ್ನೇ ಮಾಡಿ; ಮಾಡುತ್ತಲೇ ಇರಿ' ಇದು ರವಿಯವರ 'ಮೌಲ್ಯಾಗ್ರಹ' ಪ್ರಕಾಶನದಿಂದ ಹೊರಬಂದಿರುವ ಎರಡನೇ ಕೃತಿ. ಅಮೆರಿಕಾದ ಲೇಖಕ ಕೆಂಟ್ ಎಂ.ಕೀತ್‌ರ 'Anyway' ಕೃತಿಯ ಅನುವಾದವಿದು. 'ನಮ್ಮ ನಾಡಿನ ಸಮಕಾಲೀನ ಸಂದರ್ಭದ ಕುಸಿದ ಮೌಲ್ಯಗಳು, ಅತಿಭ್ರಷ್ಟತೆ, ಅಪ್ರಾಮಾಣಿಕ ಜೀವನದೆಡೆಗಿನ ಪ್ರಲೋಭನೆಗಳ ಬಗ್ಗೆ ಚಿಂತಿಸುತ್ತಿದ್ದ ನಾನು, ನನಗಾಗಿ ಮತ್ತು ಕನ್ನಡದ ನನ್ನ ತಲೆಮಾರಿನ ಆಸುಪಾಸಿನ ಸ್ನೇಹಿತರಿಗಾಗಿ ಇದನ್ನು ಕನ್ನಡಕ್ಕೆ ಅನುವಾದ ಮಾಡುವುದು ಸೂಕ್ತ ಎನ್ನಿಸಿತು' ಎಂದು ರವಿ ಹನ್ನೊಂದು ಲೇಖನಗಳನ್ನೊಳಗೊಂಡಿರುವ ಈ ಕೃತಿಯ ಪ್ರವೇಶದಲ್ಲಿ ಹೇಳಿಕೊಂಡಿದ್ದಾರೆ. ವ್ಯಕ್ತಿತ್ವ ವಿಕಸನ ಮತ್ತು ಜನರಲ್ ನಾಲೆಡ್ಜ್ ಹೆಸರಿನಲ್ಲಿ ತೀರಾ ಬೋರುಹೊಡೆಸುವ ಬೂಸಾ ಕೃತಿಗಳನ್ನೇ ಹೆಚ್ಚು ನೆಚ್ಚಿಕೊಂಡಿರುವ ಇವತ್ತಿನ ಯುವ ತಲೆಮಾರು, ಅದಕ್ಕೆ ತಕ್ಕಂತಿರುವ ಇವತ್ತಿನ ಮಾಧ್ಯಮ ಪ್ರಣೀತ ಮಾರುಕಟ್ಟೆ 'ರಾತ್ರೋರಾತ್ರಿ ನಂಬರ್ ಒನ್ ಆಗುವುದು ಹೇಗೇ?', 'ದಿಢೀರ್ ದುಡ್ಡು ಮಾಡುವುದು ಹೇಗೇ?' ಎಂಬ ಅಗ್ಗದ ಪುಸ್ತಕಗಳನ್ನು ಕಾಸಿಗೊಂದು ಕೊಸರಿಗೊಂದು ಕೊಡುತ್ತಿವೆ. ಬಿಡುಗಡೆಯಾದ ಇಂತಿಷ್ಟೇ ಗಂಟೆ/ದಿನಗಳಲ್ಲಿ ಮರುಮುದ್ರಣಕ್ಕೆ ಅಣಿಯಾದ ಕೃತಿ ಎಂಬ ಹಣೆಪಟ್ಟಿ ಅಂಟಿಸಿಕೊಳ್ಳುವ ಪಶ್ಚಿಮದವರ ಕಾಯಿಲೆ ಈಗ ಕನ್ನಡದ ಕೆಲವು ಪುಡಿ ಲೇಖಕರಿಗೂ ವ್ಯಾಪಿಸತೊಡಗಿದೆ. ನಿಜದ ಪ್ರಾಮಾಣ್ಯಕ್ಕಿಂತ ಓದುಗ-ಸ್ನೇಹಿ ಭಾಷೆ (Reader's friendly language) ಬಳಕೆ ಇವತ್ತು ಕೃತಿಯೊಂದರ ಮೌಲ್ಯ ನಿರ್ಧರಿಸುವ ನಿರ್ಣಾಯಕ ಸ್ಥಾನ ಗಿಟ್ಟಿಸಿಕೊಂಡಿದೆ. ಇಂಥ ಹೊತ್ತಲ್ಲಿ ಈ ಕೃತಿಯಲ್ಲಿ ಕಾಣುವ ಚಿಂತನೆಗಳು ಗಾಂಧಿಯನ್ನು ಎಲ್ಲೂ ಹೆಸರಿಸದೆ ಗಾಂಧಿಯನ್ನು ಪುತ್ತೆಮತ್ತೆ ನೆನೆಯುವಂತೆ ಮಾಡುತ್ತದೆ. ಇದು 'Think and Grow Rich' ತರಹದ ಕೃತಿಯಲ್ಲ. 'ನೀವು ವರ್ಷಗಳ ಕಾಲ ಕಟ್ಟಿದ್ದು ರಾತ್ರೋರಾತ್ರಿ ಹಾಳುಗೆಡವಲ್ಪಡಬಹುದು. ಆದರೆ ನೀವು ಏನನ್ನು ಸಾಧಿಸಿದ್ದಿರೊ ಅದನ್ನು ಬದಲಾಯಿಸಲು ಸಾಧ್ಯವಿಲ್ಲ', 'ನೀವು ನಿಮ್ಮೆಲ್ಲ ಶ್ರೇಷ್ಠತೆಯನ್ನು, ನಿಮ್ಮೆಲ್ಲ ಒಳ್ಳೆಯದನ್ನು ಕೊಡದೆ ಇದ್ದ ಪಕ್ಷದಲ್ಲಿ, ಯಾರಿಗಾಗಿ, ಇನ್ಯಾವ ಪ್ರಪಂಚಕ್ಕಾಗಿ ಅದನ್ನು ಉಳಿಸಿಕೊಂಡಿದ್ದೀರಾ?', 'ಹೊಸಹೊಸ ಆವಿಷ್ಕಾರಗಳಿಗೆ ದಾರಿ ತೋರಬಲ್ಲ, ಹೊಸ ದೃಷ್ಟಿಕೋನವನ್ನು ಪ್ರಚೋದಿಸಬಲ್ಲ ವಿಚಾರಗಳು ಈ ಪ್ರಪಂಚಕ್ಕೆ ಬೇಕು. ನಮ್ಮಲ್ಲಿ ಮಹಾನ್ ಎನ್ನಬಹುದಾದ ಸಮಸ್ಯೆಗಳಿವೆ, ಹಾಗಾಗಿ ನಮಗೆ ಮಹಾನ್ ಆದ ಪರಿಹಾರಗಳು ಬೇಕು', 'ನಿಮ್ಮ ಕೈಲಾದುದನ್ನು, ನಿಮ್ಮೆಲ್ಲ ಒಳ್ಳೆಯದನ್ನು ಜಗತ್ತಿಗೆ ನೀಡಿ; ಆಗಲೂ ಜನ ನಿಮ್ಮ ಹಲ್ಲುದುರಿಸಬಹುದು. ಆದ್ರೂ, ನಿಮ್ಮೆಲ್ಲ ಒಳ್ಳೆಯದನ್ನು ಜಗತ್ತಿಗೆ ನೀಡಿ' ಎಂಬ ಮಾತುಗಳು ಕೃತಿಯುದ್ದಕ್ಕೂ ಕಾಣಿಸಿಕೊಂಡು ಈ ಸಮಾಜದ ಕಷ್ಟಗಳಿಗೆ ಮನುಷ್ಯರು ತೆತ್ತುಕೊಳ್ಳಬೇಕಾದ ಮಾರ್ಗಗಳನ್ನು ತೆರೆದಿಡುತ್ತದೆ. ಸೊಗಸಾದ ಒಳಪುಟ ವಿನ್ಯಾಸ ಮತ್ತು ನೀಟಾದ ಮುದ್ರಣ ಇಡೀ ಕೃತಿಯ ಅಂದವನ್ನು ಹೆಚ್ಚಿಸಿದೆ. ಇವತ್ತಿನ ಕೊಳ್ಳುಬಾಕ ಜಗತ್ತಿನಲ್ಲಿ ಅಂತಃಕರಣ ಕಳೆದುಕೊಂಡು ನರಳುತ್ತಿರುವ ನಾಗರಿಕ ಸಮಾಜಕ್ಕೆ ಇಂಥ ಕೃತಿಗಳ ಅವಶ್ಯಕತೆಯಿದೆ.

**ಏನೇ ಆಗಲಿ, ಒಳ್ಳೆಯದನ್ನೇ ಮಾಡಿ: ಮಾಡುತ್ತಲೇ ಇರಿ**


ಕೆಂಟ್ ಎಂ.ಕೀತ್, ಕನ್ನಡಕ್ಕೆ: ರವಿ ಕೃಷ್ಣಾರೆಡ್ಡಿ

ಪ್ರಕಾಶಕರು: ಮೌಲ್ಯಾಗ್ರಹ ಪ್ರಕಾಶನ, ನಂ.400, 23ನೇ ಮೇನ್, ಬಿಟಿಎಮ್ ಲೇಔಟ್ 2ನೇ ಹಂತ, ಬೆಂಗಳೂರು-76

ಪುಟಗಳು: 112, ಬೆಲೆ: ರೂ.75, ಪ್ರಕಟಣೆ: 2011

# ಅಡಿಗರ ಕೋಮುವಾದಿ ಕವನ

ಪ್ರತಿಕ್ರಿಯೆ



ಪತ್ರಿಕೆಯ ಅಕ್ಟೋಬರ್ 19 ಮತ್ತು ನವೆಂಬರ್ 2 ರ ಸಂಚಿಕೆಗಳಲ್ಲಿ ಡಾ. ಎಂ.ಡಿ. ಒಕ್ಕುಂದ, ದಿ. ಗೋಪಾಲ ಕೃಷ್ಣ ಅಡಿಗರ "ಮತ್ತೆ ಮೊಳಗಲಿ ಪಾಂಚ ಜನ್ಯ" ಎಂಬ ಕವಿತೆಯನ್ನು ವಿಮರ್ಶಿಸಿದ್ದಾರೆ. ಅದೊಂದು ಕೆಟ್ಟ ಕವಿತೆ ಮತ್ತು ಅದರಲ್ಲಿರುವುದು ಹಿಂದೂತ್ವದ ದುಷ್ಟ ಸಿದ್ಧಾಂತ ಎಂಬ ಅವರ ತೀರ್ಮಾನಕ್ಕೆ ನನ್ನ ಸಂಪೂರ್ಣ ಸಹಮತವಿದೆ. ಆದರೆ ತಮ್ಮ ಲೇಖನದಲ್ಲಿ ಕವಿಯ ಬಗ್ಗೆ ಅವರು ಆಡಿರುವ ಕೆಲವು ಮಾತುಗಳನ್ನು ನಾನು ಒಪ್ಪಲಾರೆ. 'ಮತ್ತೆ ಮೊಳಗಲಿ ಪಾಂಚಜನ್ಯ' ಖಂಡಿತ ನಮ್ಮ ವಿರೋಧಕ್ಕೂ ತಿರಸ್ಕಾರಕ್ಕೂ ತಕ್ಕುದಾದದ್ದು. ಆದರೆ ವಿಷಯ, ಅಷ್ಟಕ್ಕೇ ಮುಗಿಯುವುದಿಲ್ಲ, ಅಡಿಗರ ಈ ಕವಿತೆಯನ್ನು ತಿರಸ್ಕರಿಸುವಾಗಲೂ ಕವಿಯ ಕುರಿತ ಕೆಲವು ಮಹತ್ವದ ಸಂಗತಿಗಳನ್ನು ನಾವು ಮರೆಯಬಾರದು.

'ಮತ್ತೆ ಮೊಳಗಲಿ-'. ಕವಿತೆ ಅಡಿಗರ ವ್ಯಕ್ತಿತ್ವಕ್ಕಾಗಲಿ, ಅವರ ಕಾವ್ಯಕ್ಕಾಗಲೀ ಎಷ್ಟು ಮಾತ್ರಕ್ಕೂ ಪ್ರಾತಿನಿಧಿಕವಲ್ಲ. ಅನ್ನದ ಒಂದು ಅಗುಳನ್ನು ಹಿಸುಕಿ, ಬೆಂದಿದೆಯೋ ಹೇಗೆ ಎಂದು ಪರೀಕ್ಷಿಸುವ ಹಾಗೆ ಇದೊಂದು ಕವಿತೆಯನ್ನು ಮಾತ್ರ ಹಿಡಿದುಕೊಂಡು ಅಡಿಗರ ಒಟ್ಟು ಕಾವ್ಯದ ಬಗ್ಗೆ "ಇದು ಹೀಗೆಯೇ ಸರಿ" ಎಂದು ತೀರ್ಮಾನಿಸುವುದು ತರವಲ್ಲ. ಒಕ್ಕುಂದ, ತಮ್ಮ ಲೇಖನದಲ್ಲಿ ಗುರುತಿಸಿರುವ ಹಾಗೆ, ಅಡಿಗರು ರಾಜಕೀಯವನ್ನೇ ವಸ್ತುವಾಗಿಸಿಕೊಂಡು ಹಲವು ಕವಿತೆಗಳನ್ನು ಬರೆದಿದ್ದಾರೆ. ಅವುಗಳ ಪೈಕಿ ಮೊದಮೊದಲಿನ ಕೆಲವು ಕವಿತೆಗಳನ್ನು ಬಿಟ್ಟರೆ, ಉಳಿದ ಎಲ್ಲ ಕವಿತೆಗಳಲ್ಲೂ ಅವರು ತಮ್ಮ ಕಾಲದಲ್ಲಿ ಚಾಲ್ತಿಯಲ್ಲಿದ್ದ ಸಮಾಜವಾದದ ಸಿದ್ಧಾಂತ ಮತ್ತು ಆಚರಣೆಗಳನ್ನು, ತನ್ನ ಮಾತಿನ ಬಗೆಬಗೆಯ ವರಸೆಗಳಿಂದ ಖಂಡಿಸಿದ್ದಾರೆ. ಆದರೆ ಅಡಿಗರ ಬಲಪಂಥೀಯ ಧೋರಣೆಗಳನ್ನು ವಿರೋಧಿಸುವವರು ಕೂಡ, ಈ ಕವಿತೆಗಳ ಕಾವ್ಯ ಗುಣವನ್ನು ಪ್ರಶ್ನಿಸುವುದಿಲ್ಲ. ಉದಾ: 'ನೆಹರೂ ನಿವೃತ್ತರಾಗುವುದಿಲ್ಲ', 'ಮೂಲಕ ಮಹಾಶಯರು,' 'ಸಾಮಾನ್ಯನಂತೆ ಈ ನಾನು', 'ಅರ್ಥವಾಗುವಹಾಗೆ ಬರೆಯಬೇಕು, ಮುಂತಾದ ಅವರ ಕವಿತೆಗಳ ಬಗ್ಗೆ ಏನೇ ತಕರಾರು ಇದ್ದರೂ, ಅವು ಒಳ್ಳೆಯ ಕವಿತೆಗಳು ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ 'ಈ ಮನ್ನಣೆ' 'ಮತ್ತೆ ಮೊಳಗಲಿ-' ಕವಿತೆಗೆ ಯಾವತ್ತೂ ದಕ್ಕಿಲ್ಲ. ಅಡಿಗರ ಕಾವ್ಯದ ಲಕ್ಷಣವೇ ಆಗಿರುವ ಮಾತಿನ ವೈವಿಧ್ಯಮಯ ಬಳಕೆ, ವ್ಯಂಗ್ಯ ವಕ್ರೋಕ್ತಿ ಶ್ಲೇಷೆ, ದ್ವಂದ್ವ, ತೊಳಲಾಟ, ಆತ್ಮಾವಲೋಕನ, ಮುಂತಾದ ಯಾವ ಗುಣವೂ ಪ್ರಸ್ತುತ ಕವಿತೆಯಲ್ಲಿ ಕಾಣಿಸುವುದಿಲ್ಲ. ಅದರ ಮಾತುಗಳು ಕಾವ್ಯದ ಹಾಗೂ ಇಲ್ಲ; ಗದ್ಯದ ಹಾಗೂ ಇಲ್ಲ. ಅವು ಆರ್.ಎಸ್.ಎಸ್. ಮೆರವಣಿಗೆಯ ಘೋಷಣೆಗಳ ಹಾಗೆ ಕೇಳಿಸುತ್ತವೆ. ಅದು ಅಡಿಗರ ಮಾತಿನ ರೀತಿಯಲ್ಲ. ಸಾರ್ವಜನಿಕರನ್ನು ಬಿಡಿ, ತನ್ನ ಓದುಗರನ್ನು ಕೂಡ ಕವಿ ಎಂದೂ ಹಾಗೆ ಸಂಬೋಧಿಸಿದವರಲ್ಲ. ಅವರ ಹೆಚ್ಚಿನ ಕವಿತೆಗಳಲ್ಲಿ ಮಾತು ಸ್ವಗತದಂತಿರುತ್ತದೆ; ಎದುರಿಗೊಬ್ಬ ಇದ್ದಾನೆ ಎಂದು ಭಾವಿಸಿಕೊಂಡು ಅವರು ಸಂಭಾಷಣೆ ನಡೆಸಿದಾಗಲೂ, ಅದು ಸ್ವಗತದಲ್ಲಿ ಗೊಣಗಿದಂತೆ, ಅಥವಾ ತನ್ನಷ್ಟಕ್ಕೆ ತಾನು ಯೋಚಿಸಿದಂತೆ, ಕವಿತೆಯ ಲಯವಿರುತ್ತದೆ. (ಉದಾ: ಕೂಪಮಂಡೂಕ, ಚಿಂತಾಮಣಿಯಲ್ಲಿ ಕಂಡಮುಖ, ಇತ್ಯಾದಿ). ಹಾಗಾಗಿ ಅಡಿಗರ ಹೆಚ್ಚಿನ ಕವಿತೆಗಳಲ್ಲಿ ಹಾಜರಿರುವ "ನಾನು", ಕೇವಲ ಕವಿತೆಯ ನಿರೂಪಕನಲ್ಲ, ಅಥವಾ ಕವಿಯೂ ಅಲ್ಲ, ಆ 'ನಾನು', ನೀನು, ಅವನು, ನಾವು, ನೀವು, ಅವರು, ಹೀಗೆ ಎಲ್ಲರ ಪಾಡನ್ನೂ ಒಳಗೊಳ್ಳುವ "ನಾನು" ಆಗಿರುತ್ತದೆ. (ನೋಡಿ: "ಅಡಿಗರ ಕಾವ್ಯದಲ್ಲಿ 'ನಾನು'- ಕೆ.ವಿ. ಅಕ್ಷರ. ಪ್ರತಿಮಾಲೋಕ-ಸಂ.ಎಸ್.ಆರ್. ವಿಜಯಶಂಕರ-ಅಂಕಿತ ಪುಸ್ತಕ, ಬೆಂಗಳೂರು, 2008, ಪುಟ 64-78). ಮಾತನ್ನು ಅದರ ಅರ್ಥ, ಧ್ವನಿ ಮತ್ತು ಲಯಗಳೆಲ್ಲದರ ಜೊತೆ ಬಳಸಿಕೊಳ್ಳುವ ಅಡಿಗರ ಕಾವ್ಯಧರ್ಮಕ್ಕೆ 'ಮತ್ತೆ ಮೊಳಗಲಿ-' ಒಂದು ಅಪವಾದವೇ ಹೊರತು ಉದಾಹರಣೆ ಅಲ್ಲ.

ಒಕ್ಕುಂದ ಅವರಿಗೆ ಇದು ಗೊತ್ತಿಲ್ಲದ ಸಂಗತಿ ಏನೂ ಅಲ್ಲ. ಅವರು, ತಮ್ಮ ಲೇಖನದಲ್ಲಿ ಒಂದೆಡೆ ಹೀಗೆ ಬರೆಯುತ್ತಾರೆ, "ಇದು (ಪ್ರಸ್ತುತ ಕವಿತೆ) ಅಡಿಗರ ಸಹಜ ಕಾವ್ಯವಲ್ಲ. ಕೋಮುವಾದಿ ಸಿದ್ಧಾಂತವನ್ನು ಅತ್ಯಂತ ಗಂಭೀರವಾಗಿ ಅಧ್ಯಯನ ಮಾಡಿ ಅರಗಿಸಿಕೊಂಡು, ಅದರ ಎಲ್ಲ ಆಯಾಮಗಳನ್ನೂ ಪರಿಪೂರ್ಣವಾಗಿ ಒಳಗೊಳ್ಳುವ ಹಂಬಲದ ಉದ್ದೇಶಪೂರ್ವಕ ರಚನೆಯಂತೆ ಕಾಣುತ್ತದೆ. ಈ ಮಾತು, ಅದರಷ್ಟಕ್ಕೆ ಸರಿಯಾಗಿದೆ. ಆದರೆ ತನ್ನ ಲೇಖನದಲ್ಲಿ ಮುಂದೆ, ಒಕ್ಕುಂದ, 1959 ರ ನಂತರ, ಕವಿ ಬರೆದ ಕವಿತೆಗಳು, 'ಮತ್ತೆ ಮೊಳಗಲಿ....' ಕವಿತೆಗೆ ಮಾಡಿಕೊಂಡ ಪೂರ್ವಭಾವಿ ತಯಾರಿ ಎಂಬಂತೆ ಬರೆಯುತ್ತಾರೆ. ಈ ಕವಿತೆ ಅಡಿಗರ ಸಹಜ ಕಾವ್ಯವಲ್ಲ ಎಂದು ಹೇಳುತ್ತಲೇ, ಒಕ್ಕುಂದ, ಇದರ ಬೇರುಗಳನ್ನು 1959 ರ ನಂತರ, ಅಡಿಗರು ಬರೆದ ಕವಿತೆಗಳಲ್ಲಿ ಕಂಡುಕೊಳ್ಳುತ್ತಾರೆ. "ಕನ್ನಡ ವಿಮರ್ಶೆ ಯಾವ ಕಾಲದಲ್ಲಿ ಅಡಿಗರನ್ನು ಶ್ರೇಷ್ಠ ಕವಿ ಎಂದು ಎತ್ತಿ ಕಟ್ಟಿತೋ, ಯಾವ ಕವಿತೆಗಳು ಕನ್ನಡದ ಶ್ರೇಷ್ಠ ಕಾವ್ಯವೆಂದು ವಿಮರ್ಶಿಸಲ್ಪಟ್ಟಿತೋ, ಅದೇ ಕಾಲದಲ್ಲಿ ಅಡಿಗರು ಸನಾತನ ಸಂಸ್ಕೃತಿಯ ಪ್ರತಿಪಾದಕರಾದರು." ಒಕ್ಕುಂದ ಅವರ ಈ ಮಾತು ಅಷ್ಟೂ ಶ್ರೇಷ್ಠ ಕವಿತೆಗಳನ್ನು "ಸನಾತನ ಸಂಸ್ಕೃತಿಯ ಪ್ರತಿಪಾದನೆ" ಎಂಬ ಕಸಪೂರಕೆಯಲ್ಲಿ ಗುಡಿಸಿ ಹಾಕಿಬಿಡುತ್ತದೆ. ಕವಿತೆಯೊಂದು, ಅದರ ತಾತ್ಪರ್ಯವೇ ಹೊರತು ಬೇರೆ ಏನೂ ಅಲ್ಲ ಎಂದೇ ಇಟ್ಟುಕೊಂಡರೂ, ಒಕ್ಕುಂದ ಅವರ ಈ ಸಾರಾ ಸಗಟು ತೀರ್ಮಾನ ಅಡಿಗರ ಕವಿತೆಗಳಿಗೆ ಅನ್ವಯಿಸುವುದಿಲ್ಲ. ಉದಾಹರಣೆಗೆ, ಅವರ ಮೊದಲ ಶ್ರೇಷ್ಠ ಕವಿತೆಗಳಲ್ಲಿ ಒಂದಾಗಿರುವ 'ಭೂತ'ದಲ್ಲಿ ಒಕ್ಕುಂದ ಹೇಳುವ 'ಸನಾತನ ಸಂಸ್ಕೃತಿಯ ಪ್ರತಿಪಾದನೆ' ಅವರು ಹೇಳುವಷ್ಟು ನೇರವಾಗಿಲ್ಲ. ಆ ಕವಿತೆಯ ಮೊದಲ ಭಾಗದಲ್ಲಿ, ಕವಿ "ಹುಗಿದಹಳಬಾವಿಯೊಳಕತ್ತಲಹಳಸುಗಾಳಿ" ಎಂಬ ಮಾತಿನಲ್ಲಿ ಏನನ್ನು ಸಂಕೇತಿಸುತ್ತಿರಬಹುದು ಎಂಬುದು ಒಕ್ಕುಂದ ಅವರಿಗೆ ಸಮಸ್ಯೆಯೇ ಅಲ್ಲ. ಈ ಹಳಸುಗಾಳಿ ಹಾಯುತ್ತಿರುವುದು, ತುಳಸಿ ವೃಂದಾವನದ ಹೊದರಿಗೆ' ಎಂಬ ಕವಿಯ ಮಾತಿನ ಬಗ್ಗೆ ಮಾತ್ರ ಇವರ ತಕರಾರು. ಹಾಗಾಗಿ, ಕವಿತೆಯಲ್ಲಿ ಜಡುಗಟ್ಟಿದ ಸಂಪ್ರದಾಯ ಮತ್ತು ಪರಂಪರೆಗಳ ಮುಖಾಮುಖಿ, ಇವರಿಗೆ ಸನಾತನ ಸಂಸ್ಕೃತಿಯ ಏಕಮುಖೀ ಪ್ರತಿಪಾದನೆಯಂತೆ ಕಂಡಿದೆ.

"ಅಗೆ ದುತ್ತಗದ್ದೆಗಳ ಕರ್ಮ ಭೂಮಿಯವರಣ
ಭತ್ತಗೋದುವೆ ಹಣ್ಣು ಬಿಟ್ಟ ವೃಂದಾವನ
ಗುಡಿ ಗೋಪುರಗಳ ಬಂಗಾರ ಶಿಖರ"

'ಭೂತ'ದ ಈ ಕೊನೆಯ ಸಾಲುಗಳಲ್ಲಿ ಪುನರುತ್ಥಾನದ ಆಶಯವೊಂದು ವ್ಯಕ್ತವಾಗಿದೆ ನಿಜ. ಆದರೆ ಅಡಿಗರ ಎಲ್ಲ ಮುಖ್ಯ ಕವಿತೆಗಳಲ್ಲೂ ಈ ಆಶಯ ವ್ಯಕ್ತಗೊಂಡಿದೆ, ಅಥವಾ ಇಷ್ಟೇ ಖಚಿತವಾಗಿ ಹೇಳಲ್ಪಟ್ಟಿದೆ ಎಂಬ ತೀರ್ಮಾನ ಸರಿಯಲ್ಲ. 'ಕೂಪಮಂಡೂಕ', 'ಚಿಂತಾಮಣಿಯಲ್ಲಿ ಕಂಡ ಮುಖ', 'ಬಿಎಂಶ್ರೀಯವರಿಗೆ' ಮುಂತಾದ ಅವರ ಶ್ರೇಷ್ಠ ಕವಿತೆಗಳಲ್ಲಿ ಪುನರುತ್ಥಾನದ ಯಾವ ಆಶಯವೂ ಕಾಣದು. ಅವು ಅಪ್ಪಟ ಸೆಕ್ಯೂಲರ್ ಕವಿತೆಗಳು. 'ಆನಂದ ತೀರ್ಥರಿಗೆ' ಎಂಬ ಅವರ ಕವನ ಪುನರುತ್ಥಾನದ ಆಶಯದಲ್ಲಿ ಕೊನೆಗೊಳ್ಳುತ್ತದೆ. ಆದರೆ ಆನಂದತೀರ್ಥ (ಮಧ್ವಾಚಾರ್ಯ)ರನ್ನು ಉದ್ದೇಶಿಸಿ ಕವಿ, "ನಿಮ್ಮ ನಿಮ್ಮಂಥವರ ಕಾದು ಕುಳಿತಿದೆ ತೀರದಾಸೆ" ಎಂದು ಹೇಳುವಾಗ ತೀರದಾಸೆ ಎಂಬ ಪದ ಪ್ರಯೋಗದಲ್ಲಿರುವ ಶ್ಲೇಷೆಯನ್ನು ಅಗತ್ಯ ಗಮನಿಸಬೇಕು. (ಈ ದೇರದ ಆಸೆ, ಮತ್ತು ನದಿಯ ಈ ದಂಡೆಯ ಆಸೆ. ಕವಿ ಇಲ್ಲಿ ನದಿಯನ್ನು ಬದುಕಿನ ರೂಪಕವಾಗಿಸುವ ಭಾಷೆಯ ಪರಂಪರೆಯನ್ನೂ ಬಳಸಿಕೊಂಡಿದ್ದಾರೆ). ಜೊತೆಗೆ ಆ ಕವಿತೆಯಲ್ಲಿ ಚಿತ್ರಿತವಾಗಿರುವ ಸಮಕಾಲೀನ ಉಡುಪಿಯ ಕರ್ಮಠ ಧಾರ್ಮಿಕತೆ 'ಭೂತ'ದ 'ಹುಗಿದಹಳಬಾವಿಯೊಳಕತ್ತಲಹಳಸುಗಾಳಿ'ಯನ್ನೇ ನೆನಪಿಸುವಂತಿದೆ ಎಂಬುದನ್ನೂ ಗುರುತಿಸಬೇಕು. ಸಂಘ ಪರಿವಾರದವರು ಪುರಾಣ ಪುರುಷನಾದ ರಾಮನನ್ನು ಐತಿಹಾಸಿಕ ವ್ಯಕ್ತಿಯಾಗಿ ಮಾರ್ಪಡಿಸಿ ಅಯೋಧ್ಯೆಯಲ್ಲಿ ಹುಟ್ಟಿಸಿಯೂ ಆಗಿದೆ; ಸಾಯಿಸಿಯೂ ಆಗಿದೆ. ಆದರೆ ಅಡಿಗರ 'ಶ್ರೀರಾಮನವಮಿಯ ದಿವಸ'ದ ರಾಮ, ಆಗಿ ಹೋದ ವ್ಯಕ್ತಿಯಲ್ಲ; ಅವನು ಭವಿಷ್ಯದಲ್ಲಿ ಸಂಭವಿಸಬೇಕಾದವನು. ಅಡಿಗರ ಇನ್ನೊಂದು ಶ್ರೇಷ್ಠ ಕವಿತೆ 'ಬತ್ತಲಾರದ ಗಂಗೆ'ಯಲ್ಲಿ ಒಕ್ಕುಂದ ಹೇಳುವ ಈ ಪುನರುತ್ಥಾನದ ಆಶಯ ವ್ಯಕ್ತವಾಗುವ ರೀತಿ ಪ್ರಗತಿಶೀಲರನ್ನು ಮಾತ್ರವಲ್ಲ ಸನಾತನವಾದಿಗಳನ್ನು ಸಹ ಬೆಚ್ಚಿಬೀಳಿಸುವಂತಹದ್ದು. ಕವಿತೆಯಲ್ಲಿ ಮಲಿನಗೊಂಡಿರುವ ವಾಸ್ತವದ ಗಂಗಾನದಿಯನ್ನು ದೇಶದ ಸ್ಥಿತಿಗೆ ರೂಪಕವನ್ನಾಗಿಸಿಕೊಂಡು ಕವಿ, "ಬತ್ತಿ ಹೋಗಲಿ ಗಂಗೆಯೊಂದುಸಲ ತಳ ಬಿರಿದು" ಎಂದು ಶಪಿಸುತ್ತಾರೆ. ಶಾಂತಂಪಾಪಂ! (ಪುನರುತ್ಥಾನವಾದಿಯೊಬ್ಬ ಹೀಗೂ ಶಾಪ ಹಾಗಬಹುದೆ?)

ಇಲ್ಲಿ ಕವಿಯ ಆಶೆ ಏನೆಂದರೆ, ಗಂಗೆ ಬತ್ತಿಹೋದ ನಂತರವಾದರೂ

"ದಡದಲ್ಲಿ ಮತ್ತೆ ವಿದ್ಯಾರಣ್ಯ ಧರ್ಮಕ್ಷೇತ್ರ
ಚಿಗುರುವುವು ಚಿಗಿಯುವುವು ಮುಗಿಲ ಕಡೆಗೆ."

ಕವಿತೆ ಇಷ್ಟಕ್ಕೇ ಮುಗಿದಿದ್ದರೆ, ಇಲ್ಲಿ ವ್ಯಕ್ತವಾಗಿರುವ ಹಂಬಲದ ಬಗ್ಗೆ ನಾನೂ ಕವಿಯ ಜೊತೆ ಜಗಳಕ್ಕೆ ನಿಂತೇನು. ಆದರೆ ಕವಿಗೆ, ತನ್ನ ಮಾತು ಮುಗಿಸುವ ಮೊದಲೇ ಆ ಬಗ್ಗೆ ಸಂದೇಹ ಮೂಡಿದೆ. ತನ್ನ ಆಶಯದ ಬಗ್ಗೆ ಸ್ವತಃ ಕವಿಯೇ ಹೀಗೆ ಕೇಳಿಕೊಳ್ಳುತ್ತಿದ್ದಾರೆ.

ಕನಸೇ? ಕಲ್ಪನೆಯೇ? ಇಲ್ಲವಾದರೇನಿದೆ ಇಲ್ಲಿ;
ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ."

'ಬತ್ತಲಾರದ ಗಂಗೆ' ಮೊದಲು ಪ್ರಕಟವಾದ ಸುಮಾರಿಗೆ, ಬಿಹಾರದ ಭಾಗಲ್‌ಪುರ ಜೈಲಿನಲ್ಲಿ ವಿಚಾರಣಾ ಪೂರ್ವ ಕೈದಿಗಳ ಕಣ್ಣುಗಳನ್ನು ಪೊಲೀಸರು ಸೂಜಿ ಚುಚ್ಚಿ ಕಿತ್ತದ್ದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು, ಕವಿತೆಯ ಕೊನೆಯ ಮಾತಿನ ಸಂದರ್ಭ ಇದು. ಈ ವಾಸ್ತವ ಬಿಟ್ಟು ಬೇರೆ "ಏನಿದೆ ಇಲ್ಲಿ?" ಎಂದು ಕವಿ ಆರ್ತರಾಗಿ ಕೇಳುತ್ತಿದ್ದಾರೆ. ಅವರಿಗೆ ಏನೆಂದು ಉತ್ತರಿಸುವುದು? ನಾನು ಸಮಾಜವಾದಿಯಾಗಿದ್ದರೂ, ಕವಿಯ ಪ್ರಶ್ನೆಗೆ, "ನಾವು ಕಟ್ಟುವ ಸಮಾಜವಾದಿ ಸ್ವರ್ಗ" ಎಂದು ಉತ್ತರಿಸುವ ಧೈರ್ಯ ನನಗಂತೂ ಇಲ್ಲ.


ಒಕ್ಕುಂದ, ತಮ್ಮ ಲೇಖನದಲ್ಲಿ ಅಡಿಗರ ಪ್ರಾರಂಭಿಕ ರಚನೆಗಳಲ್ಲಿ ಕಾಣುವ ಪ್ರಗತಿಶೀಲ ಮನೋಧರ್ಮದ ಬಗ್ಗೆ ಬರೆಯುತ್ತ "ಇರುವೆಲ್ಲ ಏನು ಎಲ್ಲ ಜನಕೆ ತೆರವಾಗಿಸುವ" ಸಮಾಜವಾದೀ ಆಶಯದ ಸಾಲನ್ನು ಉದ್ಧರಿಸುತ್ತಾರೆ. ಇದು ಅಡಿಗರ 'ಕಟ್ಟುವೆವು ನಾವು' ಎಂಬ ಖ್ಯಾತ ಕವಿತೆಯ ಸಾಲುಗಳು. ಬಹುಶಃ ಈ ಕವಿತೆಯಷ್ಟು ಅಪಾರ್ಥಕ್ಕೆ ಒಳಗಾಗಿರುವ ಇನ್ನೊಂದು ಕವಿತೆ ಕನ್ನಡದಲ್ಲಿ ಇಲ್ಲ. ನಮ್ಮ ತಥಾಕಥಿತ ಪ್ರಗತಿಶೀಲರು ಕಾವ್ಯದ ಸೂಕ್ಷ್ಮಧ್ವನಿಗಳನ್ನು ಕೇಳಿಸಿಕೊಳ್ಳಲಾರದ ಕೆಪ್ಪರು ಎಂಬುದನ್ನು ಅವರು ಮತ್ತೆಮತ್ತೆ ಈ ಕವಿತೆಯ ಸಾಲುಗಳನ್ನು ಉದ್ಧರಿಸುವುದೇ ಸಾಬೀತುಪಡಿಸುತ್ತದೆ. ಆ ಕವಿತೆಯಲ್ಲಿ ಮಾತಿನ ಧ್ವನ್ಯರ್ಥ, ಅದರ ವಾಚ್ಯಾರ್ಥಕ್ಕಿಂತ ಸಂಪೂರ್ಣವಾಗಿ ವಿರುದ್ಧವಾಗಿದ್ದು ಒಕ್ಕುಂದ ಕೂಡ ಇದನ್ನು ಗಮನಿಸಿಲ್ಲ. ಆ ಕವಿತೆಯ ಅರ್ಥ ಅನರ್ಥಗಳೆರಡೂ, ಅಡಿಗರ ವ್ಯಂಗ್ಯ, ವಕ್ರೋಕ್ತಿ, ಶ್ಲೇಷೆಗಳಿಂದಲೇ ಸಾಧಿತವಾಗಿರುವಂತಹದ್ದು. ಉದಾ: ಈ ಸಾಲುಗಳನ್ನು ನೋಡಿ:

"ಕೋಟೆ ಗೋಡೆಗೆ ನಮ್ಮ ಹೆಣಗಳೇ ಮೆಟ್ಟಲು
ನಮ್ಮ ಸಾವೆ ನೋವೆ ಹೊಸನಾಡ ತೊಟ್ಟಲು"

ಈ ಸಾಲುಗಳ "ನಾವು" ನೀವೂ ಆಗಬಹುದು. ಕಟ್ಟುವೆವು ನಾವು ಎಂದು ಕವಿತೆಯಲ್ಲಿ ಶುರುವಾಗುವ ಕವಿಯ ಶಪಥಗಳ ಸರಣಿ ಕೊನೆಗೊಳ್ಳುವುದು ಹೀಗೆ:

"ನಿಮ್ಮೆಲ್ಲರನ್ನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು"

ಒಕ್ಕುಂದ ಅವರನ್ನೂ ಒಳಗೊಂಡು ಎರಡು ತಲೆಮಾರಿನ 'ಪ್ರಗತಿಶೀಲ'ರನ್ನು ಯಾಮಾರಿಸಿರುವ ಈ ಕವಿತೆ, ಪ್ರಗತಿಶೀಲರಲ್ಲದವರಿಗೆ ಸ್ಟಾಲಿನ್‌ನ ರಷ್ಯಾ ಮಾವೋನ ಚೀನಾ, ಪೋಲ್‌ಪಾಟ್‌ನ ಕೆಂಬೊಡಿಯಗಳನ್ನು ನೆನಪಿಸುತ್ತದೆ.



• ಜಿ. ರಾಜಶೇಖರ


ನಿಲುವುಗಳನ್ನು ನಾವು ಖಂಡಿತ ನಿಷ್ಠುರ ಪ...
...ಒಳಪಡಬೇಕಾದ ಅಗತ್ಯವಿದೆಯಲ್ಲ...

'ಕಟ್ಟುವೆವು ನಾವು' ಒಂದು ಅಸಲಿ ಪ್ರಗತಿಶೀಲ ಕವಿತೆ ಎಂದೇ ಇಟ್ಟುಕೊಂ... ತನ್ನ ಹಿಂಸೆಯ ಸಂಕಲ್ಪ ಮತ್ತು ಹಿಂಸಾರತಿಗಳಲ್ಲಿ ಅದು 'ಮತ್ತೆ ಮೊಳಗಲಿ... ಹೇಗೆ ಭಿನ್ನ? ಅಡಿಗರ ರಾಜಕೀಯ ನಿಲುವುಗಳನ್ನು ನಾವು ಖಂಡಿತ ... ಪರೀಕ್ಷೆಗೆ ಒಳಪಡಿಸಬೇಕು. ಆದರೆ ಪ್ರಗತಿಶೀಲರೂ ಅಂತಹ ಪರೀಕ್ಷೆಗೆ ಒ... ಬೇಕಾದ ಅಗತ್ಯವಿದೆಯಲ್ಲವೆ?


ಒಕ್ಕುಂದ ತಮ್ಮ ಲೇಖನದಲ್ಲಿ ಅಡಿಗರ ಕಾವ್ಯದ ವಿವಿಧ ಕಾಲ ಘ... ಮತ್ತು ದೇಶದ ರಾಜಕೀಯ ಬೆಳವಣಿಗೆಗಳ ನಡುವೆ X+Y=Z ಎಂ... ಸರಳವೂ ಯಾಂತ್ರಿಕವೂ ಆದ ಸಮೀಕರಣವನ್ನು ಮಾಡುತ್ತಾರೆ. ಇದರ... ಕೆಲಸ ಮಾಡಿರುವುದು ಆರ್ಥಿಕ ತಳಹದಿ, ಸಂಸ್ಕೃತಿಯ ಮೇಲು ಅಂತಸ್ತು... ಸಂಸ್ಕೃತಿ ಕುರಿತ ಸರಳೀಕೃತ ಮಾರ್ಕ್ಸ್‌ವಾದಿ ಕಲ್ಪನೆ. ಆದರೆ ಈ ತಳಹದಿ, ಮ... ಅಂತಸ್ತುಗಳ ಸಂಬಂಧ ಅಷ್ಟು ಸರಳವೂ ಅಲ್ಲ, ಸುರಳೀತವೂ ಅಲ್ಲ... ವಾಸ್ತವವನ್ನು ಮಾರ್ಕ್ಸ್‌ನ ನಂತರ ಹಲವು ಮಾರ್ಕ್ಸ್‌ವಾದಿ ಚಿಂತಕರು, ... ಗ್ರಾಮ್ಷಿ ಬೆಂಜಮಿನ್, ಅಡಾರ್ನೊ, ಎರಿಕ್ ಫ್ರೊಮ್, ರೇಮಂಡ್ ವಿಲಿಯ... ಎರಿಕ್ ಹಾಬ್ಸ್‌ಬಾಮ್, ಎಡ್ವರ್ಡ್ ಸೈದ್ ವಿಶದಪಡಿಸಿದ್ದಾರೆ. ಹಾಗಿದ್ದ... ಒರಟು ಮಾರ್ಕ್ಸ್‌ವಾದಿ ಸಮೀಕರಣ ಈಗಲೂ ನಮ್ಮ ವಿಮರ್ಶೆಯನ್ನು ಪ್ರಭಾ...ತ್ತಿದೆ. ಒಕ್ಕುಂದ ಕೂಡ ತಮ್ಮ ವಿಮರ್ಶೆಯಲ್ಲಿ ಈ ಪ್ರಭಾವಕ್ಕೆ ಒಳಗಾ... ಕಾಣುತ್ತದೆ. ಆದ್ದರಿಂದಲೇ ಅವರು 1959 ರ ನಂತರದ ಅಡಿಗರ ಕಾ... ಮತೀಯವಾದ, ಜಾಗತೀಕರಣಗಳಂತಹ ರಾಜಕೀಯ ವಿದ್ಯಮಾನಗಳಿಗೂ... ಸಂಬಂಧ ಕಲ್ಪಿಸುತ್ತಾರೆ. ಆದರೆ ಹಿಂಸೆ, ಬಲಿಷ್ಠ ಪ್ರಭುತ್ವದ ಪ್ರತಿಪಾದನೆ, ಅ... ಅಣ್ವಸ್ತ್ರ ತಯಾರಿಕೆ, ಜಾಗತೀಕರಣ- ಇಂತಹ ಆಧುನಿಕ ಬೆಳವಣಿಗೆಗಳ ...

# ಅಜಿಟ್‌ಪ್ರಾಪ್ ವಿಮರ್ಶೆಯ ಕಟಕಟೆಯಲ್ಲಿ ಅಡಿಗರ ಕವಿತೆ

ಈಗ ಎಡ-ಬಲಗಳ ನ... ಹೇಳಿಕೊಳ್ಳುವ ಯಾವ ವ್ಯತ್ಯಾಸವ... ಎಂಬ ಸತ್ಯವನ್ನು ಒಕ್ಕುಂದ ಮ...ತ್ತಾರೆ. ಹಾಗಾಗಿ ಅಡಿಗರ ಒಂದು... ಯನ್ನು ನೆಪವಾಗಿಟ್ಟುಕೊಂಡು ... ಒಟ್ಟು ಕಾವ್ಯದ ಬಗ್ಗೆ, ಒಕ... ಮಾಡುವ ವಿಮರ್ಶೆ, ಸೋವಿ... ಕಮ್ಯುನಿಸ್ಟ್ ಪಕ್ಷದ ಪ್ರಚಾರ-ಪ್ರ... (ಅಜಿಟೇಷನ್- ಪ್ರಾಪಗಾಂಡಾ. ...ವಾಗಿ ಅಜಿಟ್‌ಪ್ರಾಪ್)ಯ ಅ... ವನ್ನು ನೆನಪಿಸುತ್ತದೆ. ರಾಜಕಾರ... ನಾವು ನಿರೀಕ್ಷಿಸುವ ಉತ್ತರದ... ವನ್ನು ಲೇಖಕರಿಂದಲೂ ನಿರ...ವುದು ಸಹ ಈ ಅಜೆಂಡಾದ... ವಾಗಿದೆ. ಸಾಹಿತ್ಯ ಕೃತಿಗಳ ಸೆನ್ಸಾ... ಮತ್ತು ಮುಟ್ಟುಗೋಲು ಸಹಜವಾಗಿ ಈ ಅಜೆಂಡಾದ ಮ... ಕಾರ್ಯಕ್ರಮಗಳಾಗಿರುತ್ತವೆ. ಈ ಮಾತಿಗೆ ನಿದರ್ಶನ... ಎಂಬಂತೆ ಒಕ್ಕುಂದ ತಮ್ಮ ಲೇಖನದಲ್ಲಿ 'ಮತ್ತೆ ಮೊ... ಮುಟ್ಟುಗೋಲು ಹಾಕಲು ಅರ್ಹವಾದ ಕವಿತೆ ಎಂದು...ದ್ದಾರೆ; ಅಂದರೆ ಪ್ರಭುತ್ವ ಅದನ್ನು ಮುಟ್ಟುಗೋಲು ಹಾ... ಎಂದಲ್ಲವೆ ಅವರು ಹೇಳುತ್ತಿರುವುದು? ಆ ಅಧಿಕಾರ ಇರು... ಪ್ರಭುತ್ವಕ್ಕೆ ಮಾತ್ರ ಎಂಬ ಸಂಗತಿ ಒಕ್ಕುಂದ ಅವರಿಗೆ ಗೊತ್ತ... ಎಷ್ಟು ಸಲೀಸಾಗಿ ಪ್ರಗತಿಶೀಲರು ಪ್ರತಿರೋಧದಿಂದ ಪ್ರ... ಭಾಷೆಗೆ ಹೊರಳಿಕೊಂಡು ಬಿಡುತ್ತಾರೆ!



ಅಡಿಗರ ವಿರುದ್ಧ ಒಕ್ಕುಂದ ಹಾಕಿರುವ ವಿಮರ್ಶಾ...ದಾವೆಯಲ್ಲಿ, ತನ್ನ ಪರ ಸಾಕ್ಷಿಯಾಗಿ ಅವರು ದಿ. ಲಂಕೇಶರ ಮಾತುಗಳನ್ನು ಬಳಸಿಕೊಂಡಿದ್ದಾರೆ. ಆದರೆ ಲಂಕೇಶ್ 1979 ರಲ್ಲಿ ಸಂಪಾದಿಸಿದ್ದ ಐತಿ... ಮಹತ್ವದ ಕಾವ್ಯ ಸಂಕಲನ 'ಅಕ್ಷರ-ಹೊಸಕಾವ್ಯ' (ಅಕ್ಷರ ಪ್ರಕಾಶನ-ಸಾಗ... ಅವರು ವಿ.ಕೆ. ಗೋಕಾಕರಂತಹವರನ್ನು ಸಹ ಕೈಬಿಟ್ಟು ಅಡಿಗರ 10 ಕವಿತೆ... ಆಯ್ದುಕೊಂಡಿದ್ದರು. 1993 ರಲ್ಲಿ ಈ ಸಂಕಲನದ ಪರಿಷ್ಕೃತ ಆವೃತ್ತಿ... ಲಂಕೇಶ್ ತಾವೇ ಪ್ರಕಟಿಸಿದರು. ಸಂಕಲನದ ಮೊದಲ ಆವೃತ್ತಿಯಲ್ಲಿದ್ದ ಅ... 'ಗೊಂದಲಪುರ'ದ ಆಯ್ದ ಸಾಲುಗಳ ಬದಲು 'ಹಿಮಗಿರಿಯ ಕಂದರ... ಇಡಿಯಾಗಿ ಪ್ರಕಟಿಸಿದ್ದನ್ನು ಹೊರತುಪಡಿಸಿದರೆ, ಲಂಕೇಶ್‌ರ ಆಯ್ಕೆಯಲ್ಲಿ ಅ... ಏನೂ ವ್ಯತ್ಯಾಸವಾಗಲಿಲ್ಲ. ಅಡಿಗರು 1992 ರಲ್ಲಿ ತೀರಿಕೊಂಡರು. ಪ... ಆವೃತ್ತಿಯಲ್ಲಿ ಆ ಬಗ್ಗೆ ಬರೆಯುತ್ತ "........ ನಮ್ಮನ್ನೆಲ್ಲ ಬೆಚ್ಚಿಬೀಳಿಸಿದ ಗೋಪಾ... ಅಡಿಗ, ಎ.ಕೆ. ರಾಮಾನುಜನ್, ಶ್ರೀಕೃಷ್ಣ ಆಲನಹಳ್ಳಿ ಮುಂತಾ... ತೀರಿಕೊಂಡಿದ್ದಾರೆ" ಎಂದು ಲಂಕೇಶ್ ಹೇಳುತ್ತಾರೆ. ಅಡಿಗರ ರಾಜ... ಧೋರಣೆಗಳ ಕುರಿತು ತೀವ್ರವಾದ ಭಿನ್ನಾಭಿಪ್ರಾಯವಿದ್ದರೂ, ಆಧುನಿಕ... ಕಾವ್ಯದಲ್ಲಿ ಅಡಿಗರ ಮಹತ್ವದ ಕುರಿತು ಲಂಕೇಶ್‌ಗೆ ಯಾವತ್ತೂ ಸಂದೇಹವಿ... 'ಅಕ್ಷರ-ಹೊಸ ಕಾವ್ಯ'ದ ಕವಿತೆಗಳ ಆಯ್ಕೆ ಹಾಗೂ ಅದರ ಮುನ್ನುಡಿ, ... ಬಗೆಗಿನ ಲಂಕೇಶರ ಅಭಿರುಚಿ ಮತ್ತು ಅಪೇಕ್ಷೆಗಳನ್ನು ಪ್ರತಿಫಲಿಸುತ್ತದೆ. ... ಅದೆಷ್ಟೋ ಸೋಕಾಲ್ಡ್ ಕವಿಗಳ ಸೋಗಲಾಡಿ ರಚನೆಗಳತ್ತ ಕಣ್ಣೆತ್ತಿಯೂ ನೋ... ಲಂಕೇಶ್, ಅಡಿಗರಿಗೆ ಕೊಟ್ಟ ಆದ್ಯತೆ ಒಕ್ಕುಂದ ಅವರಿಗೆ ಏನನ್ನೂ ಸೂ...ದಿಲ್ಲವೆ? 'ಅಕ್ಷರ ಹೊಸ ಕಾವ್ಯ'ದಲ್ಲಿ ಇನ್ನೊಂದು ವಿಶಿಷ್ಟ ಆಯ್ಕೆಯ ಬ... ಇಲ್ಲಿ ಹೇಳುವುದು ಸಾಂದರ್ಭಿಕವಾಗಿದೆ. ಕನ್ನಡದ ಪ್ರಗತಿಶೀಲ, ಬಂ... (ಅಥವಾ ಅವರು ಸದಾ ಕರೆಯುತ್ತಿದ್ದಂತೆ ಡಂಬಾಯ) ಇತ್ಯಾದಿ ಚಳುವಳಿಗ... ಲಂಕೇಶರಿಗೆ ಗೌರವವಿರಲಿಲ್ಲ. ತನ್ನ ಸಂಕಲನದಲ್ಲಿ ಲಂಕೇಶ್ ಒಂದು ಮಾ... ಎಡಪಂಥೀಯ ವಿಮರ್ಶಕರನ್ನು ಲೇವಡಿ ಮಾಡುವ ಎಚ್.ಎಸ್. ಬಿಳಿಗಿರಿ... 'ಕಾಮ್ರೇಡ್ ವಿಮರ್ಶಕ' ವನ್ನು ಸೇರಿಸಿಕೊಂಡಿದ್ದರು. ಇದನ್ನೆಲ್ಲ ಕಡೆಗಣಿಸಿ, ... ಯಾವುದೋ ಸಂದರ್ಭದಲ್ಲಿ ಆಡಿದ ಮಾತನ್ನೇ ಗಟ್ಟಿಯಾಗಿ ಹಿಡಿದು... ಅದೇ ಅವರ ಏಕೈಕ ನಿಲುವು ಎಂದು ವಾದಿಸುವುದರಿಂದ ಅಡಿಗ, ಲ... ಇಬ್ಬರಿಗೂ ಅನ್ಯಾಯವಾಗುತ್ತದೆ.




# ಕೊನೆಗೂ ಉದ್ಘಾಟನೆಗೊಂಡ ಲಂಕೇಶ್ ಬಯಲು ರಂಗಮಂದಿರ

**ಲಂಕೇಶ್ ಹೆಸರಿನ ರಂಗಮಂದಿರ ನನ್ನದಲ್ಲ. ಸುತ್ತಲ ಊರಿಗೆ ಸೇರಿದ್ದು. ಪಂಚಾಯ್ತಿಗೆ ಸೇರಿದ್ದು. ಅದರೊಳಗೆ ನಾಟಕಗಳನ್ನಾಡಬಹುದು, ಕುಳಿತು ಕಾರ್ಡ್ಸ್ ಆಡಬಹುದು. ಸುಮ್ಮನೆ ಹರಟಬಹುದು. ಬೇಸರವಾದರೆ ಗುಂಡಾಕಬಹುದು. ಇವೆಲ್ಲ ಲಂಕೇಶ್‌ಗೆ ಪ್ರಿಯವಾದ ಹವ್ಯಾಸಗಳಾಗಿದ್ದವು.**

• ಬಿ. ಚಂದ್ರೇಗೌಡ

...ನನ್ನೂರು ಬಿದರಕೆರೆ. ಕಲಾವಿದರು ಮತ್ತು ಸಾಹಿತಿ... ಹೆಸರು ಮಾಡಿರುವ ಬಿಂಡಿಗನವಿಲೆಯ ಪಕ್ಕದಲ್ಲಿದೆ ...ು. ಮೂರ್ನಾಲ್ಕು ವರ್ಷಗಳ ಹಿಂದೆ ಬಿಂಡಿಗನವಿಲೆ... ಗಣಪತಿ ಹಬ್ಬದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ...ತ್ರ ನೋಡಲು ಹೋದ ನನ್ನೂರಿನ ಎಂಟು ಹುಡುಗರು ...ಆಕ್ಸಿಡೆಂಟ್ ಆದ ಪ್ರಯುಕ್ತ ಸ್ಥಳದಲ್ಲೇ ಸತ್ತು ...ರು. ಎಲ್ಲಾ ಒಂದೇ ವಯಸ್ಸಿನವರು. ನಾನು ಊರಿಗೆ ...ದರೆ ಕೂಡಲೇ ಬಂದು ನನ್ನನ್ನು ಮಾತನಾಡಿಸಿ ನಾನು ...ಕೆಲಸ ಮಾಡುತ್ತಿದ್ದ ಹುಡುಗರು. ಇಂತಹ ಹುಡುಗರ ...ಂದ ಊರೇ ಸ್ಮಶಾನದಂತಾಗಿ ಹೋಯ್ತು. ಈ ...ಗರ ಪೈಕಿ ಮೂವರಿಗೆ ಮದುವೆಯಾಗಿತ್ತು. ಆ ...ಮಕ್ಕಳಿಗೆ ಆಗಿನ್ನೂ ಇಪ್ಪತ್ತು ವರ್ಷ ತುಂಬಿರಲಿಲ್ಲ. ಆ ...ವಿಧವೆಯರ ಗೋಳು ನೋಡಲಾಗುತ್ತಿರಲಿಲ್ಲ.

...ಈ ಸ್ಮಶಾನ ಸದೃಶವಾದ ಊರಿಗೆ ಏನಾದರೂ ಮಾಡಿ ...ಕಳೆ ತರಬೇಕು, ಇಲ್ಲೊಂದು ರಂಗಮಂದಿರವಾದರೆ ...ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳನ್ನು ಆಹ್ವಾನಿಸ ...ು, ಈಗಾಗಲೇ ಹತ್ತಿರದ ನಾಗತಿಹಳ್ಳಿಯಲ್ಲಿ ಗೆಳೆಯ ...ಶೇಖರ ರಂಗಮಂದಿರ ನಿರ್ಮಿಸಿರುವುದರಿಂದ ಅಲ್ಲಿಗೆ ...ನಾಟಕ ಮತ್ತು ಜಾನಪದ ಕಲಾ ತಂಡಗಳನ್ನು ನಮ್ಮ ...ಗೆ ಕರೆಸಬಹುದು.... ಇಂತಹ ಆಲೋಚನೆಗಳಿಗೆ ...ವ ನಾನು ನಮ್ಮ ಊರಿನಲ್ಲಿ ರಂಗಮಂದಿರ ನಿರ್ಮಿಸುವ ...ರ್ಜನೆ ಮಾಡಿ ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ...ಖೆಯ ಉಪನಿರ್ದೇಶಕರಾದ ಹರಿಕುಮಾರ್‌ರನ್ನು ...ಸಿದೆ.


...ಹರಿಕುಮಾರ್ ಅವರು "ಕನ್ನಡ ಸಂಸ್ಕೃತಿ ಇಲಾಖೆ ಹಣ ...ತ್ತದೆ. ಜೊತೆಗೆ ನೀವೂ ನಿಗದಿಯಾದ ಹಣವನ್ನು ...ಸಬೇಕು" ಎಂದರು. ಈ ಬಗ್ಗೆ ನಾನು ಅನುಮಾನಿಸಿ ..."ಒಂದು ಕೆಲಸ ಮಾಡಿ. ನಿಮ್ಮ ಲೋಕಸಭಾ ಸದಸ್ಯರ ...ನಿಧಾನದಲ್ಲಿ ಮಾಡಿಸಿಬಿಡಿ. ಆಗ ಸರ್ಕಾರದ ಮರ್ಜಿ ...ಪ್ರದಿಲ್ಲ" ಎಂಬ ಸಲಹೆ ಕೊಟ್ಟರು. ಅಷ್ಟರಲ್ಲಾಗಲೇ ...ಯುಗದ ಕರ್ಣ ಅಂಬರೀಷ್ ಸಂಸತ್ ನಿಧಿಯ ...ನ್ನು ಕೇಳಿದವರಿಗೆಲ್ಲಾ ಕೊಡುತ್ತಾರೆಂಬ ಸುದ್ದಿ ಹಬ್ಬಿತ್ತು. ...ಅಂಬರೀಷ್ ಹತ್ತಿರ ಹೋಗಲು ತೀರ್ಮಾನಿಸಿದೆ. ...ಂತ ಮೊದಲು ಶಿವಮೊಗ್ಗದ ಕೋಟೆ ಬೀದಿಯಲ್ಲಿರುವ ...ಮಂದಿರದ ಫೋಟೋ ತೆಗೆಸಿಕೊಂಡೆ. ನೋಡಲು ...ಕವಾಗಿರುವ ಆ ರಂಗಮಂದಿರ ಉರಿಮಂಜಿನ ಬಣ್ಣ ...ದ್ದು ಕಾಣುವಂತಿತ್ತು. ರಂಗಮಂದಿರದ ಫೋಟೋ ...ಗೆ ಗೆಳೆಯ ವೈದ್ಯನನ್ನು ಕೇಳಿ ರಂಗಮಂದಿರದ ಪ್ಲಾನ್ ...ಕಿಸಿಕೊಂಡು ಅಂಬರೀಷ್ ನೋಡಲು ಆಪ್ತಮಿತ್ರ ...ನ್ ಜೊತೆ ಅಂಬರೀಷ್ ಮನೆಗೆ ಹೋದೆ. ಆದರೆ ...ರೀಷ್ 'ತಂದೆಗೆ ತಕ್ಕ ಮಗ' ಎಂಬ ಚಿತ್ರದ ಶೂಟಿಂಗ್‌ಗೆ ...ದರೆಂದು ತಿಳಿಯಿತು. ಶೂಟಿಂಗ್ ಅದ್ಯಾವುದೋ ದೇವ... ಆವರಣದಲ್ಲಿ ನಡೆಯುತ್ತಿತ್ತು. ಅಲ್ಲಿಗೆ ಹೋದಾಗ ...ರೀಷ್ ಮೇಕಪ್ ಮಾಡಿಸಿಕೊಳ್ಳುತ್ತ ಕುಳಿತಿದ್ದರು. ಕೃತಕ ...ವಿಗ್‌ನೊಂದಿಗೆ ಪಾಳೇಗಾರನಂತೆ ಎದ್ದು ಬಂದ ಅಂಬಿ ...ಗೆ ನಾನು ಫೈಲ್ ಹಿಡಿದು "ನೋಡಣ್ಣ ನಮ್ಮೂರಲ್ಲಿ ...ದ್ದೊಂದು ರಂಗಮಂದಿರ ಕಟ್ಟನಾ ಅಂತ. ಪ್ಲಾನೆಲ್ಲಾ ...ದೆ. ಇದೇ ತರ ಕಟ್ಟುಸ್ತಿನಿ. ನೀವು ದುಡ್ಡು ಕೊಡಬೇಕು" ... ಫೈಲ್‌ನೊಳಗಿದ್ದ ರಂಗಮಂದಿರ ನೋಡಿದ ಅಂಬಿ ...ಪಿ.ಎ. ಕರೆದು "ಲೈ, ಇದ ಸ್ಯಾಂಕ್ಷನ್ ಮಾಡು ಅಂತ ...ಹೇಳೊ" ಎಂದು ಕ್ಯಾಮರದ ಎದುರು ಹೋದರು. ...ಕ್ಷಣ ದಂಗುಬಡಿದು ಹಾಗೇ ನಿಂತಿದ್ದು ...ಪ್ರಸಂಗವನ್ನು ತಿರುತಿರುಗಿ ಯೋಚಿಸುತ್ತ ...ನ್ ಜೊತೆ ಹೊರಟೆ.


...ಒಂದೆರಡು ದಿನಗಳ ನಂತರ ಅಂಬಿಗೆ ಗೌರಿ ...ವ ಫೋನ್ ಮಾಡಿಸಿದೆ. ಅಂಬಿ ನಾಗ ...ಮಂಗಲದ ಜನರ ಬಗ್ಗೆ ಅನುಮಾನ ವ್ಯಕ್ತಪಡಿಸಿ ... ಏಕೆಂದರೆ ನಾಗಮಂಗಲದ ಕೆಲವು ...ಮರು ಅಂಬರೀಷ್ ಎಂ.ಪಿ. ಫಂಡಿನಿಂದ ...ಪಡೆದು ಸಂಬಂಧಪಟ್ಟ ಕಟ್ಟಡಗಳನ್ನು ...ರ್ಣಗೊಳಿಸದೆ ಹಾಳುಬೀಳಿಸಿದ್ದಾರೆ. ಈ ...ಬೇಸರಗೊಂಡಿರುವ ಅಂಬಿ ಅನುಮಾನ ...ಪಡಿಸಿದ್ದು ಸಹಜವಾಗಿತ್ತು. ಅದಕ್ಕೆ ಗೌರಿ ...ಚಂದ್ರೇಗೌಡರು ಹಾಗಲ್ಲ. ಅವರ ಬಗ್ಗೆ ...ಮಾನಪಡುವ ಅಗತ್ಯವಿಲ್ಲ" ಎಂದು ಸಮ...ಸಿ ನೀಡಿದಾಗ "ಅವ್ರುನು ಅರ್ಜಿ ಕೊಟ್ಟು ...ಸು ದಿನ ಆಗ್ಲದೆ. ಆಗ್ಲೆ ಕೊಟ್ಟುಬುಡಬೇಕಂತಾ? ಹೋಗ್ಲಿ ...ಸ್ಸಿ ಅಂತ ಹೇಳಿ" ಎಂದರು.

...ನಂತರ ಅಂಬರೀಷ್ ಅವರ ಪಿ.ಎ. ವಾಸುಕಿಯವರನ್ನು ... ಮಾಡಿಸಿದ ಭಗವಾನ್ ಆದಷ್ಟು ಬೇಗ ಹಣ ...ಮಂಜೂರಾಗುವಂತೆ ನೋಡಿಕೊಂಡ. ಈ ಬಯಲು ...ರಂಗಮಂದಿರದ ಕಂಟ್ರಾಕ್ಟನ್ನು ದಲಿತರ ಹುಡುಗ ಮಂಜಯ್ಯ... ಕೊಟ್ಟು ಆತನಿಗೆ ಶಿವಮೊಗ್ಗ ಕೋಟೆ ರಂಗಮಂದಿರವನ್ನು ...ಸಿ, ಇದೇ ರೀತಿ ಕಟ್ಟಬೇಕೆಂದು ಹೇಳಿದೆ. ಈಗಾಗಲೇ ...ಕಾಮಗಾರಿಯಿಂದ ಕಾಸು ಮಾಡಿಕೊಂಡ ಜನರಿಗೆ ...ಕೊಂಡು ಉರಿಬಂದುಬಿಟ್ಟಿತು. ಉರಿ ಎಂದರೆ ಹೊಟ್ಟೆ... ಸಾಕಿ ಹಳ್ಳಿಗಳು ಇದ್ದು ಈ ರೂಪದಲ್ಲಿ ನರಳು... ಮಾಡಿದರೆ ಅಲ್ಲಿನ ಹೊಟ್ಟೆಕಿಚ್ಚನ್ನು ಶಮನ ಮಾಡಲು ...ರಿಂದಲೂ ಸಾಧ್ಯವಿಲ್ಲ. ಅದಕ್ಕೆ ರಾಜಕಾರಣಿಗಳು ಹಳ್ಳಿಗಳ ...ಗೆ ಹೋಗುವುದಿಲ್ಲ.

ಏನಾದರಾಗಲಿ ಎಂದು ಸೂಕ್ತವಾದ ಒಂದು ದಿನ ಗುದ್ದಲಿ ಪೂಜೆ ಕಾರ್ಯಕ್ರಮ ಇಟ್ಟುಕೊಂಡು, ಅಂದಿನ ಸಾರಿಗೆ ಸಚಿವ ಚಲುವರಾಯಸ್ವಾಮಿಯನ್ನು ಕರೆದೆ. ಬರುತ್ತೇನೆಂದು ಒಪ್ಪಿಕೊಂಡರು. ಅದರಂತೆ ನಾಗಮಂಗಲಕ್ಕೂ ಬಂದರು. ಆದರೆ ರಂಗಮಂದಿರ ಕಂಟ್ರಾಕ್ಟ್ ಸಿಗದವರು ಚಲುವರಾಯಸ್ವಾಮಿಯನ್ನು ಭೇಟಿ ಮಾಡಿ "ನಮ್ಮೂರು ಸರಿಯಿಲ್ಲ ಸಾರ್. ಗಲಾಟೆಯಾಗಬಹುದು. ಅದು ಹಳೆ ಸ್ಕೂಲಿದ್ದ ಜಾಗ. ಅದರ ತಕರಾರಿದೆ" ಎಂದು ಚಾಡಿ ಹೇಳಿದರು. ಚಲುವರಾಯಸ್ವಾಮಿ ಬರಲಿಲ್ಲ.

ಮತ್ತೊಂದು ದಿನ ಶಿಲಾನ್ಯಾಸ ಕಾರ್ಯಕ್ರಮ


ರಂಗಮಂದಿರದ ಶಿಲಾನ್ಯಾಸ ಗೌರಿಯಿಂದ


ರಂಗಮಂದಿರದ ಉದ್ಘಾಟನೆಯಲ್ಲಿ ಶ್ರೀನಿವಾಸ್, ಗೌರಿ, ಶಾಸಕ ಸುರೇಶ್ ಗೌಡ, ಸಿದ್ದರಾಮಯ್ಯ ಮತ್ತು ಎಚ್.ಟಿ.ಕೃಷ್ಣಪ್ಪ

ಇಟ್ಟುಕೊಂಡ ನಾನು, ಊರಿನ ಅತ್ಯಂತ ಹಿರಿಯರಾದ ಎಂಟು ಜನರನ್ನು ಆಯ್ಕೆಮಾಡಿ ಜೊತೆಗೆ ಗೌರಿಯನ್ನೂ ಕರೆದು ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಿದೆ. ಕಂಟ್ರಾಕ್ಟರ್ ಹೊಸ ಹುಡುಗ. ಅವನಿಗಾಗಲೇ ಯಾಕಾದರೂ ಇದನ್ನು ಒಪ್ಪಿಕೊಂಡೆನೊ ಎನ್ನುವಷ್ಟಾಗಿತ್ತು.

ಇಂಜಿನಿಯರೊಬ್ಬ ಜಾಗದ ವಿಷಯದಲ್ಲಿ ತಕರಾರು ತೆಗೆದಿದ್ದ. ಆಗ ಡಾ. ರವಿಶಂಕರ್ ಅವರು ಮಂಡ್ಯ ಡಿ.ಸಿ.ಯಾಗಿದ್ದರಿಂದ ಅವರಿಗೊಂದು ಮಾತು ಹೇಳಿದ ಕೂಡಲೇ ಜಾಗದ ಸಮಸ್ಯೆ ಇಲ್ಲದಂತೆ ಮಂಜೂರು ಮಾಡಿದರು. ಇನ್ನೊಬ್ಬ ಇಂಜಿನಿಯರ್ ಮೊದಲ ಬಿಲ್ಲಿಗೆ ಪಾಲು ಕೇಳಿದ. ಗೌರಿಯಿಂದ ಆತನಿಗೆ ಫೋನ್ ಮಾಡಿಸಿ ಲಂಕೇಶ್ ಹೆಸರಿನ ರಂಗಮಂದಿರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಬೇಕೆಂದು ಸುಮ್ಮನಿರಿಸಿದ್ದಾಯ್ತು. ಆದರೂ ಕಮಿಷನ್ ಕಟಾವಾಗುತ್ತಿದ್ದವು.

"ನೀವು ಶಿವಮೊಗ್ಗದಿಂದ ತಂದುಕೊಟ್ಟಿದ್ದ ರಂಗಮಂದಿರದ ಪ್ಲಾನು ಹಳೆಯ ಪ್ಲಾನು. ಅದು ಕೇವಲ ಮೂರುಕಾಲು ಲಕ್ಷದಲ್ಲಿ ಮುಗಿದಿರುವ ರಂಗಮಂದಿರದ ಪ್ಲಾನು. ಆದರೆ ಇವತ್ತಿನ ರೇಟುಗಳೆಲ್ಲಾ ಜಾಸ್ತಿಯಾಗಿದೆ. ಜೊತೆಗೆ ನೀವು ಕೊಟ್ಟ ಪ್ಲಾನಿನಲ್ಲಿ ರಂಗಮಂದಿರದ ಕಿರೀಟದ ಭಾಗದ ಪ್ಲಾನಿಲ್ಲ. ಅದಕ್ಕೆ ಬೇರೆ ಹಣ ಒದಗಿಸಬೇಕು" ಎಂದು ಇಂಜಿನಿಯರ್ ಹೇಳಿದರು. ಅದಕ್ಕೆ ಎಷ್ಟಾಗುತ್ತೆ ಎಂದುದಕ್ಕೆ ಬರೋಬ್ಬರಿ ಐವತ್ತು ಸಾವಿರವಾಗುತ್ತೆ ಎಂದರು. ಸರಿ ಕಂಟ್ರಾಕ್ಟರ್ ಕರೆದುಕೊಂಡು ಹೋಗಿ ಚಲುವರಾಯಸ್ವಾಮಿಗೆ ವಿಷಯ ಹೇಳಲಾಗಿ ಚಲುವರಾಯಸ್ವಾಮಿ ಐವತ್ತು ಸಾವಿರ ಕೊಟ್ಟರು. ಹೀಗೆ ರಂಗಮಂದಿರದ ಮುಸುಡಿ ಸಮಸ್ಯೆ ಬಗೆಹರಿದರೂ ಕೂಡ, ಬಹಳದಿನ ಪೂರ್ಣಗೊಳ್ಳದೆ ಹಾಗೇ ನಿಂತಿತು.

ಆಗ ಮಂಡ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾಗಿ ಬಸವರಾಜ ಹೂಗಾರ್ ಕೆಲಸ ನಿರ್ವಹಿಸುತ್ತಿದ್ದರು. ಕವಿ ಹೃದಯದ ಹೂಗಾರ್ ಬಹಳ ಬೇಗ ಮಂಡ್ಯದಲ್ಲಿ ಪ್ರಸಿದ್ಧಿಗೆ ಬಂದಿದ್ದಲ್ಲದೆ, ಕಲಾವಿದರ ಮೆಚ್ಚಿನ ಅಧಿಕಾರಿಯಾಗಿದ್ದರು. ಅವರೊಮ್ಮೆ ನಮ್ಮೂರಿಗೆ ಹೋಗಿ ಅಪೂರ್ಣಗೊಂಡಿರುವ ರಂಗಮಂದಿರ ನೋಡಿ ಕೂಡಲೇ ಒಂದು ಲಕ್ಷ ಬಿಡುಗಡೆ ಮಾಡಿದರು. ಅಲ್ಲಿಗೆ ಲಂಕೇಶ್ ಹೆಸರಿನ ಬಯಲು ರಂಗಮಂದಿರ ಪೂರ್ಣಗೊಂಡು ಉದ್ಘಾಟನೆಗೆ ಕಾಯ ತೊಡಗಿತು.

ಇಷ್ಟರಲ್ಲಿ ನಾನು ಸುಸ್ತಾಗಿದ್ದೆ. ಏಕೆಂದರೆ, ರಂಗಮಂದಿರಕ್ಕಾಗಿ ಇಟ್ಟಿದ್ದ ಇಟ್ಟಿಗೆ ಕಾಣೆಯಾಗುತ್ತಿದ್ದವು. ಕಲಸಿದ ಸಿಮೆಂಟು ಜಲ್ಲಿ ಮಾಯವಾಗುತ್ತಿತ್ತು, ಈ ರಂಗಮಂದಿರ ಸಂಪೂರ್ಣ ನನ್ನ ಸೊತ್ತೆಂದು ಭಾವಿಸಿದ್ದ ಕೆಲವರು ಕೊಟ್ಟ ತೊಂದರೆಯಿಂದ ರೋಸಿ ಇದರ ಉದ್ಘಾಟನೆಯೇ ಬೇಡ ಹಾಗೇ ಇರಲಿ ಎಂದು ಸುಮ್ಮನಿದ್ದೆ.

ಆದರೆ ಮದುವೆ, ತಿಥಿ ಮಾಡುವವರು ಅದರೊಳಕ್ಕೆ ಸೌದೆ ತುಂಬಿ ಸೌದೆ ಡಿಪೋ ತರ ಕಾಣುವಂತೆ ಮಾಡತೊಡಗಿದರು. ರಂಗಮಂದಿರ ಬೋಳಾಗಿರುವುದರಿಂದ ಹಾಗಾಗುತ್ತಿದೆ ಎಂದು ಒಂದು ಬುದ್ಧನ ವಿಗ್ರಹ ತೆಗೆದುಕೊಂಡು ಹೋಗಿ ಸ್ಥಾಪಿಸಿದೆ. ಅದನ್ನು ನೋಡಿದ ಇಬ್ಬರು ಹೆಂಗಸರು "ಇವ್ರುನ ತಮಾಸಿ ಒಂದೊಂದಲ್ಲಾ" ಎಂದು ನಗಾಡಿದರು. ಗರಬಡಿದಂತಾದ ನಾನು ಅರೆ ನಾನು ತಮಾಸಿ ಮಾಡುತ್ತಿದ್ದೇನೆಯೆ ಎಂದು ಬುದ್ಧನನ್ನು ನೋಡಿದೆ. ಅವನ ಎಂದಿನ ನಗು ಸಮಾಧಾನವುಂಟು ಮಾಡಿತು.

ಕಳೆದ ವರ್ಷ ಇದೇ ಸಮಯಕ್ಕೆ ಸರಿಯಾಗಿ ನಾಗತಿಹಳ್ಳಿ ಚಂದ್ರಶೇಖರನ ಸಮೇತ ಸಿನಿಮಾದವರು ಮತ್ತು ಸರ್ಕಾರಿ ಜನಗಳನ್ನು ಸೇರಿಸಿ ಉದ್ಘಾಟನೆ ಇಟ್ಟುಕೊಂಡೆ. ಆದರೆ ರಂಗಮಂದಿರ ಕಂಡರಾಗದವರು ಅದೇ ದಿನ ಹರಿಜನರ ಹುಡುಗರನ್ನು ಎತ್ತಿಕಟ್ಟಿ ರಂಗಮಂದಿರದೊಳಗೆ ಆರ್ಕೆಸ್ಟ್ರಾ ಇಟ್ಟುಬಿಟ್ಟರು. ನಾನು ನನ್ನ ಕಾರ್ಯಕ್ರಮ ರದ್ದು ಮಾಡಿ ಹರಿಜನರ ಹುಡುಗರೊಟ್ಟಿಗೆ ಸೇರಿಕೊಂಡು ಅವರ ಕಾರ್ಯಕ್ರಮದ ಮುಂಚೂಣಿಯಲ್ಲಿ ಕಾಣಿಸಿಕೊಂಡೆ.

ಈ ಹಿಂದೆ ಎಂಟು ಹುಡುಗರನ್ನು ಕಳೆದುಕೊಂಡು ರಾಜ್ಯಮಟ್ಟದಲ್ಲಿ ಸುದ್ದಿ ಮಾಡಿದ್ದ ನನ್ನೂರು ಈ ಬಾರಿ ಶಾಸಕ ಸುರೇಶ್ ಗೌಡರ ಮೇಲೆ ಕಲ್ಲು ತೂರಿ ಅವರನ್ನು ಮಾರಣಾಂತಿಕವಾಗಿ ಗಾಯಗೊಳಿಸಿ ಸುದ್ದಿ ಮಾಡಿತು.

ಕಂಡುಗ ಹಾಲಿಗೆ ಒಂದು ತೊಟ್ಟು ವಿಷದಂತೆ ಒಂದೂರಿನಲ್ಲಿ ಒಂದೆರಡು ಜನ ಕಿಡಿಗೇಡಿಗಳಿದ್ದರೆ ಸಾಕು, ಊರಿಗೇ ಕೆಟ್ಟ ಹೆಸರು ಕಟ್ಟಿಟ್ಟದ್ದು. ಇಲ್ಲಿ ಯಾರದ್ದೋ ಮನೆಗೆ ಬರುವ ನಂಟರನ್ನು ನಮ್ಮ ಮನೆ ನಂಟರೆಂದು ಭಾವಿಸುತ್ತಾರೆ. ಹೊರಗಿನಿಂದ ಬಂದ ಅಳಿಯಂದಿರನ್ನು ನಮ್ಮವನೆಂದು ಗೌರವಿಸುತ್ತಾರೆ. ಉಣ್ಣಲು ಇಕ್ಕಿ ಅವಮಾನ ಮಾಡುವುದು ಇವರ ಜಾಯಮಾನದಲ್ಲೇ ಇಲ್ಲ. ಅಂತಲ್ಲಿ ಶಾಸಕ ಭಾಷಣ ಮುಗಿಸಿ, ಆರ್ಕೆಸ್ಟ್ರಾ ಚಾಲು ಮಾಡಿಸಿ, ಕಾರು ಹತ್ತುವ ಮುನ್ನ ಮೂರ್ನಾಲ್ಕು ಜನ ಕಿಡಿಗೇಡಿಗಳು ಕಲ್ಲು ಬೀರಿದರು. ಕಲ್ಲು ನೇರವಾಗಿ ಶಾಸಕನ ತಲೆಗೆ ಬಿದ್ದು ರಕ್ತ ಹರಿಯಲಾರಂಭಿಸಿತು. ಅದನ್ನು ಯಾರಿಗೂ ಹೇಳದೆ ಕಾರು ಹತ್ತಿ ಹೊರಟು ಹೋದ ಶಾಸಕ ನಿಜಕ್ಕೂ ನಮ್ಮ ಊರನ್ನು ಉಳಿಸಿಕೊಟ್ಟ ದೊಡ್ಡ ಮನುಷ್ಯ. ಆತನೇನಾದರು ರಕ್ತಸಿಕ್ತ ವೇಷದೊಂದಿಗೆ ಅಲ್ಲೇ ಇದ್ದರೆ ಊರಿಗೇ ಬೆಂಕಿಬೀಳುತ್ತಿತ್ತು. ಕಲ್ಲು ಹೊಡೆದವರ ಮನೆಗಳು ಭಸ್ಮವಾಗುತ್ತಿದ್ದವು. ಜೊತೆಗೆ ಅಕ್ಕಪಕ್ಕದ ಮನೆಗಳಲ್ಲದೆ ಊರೇ ಉರಿದು ಹೋಗುತ್ತಿತ್ತು. ಶಾಸಕ ಇಂತಹ ಅಸಾಹುತದಿಂದ ಊರನ್ನು ಕಾಪಾಡಿದ್ದ. ಕಲ್ಲು ಬೀರಿದವರು ಸಣ್ಣಪುಟ್ಟ ಕಂಟ್ರಾಕ್ಟನ್ನು ಶಾಸಕನಿಂದ ನಿರೀಕ್ಷಿಸಿ ನಿರಾಶೆಗೊಂಡವರು. ಆದರೆ ಅವರನ್ನು ಪೊಲೀಸರು ಎಷ್ಟು ಚೆನ್ನಾಗಿ ಚಚ್ಚಿದರೆಂದರೆ ಮುಂದೆ ಊರಲ್ಲಿ ಯಾವುದೇ ಕಾರ್ಯಕ್ರಮವಾದರೆ ಅವರ ಸುಳಿವೇ ಇರುವುದಿಲ್ಲ. ಮೊನ್ನೆಯೂ ಕೂಡ ಹಾಗೆಯೇ ಆಯಿತು.

ಶಾಸಕನ ಮೇಲಿನ ಹಲ್ಲೆಯಿಂದ ಊರಿನ ಮಾನ ಹರಾಜಾಗಿದೆ. ಆದ್ದರಿಂದ ಪುನಃ ಅವರನ್ನು ಕರೆಸಿ, ಸನ್ಮಾನ ಮಾಡಿ, ಕ್ಷಮಾಪಣೆ ಕೇಳಿದರೆ ಎಲ್ಲ ಸರಿಹೋಗುತ್ತದೆಂದು ಊರಿನ ಗೌರವಸ್ಥಪ್ರಜೆಗಳು ತೀರ್ಮಾನಿಸಿದರು. ಇದೇ ಲಂಕೇಶ್ ರಂಗಮಂದಿರದ ಉದ್ಘಾಟನೆಗೆ ಒಂದು ಕಾರಣವಾಯ್ತು. ರಂಗಮಂದಿರದ ಉದ್ಘಾಟನೆ ಸಮಸ್ಯೆ ನನ್ನ ಕೈಯಿಂದ ಊರವರ ಕೈಗೆ ಹಸ್ತಾಂತರವಾಯ್ತು. ಇದೊಂದು ಸಾಂಸ್ಕೃತಿಕ ಭವನವಾದ್ದರಿಂದ ಎಲ್ಲಾ ಪಾರ್ಟಿಯವರನ್ನು ಆಹ್ವಾನಿಸಿ ಕಳೆದ 14 ರಂದು ಕಾರ್ಯಕ್ರಮ ಇಟ್ಟುಕೊಂಡರು. ಕಾರ್ಯಕ್ರಮಕ್ಕೆ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ, ಅಂಬರೀಷ್, ಚಲುವರಾಯಸ್ವಾಮಿ ಮತ್ತು ಶಿವರಾಮೇಗೌಡರನ್ನು ಆಹ್ವಾನಿಸಲಾಯ್ತು. ಜೊತೆಗೆ ಹಿರಿಯ ಸಭ್ಯ ರಾಜಕಾರಣಿ ಎಚ್.ಟಿ. ಕೃಷ್ಣಪ್ಪನವರು, ಗೌರಿ ಲಂಕೇಶ್, ಇವರನ್ನೆಲ್ಲಾ ಬರಮಾಡಿಕೊಂಡರು. ಚಿಕ್ಕಮಗಳೂರು ಜಿಲ್ಲೆ ಗೌರಾಪುರದ ಮಹಿಳಾ ವೀರಗಾಸೆ ತಂಡ ಬಂದಿಳಿಯಿತು. ಚಲುವರಾಯಸ್ವಾಮಿ ಚೀನಾ ಪ್ರವಾಸದಲ್ಲಿದ್ದರಿಂದ ಬರಲಾಗಲಿಲ್ಲ. ಅಂಬಿಗೆ ನಾಗಮಂಗಲ ಕಂಡರೆ ಮುನಿಸು. ಇನ್ನು ಗೆಳೆಯ ಶಿವರಾಮೇಗೌಡ ಲಂಕೇಶ್ ತನ್ನ ಬಗ್ಗೆ ಬಹಳ ಬರೆದಿರುವುದರಿಂದ ಬರುವುದಿಲ್ಲ ಎಂದ. ಜೊತೆಗೆ ಶಾಸಕನಿಗೆ ಕಲ್ಲುಬೀರಿದ್ದವರು, ಅದನ್ನು ಪ್ರಚೋದಿಸಿದ್ದವರು, ಊರನ್ನೇ ಬಿಟ್ಟು ಹೋಗಿದ್ದರು.

ನಾನು ಚಿಕ್ಕವನಿದ್ದಾಗ ಊರ ಹಬ್ಬಕ್ಕೆ ಪಟಾಕಿ ತರಿಸಿದ್ದರು. ಅದರ ಸದ್ದಿಗೆ ಊರ ನಾಯಿಗಳು ಎತ್ತಲೋ ಪರಾರಿಯಾಗಿ ಮರುದಿನ ಬಂದವು. ಈ ಘಟನೆ ನೆನಪಿಗೆ ಬಂದು ನಗು ಬಂತು.

ಲಂಕೇಶ್ ಹೆಸರಿನ ರಂಗಮಂದಿರ ನನ್ನದಲ್ಲ. ಸುತ್ತಲ ಊರಿಗೆ ಸೇರಿದ್ದು. ಪಂಚಾಯ್ತಿಗೆ ಸೇರಿದ್ದು. ಅದರೊಳಗೆ ನಾಟಕಗಳನ್ನಾಡಬಹುದು ಕಾರ್ಡ್ಸ್ ಆಡಬಹುದು. ಸುಮ್ಮನೆ ಕುಳಿತು ಹರಟಬಹುದು. ಬೇಸರವಾದರೆ ಗುಂಡಾಕಬಹುದು. ಇವೆಲ್ಲ ಲಂಕೇಶ್‌ಗೆ ಪ್ರಿಯವಾದ ಹವ್ಯಾಸಗಳಾಗಿದ್ದವು.

# ಶಿಮ್ಲಾ ಪ್ರವಾಸ; ತಮ್ಮನಂತಿದ್ದ ಕಿ.ರಂ


ಶಿಮ್ಲಾದಲ್ಲಿ...

ಒಮ್ಮೆ ಕಾಲೇಜ್‌ನಿಂದ ರಿಪಬ್ಲಿಕ್‌ಡೇಗೆಂದು ವಿದ್ಯಾರ್ಥಿಗಳನ್ನು ದೆಹಲಿಗೆ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ಲಂಕೇಶರಿಗೆ ವಹಿಸಿದರು. ಆಗ ಲಂಕೇಶರು ನನಗೆ "ನೀನೂ ನಮ್ಮೊಂದಿಗೆ ಬಂದು ಬಿಡು. ಟ್ರಿಪ್ ಹೋಗಿ ಬರೋಣ" ಎಂದರು. ಸರಿ. ದೆಹಲಿ ನೋಡುವ ಮತ್ತು ಇವರೊಂದಿಗೆ ಬಹಳ ದಿನಗಳ ನಂತರ ಸುತ್ತಾಡುವ ಅವಕಾಶ... ನಾನೂ ಹೊರಟೆ. ನಮ್ಮ ಮಕ್ಕಳನ್ನು ಶಾಂತಾ ಜೊತೆ ಅವರ ಮನೆಯಲ್ಲಿ ಬಿಟ್ಟು ಇಬ್ಬರೂ ಹೊರಟೆವು.

ನನಗಾಗ 26 ವರ್ಷ ವಯಸ್ಸು. ಆ ಪ್ರವಾಸದಲ್ಲಿ ಲಂಕೇಶರ ವಿದ್ಯಾರ್ಥಿಗಳೊಂದಿಗೆ ನಾನೂ ಒಂದು ರೀತಿಯಲ್ಲಿ ವಿದ್ಯಾರ್ಥಿ ಜೀವನವನ್ನು ಎಂಜಾಯ್ ಮಾಡಿದೆ.


ದೆಹಲಿಗೆ ಹೋದಾಗ ನಾವಿಬ್ಬರು ಒಂದು ದಿನ ಬಿ.ವಿ.ಕಾರಂತ್ ಮತ್ತು ಅವರ ಪತ್ನಿ ಪ್ರೇಮಾ ಅವರ ಮನೆಯಲ್ಲಿ ಉಳಿದುಕೊಂಡೆವು. ಕಾರಂತರು ಬೇರೆ ಯಾವುದೋ ಊರಿಗೆ ಹೋಗಿದ್ದರಿಂದ ಪ್ರೇಮಾ ಮಾತ್ರ ಮನೆಯಲ್ಲಿ ಇದ್ದರು. ಬೆಳಗ್ಗೆ ಪ್ರೇಮಾ ಅವರು ಒಂದು ಬಟ್ಟಲಿನಲ್ಲಿ ಹೆಸರು ಕಾಳು ಉಸಳಿಯನ್ನು ಲಂಕೇಶರ ಮುಂದಿಟ್ಟು "ತಿನ್ನಿ" ಎಂದರು. "ಇದರ ಜೊತೆ ತಿನ್ನಲು ರೊಟ್ಟಿ, ಚಪಾತಿ ಇಲ್ಲವಾ?" ಎಂದು ಲಂಕೇಶರು ಕೇಳಿದರು. ಆಗ ಪ್ರೇಮಾ "ಇಲ್ಲ, ರೊಟ್ಟಿ, ಗಿಟ್ಟಿ ಇಲ್ಲ, ಹಾಗೇ ತಿನ್ನಬೇಕು" ಎಂದರು. ಆಗ ಲಂಕೇಶರ ಮುಖ ನೋಡಬೇಕಿತ್ತು!

ಅವತ್ತು ಸಂಜೆ ಲಂಕೇಶರು ಒಂದು ಪುಸ್ತಕದ ಅಂಗಡಿಗೆ ಹೋಗಿ ಪ್ರೇಮಾ ಅವರಿಗೆ ಇಷ್ಟವಾದ ಕೆಲವು ಪುಸ್ತಕಗಳನ್ನು ಗಿಫ್ಟ್ ಆಗಿ ಕೊಡಿಸಿದರು.

******

ಲಂಕೇಶರು ಮತ್ತು ನಾನು ಇಬ್ಬರೂ ವಿದ್ಯಾರ್ಥಿಗಳನ್ನು ದೆಹಲಿಯಲ್ಲಿ ಸುತ್ತಾಡಲು ಬಿಟ್ಟು ಶಿಮ್ಲಾಗೆ ಹೋದೆವು. ಫೆಬ್ರವರಿ ತಿಂಗಳಾಗಿದ್ದರೂ ಇನ್ನೂ ಚಳಿ ಇತ್ತು, ಅಲ್ಲಲ್ಲಿ ಹಿಮ ಬಿದ್ದಿತ್ತು. ಶಿಮ್ಲಾ ಮುಟ್ಟಿದ ಕೂಡಲೇ ಲಂಕೇಶರು "ಬ್ಯೂಟಿಫುಲ್ ವೆದರ್" ಅಂತ ಹೇಳಿ ಒಂದು ಪುಸ್ತಕ ತೆಗೆದುಕೊಂಡು ರೂಮ್‌ನಲ್ಲಿ ಬೆಚ್ಚಗೆ ಮಲಗಿದರು. ನನಗೋ ಆಚೆ ಸುತ್ತಾಡುವ ಆಸೆ. ಆದರೆ ವಿಧಿ ಇಲ್ಲದೆ ಹೊರಗೆ ನೋಡುತ್ತಾ ನಿಂತೆ. ಮಾರನೆ ದಿನ ನಾನು ಬಲವಂತ ಮಾಡಿದ್ದರಿಂದ ಹೊರಗೆ ಸುತ್ತಾಡಲು ಬಂದರು.

ದೆಹಲಿಯಲ್ಲಿ ಒಂದು ದಿನ ವಿದ್ಯಾರ್ಥಿಗಳ ಜೊತೆ ಇದ್ದಾಗ ಊಟದ ಸಮಯ ಆಯಿತು. ಅವರೆಲ್ಲ ಒಟ್ಟಿಗೆ ಊಟ ಮಾಡಿದರೆ ನನ್ನನ್ನು ಪ್ರತ್ಯೇಕವಾಗಿ ಊಟಕ್ಕೆ ಕರೆದುಕೊಂಡು ಹೋಗಬೇಕಾಗಿತ್ತು. ಆಗ ನಮ್ಮ ತಂಡದಲ್ಲಿದ್ದ ಒಬ್ಬರು "ಪರವಾಗಿಲ್ಲ, ಇವರೂ ಸ್ಟೂಡೆಂಟ್ಸ್ ಜೊತೆಗೆ ಊಟ ಮಾಡಲಿ" ಎಂದರು. ಆಗ ಎಲ್ಲರಂತೆ ನನಗೂ ಒಂದು ಕೂಪನ್ ಕೊಟ್ಟರು. ನಾನು ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದೆ. ಆದರೆ ಅದೇ ದೊಡ್ಡ ತಪ್ಪಾಯಿತು. ಯಾಕೆಂದರೆ ನಾವು ಬೆಂಗಳೂರಿಗೆ ವಾಪಸ್ ಬಂದಾಗ ಲಂಕೇಶರು ಕಾಲೇಜಿನ ಹಣದಲ್ಲಿ ತಮ್ಮ ಪತ್ನಿಯನ್ನೂ ಕರೆದುಕೊಂಡು ಹೋಗಿದ್ದರು ಎಂದು ಕೆಲವರು ಆರೋಪಿಸಿದರು. ಲಂಕೇಶರ ಜಾಯಮಾನಕ್ಕೆ ಸರಿಯಾಗಿ ಅದೂ ಒಂದು ದೊಡ್ಡ ಗಲಾಟೆಯಾಯಿತು...



• ಇಂದಿರಾ ಲಂಕೇಶ್

ನಾವು ದೆಹಲಿ ಪ್ರವಾಸದಲ್ಲಿದ್ದಾಗ ರಾತ್ರಿ ಆಯಿತೆಂದರೆ ನನಗೆ ನಮ್ಮ ಮಕ್ಕಳ ಯೋಚನೆ. ನಮ್ಮ ಮಗ ಇನ್ನೂ ಚಿಕ್ಕವನು. ಅವರೆಲ್ಲ ಹೇಗಿದ್ದಾರೋ ಎಂದು ಯೋಚಿಸಿ ಅಳುಬರುತ್ತಿತ್ತು. ಫೋನ್ ಮಾಡಿ ಮಕ್ಕಳು ಹೇಗಿದ್ದಾರೆಂದು ವಿಚಾರಿಸಲು ಆಗ ಈಗಿನಂತೆ ಎಲ್ಲೆಡೆ ಫೋನ್‌ಗಳು ಇರಲಿಲ್ಲ, ಪತ್ರ ಬರೆದರೆ ನಾವು ಬೆಂಗಳೂರಿಗೆ ಹಿಂದಿರುಗಿದ ಮೇಲೆ ಪತ್ರ ಮುಟ್ಟುವ ಸಂಭವವಿತ್ತು.

ಆದರೆ ನಾನು ಯೋಚಿಸುವ ಅಗತ್ಯವೇ ಇರಲಿಲ್ಲ, ಶಾಂತಾ ನಮ್ಮ ಮಕ್ಕಳನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ನನ್ನ ಮಕ್ಕಳು ಶಾಂತಾಳನ್ನು ಈಗಲೂ "ಆ ಅಮ್ಮ" ಅಂತ ಕರೆಯುತ್ತಾರೆ. ಅವರಿಗೆ ಶಾಂತಾ ಬಗ್ಗೆ ಅಷ್ಟು ಪ್ರೀತಿ.

**********

ಗಾಂಧಿ ಬಜಾರ್ ಮನೆಗೆ ಬಂದ ಮೇಲೆ ಲಂಕೇಶರ ಸ್ನೇಹಿತರ ಬಳಗ ಇನ್ನೂ ಬೆಳೆಯಿತು. ಅಡಿಗರು, ಅನಂತಮೂರ್ತಿಯವರು, ನಿಸಾರ್ ಅಹಮದ್ ಅವರು, ಜಿ.ಎಸ್. ಶಿವರುದ್ರಪ್ಪನವರು ಆಗಾಗ ನಮ್ಮ ಮನೆಗೆ ಬರುತ್ತಿದ್ದರು.


ಎಲ್ಲರೂ ನಮ್ಮ ಮನೆಯ ಹತ್ತಿರದಲ್ಲೇ ಇದ್ದ ಸರ್ಕಲ್ ಲಂಚ್‌ಹೋಮ್‌ನಲ್ಲಿ ಗಂಟೆಗಟ್ಟಲೆ ಮಾತಾಡುತ್ತ ಕೂತಿರುತ್ತಿದ್ದರು. ಆ ಹೋಟೆಲ್ ಮಾಲೀಕ ಸಾಹಿತ್ಯಪ್ರಿಯ. ಆದ್ದರಿಂದ ಇವರೆಲ್ಲ ಅಲ್ಲಿ ಗಂಟೆ ಗಟ್ಟಲೆ ಕುಳಿತರೂ ಅವರು ಅಭ್ಯಂತರ ಮಾಡುತ್ತಿರಲಿಲ್ಲ.

ಲಂಕೇಶರು ಎಂತಹವರೆಂದರೆ ರಾತ್ರಿ 11 ಗಂಟೆಗೂ ಸ್ನೇಹಿತರನ್ನು ಕರೆದುಕೊಂಡು ಬಂದು ನನ್ನನ್ನು ಎದ್ದೇಳಿಸಿ "ಕಾಫಿ ಮಾಡಿ ಕೊಡು" ಎನ್ನುತ್ತಿದ್ದರು. ಒಮ್ಮೆ ಅನಂತಮೂರ್ತಿಯವರು "ಅವರಿಗೇಕೆ ಇಷ್ಟು ಹೊತ್ತಿನಲ್ಲಿ ತೊಂದರೆ?" ಅಂದರು. ಆಗ ಲಂಕೇಶರು ಎಂದಿನಂತೆ "ಇಲ್ಲಾ ನನ್ನ ಹೆಂಡತಿ ಒಂದಿಷ್ಟೂ ಬೇಜಾರು ಮಾಡಿಕೊಳ್ಳುವುದಿಲ್ಲ, ಅಲ್ವೇನೇ?" ಎಂದು ನನ್ನನ್ನೇ ಕೇಳಿದರು. ಮನೆಗೆ ಬಂದವರ ಮುಂದೆ "ಹೌದು, ನನಗೆ ಬೇಜಾರು ಆಗುತ್ತೆ, ಕಾಫಿ ಮಾಡಿಕೊಡಲ್ಲ ಹೋಗಿ" ಎಂದು ಹೇಳಲು ನನಗೆ ಸಾಧ್ಯವಿರಲಿಲ್ಲ, ಕೆಲವೊಮ್ಮೆ ಮನೆಯಲ್ಲಿ ಹಾಲಿಲ್ಲ ಅಂದರೆ ಬ್ಲಾಕ್ ಕಾಫಿ ಕುಡಿಯುತ್ತಿದ್ದರು.

ಅನಂತಮೂರ್ತಿಯವರು ಒಮ್ಮೆ ಇಂಗ್ಲೆಂಡಿಗೆ ಹೋಗುವ ಮುನ್ನ ತಮ್ಮ ಹೆಂಡತಿ ಎಸ್ತರ್ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು.

**********

ಒಮ್ಮೆ ಲಂಕೇಶರು ಮತ್ತು ಟಿ.ಎನ್.ಸೀತಾರಾಮ್ ಸೇರಿ ಚಂದ್ರಶೇಖರ್ ಪಾಟೀಲರು ಬರೆದ 'ಕೊಡೆಗಳು' ಎಂಬ ನಾಟಕವನ್ನು ಮಾಡಿದರು. ಇಡೀ ನಾಟಕದಲ್ಲಿ ಇವರಿಬ್ಬರೆ ಪಾತ್ರಧಾರಿಗಳು. ಮೊದಲು 'ಸಂಸ್ಕಾರ' ಈಗ 'ಕೊಡೆಗಳು'. ಈ ನಾಟಕವನ್ನು ನೋಡಿದ ನಂತರ ಲಂಕೇಶರಿಗೆ "ಇನ್ನು ಮುಂದೆ ನೀವು ಆಕ್ಟ್ ಮಾಡಬೇಡಿ. ನನ್ನಿಂದ ನೋಡಲಾಗುವುದಿಲ್ಲ" ಎಂದೆ. ಆಗ ಅವರು ನನ್ನನ್ನು ದುರುಗುಟ್ಟಿ ನೋಡಿದರೇ ಹೊರತು ಏನನ್ನೂ ಹೇಳಲಿಲ್ಲ.


ಅಜಿತನನ್ನು ಎತ್ತಿಕೊಂಡಿರುವ ...

**********

ಈ ಹೊತ್ತಿನಲ್ಲಿ ಲಂಕೇಶರು ಧರಿಸುತ್ತಿದ್ದ ಡ್ರೆಸ್‌ನಲ್ಲಿ ತುಂಬಾ ಬದಲಾವಣೆಗಳಾಗಿದ್ದವು. ಈಗ ಅವರು ಮುಂಚಿನಂತೆ ಸೂಟ್ ಬೂಟ್ ಧರಿಸುತ್ತಿರಲಿಲ್ಲ, ಬದಲಾಗಿ ಪೈಜಾಮ ಮತ್ತು ಜುಬ್ಬಾ ಹಾಕುತ್ತಿದ್ದರು. ಕೆಲವೊಮ್ಮೆ ಹೆಗಲಿಗೆ ಒಂದು ಬ್ಯಾಗ್ ತಗಲು ಹಾಕಿಕೊಳ್ಳುತ್ತಿದ್ದರು. ಆದರೆ ಅವರು ಸಿಗರೇಟ್ ಸೇದುವ ಶೈಲಿಯಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ.

ನಮ್ಮ ಮನೆಗೆ ಬರುತ್ತಿದ್ದ ಲಂಕೇಶರ ಶಿಷ್ಯರಲ್ಲಿ ಕಿ.ರಂ. ನಾಗರಾಜ್ ಪ್ರಮುಖರು. ನಾಗರಾಜ್ ಅವರು ಅದೆಷ್ಟೋ ದಿನ ನಮ್ಮ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದರು. ನನಗೆ ಅಥವಾ ಮಕ್ಕಳಿಗೆ ಖಾಯಿಲೆ ಆದರೆ ನಮ್ಮನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗುತ್ತಿದ್ದದ್ದು ಲಂಕೇಶರಲ್ಲ, ಬದಲಾಗಿ ನಾಗರಾಜ್ ಅವರು. ಅವರು ನಮ್ಮೆಲ್ಲರಿಗೆ ಎಷ್ಟು ಹತ್ತಿರದವರಾಗಿದ್ದರೆಂದರೆ ಒಂದು ರೀತಿಯಲ್ಲಿ ಕಿ.ರಂ. ನನ್ನ ತಮ್ಮನಂತೆ ಇದ್ದರು. ಟಿ.ಎನ್. ಸೀತಾರಾಮ್ ಕೂಡ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮಕ್ಕಳೊಂದಿಗೆ ಆಟವಾಡುತ್ತಿದ್ದರು.

**********

ಚಂದ್ರಶೇಖರ್ ಕಂಬಾರ ಅವರಿಗೆ ಬೆಂಗ[...] ಕಾಲೇಜ್‌ನಲ್ಲಿ ಅಪಾಯಿಂಟ್‌ಮೆಂಟ್ ಆಯಿತು. ಆಗ [...] ಬಾಡಿಗೆ ಮನೆ ಮಾಡುವವರೆಗೆ ನಮ್ಮ ಮನೆ[...] ಉಳಿದಿದ್ದರು. ಕಂಬಾರರು ಲಂಕೇಶರನ್ನು ಹೋಗಳ[...] ಕ್ಕೇರಿಸುತ್ತಿದ್ದರು. "ಏನು ಶೇಕ್ಸ್‌ಪಿಯರ್ ಸಾರ್" [...] ಕಂಬಾರರು ಲಂಕೇಶರನ್ನು ಕರೆಯುತ್ತಿದ್ದರು.

ಕಂಬಾರರನ್ನು ಕುರಿತು ಒಂದು ಘಟನೆಯನ್ನು ಲಂ[...] ಹೇಳಿದ್ದರು. ಅದೇನೆಂದರೆ ಕಂಬಾರರು ಒಮ್ಮೆ ಅವ[...] ಹೋದಾಗ ಬಟ್ಟೆ ಖರೀದಿಸಲು ಅವರು ಒಂದು ಅಂ[...] ಹೋದರಂತೆ. ಆದರೆ ಆ ಅಂಗಡಿಯವನು ಕಂಬಾ[...] ನೋಡಿ ಮಕ್ಕಳ ಸೆಕ್ಷನ್‌ಗೆ ಹೋಗಿ ಎಂದು ಕಳಿಸಿದ[...] ಅಂದರೆ ಕಂಬಾರರ ಆಕೃತಿ ಅಷ್ಟು ಚಿಕ್ಕದಾಗಿತ್ತು ಎಂ[...]

ಆಗ ದೊಡ್ಡರಂಗೇಗೌಡರು ಪ್ರಜಾವಾಣಿ[...] ನಾಟಕಗಳನ್ನು ಕುರಿತು 'ಆರ್ಯ ಸಮಾಜ' ಎಂಬ [...] ವನ್ನು ಬರೆಯುತ್ತಿ[...] ಅದನ್ನು ನಾನು ತ[...] ಓದುತ್ತಿದ್ದೆ. ದೊಡ್ಡರ[...] ಗೌಡರ ಮದುವೆ ವಿ[...] ಪುರದಲ್ಲಿ ನಡೆಯಿತು. [...] ಸರಳ ವಿವಾಹ, ಪ್ರೇ[...] ವಿವಾಹ. ಅವರ ಮದ[...] ನಾನು, ಲಂಕೇಶರು, [...] ಎಲ್ಲರೂ ಹೋಗಿದ್ದೆವು.

ಕಿ.ರಂ ವಿಜಯ[...] ಯನ್ನು ಲವ್ ಮಾಡುತ್ತಿ[...] ಆದರೆ ಕಿ.ರಂ ಅವರನ್ನು ಮದುವೆ ಆಗುವುದು ವಿಜಯ[...] ಮನೆಯವರಿಗೆ ಇಷ್ಟವಿರಲಿಲ್ಲ. ಆದ್ದರಿಂದ ಅವರ[...] ಗುಟ್ಟಾಗಿ ನಮ್ಮ ಮನೆಯಲ್ಲಿ ಭೇಟಿ ಮಾಡುತ್ತಿ[...] ಅದೆಷ್ಟೋ ಬಾರಿ ವಿಜಯಲಕ್ಷ್ಮಿ ಮನೆಯಿಂದ ಗು[...] ತಂದಿದ್ದ ಸೀರೆಯನ್ನು ನಮ್ಮ ಮನೆಯಲ್ಲಿ ಉಟ್ಟು ಕಿ.ರಂ [...] ಹೋಗುತ್ತಿದ್ದರು. ವಿಜಯಲಕ್ಷ್ಮಿ ಯಾವಾಗಲೂ ನೀ[...] ಡ್ರೆಸ್ ಮಾಡಿಕೊಳ್ಳುತ್ತಿದ್ದರೆ ಕಿ.ರಂ ಸ್ನಾನ ಮಾಡಿದ[...] ಇಲ್ಲವೋ ಎನ್ನುವಂತೆ ಇರುತ್ತಿದ್ದರು. ಆದರೂ ಇವ[...] ನಡುವೆ ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿ [...] ಅವರಿಬ್ಬರು ರಿಜಿಸ್ಟರ್ ಮದುವೆ ಆದ ಮೇಲೆ ವಿಧಿ [...] ಮನೆಯವರು ಶಾಸ್ತ್ರೋಕ್ತವಾಗಿ ಮದುವೆ ಮಾಡಿದರು.

ಇದಾದ ನಂತರ ಮರುಳಸಿದ್ದಪ್ಪನವರೂ ಮದ[...] ಸಿದ್ಧರಾದರು. ಮರುಳಸಿದ್ದಪ್ಪನವರಿಗೆ ಜಿ.ಎಸ್. ಶಿವ[...] ಪ್ಪನವರ ಮಗಳಾದ ಜಯಂತಿಯನ್ನು ಮದುವೆ ಆಗುವ[...] ಜಿ.ಎಸ್.ಎಸ್ ಅವರಿಗೂ ಮರುಳಸಿದ್ದಪ್ಪ ತಮ್ಮ ಅ[...] ಆಗುವುದು ಇಷ್ಟವಿತ್ತು. ಆದರೆ ರುದ್ರಾಣಿ (ಜಿ.ಎಸ್[...] ಅವರ ಪತ್ನಿ) ಅವರಿಗೆ ತನ್ನ ಮಗಳನ್ನು ಮೇಷ್ಟ್ರಿಗೆ ಕೆ[...] ಮದುವೆ ಮಾಡುವ ಆಶೆ ಇದ್ದ ಹಾಗಿರಲಿಲ್ಲ. ಆ[...] ಮರುಳಸಿದ್ದಪ್ಪ ಮತ್ತು ಜಯಂತಿ ಮದುವೆ ಆಯಿತು. ಅವರ ಮದುವೆಗೂ ಹೋಗಿದ್ದೆವು. ಜಯಂತಿ ತು[...] ಮುದ್ದಾಗಿ ಕಾಣಿಸುತ್ತಿದ್ದಳು.

(ಮುಂದುವರೆಯು[...]

## ಟ್ರಾಕ್ಟರ್‌ಗಳು ಸಗಣಿ ಹಾಕುವುದಿಲ್ಲ

ಅಪ್ಪ ಹಾಕಿದ ಆಲದ ಮರದಲ್ಲಿ
ಈಗ ಬಿಳಲುಗಳು ಬೆಳೆಯುತ್ತಿಲ್ಲ...
ರೆಂಬೆಗಳಲ್ಲಿ ಕಸುವು ಕಡಿಮೆಯಾಗಿ
ನೇಣು ಹಗ್ಗಗಳಿಗೆ ಆಸರೆಯಾಗುತ್ತಿಲ್ಲ...

ದಂಡಿಲ್ಲದ ಗೌಡರ ಗಂಟೂ ಬರಿದಾಗುತ್ತಿದೆ,
ಅರಮನೆಯ ನಂಟು ತೀರುತ್ತಾ ಬಂದಿದೆ
ಇಂದು ಚೋಮನ ಹೆಸರಲ್ಲೂ ಓಟರ್ ಕಾರ್ಡು
ಹಳ್ಳಿಹಳ್ಳಿಯಲ್ಲಿ ಸುವರ್ಣಗ್ರಾಮದ ಬೋರ್ಡು

ರಸ್ತೆ ಹಾಳಾದರೇನು? ಊರು-ಕೇರಿಗಳೆರಡೂ
ರಾಜಧಾನಿಗೆ ಸೇರುವುದು ಖಾತರಿ
ಕೋಲಾ-ಗುಟ್ಕಾಗಳ ಟೆಂಪೋ ಕಡ್ಡಾಯ ಹಳ್ಳಿಗೆ
ವಾರಕ್ಕೆ ಮೂರು ಬಾರಿ

ಜೀವನ ಅಷ್ಟೇನೂ ಸ್ಲೋ ಇಲ್ಲ ಬಿಡಿ,
ಅಂತರ್ಜಾಲದ ಹೈವೇ ಹಳ್ಳಿಯಲ್ಲೂ ಫಾಸ್ಟಾಗಿದೆ
ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಗಲ್ಲಿಗೊಂದು ಟವರ್‍ರು
ಪುಢಾರಿಗಳ ಪಾಪ್ಯುಲರ್ ಡಿಮ್ಯಾಂಡ್ ಆಗಿದೆ

ಈಗ, ಜೀತವೂ ಇಲ್ಲ ಜಾಥಾಗಳು ಇಲ್ಲ
ಬಡವರ ಮೈ ಮೇಲೆ ಸರ್ಕಾರದ ಅಂಗಿ-ಚೆಡ್ಡಿ
ರೆಡಿಮೇಡ್ ಅಂಗಿಯಲ್ಲಿ ರೆಡಿಮೇಡ್ ತೂತುಗಳು

ಕೂಲಿ ಕಾಳಾಗುವ ಮೊದಲೇ ಪರರ ಪಾಲು
ಮಾನ ಅಭಿಮಾನವಾಗದೆ ಬೀಗಹಾಕದ ಪಂಜರಕ್ಕೆ
ತಾವಾಗೇ ಮರಳುತ್ತವೆ ಬಾನಹಕ್ಕಿಗಳು

ನಿಜ, ಜುಲುಮಿಲ್ಲ ರುಸುಮಿಲ್ಲ ಅವರವರ ಬದುಕು ಅವರವರಿಗೆ
ಬೇಕಿದ್ದರೆ ಬೆಂಗಳೂರಿಗೆ, ಇಲ್ಲವಾದರೆ ಪೂನಾ, ಮುಂಬೈ, ರತ್ನಗಿರಿಗೆ
ಮರಳಿ ಬಂದವರನ್ನು ಹೊಗೆಯನಿಕ್ಕಿ ಹೊರದಬ್ಬುತ್ತದೆ



ಊರುಕೇರಿಗಳೆರಡನ್ನೂ ಸುಡುತ್ತಿರುವ ಬೆಳಕಿನ ಕೆನ್ನಾಲಗೆ

ನಲವತ್ತೇಳರಲ್ಲಿ ಬಿದ್ದ ಪೆಟ್ಟು ಆಗಲೂ ಅಷ್ಟೆ ಈಗಲೂ ಅಷ್ಟೆ
ಮೆಟ್ಟಿಲಿಲ್ಲದ ಮಹಡಿಯನ್ನು ತಟ್ಟಿದ್ದು ರವಷ್ಟೆ..
ಏರುವವರಿಗೆಂದು ತೂಗಿಬಿಡಲಾಗಿದೆ ಕೂದಲೆಳೆಯ ನೂಲೇಣಿ
ಮೇಲೇರಿದ ತೃಪ್ತಿಗಾಗಿ ಪ್ರತಿ ಅಂತಸ್ತಿನಲ್ಲೂ ಈಗ ಒಂದೊಂದು ಅಟ್ಟಣಿ

ಜಗತ್ತೆಂಬ ಹಳ್ಳಿಯಲ್ಲಿ ಈಗ ಜಂಬೂಸವಾರಿ ನಡೆಯುವುದಿಲ್ಲ
ಕಾಲಲ್ಲಿ ಕಸುವಿಲ್ಲದಿದ್ದರೂ, ರೆಕ್ಕೆಯ ಕಸಿಮಾಡಿಕೊಳ್ಳದೆ ವಿಧಿಯಿಲ್ಲ
ಈಗ ಆಗಸದ ತುಂಬಾ ಗರುಡ ಭೂಮಿಯೆಲ್ಲಾ ಬರಡು
ಗರುಡನ ವೀರ್ಯಧಾರಣೆ ಮಾಡಿಸಿಕೊಂಡ
ಇರುವೆಗಳು ಮತ್ತು ಆನೆಗಳು,
ಹಾರಲು ಆಗದೆ ತೆವಳಲೂ ಆಗದೆ
ಕುಪ್ಪಳಿಸಿ ಕುಪ್ಪಳಿಸಿ ಕುಸಿದು ಬೀಳುತ್ತಿವೆ

ಮುಯ್ಯಾಳುಗಳಾಗಿವೆ ಟ್ರಾಕ್ಟರ್‌ಗಳು, ಬೀದಿಬೀದಿಯಲ್ಲಿ ಹಲ್ಲರ್‌ಗಳು
ರಾಶಿ ಸುರಿದು ರಾಶಿ ಬೆಳೆದದ್ದು ನಿಜವೋ? ಸುಳ್ಳೋ? ಗೊತ್ತಿಲ್ಲ
ಅಡತಿಯಲ್ಲಿ ಕಡತ, ಖಾಲಿ ಖಾಲಿ ಕಣಜಗಳು, ಬ್ಯಾಂಕಿನಲ್ಲಿ ಸಾಲಗಳು
ಕೂಲಿ ಕದ್ದವನು ಕಾಣುತ್ತಾನೆಯೇ ವಿನಃ
ಬದುಕ ಕದ್ದವನ ವಿಳಾಸ 'ಆಧಾರ್'ನಲ್ಲೂ ದಾಖಲಾಗಿಲ್ಲ


ಕತ್ತಲಲ್ಲಿ ಕಳೆದದ್ದನ್ನು ಹುಡುಕಬಲ್ಲ ಪ್ರವೀಣರಿಗೆ
ಹಗಲಲ್ಲಿ ದರೋಡೆ ಮಾಡಿದವರ ಚಹರೆಯೇ ತಿಳಿಯುತ್ತಿಲ್ಲ
ಬೆರಣಿಯ ಬೆಂಕಿಯಲ್ಲಿ ಅರಮನೆಯನ್ನು ಸುಡಬೇಕೆನ್ನುವವರಿಗೆ ನಿರಾಸೆ
ಏಕೆಂದರೆ ಟ್ರಾಕ್ಟರ್‌ಗಳು ಸಗಣಿಹಾಕುವುದಿಲ್ಲ

• ಶಿವಸುಂದರ್

# ಮಾರಣ್ಣ ಇಟಗಂಡಿರೊ ಕೇಸ್ನು ಗೆಲ್ತನೆ ಕಣೊ

ರು ತಡವಾಗಿ ಗರ್ಭ ಕಟ್ಟುವ ಕಾಲ. ಕೈಗೆ ಬಂದಷ್ಟು
ಒಂದು ಅನಿವಾರ್ಯತೆಗೆ ಕಾಳಮಾವ ಸಿದ್ಧತೆ
ದ್ದ. ಒಂದು ಶೂನ್ಯ ವೇಳೆಯಲ್ಲಿ ಸೀರ ಪಕಾರೆಂದು

ದ್ವಾನಿ ತಿರಗ ರಥ ಹೂಡಿಕಂಡು ಬಂದನಂತೆ"




ಗರವುನಿನ್ನು ಗಟ್ಟಿಮುಟ್ಟಾಗ್ಯವುನೆ ಅಂದಂಗಾಯ್ತು"
ಳಮಾವ.

ಕಣ ಮಾವ. ನಿನಿಗಿಂತ್ಲೂ ನಾಕೊರಸಕ್ಕೆ ನು. ಆದ್ರು ಪ್ರಧಾನಿಯಾಗಬೇಕು ಅನ್ನೊ ಚಪಲ ಬಿಟ್ಟಿಲ್ಲ."

ಗರೆ ಪ್ರಧಾನಿಯಾಯ್ತನೆ ಅಂತಿಯ್ಯಾ?"

ದಷ್ಟು ಸುಲಬಿಲ್ಲ ಕಣ ಮಾವ. ಅದ್ವಾನಿ ವಾಜಪೇಯಿಯ ಪ್ರಧಾನಿ ಮಾಡಕ್ಕೆ ಅಂತ ಇದ್ದೋನು. ಆ ಕ್ಯಲಸ ಆಯ್ತು. ಇನ್ನೆನಿದ್ರು ಅದ್ವಾನಿ ರಾಮನ ಭಜನೆ ಮಾಡಿಕಂಡು ಕಾಲಹಾಕಬೇಕು ಅನ್ನದು ಬಿಜೆಪಿಗಳ ಮಾತಂತೆ. ಇಂತ ಮಾತ ಕೇಳಿಸಿಗಂಡು ಸಿಟ್ಟಾಗಿ ರಥಾಹೂಡಿಕಂಡು ವಂಟವುನೆ."

"ಇಲ್ಲಿಗೂ ಬಂದನೇನ್ಲ?"

"ಊ ಬತ್ತನೆ. ವಳ್ಳೆ ಬಿಜೆಪಿಗಳು ಬ್ಯಾಡ ಅಂತಾ ಅವೆ. ಕೆಟ್ಟು ಕ್ಯರ ಹಿಡದಿರೊ ಬಿಜೆಪಿ ರ್ಲಿ ಅಂತಾ ಅವುರೆ. ಅಂಗೆ ನೋಡಿದ್ರೆ ಅವುನು ಗದು ಯಾರಿಗೂ ಬೇಕಿಲ್ಲ. ಈ ಬಿಜೆಪಿಗಳು ಆಡ ಮಾಡದೊಂದು. ಅದ್ವಾನಿ ಬರ್ಲಿ ಅನ್ನೊನು ವಳಗೆ ಂತನೆ. ಅದೇ ಬ್ಯಾಡ ಅನ್ನೊನು ಬರ್ಲಿ ಅಂತನೆ. ಆತ್ಮವಂಚನೆ ಜನ ಕಣಮಾವ. ಅವುರ ಸುದ್ದಿ ಇಷ್ಟೆ ಳದು ಕಷ್ಟ. ಒಂಥರಾ ಪೇಜಾವರನ ಜಾತಿ ಜನಾ."

ವುನೇನೊ ಎಡೂರಪ್ಪೇನು ತೆಪ್ಪು ಮಾಡಿಲ್ಲ ತೆ?"

ಣ. ಅವುನ್ಯಾಕೊ ರೇಣುಕಾಚಾರಿ ತರ ಮಾತಾಡ್ತ ಎಡೂರಪ್ಪ ಅಪರಾಧಿ ಅಲ್ಲ ಅನ್ನದಾದ್ರೆ ಅಂಥೋನ್ನ ಜೈಲಿಗಾಕಿರದು ತಪ್ಪಲವೆ ಅನ್ನಂಗಾಯ್ತದೆ ಈ ಪೇಜಾವರನ ಮಾತು. ಮಠದ ಸ್ವಾಮಿ ಬಾಯಿ ಮುಚ್ಚಗಂಡು ಮಠದ ಕ್ಯಲಸ ಮಾಡಬೇಕು. ಎಡೂರಪ್ಪನ್ನ ಜೈಲಿಗಾಕಿರೊದು ತೆಪ್ಪು ಅನ್ನಂಗೆ ಮಾತಾಡಬಾರದು ಕಣಮಾವ."

"ನೀನಂಗಂತಿ. ಅವುನ್ದೇನಿದ್ದತೊ ಎಡೂರಪ್ಪನತ್ರ ಯವಾರ."

"ಅದು ನಿಜವೆ ಬುಡು. ಇವತ್ತು ಯಾವನಾರ ಬಾಯಿ ಬುಡ್ತನೆ ಅಂದ್ರೆ ಸುಮ್ಮ ಸುಮ್ಮನೆ ಬುಡದಿಲ್ಲ. ಯಾವುದಾರ ರುಣಭಾರದಿಂದ್ಲೆ ಮಾತಾಡ್ತನೆ. ಇಲ್ಲ ಅಂದ್ರೆ ಅಮ್ಯಾಲೋಗಿ ಈಸಗತ್ತನೆ ಅನ್ನಂಗಾಗ್ಯದೆ."

"ಅಂತೂ ಯಲ್ಲಾ ಕೆಟ್ಟು ಕ್ಯರ ಹಿಡುದ್ರು ಬುಡು."

"ನಿಜ ಕಣ ಮಾವ. ಮದ್ಲು ರಾಜಕಾರಣಿಗಳು ಕೆಟ್ರು. ಅಮ್ಯಾಲೆ ಮಠದ ಸ್ವಾಮಿಗಳು ಕೆಟ್ರು. ಪೇಪರಿಗೆ ಬರಿಯೋರು, ಟಿವಿಯೋರು ಕುಲಗೆಟ್ರು. ಜನಗಳಂತೂ ಗ್ಬಬ್ಬರೆದ್ದೊದ್ರು ಅತ್ತಗೆ."

"ನಿಜ ಕಂಡ್ಲ ಉಗ್ರಿ. ಆ ತೂಗುದೀಪ ಶ್ರೀನಿವಾಸ ನುಡುಗ ಬತ್ತನೆ ಅಂತ ಮಂಡೇವುದಲ್ಲಿ ಆಟೊಂತರ ಜನ ಸೇರಿದ್ರಲ್ಲಾ. ಅಂತ ಜನಗಳಿಂದ ಯಾವ ದೇಸ ಉದ್ದಾರಾದತ್ಲ" ಎಂದ ಸೀರ.

"ಅಲ್ಲಾ ಹೆಡತಿ ವಡುದು ಜೈಲಿಗೋಗಿ ಬಂದಿರೋನ್ನ ನೋಡಕ್ಕೆ ಇಲ್ಲಿಂದ್ಲೂ ಹೋಗಿದ್ದವಲ್ಲಾ. ಅವುಕ್ಯಾರು ಹೇಳೊರು ಕೇಳೊರಿಲವೆ" ಎಂದಳು ಜುಮ್ಮಿ.

"ಹೇಳೊರು ಕೇಳೋರು ಯಾರಿಗೂ ಇಲ್ದಂಗಾಗ್ಯದೆ ಕಣೇ. ಅದ್ಕೆ ಅಲವೆ ಹಿಂಗಾಗಿರದು. ಎಡೂರಪ್ಪನಿಗೆ ಹೇಳೋರಿದ್ರೆ ಹಿಂಗ್ಯಾಕಾಗದು. ನೀನು ಮಾಡದು ತೆಪ್ಪು ಕಣೊ ಎಡೂರ, ಹಿಂಗಾದ್ರೆ ಜೈಲಿಗೋಯ್ತಿ ಅಂತ ಹೈಕಮಾಂಡು ಎಚ್ಚರಿಸಿದ್ರೆ ಇವತ್ತು ಮಮ್ಮಕ್ಕಳ ಜೊತೆ ಪಟಾಕಿ ವಡಿಬವುದಿತ್ತು. ಆದ್ರೆ ಹೈಕಮಾಂಡಿನೋರಿಗೆ ಲಂಚ ಕೊಟ್ಟು ಕೇಳದಂಗೆ ಮಾಡಿದ್ದ. ಅದ್ಕೆ ಇವತ್ತು ಜೈಲುಪಾಲಾದ ಪಾಪ."

"ಕುಮಾರಸ್ವಾಮಿ ಅವುನ್ನ ನೋಡಕ್ಕೋಗಿದ್ನಂತೆ ನಿಜವೇನ್ಲ?" ಎಂದಳು ಜುಮ್ಮಿ.

"ಅದಾಗ್ಲೆ ಹಳೆ ಸುದ್ದಿ ಕಣೆ."

"ತಿರಗ ಹೋಗಿದ್ದ ಅಂದ್ರು?"

"ತಿರಗ ಏನೂ ದಿವಸ ಹೋಗಿ ಬತ್ತನೆ ಕಣಕ್ಕ. ಅವುನು ಬೇಟಿಯಾಗೋ ಪ್ರೆಂಡ್ಸೆಲ್ಲಾ ಜೈಲಲ್ಲೇ ಇರುವಾಗ ಹೋಯ್ತನೆ ಬತ್ತನೆ" ಎನ್ನುತ್ತಾ ವಾಟಿಸ್ಸೆ ಬಂದ.

"ಸರಿ ಅವುನ್ಯಂಗೆ ಜೈಲಿಂದ ತಪ್ಪಿಸಿಗಂಡಾ?" ಎಂದ ಉಗ್ರಿ.

"ತಪ್ಪಿಸಿಗಂಡ ಅನ್ನೊ ಮಾತೆ ಸರಿ ಕಣೊ ಉಗ್ರಿ. ಯಾಕಂದ್ರೇ ಕೇಸಾಕಿರೋ ಲಾಯರ್‌ಗೆ ಸ್ವಲ್ಪ ತಲೆ ಕಡಮೆ. ಆತುರ ಮಾಡಿಬುಟ್ಟ."

"ಅಂಗಂತಿಯಾ?"

"ಊ ಕಣೊ ಉಗ್ರಿ. ಯಾವಾಗ ಕುಮಾರಣ್ಣನ ಟೀಮು ಶಿವಮೊಗ್ಗದಿಂದ ಇಬ್ಬರು ಲಾಯರ್ ಕರದು ಎಡೂರಪ್ಪನ ಮೇಲೆ ಡಿನೋಟಿಫಿಕೇಶನ್ ಕೇಸ್ ಜಡದರೊ, ಆಗ್ಲೆ ಎಡೂರಪ್ಪನಿಗೆ ಸಿಟ್ಟು ಬಂದು, ತಾನೂ ಒಬ್ಬ ಲಾಯರ್ರ್ಇಡದು ಡಾಕ್ಯುಮೆಂಟ್ ಕೊಟ್ಟು ಕೇಸಾಕಿದನಂತೆ. ಕೇಸಾಕುವಾಗ ಸೇಡಿಗೆ ಸೇಡು ಕೆಲಸ ಮಾಡ್ತೆ ವರತೂ ಕೋರ್ಟಿನ ವಾದಕ್ಕೆ ಬೇಕಾದ ಸಾಮಾನು ಸರಿಯಾಗಿದ್ದತೆ ನೋಡಿಕಳ್ಳಿಲ್ಲ, ಅಂಗಾಗಿ ಕುಮಾರಣ್ಣ ಬಚಾವಾದ್ನೆ ವರತೂ ಇಲ್ಲ ಅಂದಿದ್ರೆ ಇಷ್ಟೊತ್ತಿಗೆ ಪರಪ್ಪನ ಅಗ್ರಾರದ ಜೈಲಲ್ಲಿ ಇಬ್ರೂ ಕೂತಗಂಡು ಇಸ್ಪಿಟ್ಟಾಡೋರು."

"ಒಹೊಹೊ ಹಿಂಗೆ ಬಚಾವಾದ ಅನ್ನು."



"ಊ ಕಣೊ ಉಗ್ರಿ. ಇವತ್ತು ಎಡೂರಪ್ಪ ಜೈಲಲ್ಲಿರ ಬೇಕಾದ್ರೆ ಅದ್ಕೆ ಕುಮಾರಣ್ಣನೆ ಕಾರಣ. ಒಂದು ವೇಳೆ ಕುಮಾರಣ್ಣ ಜೈಲಲ್ಲಿದ್ರೆ ಅದಕೆ ಎಡೂರಪ್ಪನೆ ಕಾರಣಗೋನು ಗೊತ್ತೆ."

"ಕುಮಾರಸ್ವಾಮಿ ತಿರಗ ಮದಿವಾಗಿರದು ಕೇಸಾಗಿದ್ದದಂತಲ್ಲಾ ನಿಜವೆ?"

"ನಿಜ ಕಣಕ್ಕ. ಯಾರೊ ಒಬ್ಬ ಕಿಲಾಡಿ ಕೇಸು ಮಾಡೇಬುಟ್ಟವುನೆ. ಕೇಸು ಯಂಗೆ ಬೀಳ್ತಾ ಅವೆ ಅಂದ್ರೇ ಯಾವ ಕೇಸಿನ ಕಡೆ ಗಮನ ಕೊಡನ ಅನ್ನಂಗಾಗ್ಯದೆ. ಅವುನ್ಯಾರೊ ನಿರಾಣಿ ಅನ್ನೊ ಕಳ್ಳ ಒಬ್ಬ ಸಾಬಿ ಕೈಗೆ ಸಿಕ್ಕಿ ಬಿದ್ದವುನೆ. ಅದೂ ಒಂದು ಕೇಸಾಗ್ಯದೆ. ಇನ್ನು ಬಿಜೆಪಿ ಬುದ್ಧಿ ಮಾಂದ್ಯನಂಗೆ ಕಾಣೊ ಅಶೋಕ ಎಡೂರಪ್ಪನ ತರನೆ ಸಿಕ್ಕಿಬಿದ್ದವುನೆ. ಲೋಕಾಯುಕ್ತರು ಅವುನ್ನೂ ತನಿಖೆ ಮಾಡಿ ಅಂದವುರೆ. ಈ ನಡುವೆ ಮನರಂಜನೆ ತರ ಕುಮಾರಣ್ಣನ ಉಪಸಂಸಾರದ ಮ್ಯಾಲೂ ಕೇಸು ಬಿದ್ದದೆ ಕಣಕ್ಕ. ವೆರಿ ಇಂಟರೆಸ್ಟಿಂಗ್ ಸಬ್‌ಜೆಕ್ಟು."

"ಹೆಡತಿ ಮಕ್ಳಿದ್ದು ತಿರಗ ಮದಿವಾಗದು ತೆಪ್ಪಲವೇನ್ಲ?" ಎಂದ ಕಾಳಮಾವ.

"ಅದು ನಿನ್ನ ಭಾಗಕ್ಕೆ ತೆಪ್ಪು ದೊಡಪ್ಪಾ, ಆದ್ರೆ ಕುಮಾರಣ್ಣನಿಗೆ ಎಡೂರಪ್ಪನ ತರ ಸರಿ ತಪ್ಪಿನ ಸೆಂಟ್ರಲ್ಲಿ ಅಂತ ಸ್ಟ್ರಾಂಗಾದ ಗೆರೆ ಇಲ್ಲ, ರಾಧಿಕ ವಳ್ಳೆ ಹುಡುಗಿ. ಜೊತೆಗೆ ಸುಂದ್ರಿ. ನನ್ನಂಥೊನ್ನ ಲವ್ ಮಾಡಿದಾಗ ನಿರಾಕರಿಸಕ್ಕಾಗಲಿಲ್ಲ, ಇಟ್ಟುಕೊಂಡೆ. ಬಸ ರಾದ್ಲು, ಮದಿವಾದೆ, ಮುದ್ದಾದ ಮಗಳವುಳೆ. ಇದರಲ್ಲೇನು ತೆಪ್ಪು ಅಂತನೆ. ಇದಕೇನೇಳ್ತಿ?"

"ಹಿರಿಯೆಡತಿ ಏನಾಗಿದ್ಲು? ಅವುಳ ಒಪ್ಗೆ ತಗಂಡ?"

"ನಮ್ಮ ಕುಟುಂಬದಲ್ಲಿ ಯಾವಾಗ್ಲು ಹೆಂಗಸರ ಮಾತ ಕೇಳಿಲ್ಲ, ಮಾಡಿದ ಮ್ಯಾಲೆ ಕೇಳ್ತಿವಿ. ಅವುರು ಸುಮ್ಮನಾಯ್ತರೆ. ಅಂಗೆ ಅನಿತ ಸುಮ್ಮನಾದ್ಲು, ಸುಮ್ಮನಾದ್ಲು ಅಂದ್ರೆ ಒಪ್ಗೆ ಕೊಟ್ಲು ಅಂತ."

"ಅದು ಪಂಚಾತಿ ನ್ಯಾಯದಲ್ಲಿ ಹೇಳೊ ಮಾತು ಕಣೊ. ಕೋರ್ಟು ಕಾನೂನು ಕೇಳ್ತದೆ. ಆಗ?" ಎಂದ ಉಗ್ರಿ.

"ಸರಿ ಕಣೊ ಉಗ್ರಿ, ನಿನ್ನ ಮಾತಿಗೆ ಬತ್ತಿನಿ. ಕೋರ್ಟಿಗೆ ಈ ಕೇಸಿನ ಸಲುವಾಗಿ ಕುಮಾರಣ್ಣ ಬತ್ತನೆ. ನಾನು ಯರಡ್ನೆ ಮದಿವಾಗಿಲ್ಲ ಅಂತನೆ."

"ಮಗ ಎತ್ತಿಕೊಂಡು ರಾಧಿಕನ ಮನೆಲಿ ತಗಿಸಿಕಂಡಿರೊ ಪೋಟಾ ತೋರಿ ಇದೇನು ಅಂತರೆ. ಆಗ?"

"ರಾಧಿಕ ಕನ್ನಡದ ಒಳ್ಳೆ ನಟಿ. ನಾನು ಒಬ್ಬ ಒಳ್ಳೆ ಸಿನುಮಾ ನಿರ್ಮಾಪಕ. ನಾನು ತಗಿಯೋ ಒಂದು ಸಿನುಮಕ್ಕೆ ರಾಧಿಕನ್ನ ಹೀರೋಯಿನ್ ಆಗಿ ಕಾಲ್‌ಸೀಟ ತಗಬೇಕಾಗಿತ್ತು, ಕಾಲ್‌ಸೀಟ ತಗಳಕ್ಕೋಗಿದ್ದಾಗ ಅವಳ ಕೈಲಿ ಒಂದು ಹೆಣ್ಣುಮಗು ಇತ್ತು, ಆ ಮಗು ನನ್ನ ಮಗ ಸಣ್ಣಮಗುವಾಗಿದ್ದಾಗ ಹೇಗಿತ್ತೋ ಅದೇ ತರ ಇತ್ತು, ಎತ್ತಿಕೊಂಡು ಮುದ್ದಾಡಿದೆ. ಫೋಟೋ ತಗಿಸಿಕೊಂಡೆ. ಅದೇ ಫೋಟೋಗಳಿವು ಅಂತನೆ."

"ಸರಿಯಪ್ಪ, ರಾಧಿಕ ಏನಂತಳೆ?"

"ಅವುಳ ಪ್ರಶ್ನೆನೆ ಬರದಿಲ್ಲ ಕಣೊ ಇಲ್ಲಿ. ಏನಿದ್ರು ಕುಮಾರಣ್ಣನ್ನ ವಿಚಾರಿಸಿ ಕೈಬುಡ್ತರೆ. ಕೇಸು ಕುಲಾಸೆ ಮಾಡಿ ಕೇಸಾಕಿದೋನ ಮೇಲೆ ಒಂದು ಲಕ್ಷ ರೂಪಾಯಿ ದಂಡಹಾಕಿ ಕೈಬುಡ್ತರೆ ಗೊತ್ತೆ?"

"ಕೋರ್ಟಿಗಿಂತ ಮದ್ಲೆ ತಲಿಯಲ್ಲ ಮಾತಾಡಬ್ಯಾಡ ಕಣೊ ವಾಟಿಸ್ಸೆ. ಕಂಟೆಮ್ಟು ಆಪ್ ಕೋರ್ಟಾಯ್ತದೆ."

"ಆದ್ರು ನನ್ನ ಅಂದಾಜು ನಿಜ ಆಗಬವುದು ಕಣೊ ಉಗ್ರಿ. ಕುಮಾರಣ್ಣ ಮುಖ್ಯಮಂತ್ರಿಯಾಗಿ ಮಾಡಿದ ಸಾಧನೆ ಏನಪ್ಪ ಅಂದ್ರೆ, ರಾಧಿಕನ್ನ ಕಟಿಗಂಡು ಶಮಿಕನ್ನ ಪಡದದ್ದು. ಈಗ ಉಳಕಬೇಕು ಅಂದ್ರೆ ನಾನು ಯರಡ್ನೆ ಮದಿವಾಗಿಲ್ಲ ಅನ್ನದು. ಅಂತನೆ. ಅದೇ ಈಗ ಬೇಕಾಗಿರದು. ಇದನ್ಯಲ್ಲ ನೋಡಿ ದ್ಯಾವೇಗೌಡ ಸಿಟ್ಟಾಗಿದ್ದನಂತೆ."

"ಆಗದಿಲವೆ ಮತ್ತೆ?" ಎಂದ ಕಾಳಮಾವ.

"ಅಂತೂ ಕತ್ಲೆ ಕ್ಯಲಸ ಬೆಳಕಾದ ಮ್ಯಾಲೆ ಬುಡದಿಲ್ಲ ಅನ್ನಂಗಾಯ್ತು!"

# ಮಾನ್ಯರ ಸಂಕಟ ಮತ್ತು ಸಂತೋಷ


ನಿಮ್ಮನೇ ಕೂತಿದ್ದಾಗ ನಾನು ಎದುರಿಗಿದ್ದವರು ಬೆಚ್ಚಿಬೀಳುವಂತೆ ನಾಲ್ಕಾರು ಪ್ರಶ್ನೆಗಳನ್ನು ಕೇಳುತ್ತೇನೆ. ಅವುಗಳಲ್ಲಿ "ಹೌದಪ್ಪ ನೀನು ಮಹಾ ಸುಸಂಸ್ಕೃತ ಮನುಷ್ಯ. ನಿನ್ನ ಹಿರಿಮೆಯನ್ನು ಬಲ್ಲವರು ಮಸಲಾ ಬಂದು ಪರೀಕ್ಷೆಗೆ ನಿಲ್ಲಿಸುತ್ತಾರೆ. ಒಂದು ಕಡೆ ಒಬ್ಬಳು ಸುರಸುಂದರಿಯನ್ನು ನಿಲ್ಲಿಸಿ ಇನ್ನೊಂದು ಕಡೆ ಮಹಾ ವಿದ್ವಾಂಸರೊಬ್ಬರನ್ನು ತ್ತಾರೆ. ಅವರಲ್ಲಿ ಒಬ್ಬರನ್ನು ಆರಿಸಿಕೊಳ್ಳಲು ನಿನಗೆ ಸೂಚಿಸುತ್ತಾರೆ. ಸುಂದರಿ ನಿನಗೆ ಹೊಸ ಜೀವ ತರಬಲ್ಲಳು. ಸ ನಿನಗೆ ಹೊಸ ಜ್ಞಾನ ನೀಡಬಲ್ಲ. ಜೀವ ಮತ್ತು ಜ್ಞಾನ ಒಂದು ರೀತಿಯಲ್ಲಿ ಸಮಾನ. ಜ್ಞಾನವಿದ್ದರೆ ಮಾತ್ರ ಹಾಗೆಯೇ ಜೀವವಿದ್ದರೆ ಮಾತ್ರ ಜ್ಞಾನ. ನೀನು ಈ ಇಬ್ಬರಲ್ಲಿ ಯಾರನ್ನು ಆರಿಸಿಕೊಳ್ಳುತ್ತೀ?"

ಜ್ಞಾನ ನೀಡಬಲ್ಲ ವಿದ್ವಾಂಸನನ್ನು" ಎಂದು ಎದುರಿಗಿದ್ದವನು ಹೇಳುತ್ತಾನೆ. ಆದರೆ ಆತ ನಗುತ್ತಿದ್ದಾನೆ. ಅವನ ಸ ಅರ್ಥವನ್ನು ಕೇಳುತ್ತೇನೆ. "ನಿನಗೇ ಅನುಮಾನವಿರುವಂತಿದೆ."

ಯಾಕೆಂದರೆ ನೀನು ನನ್ನ ಬಗ್ಗೆ ತಿಳಿದಿರುವುದೇ ಬೇರೆ. ನಾನು ಕೂಡಲೆ ಮಹಾಸುಂದರಿಯನ್ನು ಳ್ಳಬಹುದೆಂಬ ಅನುಮಾನ ನಿನಗಿದೆ."

ನ್ನ ಅನುಮಾನ ಕೇವಲ ಸಿನಿಕತನ ಅನ್ನುತ್ತೀಯಾ?" ಎಂದು ನಾನು ಗಂಭೀರವಾಗಿಯೇ ಕೇಳುತ್ತೇನೆ. ದಕ್ಕೆ "ಹಾಗಲ್ಲ, ನನಗೆ ಕೂಡ ಅನುಮಾನವಿದೆ. ಜೀವವಿದ್ದರೆ ಬೇರೆ ಎಲ್ಲದೂ ಸಾಧ್ಯ ಅನ್ನಿಸುತ್ತದೆ" ಸತ್ಯವನ್ನು ನುಡಿಯಲೆತ್ನಿಸುತ್ತಾನೆ.

ನು ಯೋಚಿಸುತ್ತಾ ಕೂರುತ್ತೇನೆ. ನಾನು ಉಪನಿಷತ್ತಿನ ಋಷಿಯಲ್ಲ, ಆತ ನನ್ನ ಶಿಷ್ಯನಲ್ಲ, ಎಲ್ಲವೂ ಯ ಭಾರ ಹೆಚ್ಚಿಸುತ್ತದೆ. ನಾನು ಮಹಾ ದೊಡ್ಡ ಮನುಷ್ಯ ಎಂದು ತಿಳಿದುಕೊಂಡು ಅದರಂತೆ ಕೊಳ್ಳಲು ಸಾಧ್ಯವಿದ್ದರೆ ಎಷ್ಟು ಚೆನ್ನಾಗಿತ್ತು, ಆತ ನಿಜಕ್ಕೂ ನನ್ನ ಶಿಷ್ಯನಾಗಿ ನನ್ನ ಅನುಭವದ ಸುಲ್ಲಿ ನೆಮ್ಮದಿಯಾಗಿರಲಾಗಿದ್ದರೆ ಎಷ್ಟು ಚೆನ್ನಾಗಿತ್ತು, ಆದರೆ ಮನುಷ್ಯನಿಗೆ ಅಂಥ ಗೂಡುಗಳೇ ವೆ ಎಂದು ತಿಳಿದವರು ಗಾಢ ಭ್ರಮೆಯಲ್ಲಿದ್ದು ಹೊರಟುಹೋಗಿದ್ದಾರೆ.




ನು ಈ ಸುರಸುಂದರಿ ಮತ್ತು ಮಹಾವಿದ್ವಾಂಸರಲ್ಲಿ ಮಹಾವಿದ್ವಾಂಸರನ್ನು ಆರಿಸಿಕೊಳ್ಳುವುದು ದು ನಿನ್ನ ಗಣ್ಯತೆಗೆ ತಕ್ಕಂಥ ಸಾರ್ವಜನಿಕ ಆಯ್ಕೆ. ಆದರೆ ನೀನೊಬ್ಬನೇ ಇದ್ದಾಗ ಸುರಸುಂದರಿಯನ್ನು ಕೊಳ್ಳುತ್ತೀ. ಇಲ್ಲಿಯೇ ಮನುಷ್ಯನ ವಿಚಿತ್ರ ದ್ವಂದ್ವವಿದೆ. ಅದು ನಿನಗೆ ಗೊತ್ತಾಗಿಲ್ಲವೆಂದು ವಿವರಿಸುತ್ತಿದ್ದೇನೆ. ಸುರಸುಂದರಿಯನ್ನು ಆರಿಸಿಕೊಂಡು ಗೆದ್ದವನು ವಿದ್ವಾಂಸನನ್ನು ಪಡೆದವನಷ್ಟು ಸುಮ್ಮನಿರುವುದಿಲ್ಲ. ಸುಂದರಿ ನಿನ್ನ ಪ್ರೇಮ ತೀವ್ರಗೊಂಡಂತೆ ಆ ಬಗ್ಗೆ ಎಲ್ಲರಿಗೂ ತಿಳಿಯುವಂತೆ ವರ್ತಿಸುತ್ತೀ. ಪ್ರೇಮ ಕೂಡ ನಿನ್ನ ಗೂಡಲ್ಲ, ಸುಂದರಿಗೆ ಹೃದಯ, ಬುದ್ಧಿ, ವಿವೇಕ ಇರುವುದು ನಿನಗೆ ಗೊತ್ತಾಗುತ್ತೆ, ನಿನ್ನ ಎಲ್ಲ ಕಷ್ಟಗಳು ಶುರುವಾಗುತ್ತೆ. ಈ ಷ್ಟು ಕತೆಗಳ ಮೂಲಕ ವಿವರಿಸದೆ ನಿಜಜೀವನದಲ್ಲೇ ಇಟ್ಟು ನೋಡುತ್ತೇನೆ. ಓ.ಜೆ. ಸಿಂಪ್ಸನ್‌ನ ಅಂಶಗಳು ಸನದಲ್ಲೂ ಇರುತ್ತವೆ. ಕಪ್ಪು ಮನುಷ್ಯನಾದ ಆತ ಬಿಳಿ ಹುಡುಗಿಯನ್ನು ಪ್ರೇಮಿಸಿದ. ಆದರೆ ಪ್ರೇಮ ಸಾಕಾಗದೆ ಮದುವೆಯಾದ. ಮದುವೆಯಾದ ಮೇಲೆ ಅವನಿಗೆ ಬಿಳಿ ಹುಡುಗಿಯಲ್ಲಿ ಬುದ್ಧಿ ಕೂಡ ಇರುವುದು ತು. ಅವಳು ಬೇರೊಬ್ಬನತ್ತ ಕಣ್ಣು ಹಾಕತೊಡಗಿದಳು. ಆಗ ಸಿಂಪ್ಸನ್ ಅವಳನ್ನು ಕೊಂದುಹಾಕಿದ. ವುದನ್ನು ಕೂಡ ಯಾರಿಗೂ ಗೊತ್ತಿಲ್ಲದಂತೆ ಮಾಡಬಹುದಿತ್ತು, ಆದರೆ ಪ್ರತಿಯೊಬ್ಬ ಕೊಲೆಗಾರನೂ ತಾನು ಮಾಡಿದ ಕೊಲೆಯ ಸಾಕ್ಷಿಗಳನ್ನು ತನಗೆ ಗೊತ್ತಿಲ್ಲದಂತೆಯೇ ಬಿಟ್ಟಿರುತ್ತಾನೆ. ಅದು ಆತ ತನ್ನ ಪ್ರೇಮದಂತೆಯೇ ಕೊಲೆಯನ್ನು ಜಾಹೀರು ಮಾಡುವ ವಿಧಾನ. ಅಥವಾ ಲೋಕಕ್ಕೆ ತೋರುವ ವಿಧಾನ. ಹೀಗಾಗಿ ಈತ ಸಿಕ್ಕಿಹಾಕಿಕೊಂಡ. ಆದರೆ ಅದು ಕೂಡ ಅವನಿಗೆ ಸವಾಲು. ಕಪ್ಪು ಮನುಷ್ಯನೊಬ್ಬ ಬಿಳಿಯವಳನ್ನು ಪ್ರೇಮಿಸುವ ಹಕ್ಕನ್ನು ಸಮರ್ಥಿಸಿಕೊಳ್ಳುವ ರೀತಿ. ಹೀಗಾಗಿ ಆತ ತನ್ನ ಕೊಲೆಯ ಬಗ್ಗೆ ಏನೇನೋ ಹೇಳಿ ತಪ್ಪಿಸಿಕೊಂಡ. ಈಗ ಮತ್ತೆ ತಾನೇ ಕೊಲೆಮಾಡಿದ ಬಿಳಿ ಹೆಂಡತಿಯ ಕೊಲೆಗಾರನಿಗಾಗಿ ಹುಡುಕುತ್ತಿರುವುದಾಗಿ ಆತ ಹೇಳುತ್ತಿದ್ದಾನೆ. ಆದ್ದರಿಂದ ಸಿಂಪ್ಸನ್ ಮುಖವಾಡಗಳೊಳಗಿನ ಮುಖವಾಡಗಳ ಮೂಲಕ ಬಹು ಕುತೂಹಲಕರ ವ್ಯಕ್ತಿ. ಆತ ಎಲ್ಲ ಮನುಷ್ಯರಂತೆಯೇ ಆಗಿದ್ದೂ ವಿಶೇಷ ಮುಖವಾಡ ಧರಿಸಿದವನಾದ್ದರಿಂದ ವರ್ಣರಂಜಿತ ಮನುಷ್ಯ. ಮಹಾನ್ ಹೀರೋ ಕೂಡ. ಆತ ಈಗ ಭಾಷಣ ಮಾಡಲು ಲಕ್ಷಾಂತರ ಡಾಲರ್ ಪಡೆಯಬಲ್ಲ. ಝಗಝಗಿಸುವ ಬೆಳಕಲ್ಲಿ ನಿಂತು ತನ್ನ ದಿವಂಗತ ಬಿಳೀ ಹೆಂಡತಿಯ ಬಗ್ಗೆ ಮಾತಾಡಿ ಇನ್ನಷ್ಟು ಜನರನ್ನು ಒಲಿಸಿಕೊಳ್ಳಬಲ್ಲ. ಇದು ಒಂದು ಅಂಶ.

ಇನ್ನೊಂದು ಅಂಶವೇನೆಂದು ಹಾಗೇ ಹೇಳುವುದಕ್ಕೆ ಬದಲು ಒಂದು ಉದಾಹರಣೆ ಕೊಡುತ್ತೇನೆ. ಮೊನ್ನೆ ಒಬ್ಬಳು ಹೆಣ್ಣುಮಗಳು ನನ್ನನ್ನು ನೋಡಲು ಬಂದಳು. ಒತ್ತರಿಸಿ ಬರುತ್ತಿದ್ದ ಅಳುವನ್ನು ತಡೆದುಕೊಂಡಿದ್ದ ಆಕೆ ತನ್ನ ಗಂಡನ ಬಗ್ಗೆ ನೂರಾರು ಆಪಾದನೆ ಮಾಡಿದಳು. ಅವುಗಳಲ್ಲಿ ಒಂದು ಆತನ ಸೋಗಲಾಡಿತನ. ಇನ್ನೊಂದು ಹೃದಯಹೀನತೆ. ಮತ್ತೊಂದು ಅವಳೊಂದಿಗೆ ಮಾತಾಡಲು ಕೂಡ ಆಗದ ಆತನ ಜಡತ್ವ. ಕೇಳುತ್ತಾ ಹೋದಂತೆ ನಾನು ಮೂಕನಂತೆ ಕೂತೆ. ಬಹಳ ಹೊತ್ತು ಮಾತಾಡಿದ ಆಕೆ ಸುಸ್ತಾಗಿ ಸುಮ್ಮನಾದಳು. ನಾನು ಮೆತ್ತಗೆ ಆಕೆಯ ವೃತ್ತಿ ಕೇಳಿದೆ. ಅವಳು ದೊಡ್ಡ ಅಧಿಕಾರಿಣಿ. ಅವಳಿಗೆ ಮೂವರು ಮಕ್ಕಳು. ಅವಳ ಅಧಿಕಾರದಿಂದಾಗಿ ಅವಳನ್ನು ಗೌರವಿಸುವವರು, ಕಾಣಿಕೆ ಒಪ್ಪಿಸುವವರು, ಮೆಚ್ಚಿಕೊಂಡಾಡುವವರು ಅಪಾರ ಜನ. ನಾನು ಬಹಳ ಹೊತ್ತು ಸುಮ್ಮನಿದ್ದು ಕೇಳಿದೆ, "ನಿಮಗೆ ತುಂಬ ಸುಖವಾಗಿರುವ ಯಾವುದಾದರೂ ಕುಟುಂಬ ಗೊತ್ತಿದ್ದರೆ ಹೇಳಿ."

ಆಕೆ ಏನೇನೋ ಬಡಬಡಿಸತೊಡಗಿದಳು. ಪಕ್ಕದ ಮನೆಯ ವೈದ್ಯರು ಹೆಂಡತಿಗೆ ಮುತ್ತು ಕೊಟ್ಟು ಕಾರಿನಲ್ಲಿ ತೆರಳಿ ಸಂಜೆ ಆರಕ್ಕೆ ಮನೆಗೆ ಬರುವ ಬಗ್ಗೆ ಹೇಳಿದಳು.

ನಾನು ಈ ವೈದ್ಯನ ಬಗ್ಗೆ ಕೆಟ್ಟದು ಹೇಳಲು ಇಷ್ಟಪಡಲಿಲ್ಲ.

"ದಯವಿಟ್ಟು ತಿಳಿದುಕೊಳ್ಳಿ. ಇದು ಸಾವಿಲ್ಲದ ಮನೆಯ ಸಾಸಿವೆಯಂತೆ. ಅಂಥ ಸಾಸಿವೆ ನಿಮಗೆ ಸಿಗುವುದು ಕಷ್ಟ. ಅದೇ ವೈದ್ಯರು ನೀವು ನಿಮ್ಮ ಗಂಡನ ಬಗ್ಗೆ ಹೇಳುವಂತೆಯೇ ತನ್ನ ಹೆಂಡತಿಯ ಬಗ್ಗೆ ನನಗೆ ಹೇಳಿದ್ದಾರೆ. ಅದನ್ನೆಲ್ಲ ನಿಮಗೆ ಹೇಳುತ್ತೇನೆ, ಕೇಳಿ" ಅಂದೆ. "ಬೇಡಿ. ದಯವಿಟ್ಟು ಹೇಳಬೇಡಿ" ಅಂದಳು ಅಧಿಕಾರಿಣಿ.

ನಾನು ನಕ್ಕು ಹೇಳಿದೆ, "ಇರಲಮ್ಮ, ಅದೆಲ್ಲ ಬೇಡ. ನಾಳೆಯಿಂದ ನಿಮ್ಮ ಗಂಡ ನಿಮ್ಮೊಂದಿಗೆ ಎರಡು ಗಂಟೆ ಕಳೆಯಲು ಕೇಳಿಕೊಳ್ಳುತ್ತೇನೆ. ಆತ ಒಪ್ಪಬಹುದು. ಆ ಎರಡು ಗಂಟೆ ಏನು ಮಾತಾಡುವುದೆಂದು ನೀವು ಯೋಚಿಸಿ ಸಿದ್ಧರಾಗಿ" ಅಂದೆ.

ಆಕೆ ದಿಗಿಲಿನಿಂದ ನಡುಗತೊಡಗಿದಳು.

ನಾನು ಹೇಳಿದೆ, "ನೀವು ಮೊದಲು ನಿಮ್ಮ ಗಂಡನ ಹಂಗಿಲ್ಲದೆ ಜೀವಂತವಾಗಿ ಇರುವುದನ್ನು, ಸುಂದರವಾಗಿ ಬದುಕುವುದನ್ನು ಕಲಿಯಿರಿ. ಆತನಿಗೂ ಕಲಿಯಲು ಹೇಳುತ್ತೇನೆ. ಆಗ ನೀವು ಮಾತಾಡದೇ ಅನೇಕ ಗಂಟೆ ಪರಸ್ಪರ ಸ್ನೇಹ ಅನುಭವಿಸಬಹುದು."

ಆಕೆ ಯೋಚಿಸಿದಳು. "ಅವಸರದ ತೀರ್ಮಾನಕ್ಕೆ ಬರಬೇಡಿ. ನಾವೆಲ್ಲ ಸಾಮಾನ್ಯರು. ನನ್ನ ಕಷ್ಟಗಳಿಗೆ ನಿಮ್ಮಲ್ಲಿ ಪರಿಹಾರವಿಲ್ಲ, ನಿಮ್ಮ ಕಷ್ಟಗಳಿಗೆ ನನ್ನಲ್ಲಿ ಸಲೀಸು ಪರಿಹಾರವಿಲ್ಲ, ಕ್ರಿಸ್ತನಂತೆ ಬುದ್ಧನಂತೆ ಶಾರದಾದೇವಿಯಂತೆ ಅಕ್ಕಮಹಾದೇವಿಯಂತೆ ಮಾತಾಡಿ ಉಪಯೋಗವಿಲ್ಲ, ಅವರ ಕಷ್ಟಗಳೂ ನಮಗೆ ಗೊತ್ತಿಲ್ಲ... ಹೋಗಿ, ಪ್ರಬುದ್ಧ ಮಹಿಳೆಯಂತೆ ವರ್ತಿಸಿ" ಅಂದೆ.

ಆಕೆ ಎಳೆಮಗುವಿನಂತೆ ತಲೆಯಲ್ಲಾಡಿಸುತ್ತಾ 'ಆಗಲಿ' ಅಂದಳು.

-ಡಿಸೆಂಬರ್ 20, 1995

# ಗಿನ್ನಿಸ್ ದಾಖಲೆ ಖಚಿತ!

ಎಚ್.ಎಲ್. ಕೇಶವಮೂರ್ತಿ



## ಅಣಕ

ಛೇ! ಸುಮ್ಮನೇ ಹೇಳಬಾರದು. ಭಾರತೀಯ ಜನತಾ ಪಕ್ಷ ಜನ್ಮತಾಳಿದಂದಿನಿಂದ 'ಬೇರೆ ಪಕ್ಷಗಳಿಗಿಂತ ಭಿನ್ನ' ಎನ್ನುವುದೇ ಅದರ ಘೋಷವಾಕ್ಯ ಆಗಿದೆ ಎಂಬುದು ಸರಿಯಷ್ಟೆ. ಚುನಾವಣೆಗಳಲ್ಲೂ ಇದನ್ನೇ ಬಳಸುತ್ತಿತ್ತು. ಅಧಿಕಾರಕ್ಕೆ ಬರುವವರೆಗೂ ಎಲ್ಲರೂ ಹೀಗೆಯೇ ಹೇಳುತ್ತಾರೆ. ನಂತರ ಎಲ್ಲರ ಬೇಳೆ ಕಾಳೂ ಒಂದೇ ತರಹದ್ದು ಎಂದು ಮತದಾರ ಮಹಾಪ್ರಭು ಉದಾಸೀನ ತೋರಿದರೂ ಮಾತಿಗೆ ಮುಂಚೆ 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ, 'ರಾಷ್ಟ್ರಭಕ್ತಿ', 'ದೇಶಪ್ರೇಮ' ಅನ್ನುವವರೇ ತುಂಬಿರುವ ಪಕ್ಷ. ಭಿನ್ನವಾಗಿ ಇದ್ದರೂ ಇರಬಹುದು ಎನ್ನುವ ಅನುಮಾನ ಇದ್ದೇ ಇದ್ದಿತು. ಪರೀಕ್ಷಿಸಿ ನೋಡಿಯೇ ಬಿಡೋಣ ಎಂದು ಅಧಿಕಾರ ಕೊಟ್ಟರು ನೋಡಿ. 'ಭಿನ್ನ' ಎಂದು ಸಾಧಿಸಿಯೇ ಬಿಟ್ಟಿತು ಭಾಜಪ!

ರಾಜ್ಯ ಹಲವು ಸರ್ಕಾರಗಳನ್ನು ಕಂಡಿದೆ. ಯಾವ ಮಾಜಿ ಮುಖ್ಯಮಂತ್ರಿಯೂ ಜೈಲು ಸೇರುವ ಧೈರ್ಯ ತೋರಿರಲಿಲ್ಲ.. ಯಡ್ಯೂರಪ್ಪನವರು ಸೇರಿದರು. 'ಭಿನ್ನ' ಎಂದು ತೋರಿಸಿದರು!

ಕೆಲವು ನಾಟಕೀಯ ಬೆಳವಣಿಗೆಗಳು ನಡೆದವು ಎಂಬುದು ನಿಜ. ಕೋರ್ಟು-ಜೈಲು-ಆಸ್ಪತ್ರೆ-ಬೆಡ್‌ಶೀಟ್-ಜೈಲು ಹೀಗೇ ಮಾಜಿ ಮುಖ್ಯಮಂತ್ರಿಗಳು ಸಂದರ್ಶನ ನೀಡಿದ್ದರು ಎಂಬುದು ನಿಜ. ವಿಕ್ಟೋರಿಯಾ ಆಸ್ಪತ್ರೆಗೆ ಹೋದಾಗ ಬೆಡ್‌ಶೀಟ್ ಮರೆಯಲ್ಲಿ ಸನ್ಮಾನ್ಯರನ್ನು ವಾರ್ಡ್‌ಗೆ ಕರೆದುಕೊಂಡು ಹೋದದ್ದೂ ನಿಜ. (ಇದರ ಸಂಪೂರ್ಣ ಜವಾಬ್ದಾರಿ ಹೊತ್ತ ಆಸ್ಪತ್ರೆ-ಪೊಲೀಸ್ ಸಿಬ್ಬಂದಿ ಕಾರ್ಯಕ್ಷಮತೆಯನ್ನು ಮೆಚ್ಚಲೇಬೇಕು!) ಕ್ಯಾಮೆರಾಗಳಿಗೆ ಬೆದರಿ ಮಾಜಿ ಮುಖ್ಯಮಂತ್ರಿ ಹೇಡಿಯಂತೆ ನಡೆದುಕೊಂಡರು ಎಂದು ಮಾಧ್ಯಮಗಳು ಬಿಂಬಿಸಿದ್ದು ಯಡ್ಯೂರಪ್ಪನವರಿಗೆ 'ನೋವು' ತಂದಿದೆಯಂತೆ. ಇದಕ್ಕಾಗಿ ಅವರು ವ್ಯಾಕುಲಗೊಳ್ಳಬೇಕಾದ ಪ್ರಸಂಗ ಇಲ್ಲ. ಮಾರನೇ ಬೆಳಗ್ಗೆ ಧೀರೋದಾತ್ತವಾಗಿ ಸ್ಟ್ರೆಚರ್ ಮೇಲೆ ಮಲಗಿ ಜೈಲಿಗೆ ಹೋದರಲ್ಲಾ... ಅದು ಮುಖ್ಯ. ಯಾವ ಮುಖ್ಯಮಂತ್ರಿ ಹೀಗೆ ಮಾಡಿದ್ದ? ಭಾಜಪದ ಯಡ್ಯೂರಪ್ಪ ಮಾಡಿದರು. ತಾವು ಭಿನ್ನ ಎಂದು ತೋರಿಸಿದರು!

ಮತ್ತೂ ಹೇಳಬೇಕೆಂದರೆ... ಎಫ್‌ಐಆರ್ ದಾಖಲಿಸಿಕೊಂಡ ಪ್ರಥಮ ಗೃಹಮಂತ್ರಿ ಯಾರು? ಕಾಂಗ್ರೆಸ್‌ನವರೇ? ಅಲ್ಲ. ಜನತಾದಳದವರೇ? ಅಲ್ಲ. ಭಾಜಪದ ಅಶೋಕ್... ಇಲ್ಲೂ ಭಿನ್ನ!

ಇನ್ನು ಭಾಜಪದ ಅಮೂಲ್ಯ ಕೊಡುಗೆಯನ್ನು ಮರೆಯುವಂತಿಲ್ಲ. ಇದುವರೆಗಿನ ಯಾವ ಸರ್ಕಾರವೂ ಇಂತಹ ಕೊಡುಗೆಯನ್ನು ಇಷ್ಟೊಂದು ಸಂಖ್ಯೆಯಲ್ಲಿ ನೀಡಿಲ್ಲ. ಇದರಲ್ಲೂ ಭಾಜಪ ಪ್ರಥಮ!

ಏನು ಅದರ ಕೊಡುಗೆ?

ಸಂಪುಟ ಸದಸ್ಯರು!

ಯಾವುದಕ್ಕೆ ಈ ಕೊಡುಗೆ?

ಪರಪ್ಪನ ಅಗ್ರಹಾರ ಜೈಲಿಗೆ?

ಕೆಲವರು ಆಗಲೇ ಸೇರಿದ್ದಾರೆ. ಕೆಲವರು ಸೇರುವ ಸರದಿಯಲ್ಲಿದ್ದಾರೆ!


ಗಿನ್ನಿಸ್ ದಾಖಲೆ ಸೇರುವುದು ಖಚಿತ!

ಭಾಜಪ ಇತರ ಪಕ್ಷಗಳಿಗಿಂತ ಭಿನ್ನ ಅಲ್ಲದೇ ಮತ್ತೇನು?

### ಸಮಯಸ್ಫೂರ್ತಿ

ವಸಿ ಹಿಂದಿನ ಕತೆ ನೆನ್ಪಳಿ.

ಜಾತ್ಯತೀತ ಜನತಾದಳ-ಭಾಜಪ ದಾಂಪತ್ಯ ಜೀವನ ಸುಸೂತ್ರವಾಗೇ ಇತ್ತು, ಇಪ್ಪತ್ತು ತಿಂಗಳು ಕಳೀತು ನೋಡಿ. ಕುಮಾರಣ್ಣ ತಾಳಿ ಕಿತ್ಕೊಂಡು ಪೇರಿಕಿತ್ತರು. ನನಗೆ ಮೋಸ




ಆಗೋಗದೆ ಅಂತಾವ ಯಡ್ಯೂರಪ್ನೋರು ಬಾಯಬಡ್ಕೊಂಡು ಊರೂರು ಸುತ್ತಿದರು. ಹೆಂಗಸರ ಮುಂದೆ ಕುಮಾರ ಮಾಡಿದ ದ್ರೋಹಾವ ಎಳೆಎಳೆಯಾಗಿ ಬಿಡಿಸಿ ಕಣ್ಣೀರುಕೋಡಿನೇ ಹರಿಸಿದ್ರು. ಇದಕ್ಕಿಂತ ಸೆಂಟಿಮೆಂಟಲ್ ಟಚ್ ಕೊಡಬೇಕು ಅಂತಾವ ಮಕ್ಳ ವಿಚಾರ ತಗಂಡ್ರು. 'ತಾಯಂದಿರಾ ನಿಮ್ಮ ಮಕ್ಳು ಅಮೆರಿಕಾಕ್ಕೆ ಹೋಯ್ತವೆ. ಅಲ್ಲಿಯೋರು ನೀನು ಎಲ್ಲಿಂದ ಬಂದೆಯಪ್ಪಾ ಅಂತ ಕೇಳ್ತಾರೆ. ಆಗ ಅವು ಹಿಂಗಿಂಗೆ ಇಂತ ಕಡೆಯಿಂದ ಬಂದೆ ಅಂತವೆ. ಇದ ಕೇಳಿದ ಅವ್ರು ಓಹೋ ನೀನು ವಚನಭ್ರಷ್ಟನ ರಾಜ್ಯದಿಂದ ಬಂದವನಾ ಅಂತ ನಗಾಡ್ತರೆ; ಪಾಪ ಈ ಮಾತ ಕೇಳಿದ ಮ್ಯಾಕೆ ಆ ಮಕ್ಕಳ ಮನಸ್ಸಿಗೆ ಎಂತಾ ನೋವಾಯ್ತದೆ. ಇದ ನೆನಕಂಡ್ರೇ ಹಂಗೇ ನಡ್ಗೋಹಂಗಾಯ್ತದೆ' ಅಂತೆಲ್ಲ ಹೇಳಿದ್ರು. ಇದನ್ನೆಲ್ಲ ಕೇಳಿದ ಹೆಂಗಸರು ಇಂಥ ಅವಮಾನ ನಮ್ಮಕ್ಳು ಅನುಭೋಸೋದು ಬ್ಯಾಡ್ವೇಬ್ಯಾಡ ಇವನ್ಗೇ ಓಟಾಕಾನ ಅಂತಾವ ಹಾಕಿರಬಹುದು!

ಈಗೇನಾಗದೆ ಅಂದ್ರೆ ಯಡ್ಯೂರಪ್ನೋರು ಮಾಜಿ ಮುಖ್ಯಮಂತ್ರಿಯಾಗಿದ್ದೋರು. ಈಗ ಜೈಲಲ್ಲಿ ಅವ್ರೆ. ಅವರೇ ಹೇಳ್ದಂಗೆ ಈಗೇನಾರ ರಾಜ್ಯದ ಮಕ್ಳು ಅಮೆರಿಕಕ್ಕೆ ಹೋದ್ರು ಅನ್ನಿ. ಅಲ್ಲಿ ಅವರು ಅದೇ ಪ್ರಶ್ನೆ ಕೇಳ್ತಾರೆ. ನೀವೆಲ್ಲಿಂದ ಬಂದವರು ಅಂತಾವ. ಅವು ಹಿಂಗಿಂಗೆ ಅಂತಾವೆ. ಇದನ್ನ ಕೇಳಿಸಿಕೊಂಡೋವು ಓಹೋ ಆ ಜೈಲಲ್ಲವ್ನಲ್ಲ... ನಿಮ್ಮ ಮುಖ್ಯಮಂತ್ರಿಯಾಗಿದ್ದೋನು ಅವನ ರಾಜ್ಯದವರಾ ಅನ್ನಬಹುದು. ಆಗ ಏನು ಮಾಡಬೇಕು ಅಂತ ಯಡ್ಯೂರಪ್ನೋರ ಕೇಳಿ ನೋಡಬೇಕು...

### ಡಕಾಯಿತ ಡಾಕ್ಟರುಗಳು

ಡಾಕ್ಟರುಗಳ ಹೊಟ್ಟೆಯಲ್ಲಿ ದುಡ್ಡಿನ ದೆವ್ವವೇ ಕುಳಿತಿರಬೇಕು. ಸತ್ತ ಮೇಲೆ ಅವರ ಹೆಣದ ಮೇಲೆ ಹಣ ಹೇರಿಕೊಂಡು ಹೋಗುತ್ತಾರೆಯೋ ಏನೋ. ಸರ್ಕಾರ ನೀಡುವ ಸಂಬಳ ಏನೇನೂ ಸಾಲದಂತೆ. ದೇಹದ ಆರೋಗ್ಯ ಸರಿ ಇಲ್ಲ ಎಂದು ಬಂದವರನ್ನು ಹಣಕ್ಕಾಗಿ ಪೀಡಿಸಿ ಮಾನಸಿಕ ಆರೋಗ್ಯವನ್ನು ಕೆಡಿಸುವುದೇ ಅವರ ವೃತ್ತಿಧರ್ಮ ಆಗಿರುವಂತಿದೆ. ಇಷ್ಟಾದರೂ ಕೆಲವರಿಗೆ ತೃಪ್ತಿ ಇಲ್ಲ. ಹಣ ಮಾಡಲು ಇರುವ ವೈದ್ಯೇತರ ಕಳ್ಳ ಮಾರ್ಗಗಳನ್ನೆಲ್ಲ ಕರಗತ ಮಾಡಿಕೊಂಡಿರುವಂತಿದೆ. ಹಿಂದೆ ವೈದ್ಯಕೀಯ ಕಾಲೇಜು ಎಂದು ಮಾತ್ರ ಕರೆಯಲಾಗುತ್ತಿದ್ದ ಸಂಸ್ಥೆಗಳು ಡಾಕ್ಟರುಗಳ ಇಂತಹ 'ಚೋರಕೌಶಲ್ಯ' ನೋಡಿಯೋ ಏನೋ ವಿಮ್ಸ್, ಮಿಮ್ಸ್, ಮಿಮ್ಸಾ, ಸಿಮ್ಸ್, ಹಿಮ್ಸ್ ಎಂದು ತರಾವರಿ 'ಇಮ್ಸ್'ಗಳಿಂದ ಕಂಗೊಳಿಸುತ್ತಿವೆ!

ವಿಜಯನಗರದ ವೈಭವವನ್ನು ನೆನಪಿಸುವಂತೆ ಬಳ್ಳಾರಿಯಲ್ಲಿ ಇರುವ ವಿಮ್ಸ್ 'ಗೋಲ್‌ಮಾಲ್ ವಿಮ್ಸ್' ಎಂಬ ಕುತೂಹಲಕಾರಿ, ರೋಮಾಂಚಕ ಪತ್ತೇದಾರಿ ಸಿನಿಮಾಕ್ಕೆ ಘನವಾದ ಕತೆ ನೀಡಿದೆ. ಅದು ಎಂತೆಂಬೆಂದರೆ...

ಕೇವಲ ಎಂಬಿಬಿಎಸ್ ಪದವಿ ಪಡೆದರೆ ಏನೇನೂ ಸಾಲದು. ಸ್ನಾತಕೋತ್ತರ ಪದವಿ ಇರಲೇಬೇಕು. ಆಗಲೇ ಅವರು ಸರಿಯಾದ ಡಾಕ್ಟರು ಎಂಬ ಹೆಸರಿಗೆ ಪಾತ್ರನಾಗಲು ಸಾಧ್ಯ ಎಂಬುದು ಸಾರ್ವಜನಿಕ ತಿಳುವಳಿಕೆ ಇರುವಂತಿದೆ. ಅದನ್ನು ಪಡೆಯಲು ಸಾವಿರಾರು ಜನ ತಹತಹಿಸುತ್ತಿರುತ್ತಾರೆ. ಇದನ್ನು ಅರಿತ ಖಾಸಗಿ ವೈದ್ಯಕೀಯ ಕಾಲೇಜಿನವರು ಸೀಟಿನ ರೇಟನ್ನು ಯದ್ವಾತದ್ವಾ ಏರಿಸಿದ್ದಾರೆ. ಕೋಟಿ ಸುರಿದರೂ ಸೀಟು ಸಿಗುವುದು ಖಾತರಿ ಇಲ್ಲ. ಒಂದು ಕಡೆ ದುಬಾರಿ ಹಣ ನೀಡಿದರೂ ದುರ್ಲಭವಾದ ಸೀಟು, ಮತ್ತೊಂದು ಕಡೆ ಸೀಟಿಗಾಗಿ ಬಾಯಿಬಾಯಿ ಬಿಡುತ್ತಿರುವವರು. ಕೆಲವು ಪ್ರಳಯಾಂತಕ ವೈದ್ಯರಿಗೆ ಇದು ಸುವರ್ಣಾವಕಾಶ ಒದಗಿಸಿತು. ಒಳದಾರಿ ಹುಡುಕಿದರು. ಅಲ್ಲಿ ನೀಡುವ ಅರ್ಧ ಹಣಕ್ಕೆ ಸೀಟು ದೊರಕಿಸಲು ಮುಂದಾದರು ವಿಮ್ಸ್ ಧರ್ಮರತ್ನಾಕ[...]

ಇದು ಹೇಗೆ ಸಾಧ್ಯ ಎಂದರೆ ಡಾಕ್ಟರುಗಳ ಕೈಚಳಕ ಇರು[...] ಇಲ್ಲಿ, ಅಸಾಧ್ಯವಾದುದನ್ನು ಸಾಧ್ಯ ಮಾಡುವುದೇ ನಿ[...] ವೈದ್ಯರ ಕರ್ತವ್ಯ ತಾನೇ!

ಸ್ನಾತಕೋತ್ತರ ಪದವಿಗಾಗಿ ಹಾಹಾಕಾರ ಪಡುವ[...] ಪ್ರವೇಶ ಪರೀಕ್ಷೆ ಇರುತ್ತದೆ. ನಿಪುಣ ವೈದ್ಯರ ತಂಡಕ್ಕೆ [...] ಯಾದ ಹಣ ನೀಡಿದರೆ ಸಾಕು. ಅಂತಹ ವೈದ್ಯರ ಸ[...] ಪ್ರಜ್ಞೆ ಎಚ್ಚರಗೊಳ್ಳುತ್ತದೆ. ಆಸ್ಪತ್ರೆಗೆ ವೇಳೆಗೆ ಸರಿಯಾಗಿ ಎ[...] ಬಾರದೇ ಇರಬಹುದು. ಆದರೆ ಪ್ರವೇಶ ಪರೀಕ್ಷೆಯ [...] ಸಮಯಕ್ಕೆ ಸರಿಯಾಗಿ ಪ್ರಾಂಶುಪಾಲ ಕೊ[...] ಹಾಜರಾಗುತ್ತಾರೆ. ಪ್ರಶ್ನೆ ಪತ್ರಿಕೆಯ ಪ್ಯಾಕೆಟ್ ಒಡೆಯು[...] ಯಾವುದೋ ಮಾಯದಲ್ಲಿ ಪ್ರಶ್ನೆ ಪತ್ರಿಕೆಯ ಫೋಟೋ[...] ಡಿಜಿಟಲ್ ಕ್ಯಾಮೆರಾದಲ್ಲಿ ಕ್ಲಿಕ್ಕಿಸುತ್ತಾರೆ. ನಂತರ ಕ್ಯಾಮೆರಾ[...] ತಲುಪಿಸಬೇಕಾದ ಸ್ಥಳಕ್ಕೆ ರವಾನಿಸುತ್ತಾರೆ. ಅಲ್ಲಿ ಬ[...] ನಿಪುಣ ವೈದ್ಯರ ತಂಡವೇ ಕಾಯ್ದು ಕುಳಿತಿರುತ್ತೆ. ಇವ[...] ಎಂದರೆ ಇಂತಹ ಆಪರೇಷನ್‌ನಿಂದಾಗಿಯೇ ಸ್ನಾತಕೋ[...] ಪದವಿಯಿಂದ ರಾರಾಜಿಸುತ್ತಿರುವ ಮಹಾಶಯರು! ಈ[...] ಭಾನ್ವಿತರು ಕಂಪ್ಯೂಟರ್‌ನಿಂದ ಪ್ರಶ್ನೆಪತ್ರಿಕೆಯ ಪ್ರಿಂಟ್[...] ತೆಗೆಯುತ್ತಾರೆ. ಲಗುಬಗೆಯಿಂದ ಉತ್ತರ ಸಿದ್ಧಪಡಿಸು[...] 4/6 ಅಂಗುಲ ಹಾಳೆಯ ಮೇಲೆ ಇದನ್ನ ಭಟ್ಟಿ ಇಳಿಸು[...]

ಇತ್ತ ಪರೀಕ್ಷಾ ಕೊಠಡಿಯಲ್ಲಿ ಕಾಸು ನೀ[...] ವಿದ್ಯಾರ್ಥಿಗಳಿಗೆ ತಳಮಳ. ಹತ್ತುಗಂಟೆಗೆ ಪರೀಕ್ಷೆ ಪ್ರಾ[...] ಆಗಿತ್ತು. ಆದರೆ ಏನನ್ನೂ ಬರೆಯಲು ನಿಖರ ಉತ್ತರ ಗೊ[...] 11.30 ಗಂಟೆ ಆಯಿತು. ಕೊಠಡಿ ಉಸ್ತುವಾರಿ ವ[...] ವರಿಗೂ ತಳಮಳ. ಅವರೇ ತಾನೇ ಹಣ ಪಡೆದಿದ್ದ[...] ಅಷ್ಟರಲ್ಲಿ ಉತ್ತರ ಚೀಟಿ ಬರುತ್ತೆ. ಮೇಲ್ವಿಚಾರಕರು ತ[...] ಬೇಕಾದವರಿಗೆ ಅದನ್ನು ಹಂಚಿ ತಮ್ಮ ಕರ್ತವ್ಯ[...] ಪರಿಪಾಲಿಸಿದ್ದಕ್ಕಾಗಿ ಸಂತೃಪ್ತಿ ಹೊಂದುತ್ತಾರೆ! ನಂತರ ಇ[...] ಕಾಸಿನ ರ್‍ಯಾಂಕು, ಅದರ ಆಧಾರದ ಮೇಲೆ ಸರ್ಕಾರಿ ಸಿ[...]

ಕಾಸು ನೀಡಿ ರ್‍ಯಾಂಕು ಪಡೆದ ಅಭ್ಯರ್ಥಿಗಳಿಂದ [...] ಅಭ್ಯರ್ಥಿಗಳಿಗೆ ಮೋಸ ಆಗಿರಬಹುದು. ಅಂತಹ[...] ಕೆಲವರು ದೂರು ನೀಡಿರಬಹುದು. ತನಿಖೆಯೂ ನ[...] ಬಹುದು. ಕೆಲವರು ಕಾನೂನಿನ ಬಾಹುಗಳಬಂಧಿ[...] ಆಗಿರಬಹುದು. ಆದರೆ ಕಾಸುಸೀಟಿನ ಮಂದಿ ಎಲ್ಲ ಪ್ರ[...] ಶ್ರೀಮಂತ ಕುಳಗಳೇ ಇರಬೇಕು. ಅಂದಮೇಲೆ ಅ[...] ಯಾವ ಕಾನೂನೂ ಏನೂ ಮಾಡಲಾರದು ಎಂಬ ಧೈ[...] ಅವರಿಗೆ ಇದ್ದೇ ಇರಬೇಕು. ಅದು ಸರಿ. ಇಂತಹ [...] ಮಹಾಶಯರಿಂದ ಚಿಕಿತ್ಸೆ ಪಡೆದ ರೋಗಿಗಳ ಭವಿಷ್ಯ[...] ಎಂದರೆ ಅದನ್ನೆಲ್ಲ ಯೋಚಿಸುವ ಪುರುಸೊತ್ತು ಯಾರಿಗಿ[...]

# ಯಡ್ಡಿ ದರ್ಶನ ಪಡೆದು ನಿರಾಶೆ ಮಾಡಿದ ಸ್ವಾಮಿಗಳು

ಅಕ್ಟೋಬರ್ 26ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ 'ಪತ್ರಕರ್ತೆ ನಾಗಲಕ್ಷ್ಮಿ ಬಾಯಿಗೆ ಸಿಎಂ ಬಂಟರ ಪ್ರಾಣ ಬೆದರಿಕೆ!!' ಲೇಖನ ಓದಿ ನಮ್ಮ ಹಲ್‌ಬೀರ ಮುಖ್ಯಮಂತ್ರಿಯ ಬಗ್ಗೆ ಅಸಹ್ಯವೆನಿಸಿತು. ಕಳ್ಳನ ಮನಸ್ಸು ಹುಳ್ಳುಳ್ಳಗೆ ಎಂಬಂತೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲ್ ಮುಟ್ಟಿಕೊಂಡು ನೋಡಿಕೊಂಡ ಎಂಬಂತೆ ಬಿ.ವಿ.ಎಸ್ ಏನೂ ತಪ್ಪು ಮಾಡಿರದಿದ್ದರೆ ಸುಮ್ಮನೆ ಕೂರುವುದು ಬಿಟ್ಟು ಬೆದರಿಕೆ ಏಕೆ ಹಾಕಬೇಕು? ಅದೂ ಒಂದು ಹೆಣ್ಣಿನ ಮೇಲೆ? ರಾತ್ರೋರಾತ್ರಿ ಕಟ್ಟಡದ ನಡುವೆ ಇಟ್ಟಿಗೆ ಗೋಡೆಯನ್ನು ಒಡೆಸುವ ಮೂಲಕ ತಾವು ತಪ್ಪು ಮಾಡಿರುವುದಾಗಿ ಪರೋಕ್ಷವಾಗಿ ಒಪ್ಪಿಕೊಂಡಂತೆ ಆಗಿದೆ. ಬಿ.ವಿ.ಎಸ್ ತಪ್ಪು ಮಾಡಿದ್ದಾರೆ ಎಂಬುದಕ್ಕೆ ಇದೊಂದೇ ಸಾಕ್ಷಿ ಸಾಕು. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇ ಬೇಕು. ಸಾಮಾನ್ಯ ಜನರೇನಾದರೂ ಈ ರೀತಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಅಕ್ರಮವಾಗಿ ಕಟ್ಟಡ ಕಟ್ಟಿದ್ದರೆ ಬಿಡಿಎ ಸುಮ್ಮನೆ ಇರುತ್ತಿತ್ತಾ? ನಿರ್ದಾಕ್ಷಿಣ್ಯವಾಗಿ ಕಟ್ಟಡವನ್ನು ನೆಲಸಮ ಮಾಡುತ್ತಿತ್ತು, ಅಲ್ಲವೇ? ಆದರೆ ಈಗೇಕೆ ಬಿಡಿಎ ಅಧಿಕಾರಿಗಳು ಸುಮ್ಮನೆ ಕುಳಿತಿದ್ದಾರೆ?

ಪಶ್ಚಿ ದಾಟಿ ಹೆಸರಲ್ಲಿ ಅಕ್ರಮವಾಗಿ ಕೋಟಿ ಕೋಟಿ ಆಸ್ತಿ ಮಾಡಿ ಚುನಾವಣಾ ಆಯೋಗದ ಮುಂದೆ ಸಲ್ಲಿಸಿದ ತಮ್ಮ ಆಸ್ತಿ ವಿವರ ಪಟ್ಟಿಯಲ್ಲಿ ಇದನ್ನು ಮುಚ್ಚಿಟ್ಟ ಸಿಎಂ ಶಿಕ್ಷೆಗೆ ಅರ್ಹರಲ್ಲವೇ? ಏನೇ ಆಗಲಿ ಮುಖ್ಯಮಂತ್ರಿ ವಿರುದ್ಧವೇ ದೂರು ನೀಡಿದ ಪತ್ರಕರ್ತೆ ಗಟ್ಟಿ ಹೆಣ್ಣು ನಾಗಲಕ್ಷ್ಮಿಯವರ ಧೈರ್ಯವನ್ನು ಮೆಚ್ಚಲೇಬೇಕು. ಯಾರ ಗೊಡ್ಡು ಬೆದರಿಕೆಗಳಿಗೂ ನಾಗಲಕ್ಷ್ಮಿಯವರು ಕಿವಿಗೊಡಬಾರದು.

*- ಪ್ರಕಾಶ್ ಕೆ ನಾಡಿಗ್, ಶಿವಮೊಗ್ಗ*


ಡಾ.ಎಂ.ಬಿ.ಒಕ್ಕುಂದ ಅವರು ಅಡಿಗರ ಕೋಮುವಾದಿ ಕವನದ ವಿಮರ್ಶೆ "ಅಡಿಗರು ಭಾಷೆಯನ್ನು ಬಳಸಿದ ರೀತಿ" ಮತ್ತು "ಭಾಷೆ ಅಡಿಗರನ್ನು ಬಳಸಿದ ರೀತಿಯು" ದ್ವಂದತೆಗಳ ಮೇಲೆ ಬೆಳಕು ಚೆಲ್ಲಿದೆ. ಅಡಿಗರ ಕೋಮುವಾದಿ ಆಶಯಗಳ ಅಭಿವ್ಯಕ್ತಿಗಾಗಿ ಭಾಷೆ ಬಳಸಲ್ಪಟ್ಟರೂ, ಅವರ ಭಾಷಾಕೋಶ ಹಾಗೂ ಕಾವ್ಯ ಆಕೃತಿ ಅವರ ಪರಿಭಾಷೆಯ ಅನ್ಯವನ್ನು ದೇಸಿಯಾಗಿಸುವ ಹಾಗೂ ನಾಯಕರನ್ನು ಅನ್ಯಗೊಳಿಸುವ ಶಕ್ತಿಯ ಆಟವನ್ನು ಅವರಿಗೆ ಅರಿವಾಗದಂತೆ ನಡೆಸಿರುವುದು ಹಾಗೂ ಭಾಷೆಯ ಈ ಆಟವನ್ನು ವಿಮರ್ಶಕರು ಬೆಳಗಿಸಿರುವುದು ವಿಮರ್ಶೆಯ ಗಂಭೀರತೆಯನ್ನು ಹೆಚ್ಚಿಸಿದೆ.

*- ಐವನ್ ಲೋಬೋ, ಪುತ್ತೂರು*

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪುನರ್ರಚನೆ ಸದ್ಯದಲ್ಲಿಯೇ ಆಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸರಕಾರ ಸರಿಯಾಗಿ ಯೋಚಿಸದ ಕಾರಣ ಅದಕ್ಕೆ ಯೋಗ್ಯ ನೇತೃತ್ವ ಸಿಕ್ಕಿಲ್ಲ. ಈ ಕಾರಣದಿಂದಾಗಿ ಅಕಾಡೆಮಿಯ ಬಗ್ಗೆ ಜನತೆಗೆ, ಕಲಾವಿದರಿಗೆ ಇದ್ದ ನಿರೀಕ್ಷೆಗಳೆಲ್ಲ ಹುಸಿಯಾಗಿವೆ. ಈಗ ಬದಲಾದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಬಾರಿಯಾದರೂ ಕರ್ನಾಟಕ ಸರಕಾರ ಸಮರ್ಥ, ಕ್ರಿಯಾಶೀಲ, ಉತ್ಸಾಹಿ ಅಧ್ಯಕ್ಷರನ್ನು ನೇಮಿಸುವುದೆಂಬ ಆಸೆ ಹುಟ್ಟಿದೆ.

ಕಲೆಗೆ ಜಾತಿಗಳು ಬೇಡವಾದರೂ ಸರಕಾರಕ್ಕೆ ಬೇಕಾಗುವುದರಿಂದ ಈವರೆಗೆ ಲಲಿತಕಲಾ ಅಕಾಡೆಮಿಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿದ್ದು ಲಿಂಗಾಯತ ಸಮುದಾಯಕ್ಕೆ. ಕಳೆದ ಬಾರಿಯೂ ಲಿಂಗಾಯತರನ್ನೇ ಅಧ್ಯಕ್ಷರಾಗಿ ನೇಮಿಸಲಾಗಿತ್ತು. ಈ ನಡುವೆ ಮತ್ತೆ ಲಿಂಗಾಯತ ಸಮುದಾಯದವರನ್ನೇ ಅಧ್ಯಕ್ಷತೆಗೆ ತರಲು ತುಂಬಾ ಲಾಬಿ ನಡೆಯುತ್ತಿದೆ. ನನ್ನ ಪ್ರಕಾರ ಈವರೆಗೆ ಅಧ್ಯಕ್ಷ[...] ದಕ್ಕದಂತಹ ಬೇರೆ ಜಾತಿಗಳವರಿಗೆ, ಬೇರೆ ಜಿಲ್ಲೆಗಳವರಿಗೆ ಅದು ದಕ್ಕಿದ[...] ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ. ಜೊತೆಗೆ ಈಗಾಗಲೇ ಬೇರೊಂ[...] ಅಕಾಡೆಮಿಗೆ ಲಿಂಗಾಯತರನ್ನು ನೇಮಿಸಿರುವುದರಿಂದ ಆ ಸಮುದಾಯ[...] ಕೋಟಾ ಮುಗಿದಿದೆ. ಸರಕಾರ ಹೊಸದಾಗಿ ಲಲಿತಕಲಾ ಅಕಾಡೆಮಿಯ[...] ರಚಿಸುವಾಗ ಈ ಅಂಶಗಳನ್ನು ಮನಗಂಡು ಕಲಾವಿದರಿಗೆ ಸಾಮಾಜಿಕ ನ್ಯಾ[...] ಒದಗಿಸಬೇಕೆಂದು ರಾಜ್ಯದ ಕಲಾವಿದರ ಪರವಾಗಿ ವಿನಂತಿಸುತ್ತೇನೆ. ಸರಕಾ[...] ಇದಕ್ಕೆ ತಪ್ಪಿದಲ್ಲಿ ಈ ಬಾರಿ ರಾಜ್ಯದ ಕಲಾವಿದರು ಹೋರಾಟ ನಡೆಸುವು[...] ಅನಿವಾರ್ಯವಾಗುತ್ತದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.




*- ಬಸವರಾಜ ಕೊಲತ್ತೂರ್, ಬೆಂಗಳೂ[...]*


ಇಂದು ಈ ಸಮಾಜದ ಎಲ್ಲಾ ನ್ಯಾಯ, ನೀತಿಗ[...] ಸಂಪೂರ್ಣವಾಗಿ ನೆಲ ಕಚ್ಚಿರುವಂತಹ ಸಂದರ್ಭದ[...] ಇಲ್ಲಿನ ವ್ಯವಸ್ಥೆ ತನ್ನ ಎಲ್ಲಾ ಅಂಗಗಳಲ್ಲಿಯೂ ಕ್ಯಾನ್ಸರ್ ಅ[...] ತಂದುಕೊಂಡಿರುವ ಈ ಸಂದರ್ಭದಲ್ಲಿ ನಾ[...] ಮತ್ತೊಮ್ಮೆ ಒಬ್ಬ ನಾಯಕನಿಗಾಗಿ ಎದುರು ನೋಡುತ್ತಿ[...] ಅದೂ ಎಂತಹ ನಾಯಕನಿಗಾಗಿ?? ನಿರ್ಣಯಿಸುವು[...] ಬಲು ಕಷ್ಟ.

ಬಹಳ ಹಿಂದೆಯಲ್ಲ, ಸರಿಯಾಗಿ 24 ವರ್ಷಗ[...] ಹಿಂದೆ ಭ್ರಷ್ಟಾಚಾರದ ವಿರುದ್ಧ ಪ್ರಾಮಾಣಿಕ ಹೋರಾಟ ಮಾಡುವ ಮೂಲ[...] ಮಾಧ್ಯಮಗಳ, ಮಧ್ಯಮ ವರ್ಗಗಳ, ವಿದ್ಯಾರ್ಥಿಗಳ ನಾಯಕನಾ[...] ಹೊರಹೊಮ್ಮಿದ, ಆನಂತರ ಅಧಿಕಾರದ ಗದ್ದುಗೆಯನ್ನೇರಿದ ವಿ.ಪಿ.ಸಿಂ[...] ರವರನ್ನೇ ಉದಾಹರಣೆಯನ್ನಾಗಿ ನೋಡಬಹುದು. ಅನೇಕ ರಾಜಕೀ[...] ಕಾರಣಗಳಿಗಾಗಿ ಹಿಂದುಳಿದ ವರ್ಗಗಳ ಪರವಾದ ತಮ್ಮ ಒಲವನ್ನು ತೋರಿಸಿ[...] ಮಂಡಲ್ ವರದಿಯ ಮೂಲಕ ಈ ದೇಶದ ರಾಜಕೀಯ ದಿಕ್ಸೂಚಿಯ[...] ಬದಲಿಸಿದ ವಿ.ಪಿ.ಸಿಂಗ್‌ರನ್ನು ಅದೇ ಮಾಧ್ಯಮಗಳು, ಮಧ್ಯಮ ವರ್ಗಗ[...] ಯುವಜನತೆ ತೀವ್ರವಾಗಿ ತಿರಸ್ಕರಿಸಿದವು. ಈ ನಾಡಿನಲ್ಲಿ ಜನಪರವಾ[...]

# ಗಾಂಧಿನಗರದಲ್ಲಿ 'ಕ್ರಿಕೆಟ್ ಜ್ವರ'

ಗಾಂಧಿನಗರದಲ್ಲಿ ಈಗ ಎಲ್ಲಿ ನೋಡಿದರಲ್ಲಿ 'ಕ್ರಿಕೆಟ್ ಜ್ವರ'. ಈ ಜನರ ಮೆಂಟಾಲಿಟಿಯೇ ಅರ್ಥವಾಗುವುದಿಲ್ಲ. ಸಾಧಾರಣವಾಗಿ 'ಕ್ರಿಕೆಟ್ ಆಟದಿಂದಾಗಿ ಸಿನಿಮಾದ ಗಳಿಕೆ ಕಡಿಮೆಯಾಗುತ್ತಿದೆ' ಎಂದು ಕನ್ನಡ ಚಿತ್ರರಂಗದವರು ತಮ್ಮ ಸಿನಿಮಾಗಳ ಸೋಲಿಗೆ ಸಬೂಬು ಹೇಳುತ್ತಾರೆ. ಈಗ ಇದೇ ಜನ ಮೂರು ದಿನ ಉದ್ಯಮಕ್ಕೆ ರಜೆ ಘೋಷಿಸಿ ಕ್ರಿಕೆಟ್ ಆಡಲು ಹೊರಟಿದ್ದಾರೆ! ಬರುವ ಅಕ್ಟೋಬರ್ 30, 31 ಹಾಗೂ ನವೆಂಬರ್ 1ರಂದು ಹುಬ್ಬಳ್ಳಿಯಲ್ಲಿ ಮೂರು ದಿನಗಳ ಕಾಲ 'ತಾರಾ ಕ್ರಿಕೆಟ್ ಮೇಳ' ನಡೆಯಲಿದೆ. ಈ ಕ್ರಿಕೆಟ್ ಟೂರ್ನಮೆಂಟ್‌ಗೆ 'ರಾಜ್ ಕಪ್' ಎಂದು ಹೆಸರಿಡಲಾಗಿದೆ. ನಿರ್ದೇಶಕರ ಸಂಘ ಈ ಟೂರ್ನಮೆಂಟಿನ ಜವಾಬ್ದಾರಿಯನ್ನು ವಹಿಸಿಕೊಂಡಿದೆ.


'ರಾಜ್ ಕಪ್'ಗಾಗಿ ಒಟ್ಟು ಎಂಟು ತಂಡಗಳು ಪರಸ್ಪರ ಸೆಣಸಾಡಲಿವೆ. ಉದ್ಯಮದ ಪರವಾಗಿ ನಿರ್ಮಾಪಕರ, ನಿರ್ದೇಶಕರ, ಸಂಕಲನಕಾರರ, ನೃತ್ಯಗಾರರ, ಸಾಹಸಕಲಾವಿದರ ಮತ್ತು ಛಾಯಾಗ್ರಾಹಕರ ತಂಡಗಳು ಭಾಗವಹಿಸಲಿವೆ. ಇನ್ನೆರಡು ತಂಡಗಳೆಂದರೆ ವಿತರಕರ ಮತ್ತು ಮಾಧ್ಯಮದ ತಂಡಗಳು. ಪ್ರತಿ ತಂಡದಲ್ಲಿ ನಾಲ್ಕು ನಾಯಕ ನಟರು ಆಟವಾಡಲಿದ್ದಾರೆ. ಈ ನಾಲ್ಕು ಜನ ಯಾರೆಂಬುದನ್ನು ನಿರ್ದೇಶಕರ ಸಂಘದ ಅಧ್ಯಕ್ಷ ಎಂ.ಎಸ್.ರಮೇಶ್ ಈಗಾಗಲೇ ಲಾಟರಿ ಎತ್ತಿ ಆಯ್ಕೆ ಮಾಡಿದ್ದಾರೆ. ನಮ್ಮ ನಾಯಕಿಯರು ಎಂದಿನಂತೆ ಒಂದೊಂದು ತಂಡದ ಬ್ರ್ಯಾಂಡ್ ಅಂಬಾಸಡರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.



ಕಳೆದೆರಡು ವಾರಗಳಿಂದ ಬೆಳಗಿನ ಜಾವ ಆರೂವರೆಗೆ ಎಲ್ಲಾ ತಂಡಗಳು ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ತರಬೇತಿಯನ್ನು ನಡೆಸುತ್ತಿವೆ. ಒಂದೇ ಒಂದು ಸಮಸ್ಯೆಯೆಂದರೆ ಪ್ರತೀ ತಂಡದ ನಾಯಕ ಲೀಗ್ ಪಂದ್ಯಗಳಲ್ಲಿ ಆಡುವ ಕೆಲವು ಹುಡುಗರನ್ನು ತಮ್ಮ ತಂಡಗಳಲ್ಲಿ ಸೇರಿಸಿಕೊಂಡಿದ್ದಾರೆ. ಇದರಿಂದಾಗಿ ಈಗ ಎಲ್ಲಾ ತಂಡಗಳ ನಡುವೆ ಒಂದು ಸಣ್ಣ ವೈಮನಸ್ಸು ಮತ್ತು ಜಿದ್ದಾಜಿದ್ದಿ ಆರಂಭವಾಗಿದೆ. "ನಾವು ಯಾವುದೇ ಕಾರಣಕ್ಕೂ ಹೊರಗಿನ ಆಟಗಾರರನ್ನು ಆಡುವುದಕ್ಕೆ ಬಿಡುವುದಿಲ್ಲ" ಎಂದು ನಿರ್ದೇಶಕರ ಸಂಘದ ಅಧ್ಯಕ್ಷ ರಮೇಶ್ ಹೇಳಿರುವುದು ಪರಿಸ್ಥಿಯನ್ನು ಸ್ವಲ್ಪ ಶಾಂತಗೊಳಿಸಿದೆ. ಅದೇನೇ ಇರಲಿ ಮೂರುದಿನಗಳ ಕಾಲ ಹುಬ್ಬಳ್ಳಿಯ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿರುವ 'ಕ್ರಿಕೆಟ್ ಮೇಳ' ಕನ್ನಡ ಚಿತ್ರರಂಗದ ಒಗ್ಗಟ್ಟನ್ನು ಪ್ರದರ್ಶಿಸಲಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಂದಹಾಗೆ ನವೆಂಬರ್ 1 ರಾಜ್ಯೋತ್ಸವದಂದು ಬಹುತೇಕ ಎಲ್ಲಾ ನಾಯಕನಾಯಕಿಯರು ಕುಣಿದುಕುಪ್ಪಳಿಸಿ ಹುಬ್ಬಳ್ಳಿ ಜನರಿಗೆ ಮನರಂಜನಾ ಔತಣ ನೀಡಲಿದ್ದಾರೆ. ಇದಕ್ಕಾಗಿ ಮೂರು ದಿನಗಳ ಉದ್ಯಮಕ್ಕೆ ಚೇಂಬರ್ ರಜೆಯನ್ನು ಕೂಡಾ ಘೋಷಿಸಿದೆ.

ಇದೇ ಒಗ್ಗಟ್ಟನ್ನು ಒಂದು ಒಳ್ಳೆಯ ಸಿನಿಮಾ ಮಾಡುವುದರಲ್ಲಿ ಮುಂಬರುವ ದಿನಗಳಲ್ಲಿ ನಮ್ಮ ನಿರ್ದೇಶಕರು ತೋರಿಸಲಿ. ಆ ಮೂಲಕ ನಿಂತ ನೀರಾಗಿರುವ ಕನ್ನಡ ಚಿತ್ರರಂಗವನ್ನು ಮುಂದಕ್ಕೆ ಕೊಂಡೊಯ್ಯಲಿ...

# ಪಾಯಿಂಟ್ ಬ್ಲಾಂಕ್



ಎನ್.ಎಂ.ಸುರೇಶ್ ಪ್ರಮುಖ ಸಿನಿಮಾ ನಿರ್ಮಾಪಕರಲ್ಲಿ ಒಬ್ಬರು. ಆದರೆ ಇತ್ತೀಚೆಗೆ ಅವರ ನಿರ್ಮಾಣದ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಗೆದ್ದಿಲ್ಲ. ಆದರೂ ಚಲ ಬಿಡದ ತ್ರಿವಿಕ್ರಮನಂತೆ ಅವರು ಹೊಸ ಹೊಸ ಸಿನಿಮಾಗಳನ್ನು ನಿರ್ಮಿಸುತ್ತಲೇ ಇದ್ದಾರೆ. ಇಲ್ಲಿಯ ತನಕ ಅವರು ರಿಮೇಕ್ ಚಿತ್ರಗಳನ್ನು ಮಾಡಿಲ್ಲ. ಸದ್ಯ ಅವರ ನಿರ್ಮಾಣದ 'ಅದ್ವೈತ' ಚಿತ್ರ ಸಂಪೂರ್ಣಗೊಳ್ಳುವ ಹಂತದಲ್ಲಿದೆ.

* 'ಚೆಲುವೆ ನಿನ್ನ ನೋಡಲು..': ನಮ್ಮ ಪ್ರಯತ್ನಕ್ಕೆ ಜನರಿಂದ ಸೂಕ್ತ ಬೆಂಬಲ ಸಿಗಲಿಲ್ಲ.
* ಪ್ರಸ್ತುತ ರಾಜಕೀಯ: ಅವಕಾಶವಾದಿಗಳ ಆಟ.
* ಹೊಸ ನಟರು: ರಾಜ್, ವಿಷ್ಣು ಅಂಬಿ ಅವರನ್ನು ಅನುಸರಿಸಬೇಕು.
* ನಂಬರ್ ಒನ್ ಹೀರೋಯಿನ್: ಊರಿಗೊಬ್ಬಳೇ ರಮ್ಯಾ.
* ರಿಮೇಕ್ ಚಿತ್ರಗಳೆಂದರೆ: ಬೇಡವೇ ಬೇಡ ಅನ್ನಿಸುತ್ತೆ ಆದರೆ ದುಡ್ಡು ಬೇಕು ಅಂದರೆ ಮಾಡಬೇಕು ಅನ್ನಿಸುತ್ತೆ.
* ನಿರ್ಮಾಪಕರೆಂದರೆ: ಅನ್ನದಾತರು ಎಂದು ರಾಜ್‌ಕುಮಾರ್ ಅವರು ಹೇಳುತ್ತಿದ್ದ ಯುಗ ಮುಗಿಯಿತು.
* ಐಟಿ ರೇಡ್: ನನಗೂ ನೋಟಿಸ್ ಬಂದಿದೆ.
* ಹಿಟ್ ಸಿನಿಮಾ ಅಂದರೆ: ನನ್ನ ನಿರ್ಮಾಣದ ಚಿತ್ರ ಹಿಟ್ ಆಗುತ್ತದೆ ಎಂಬ ಆಶೆ ಇದ್ದೇ ಇದೆ.
* ಸಂಸಾರ: ಚೆನ್ನಾಗಿದ್ದರೆ ಮನುಷ್ಯ ಚೆನ್ನಾಗಿರುತ್ತಾನೆ.
* ಲೋಕಾಯುಕ್ತ: ಬೇಕೇ ಬೇಕು.
* ಭ್ರಷ್ಟಾಚಾರದ ವಿರುದ್ಧ ಅದ್ವಾನಿಯ ರಥ ಯಾತ್ರೆ: ಸ್ವಾರ್ಥ ಮತ್ತು ರಾಜಕೀಯ ಉದ್ದೇಶದಿಂದ ಕೂಡಿದೆ.

# ಸಾರಥಿ ಕಾರ್ಟೂನ್ ಕತೆ

ಶಾರೂಖ್ ಖಾನ್ ನಟಿಸಿರುವ 'ರಾ–ಒನ್' ಮತ್ತು ಸೂರ್ಯ ನಟಿಸಿರುವ '7am ಅರಿವ್' ಚಿತ್ರಗಳನ್ನು ನೋಡಿದ ನಂತರ ಹೆಚ್ಚಿನವರು ಹೇಳಿದ್ದು "ಇವೆರಡೂ ಚಿತ್ರಗಳು ಕಾರ್ಟೂನ್ ಸಿನಿಮಾಗಳ ತರಹ ಇವೆ" ಎಂದು.


ಆದರೆ ಕನ್ನಡ ಚಿತ್ರರಂಗದಲ್ಲಿ ಕಾರ್ಟೂನ್ (ಅಂದರೆ ಆನಿಮೇಟೆಡ್) ಸಿನಿಮಾದ ಕತೆಯನ್ನೇ ಒಂದು ಕಮರ್ಷಿಯಲ್ ಚಿತ್ರಕ್ಕೆ ಬದಲಾಯಿಸಿ ಗೆದ್ದ ನಿರ್ದೇಶಕರಿದ್ದಾರೆ. ಆ ನಿರ್ದೇಶಕನ ಹೆಸರು ತೂಗುದೀಪ್ ದಿನಕರ್. ಆತ ಮಾಡಿದ ಚಿತ್ರದ ಹೆಸರು 'ಸಾರಥಿ'. 'ಲಯನ್ ಕಿಂಗ್' ಎಂಬ ಇಂಗ್ಲಿಷ್ ಕಾರ್ಟೂನ್ ಸಿನಿಮಾದ ಕತೆಯನ್ನೇ ಕತೆಗಾರ ಚಿಂತನ್ ಮತ್ತು ದಿನಕರ್ ಜಂಟಿಯಾಗಿ 'ಸಾರಥಿ'ಯ ಕತೆಯಾಗಿ ರೂಪಿಸಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ ಹರಡಿದೆ.

ನಾಲ್ಕೈದು ತಮಿಳು ಮತ್ತು ತೆಲುಗು ಚಿತ್ರಗಳನ್ನು ನೋಡಿ ಒಂದೊಂದು ಚಿತ್ರದ ಒಂದೊಂದು ದೃಶ್ಯವನ್ನು ಭಟ್ಟಿ ಇಳಿಸಿ ಚಿತ್ರ ಮಾಡುವ ಕುಖ್ಯಾತಿಯ ಓಂಪ್ರಕಾಶ್‌ಗೆ ಹೋಲಿಸಿದರೆ ದಿನಕರ್ ಒಂದು ಕಾರ್ಟೂನ್ ಕತೆಯನ್ನು ಚಿತ್ರವನ್ನಾಗಿಸಿ ಹೊಸ ಅಧ್ಯಾಯ ಬರೆದಿದ್ದಾರೆಂದೇ ಹೇಳಬಹುದು.



# ಪರಭಾಷಾ ಚಿತ್ರಗಳ ಅಬ್ಬರ


ನಮ್ಮ ಓದುಗರಿಗೆಲ್ಲಾ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಈ ರಾಜ್ಯ ಉತ್ಸವದ ಸಂದರ್ಭದಲ್ಲಿ ಕನ್ನಡ ಚಿತ್ರರಂಗದಲ್ಲಿ ಹಬ್ಬದ ವಾತಾವರಣವೇನೂ ಕಾಣಿಸುತ್ತಿಲ್ಲ. ಮಹಾಲಕ್ಷ್ಮಿ ಹಬ್ಬ, ಸಂಕ್ರಾಂತಿ, ದೀಪಾವಳಿ ಹಬ್ಬಗಳಿಗೆ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಕ್ಯೂನಲ್ಲಿ ನಿಲ್ಲುವ ನಿರ್ಮಾಪಕರು ಕರ್ನಾಟಕದ ರಾಜ್ಯೋತ್ಸವದ ಸಂದರ್ಭವನ್ನು ಮಾತ್ರ ಯಾವತ್ತೂ ಎನ್‌ಕ್ಯಾಷ್ ಮಾಡಿಕೊಂಡವರೇ ಅಲ್ಲ.



ಉದಾಹರಣೆಗೆ ಈ ರಾಜ್ಯೋತ್ಸವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ ಕನ್ನಡ ಚಿತ್ರಗಳೆಂದರೆ 'ಓಬವ್ವ' ಮತ್ತು 'ಕಾಂಚಾಣ' ಎಂಬ ಎರಡು ಅಪರಿಚಿತ ಚಿತ್ರಗಳು. ಇದೇ ಸಂದರ್ಭದಲ್ಲಿ ಬಿಡುಗಡೆಯಾಗಬೇಕಿದ್ದ ಗೋಲ್ಡನ್‌ಸ್ಟಾರ್ ಗಣೇಶ್ ನಟಿಸಿರುವ 'ಮದುವೆ ಮನೆ' ಚಿತ್ರ ಮುಂದೂಡಲ್ಪಟ್ಟಿದೆ. ಆದರೆ ಇದೇ ಹೊತ್ತಿಗೆ ಪರಭಾಷಾ ಚಿತ್ರಗಳು ಕರ್ನಾಟಕಕ್ಕೆ ದಾಳಿಯಿಡುತ್ತಿರುವುದನ್ನು ನಮ್ಮ ಉದ್ಯಮದ ಜನ ಸ್ವಾಗತಿಸುತ್ತಿರುವುದು ನಿಜಕ್ಕೂ ವಿಚಿತ್ರವಾಗಿದೆ!

ಶಾರೂಖ್ ಖಾನ್ ನಟಿಸಿ-ನಿರ್ಮಿಸಿರುವ, ಸುಮಾರು 150 ಕೋಟಿ ರೂಪಾಯಿ ವೆಚ್ಚದ ಅದ್ದೂರಿ ಚಿತ್ರವಾದ 'ರಾ–ಒನ್' ರಾಜ್ಯಾದ್ಯಂತ 130ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ. ಹಾಗೆಯೇ ತಮಿಳಿನ ಸೂಪರ್‌ಸ್ಟಾರ್ ಸೂರ್ಯ ನಟಿಸಿರುವ, 85 ಕೋಟಿ ರೂಪಾಯಿ ವೆಚ್ಚದ '7am ಅರಿವ್' ಚಿತ್ರ ಸುಮಾರು 70 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಅಷ್ಟೇ ಅಲ್ಲ, ತಮಿಳಿನ ಮತ್ತೊಬ್ಬ ಸೂಪರ್‌ಸ್ಟಾರ್ ವಿಜಯ್ ನಟಿಸಿರುವ 'ವೇಲಾಯುಧನ್' ಚಿತ್ರ ಕೂಡಾ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ. ಈ ಪರಭಾಷಾ ಚಿತ್ರಗಳ ಅಬ್ಬರದ ನಡುವೆ ರಾಜ್ಯೋತ್ಸವದ ಶುಭಸಂದರ್ಭದಲ್ಲಿ ನಮ್ಮ ಕನ್ನಡ ಚಿತ್ರಗಳು ಬಿಡುಗಡೆಯಾಗುತ್ತಿರುವುದು ಸುಮಾರು 30 ಚಿತ್ರಮಂದಿರಗಳಲ್ಲಿ ಮಾತ್ರ ಎಂಬುದು ಶೋಚನೀಯ!

ಇನ್ನೊಂದು ಸೋಜಿಗದ ಸಂಗತಿ ಯಾವುದೆಂದರೆ ಈ ಹಿಂದೆ ಪರಭಾಷಾ ಚಿತ್ರಗಳು ಅತ್ಯಧಿಕ ಸಂಖ್ಯೆಯಲ್ಲಿ ಬಿಡುಗಡೆಯಾದಾಗ ಅವುಗಳ ಅಬ್ಬರದ ವಿರುದ್ಧ ಧರಣಿ ಮಾಡಿ ಚೇಂಬರ್‌ನಲ್ಲಿ ಗಲಾಟೆ ಮಾಡುತ್ತಿದ್ದ ನಿರ್ಮಾಪಕ 'ಕನ್ನಡದ ಗಂಡುಗಲಿ' ಕೆ.ಮಂಜು ಅವರೇ ಈಗ 'ವೇಲಾಯುಧನ್' ಚಿತ್ರದ ಹಂಚಿಕೆದಾರರಾಗಿದ್ದಾರೆ! ಅಷ್ಟೇ ಅಲ್ಲ, ಮಂಜು ಅವರೇ ಹಂಚಿಕೆದಾರರಾಗಿ ಬಿಡುಗಡೆ ಮಾಡಬೇಕಿದ್ದ ಗಣೇಶ್ ಅಭಿನಯದ 'ಮದುವೆಮನೆ' ಚಿತ್ರವನ್ನು ಮುಂದೂಡಿದ್ದಾರೆ! ಇದನ್ನು ನೋಡಿ ಚೇಂಬರ್‌ನಲ್ಲಿ ಬಹುತೇಕ ನಿರ್ಮಾಪಕರು ಸದ್ಯ ಮಂಜು ವಿರುದ್ಧ ತಿರುಗಿಬಿದ್ದಿದ್ದಾರೆ.




ಒಂದೇ ಒಂದು ಸಮಾಧಾನದ ಸಂಗತಿಯೆಂದರೆ ಶಾರೂಖ್ ಖಾನ್‌ನ 'ರಾ–ಒನ್' ಮತ್ತು ಸೂರ್ಯನ '7am ಅರಿವ್' ಇವೆರಡೂ ಚಿತ್ರಗಳು ನಮ್ಮ ಕನ್ನಡದ 'ಪರಮಾತ್ಮ' ಚಿತ್ರದ 'ಲೆವೆಲ್'ನಲ್ಲಿವೆಯಂತೆ! ಹೀಗಾಗಿ ಇವೆರಡು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗೆಲ್ಲುವ ಸೂಚನೆಗಳಿಲ್ಲ. ಆದ್ದರಿಂದ ಮುಂದಿನ ವಾರವಾದರೂ ಒಂದಿಷ್ಟು ಥಿಯೇಟರ್‌ಗಳು ಕನ್ನಡದವರಿಗೆ ಸಿಗಬಹುದೆಂಬ ನಿರೀಕ್ಷೆ ಇದೆ.

...ಜನತಂತ್ರವಾದಿಯಾದ, ಸದಾಕಾಲ ಈ ಸಮಾಜದ ಕಟ್ಟ ಕಡೆಯ ಮನುಷ್ಯನ, ತಳ ಸಮುದಾಯಗಳ ಏಳಿಗೆಯನ್ನೇ ಜಪಿಸುವ ನಾಯಕನಿಗೆ ಇಲ್ಲಿ ಕಾಲ್ತುಳಿತ, ಅಸಡ್ಡೆ, ತಿರಸ್ಕಾರಗಳು ಮಾತ್ರ ಕಾದಿರುತ್ತವೆ ಎಂಬುದು ಸಿಂಗ್ ಅವರಿಗಾದದ್ದು ತೋರುತ್ತದೆ.

ನಾಯಕನೊಬ್ಬನಿಗೆ ಕಾಳಜಿಗಳು ಮಾತ್ರ ಸಾಲದು ಅದರ ಅನುಷ್ಠಾನಕ್ಕೆ ರಾಜಕೀಯ ಇಚ್ಛಾಶಕ್ತಿ, ಮುತ್ಸದ್ದಿತನ, ದೀರ್ಘ ಸಂಘಟನೆಗಳ, ಹೋರಾಟಗಳ ಅನುಭವ ಹಾಗೂ ರಾಜಕೀಯ pragmatism ಬಹಳ ಅವಶ್ಯಕ ಎಂದು ವಿ.ಪಿ.ಸಿಂಗ್ ಅವರಿಗೆ ಅರಿವಾಗಲೇ ಇಲ್ಲ, ಅಥವಾ ಅವರಿಗೆ ಮನನಗೊಳ್ಳಲು ಮಾಧ್ಯಮಗಳಾಗಲಿ, ಅಂದಿನ ರಾಜಕೀಯ ಪರಿಸ್ಥಿತಿಯಾಗಲಿ ಅವರಿಗೆ ಅವಕಾಶ ಕೊಡಲೇ ಇಲ್ಲ. ಕಡೆಗೆ ವಿ.ಪಿ.ಸಿಂಗ್‌ಗೆ ದುರಂತ ನಾಯಕನ ಹಣೆಪಟ್ಟಿ ಕೂಡ ದಕ್ಕಲಿಲ್ಲ.

ಇದರಿಂದ ಪಾಠ ಕಲಿಯಬೇಕಾದರೆ ನಾವು ತಮಿಳುನಾಡಿನ ಕಾಮರಾಜ್, ನಮ್ಮ ದೇವರಾಜ ಅರಸರನ್ನು ಮತ್ತೆ ಮತ್ತೆ ಅಧ್ಯಯನ ಮಾಡಬೇಕಾಗುತ್ತದೆ. ಅತ್ಯಂತ ಹಿಂದುಳಿದ ಜಾತಿಗಳಿಂದ ಬಂದಂತಹ ಈ ಇಬ್ಬರು ನಾಯಕರು ತಮ್ಮ ಜನಪರ ಕಾಳಜಿಗಳ, ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು effective ಆಗಿ ಉಪಯೋಗಿಸುವ ಕಲೆಯನ್ನು ಬಳಸಿಕೊಂಡು ಅನುಷ್ಠಾನಕ್ಕೆ ತಂದಂತಹ ಕ್ರಾಂತಿಕಾರಿ ನಿರ್ಧಾರಗಳು ಕೊಟ್ಟ ಫಲ ಎಲ್ಲರಿಗೂ ಗೊತ್ತಿದೆ. ಆದರೆ ಅದಕ್ಕಾಗಿ ಇವರು ತೆತ್ತ ಬೆಲೆ?? ಇದೂ ಕೂಡ ಒಂದು ಪಾಠ.

ಈ ಮಧ್ಯೆ ಬಿಹಾರ ರಾಜ್ಯದ ದುರಂತ ಸಮಾಜವಾದಿ ನಾಯಕ ಕರ್ಪೂರಿ ಠಾಕೂರ್ ನೆನಪಾಗುತ್ತಾರೆ. ನಮ್ಮ ಮುಗ್ಧನಾಯಕ ನಜೀರ್ ಸಾಬ್ ನೆನಪಾಗುತ್ತಾರೆ. ಅನಾಥ ಸ್ಥಿತಿಯಲ್ಲಿರುವ ಈ ನಾಡಿಗೆ ಅನೇಕ ಕಾರಣಗಳಿಗಾಗಿ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಅನಿವಾರ್ಯವಾಗಿ ಕಣ್ಣಿಗೆ ಬೀಳುತ್ತಿದ್ದಾರೆ. 35 ವರ್ಷಗಳ ತಮ್ಮ ಸುದೀರ್ಘ ರಾಜಕಾರಣದಲ್ಲಿ ತಮ್ಮ ಈ ರಾಜಕಾರಣ ಒಂದು ಘನತೆಯನ್ನು ಪಡೆದುಕೊಳ್ಳಬೇಕಾದರೆ ಇವರಿಗೆ ಈಗ ಬೇರೆ ಅವಕಾಶಗಳೇ ಇಲ್ಲ. ಇವರು ತಮ್ಮ ಜಡತೆ, ಸೋಮಾರಿತನವನ್ನು ಸಂಪೂರ್ಣವಾಗಿ ಕಳಚಿಕೊಳ್ಳಬೇಕಿದೆ. ಸಂಘಪರಿವಾರದ ಗುಪ್ತ ಕಾರ್ಯಸೂಚಿಗಳನ್ನು, ಕೋಮುವಾದವನ್ನು ತಮ್ಮದೇ ಸೆಕ್ಯುಲರ್ ಶೈಲಿಯ ಪ್ರಶ್ನೆಯ ಮೂಲಕ ಎದುರಿಸುವ ಛಾತಿಯಿರುವ ಇವರು ನಮಗೆ ಸಾಮಾಜಿಕ, ರಾಜಕೀಯ ಪ್ರಶ್ನೆ ಕೊಟ್ಟ, ಕನ್ನಡನಾಡಿಗೆ, ಕನ್ನಡಿಗರಿಗೆ ಮರಳಿ ಚಣ ಕಾಲದ ಶಾಂತಿಯನ್ನಾಗಲಿ, ಅಥವಾ ಅದರ ಭ್ರಮೆಯನ್ನಾಗಲಿ ತಂದುಕೊಡಲಾರರೆ??

*- ಬಿ.ಶ್ರೀಪಾದ ಭಟ್, ಬೆಂಗಳೂರು*

ಧರ್ಮ ದಾಸೋಹ, ಜ್ಞಾನ ದಾಸೋಹ, ಅನ್ನ ದಾಸೋಹಗಳ ಮೂಲಕ ಜನ ಮಾನಸದಲ್ಲಿರುವವರು ಸಿದ್ದಗಂಗಾ, ರಂಭಾಪುರಿ ಮತ್ತು ಸುತ್ತೂರು ಶ್ರೀಗಳು. ಈ ಮೂರೂ ಸ್ವಾಮಿಗಳು ಆರೋಗ್ಯ ವಿಚಾರಿಸುವ ನೆಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಯಡಿಯೂರಪ್ಪನ ದರ್ಶನ ಮಾಡಿಕೊಂಡು ಬಂದಿದ್ದಾರೆ. ಇದು ಸ್ವಾಮಿಗಳ ತಪ್ಪಲ್ಲ. ಭ್ರಷ್ಟ ಯಡ್ಡಿಯನ್ನು ಕಾಯಲು ಮಂತ್ರಿ ವಿ.ಸೋಮಣ್ಣ ಆ ಮೂರು ಸ್ವಾಮಿಗಳ ಮಾನವನ್ನು ಜನರ ಮುಂದೆ ಹರಾಜು ಹಾಕಿದ್ದಾರಷ್ಟೆ. ಸ್ವಾಮಿಗಳಲ್ಲಿ ದೇವರನ್ನು ಕಾಣಬಯಸುವ ಸಾಮಾನ್ಯ ಜನರ ಮನಸನ್ನು ಇಂಥ ಘಟನೆಗಳು ಘಾಸಿಗೊಳಿಸುತ್ತವೆ.


ನ್ಯಾಯಾಂಗ ಬಂಧದಲ್ಲಿರುವ ಯಡ್ಡಿಯ ದರ್ಶನ ಪಡೆಯುವಾಗ ಆಸ್ಪತ್ರೆ ಒಳಗೆ ಉಸಿರು ಬಿಗಿ ಹಿಡಿದು "ದನಿ" ಅಂಥ ಹಲ್ಲು ಕಿಸಿದು, ಆಸ್ಪತ್ರೆಯಿಂದ ಹೊರಬಂದ ಕೂಡಲೇ "ಧನ್ಯಾಸ್ಮಿ" ಅಂತ ಉಸಿರು ಬಿಟ್ಟವರು ಮಾತ್ರ ಸದಾನಂದ ಗೌಡರು. ಮುಖ್ಯಮಂತ್ರಿ ಹುದ್ದೆಯಲ್ಲಿದ್ದು ಮತಿಹೀನನಂತೆ ಸದಾ ಯಡಿಯೂರಪ್ಪನ ಧ್ಯಾನದಲ್ಲಿದ್ದಾರೆ ಸಮಯಸಾಧಕ ಸದಾನಂದ ಗೌಡ.

ಈ ರಾಜಕೀಯ ಬೆಳವಣಿಗೆಗಳ ನಡುವೆ ಬಿತ್ತನೆ ಬೀಜ ಸಿಗದೆ. ಬೆಳೆಯುತ್ತಿರುವ ಬೆಳೆಗೆ ನೀರಿಲ್ಲದೆ, ಕರೆಂಟೂ ಕೈ ಕೊಟ್ಟಿರುವುದರಿಂದ ಶ್ರೀಸಾಮಾನ್ಯ ಸರ್ಕಾರದ ವಿರುದ್ಧ ಶಾಪ ಹಾಕುತ್ತಿದ್ದಾನೆ. ಆದರೆ ತಾವು ವಿರೋಧ ಪಕ್ಷದವರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮತ್ತು ಜೆಡಿಎಸ್ ಚೆನ್ನಾಗಿ ತಿಂದು "ಆಮ್" ಅಂತ ತೇಗುತ್ತಿವೆ.

*- ನಾಗೇಶ್ ಗೌಡ, ಬೆಂಗಳೂರು*

ಹಜಾರೆ (ಅವರನ್ನು ಅಣ್ಣಾ ಎಂದು ಕರೆಯಲಾರೆ) ಓರ್ವ ಫ್ಯಾಸಿಸ್ಟ್ ಕೋಮುವಾದಿ. ಅಷ್ಟೇ. ಗೌರಿ ಲಂಕೇಶರ ಸಂಪಾದಕೀಯ ಚೆನ್ನಾಗಿತ್ತು.

*- ಇಸ್ಮತ್ ಪಜೀರ್, ಮಂಗಳೂರು*



ಪತ್ರಕರ್ತೆ ನಾಗಲಕ್ಷ್ಮಿಬಾಯಿಗೆ ಸಿಎಂ ಬಂಟರ ಪ್ರಾಣ ಬೆದರಿಕೆ ಶಿರೋನಾಮೆಯಡಿ 26.10.2011ರ ಪತ್ರಿಕೆಯಲ್ಲಿ ರಾ. ಸೋಮನಾಥ್‌ರವರು ಬರೆದ ಲೇಖನ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಮಾನ-ಮರ್ಯಾದೆಯ ಅರ್ಥವೇನಾದರು ಗೊತ್ತಿದ್ದರೆ ಅಥವಾ ಈ ಪದಗಳಿಗೆ ಗೌರವ ಕೊಡುವುದಾದರೆ ಸಿಎಂ ಈ ಕೂಡಲೇ ಅಧಿಕಾರದಿಂದ ಕೆಳಗಿಳಿಯಲು ಈ ಲೇಖನವೊಂದೇ ಸಾಕು.

ಒಂದು ಸಾರಿ ಬಿಜೆಪಿಗೆ ಮತ ನೀಡಿ ಕಾಪಾಡಿ ಕಾಪಾಡಿ ಎಂದು 30 ವರ್ಷಗಳಿಂದ ಅತ್ತೂ ಕರೆದು ಮೂರು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ಯಡಿಯೂರಪ್ಪ ಮತ್ತು ಅವರ ಪಟಾಲಂ, ದುರಂಕಾರದಿಂದ ಮೆರೆದು ಕರ್ನಾಟಕವನ್ನೇ ಕೊಳ್ಳೆ ಹೊಡೆದು ಜೈಲಿಗೆ ಹೋಗಿದೆ.

ಈಗ ಹಲ್ಕಿರಿಯುವ ಸಿಎಂ ಎಂದೇ ಖ್ಯಾತರಾದ ಸದಾನಂದ ಗೌಡರ ದರ್ಬಾರು. ನನಗಾವತಿಯಿಲ್ಲವೆಂದು ಸುಳ್ಳು ಹೇಳಿ ಸರ್ಕಾರದಿಂದ ಸೈಟು ಹೊಡೆದಿದ್ದೇ ಅಲ್ಲದೆ, ವಾಸಕ್ಕೆಂದು ಮಂಜೂರಾದ ನಿವೇಶನದಲ್ಲಿ ಕಾನೂನು ಉಲ್ಲಂಘನೆ ಮಾಡಿ, ಬೃಹತ್ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟುತ್ತಿರುವ ಸದಾನಂದಗೌಡರ ವಿರುದ್ಧ ದಿಟ್ಟ ಪತ್ರಕರ್ತೆ ನಾಗಲಕ್ಷ್ಮಿ ಬಾಯಿಯವರು ಹೈಕೋರ್ಟಿನಲ್ಲಿ ಕೇಸು ದಾಖಲಿಸಿರುವುದು ಅಭಿನಂದನಾರ್ಹ.

ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿಯ ಭ್ರಷ್ಟರು, ಭ್ರಷ್ಟಾಚಾರದಲ್ಲಿ ನಾವೇನೂ ಕಮ್ಮಿ ಇಲ್ಲವೆಂದು ಇಡೀ ವಿಶ್ವಕ್ಕೇ ತೋರಿಸಿಕೊಟ್ಟ ಇವರು ಮಹಾನ್ ಸಂತರು(?). ಇವರನ್ನು ನಂಬಿ ಅಧಿಕಾರಕ್ಕೆ ತಂದ ಕರ್ನಾಟಕದ ಮಹಾನ್ ಜನತೆಗೆ ಮಾಡಿದ ಘೋರ ಅವಮಾನವೆಂದೂ ತಪ್ಪಿಲ್ಲ.

ನಾಗಲಕ್ಷ್ಮಿ ಬಾಯಿಯವರು ಈಗೊಡ್ಡು ಬೆದರಿಕೆಗೆ ಜಗ್ಗದೇ ಹೋರಾಡಲಿ. ಅವರೊಂದಿಗೆ ಕರ್ನಾಟಕದ ಜನರಿದ್ದಾರೆ.

*-ಜಯಕುಮಾರ್ ಹಿರೇಮಠ್, ಬೆಂಗಳೂರು*

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly



# ಡಿ-ಫರೆಂಟು ಡ್ಯಾನಿ

'ದುನಿಯಾ' ಚಿತ್ರದ ಶತದಿನೋತ್ಸವವದು.

ಆ ಚಿತ್ರದಲ್ಲಿ ಕಥೆ, ಚಿತ್ರಕಥೆ, ಸಂಭಾಷಣೆ, ಫ್ರೆಶ್ ಎನಿಸುವ ಹಾಡುಗಳು ಮತ್ತು ಹೊಸ ಹೀರೋ ವಿಜಿಯ ವಿಭಿನ್ನ ನಟನೆಯ ಜೊತೆಗೆ ಅತಿಯಾಗಿ ಗಮನ ಸೆಳೆದಿದ್ದು ಆ ಚಿತ್ರದ ಸ್ಟಂಟ್‌ಗಳು. ಮೈ ಜುಮ್ಮೆನಿಸುವ ಒರಟು ಒರಟಾದ, ನೈಜವಾದ 'ದುನಿಯಾ'ದ ಆ್ಯಕ್ಷನ್ ದೃಶ್ಯಗಳೂ ಆ ಚಿತ್ರದ ಗೆಲುವಿಗೆ ಕಾರಣವಾಗಿದ್ದವು.

ಆ ಚಿತ್ರದಲ್ಲಿ ದುಡಿದಿದ್ದ ಬಹುತೇಕರು ಹೊಸಬರೇ. ಆದರೆ ಸಿನಿಮಾ ಬಿಡುಗಡೆಯಾಗಿ ನೂರು ದಿನ ಓಡುವಷ್ಟರಲ್ಲಿ ನಾಯಕ ವಿಜಿ, ನಿರ್ದೇಶಕ ಸೂರಿಯಿಂದ ಹಿಡಿದು ನಿರ್ಮಾಪಕ ಸಿದ್ದರಾಜು ತನಕ ಎಲ್ಲರೂ ಸ್ಟಾರ್‌ಗಳಾಗಿಹೋಗಿದ್ದರು. ಈ ಚಿತ್ರದ ಶತದಿನೋತ್ಸವ ಕಾರ್ಯಕ್ರಮಕ್ಕೆ ಬರುವಂತೆ ಅದರ ಸಾಹಸ ನಿರ್ದೇಶಕನಿಗೂ ತಿಳಿಸಲಾಗಿತ್ತು.

ಅಂತೆಯೇ ತನ್ನ ಸಾಹಸ ನಿರ್ದೇಶನದ ಚಿತ್ರದ ನೂರನೇ ದಿನದ ಸಮಾರಂಭಕ್ಕೆ ಆತ ಬಲು ಖುಷಿಯಿಂದ ಹಾಜರಾದರು. ಸುತ್ತಲೂ ಸಾವಿರಾರು ಜನ, ಹರ್ಷೋದ್ಗಾರ... ಆಮಂತ್ರಣ ಪತ್ರಿಕೆ ಇದ್ದವರಿಗೆ ಮಾತ್ರ ಒಳಗೆ ಪ್ರವೇಶ. ಆದರೆ ಆ ಯುವಕನ ಬಳಿ ಅಂಥ ಯಾವ ಪ್ರವೇಶ ಪತ್ರ ಇರಲಿಲ್ಲ, ಜೊತೆಗೆ ಈತ ಯಾರು ಎಂಬುದೇ ಅಲ್ಲಿದ್ದ ಜನರಿಗೆ ಗೊತ್ತಿರಲಿಲ್ಲ.

ಹೀಗಾಗಿ ವಾಚ್‌ಮನ್‌ಗಳು ಈತನನ್ನು ಅಲ್ಲಿ ನಿಲ್ಲಲೂ ಬಿಡಲಿಲ್ಲ. ಆತನನ್ನು ಸೈಡಿಗೆ ತಳ್ಳಿಬಿಟ್ಟರು. ಹಾಗೆ ಪಕ್ಕಕ್ಕೆಸೆಯಲ್ಪಟ್ಟ ಯುವಕನ ಹೆಸರು ಡಿಫರೆಂಟ್ ಡ್ಯಾನಿ. ಇವತ್ತು ಕನ್ನಡ ಮಾತ್ರವಲ್ಲದೆ ನೆರೆಯ ಆಂಧ್ರ, ತಮಿಳುನಾಡಿನ ... ಸಾಹಸ ನಿರ್ದೇಶನಗಳನ್ನು ಮಾಡುತ್ತಾ ಬ್ಯುಸಿ ... ಮಾಸ್ಟರ್ ಡ್ಯಾನಿ ಪ್ರತಿಭಾವಂತ.

ಇಷ್ಟು ದಿನ ತೆರೆಯ ಹಿಂದೆ ನಿಂತು ಮ... ದೃಶ್ಯಗಳನ್ನು ಸಂಯೋಜಿಸುತ್ತಿದ್ದ ಡ್ಯಾನಿಗೆ ಈ... ಮೇಲೆ ಮಿಂಚುವ ಬಯಕೆ ಬುಗಿಲೆದ್ದಿದೆ. ಹಿ... ಎಂಬ ಶೀರ್ಷಿಕೆಯನ್ನು ರಿಜಿಸ್ಟರ್ ಮಾಡಿಸಿ ... ಮುಂದಿನ ತಯಾರಿಯಲ್ಲಿದ್ದಾರೆ. ಮೊದಲು ... 'ಹನುಮಂ' ಎಂಬ ಶೀರ್ಷಿಕೆಯನ್ನು ... ಯೋಚಿಸಿದ್ದರಾದರೂ ಅದು ಬೇರೊಬ್ಬರ ಬ... ಈಗಾಗಲೇ ನವಾಾದಾಗಿತ್ತಂತೆ. ಹೀಗ... ಶೀರ್ಷಿಕೆಯನ್ನೇ ಅಂತಿಮಗೊಳಿಸಿದ್ದಾರೆ.



# ಕನ್ನಡ ಚಿತ್ರದಲ್ಲಿ ತಮಿಳು ವಿಕ್ರಮ!

ನಮ್ಮ ಕನ್ನಡದ ಹೀರೋಗಳು ತಮಿಳು ಚಿತ್ರಗಳಲ್ಲಿ ನಟಿಸಲು ಹಾತೊರೆಯುವುದು ಸಾಮಾನ್ಯ. ಆದರೆ ಈಗ ತಮಿಳಿನ ಯಶಸ್ವೀ ನಾಯಕ ನಟನೊಬ್ಬ ಕನ್ನಡ ಚಿತ್ರದಲ್ಲಿ ನಟಿಸುತ್ತಾನೆ ಎಂಬ ಸುದ್ದಿ ಪಕ್ಕಾ ಆಗಿದೆ.

ಈ ಹಿಂದೆ ರಜನೀಕಾಂತ್, ಮಮ್ಮೂಟಿ, ಕಮಲ್ ಹಾಸನ್, ಶರತ್‌ಕುಮಾರ್‌ರಂತಹ ಸ್ಟಾರ್ ನಟರು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದರು. ಈಗ ವಿಕ್ರಮ್ ಆ ಪಟ್ಟಿಗೆ ಸೇರುತ್ತಿದ್ದಾನೆ. 'ಸೇತು', 'ಪಿತಾಮಗನ್', 'ಅನ್ನಿಯನ್', 'ರಾವಣ' ಸೇರಿಂದತೆ ಅನೇಕ ಬಿಗ್ ಬಜೆಟ್ ಚಿತ್ರಗಳಲ್ಲಿ ನಟಿಸಿ ಇತ್ತ ಪ್ರಶಸ್ತಿಗಳನ್ನೂ ಪಡೆದು ಅತ್ತ ಯಶಸ್ವಿ ಕಮರ್ಷಿಯಲ್ ಹೀರೋ ಎಂದು ಸಾಬೀತುಪಡಿಸಿರುವ ವಿಕ್ರಮ್‌ನನ್ನು ಕನ್ನಡಕ್ಕೆ ಕರೆತರುತ್ತಿರುವವರು ನಿರ್ಮಾಪಕ ಕೊಬ್ರಿ ಮಂಜು.

ಈಚೆಗಷ್ಟೇ ಮಂಜು 'ಶಿಕಾರಿ' ಚಿತ್ರಕ್ಕಾಗಿ ಮಮ್ಮೂಟಿಯನ್ನು ಕೇರಳದಿಂದ ಕರೆಸಿದ್ದರು. ಈಗ ವಿಕ್ರಮ್ ಕೂಡಾ ಬರುತ್ತಿರುವುದು ಗ್ಯಾರೆಂಟಿಯಾಗಿದೆ. ಯಾವುದೇ ಪರಭಾಷಾ ನಾಯಕರು ಬೆಂಗಳೂರಿಗೆ ಬಂದಾಗ ಮಾಧ್ಯಮದವರು ಮೊದಲು ಕೇಳುವ ಪ್ರಶ್ನೆ 'ಕನ್ನಡದಲ್ಲಿ ನಟಿಸುತ್ತೀರಾ?' ಎಂಬುದಾಗಿರುತ್ತದೆ. ಅಂತೆಯೇ ಮೊನ್ನೆ ಬೆಂಗಳೂರಿಗೆ ಬಂದಿದ್ದ ವಿಕ್ರಮ್ ಅವರಿಗೆ ಇದೇ ಪ್ರಶ್ನೆಯನ್ನು ಕೇಳಿದಾಗ 'ಹೌದು, ಕನ್ನಡ ಚಿತ್ರದಲ್ಲಿ ನಟಿಸುವ ಪ್ಲಾನ್ ಇದೆ. ಪ್ರೊಡ್ಯೂಸರ್ ಕೆ. ಮಂಜು ಅವರು ನನ್ನ ಬಳಿ ಈ ವಿಚಾರವಾಗಿ ಮಾತಾಡಿದ್ದಾರೆ' ಎಂದಿದ್ದಾರೆ.

ಕೆಲ ದಿನಗಳಿಂದ ಮಂಜಣ್ಣ 'ಹನ್ನೆರಡು ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿ ದೊಡ್ಡ ಸಿನಿಮಾವೊಂದನ್ನು ಮಾಡುವ ಪ್ಲಾನ್ ಮಾಡಿದ್ದೀನಿ. ಆ ಚಿತ್ರದಲ್ಲಿ ದಕ್ಷಿಣ ಭಾರತದ ಸ್ಟಾರ್ ನಟನೊಬ್ಬ ನಟಿಸಲಿದ್ದಾನೆ. ಆದರೆ ಸದ್ಯಕ್ಕೆ ಅದರ ವಿವರ ಕೊಡೋದಿಲ್ಲ' ಎಂದು ಗಾಳಿಯಲ್ಲಿ ಗುಂಡು ಹಾರಿಸುತ್ತಿದ್ದರು! ಆದರೆ ಈಗ ಅದರ ವಿವರಗಳು ವಿಕ್ರಮ್ ಬಾಯಿಂದ ಬಯಲಾಗಿಬಿಟ್ಟಿದೆ...



# ಅಡ್ಡ ಕತ್ತರಿ!

ಯಾಕೋ ಪ್ರೇಮ್ ನಸೀಬೇ ಎಕ್ಕುಟ್ಟಿಹೋಗಿದೆ.

ರಕ್ಷಿತಾ ಜೊತೆಗಿನ ವೈವಾಹಿಕ ಸಂಬಂಧ ತೂಗುಗತ್ತಿಯ ಮೇಲೆ ನಿಂತಿರುವಾಗಲೇ 'ಜೋಗಯ್ಯ' ಚಿತ್ರ ಎಲ್ಲರ ನಿರೀಕ್ಷೆಯನ್ನು ಮಣ್ಣುಪಾಲು ಮಾಡಿ ತೋಪೆದ್ದುಹೋಯಿತು. ಈಗ ಪ್ರೇಮ್‌ನನ್ನು ನಂಬಿ ನಿರ್ಮಾಪಕರು ಹಣ ಹೂಡಲು ಹಿಂದೆ ಮುಂದೆ ನೋಡುತ್ತಿರುವಾಗ ನಿರ್ದೇಶಕ ಮಹೇಶ್ ಬಾಬು ಮತ್ತು ನಿರ್ಮಾಪಕ ಮು.ಕ. ಮುರಳಿಕೃಷ್ಣ ಸೇರಿ ಈ ಮಹಾನುಭಾವನನ್ನು ಹೀರೋ ಮಾಡಲು ಹೊರಟಿದ್ದಾರೆ.

ಆದರೆ ಅವರ ಯೋಜನೆಯ ಸಿನಿಮಾ 'ಅಡ್ಡ' ಆರಂಭವಾಗುವ ಮುನ್ನವೇ ಅಡಕತ್ತರಿಗೆ ಸಿಲುಕಿದೆ.

ಹಿಂದೊಮ್ಮೆ ಪ್ರೇಮ್‌ಗೆ ದುಡ್ಡು ಕೊಟ್ಟು ಅದನ್ನು ಹಿಂದೆ ಪಡೆಯಲು ಕೋರ್ಟು ಕೇಸು ಎಂದು ಅಲೆದಿದ್ದ, ಆನಂತರ ಮತ್ತೆ ಆತನನ್ನು ನಂಬಿ 'ಜೋಗಯ್ಯ' ಚಿತ್ರದ ವಿತರಣೆಯನ್ನು ಪಡೆದು ಹಣೆತುಂಬ ನಾಮ ತೀಡಿಸಿಕೊಂಡ ಬಿ.ಕೆ. ಶ್ರೀನಿವಾಸ್ ಒಳ್ಳೆ ಟೈಮಿಗೆ ಪ್ರೇಮ್‌ಗೆ ಗುನ್ನ ಕೊಟ್ಟಿದ್ದಾರೆ.

ಪ್ರೇಮ್ ನಟಿಸಬೇಕಿದ್ದ 'ಅಡ್ಡ' ಚಿತ್ರ ಬಿ.ಕೆ.ಶ್ರೀನಿವಾಸ್ ಮುಖ್ಯಸ್ಥಿಕೆಯ ಅಶ್ವಿನಿ ಗ್ರೂಪ್ ಹೆಸರಲ್ಲಿ ರಿಜಿಸ್ಟರ್ ಆಗಿದೆ. ಪ್ರೇಮ್ ಮೇಲಿದ್ದ ಸಿಟ್ಟನ್ನು ತೀರಿಸಿಕೊಳ್ಳಲು ಕಾಯುತ್ತಿದ್ದ ಶ್ರೀನಿವಾಸ್ ಈಗ ತಮ್ಮದೇ ನಿರ್ಮಾಣದ 'ಆಲೆಮಾರಿ' ಚಿತ್ರದ ನಿರ್ದೇಶಕ ಸಂತು ಹೆಸರಿನಲ್ಲಿ 'ಅಡ್ಡ' ಸಿನಿಮಾವನ್ನು ಅನೌನ್ಸ್ ಮಾಡಿ ಮೊನ್ನೆ ಜಾಹಿರಾತನ್ನೂ ನೀಡಿದ್ದಾರೆ. ಈ ಚಿತ್ರದಲ್ಲಿ ಲೂಸ್ ಮಾದ ಯೋಗೇಶ್ ನಟಿಸುತ್ತಾನಂತೆ.

"ಏನೇ ಆದರೂ 'ಅಡ್ಡ' ಶೀರ್ಷಿಕೆಯನ್ನು ಪ್ರೇಮ್ ಚಿತ್ರಕ್ಕೆ ನೀಡೋದಿಲ್ಲ" ಎಂದು ಮಂದಾಕಿನಿ ಸೀನಣ್ಣ ಖಡಕ್ಕಾಗಿ ಹೇಳುತ್ತಿದ್ದಾರೆ. ಪರಿಣಾಮವಾಗಿ ಮುಹೂರ್ತ ಆಚರಿಸಿಕೊಳ್ಳಬೇಕಿದ್ದ ಪ್ರೇಮ್ ನಟನೆಯ ಚಿತ್ರಕ್ಕೆ ಈಗ ಹೆಸರೇ ಇಲ್ಲದಂತಾಗಿದೆ.

# ದಿಗಂತ್ ಹ್ಯಾಟ್ರಿಕ್ ಫ್ಲಾಪ್!




ಈ ವಾರ 'ಕಾಂಚಾ... ಚಿತ್ರ ತೆರೆ ಕಾಣುತ್ತಿದೆ. ಕನ್ನಡ ಚಿತ್ರ... ಚಾಕಲೇಟ್ ಹೀರೋ ಎಂದೇ ಖ್ಯಾತಿಗ... ದಿಗಂತ್ ಈ ಚಿತ್ರದ ಹೀರೊ. ಅಂದ ಹಾಗೆ ಕ... ಮೂರು ವಾರಗಳಿಂದ ದಿಗಂತ್ ನಟಿಸಿರುವ ಚಿತ್ರಗ... ಒಂದರಮೇಲೊಂದರಂತೆ ಬಿಡುಗಡೆಯಾಗಿವೆ.

ಮೊದಲು ಬಿಡುಗಡೆಯಾಗಿದ್ದು 'ಪುತ್ರ' ಎಂಬ... ಆನಂತರ 'ತಾರೆ' ಎಂಬ ಇನ್ನೊಂದು ಚಿತ್ರ ತೆರೆಕಂಡಿ... ಇದೀಗ 'ಕಾಂಚಾಣ'. ಮೊದಲೆರಡು ಚಿತ್ರಗಳು ... ನಿರ್ಮಾಪಕನಿಗೆ ಬಾಕ್ಸಾಫೀಸ್‌ನಲ್ಲಿ ಲಾಭವೇನೂ ... ತಂದುಕೊಟ್ಟಿಲ್ಲ. 'ಕಾಂಚಾಣ' ಕೂಡಾ ಲಾಭ ತಂದುಕೊಡುವ ಹಾಗೇ ಕಾಣಿಸುತ್ತಿಲ್ಲ. ಅಲ್ಲಿಗೆ ... ಸೋಲಿನಲ್ಲಿ 'ಹ್ಯಾಟ್ರಿಕ್' ಸಾಧಿಸಲಿದ್ದಾರೆ.

ಹಾಗೆ ನೋಡಿದರೆ ನಗುವಾಗ ಕೆನ್ನೆಮೇ... ಡಿಂಪಲ್ ಕಾಣಿಸುವ ಈ ನಟನಿಗೆ ಸಾಕಷ್ಟು... ಅಭಿಮಾನಿಗಳು ಇಲ್ಲವೆಂದಲ್ಲ; ದಿಗಂತ್ ... ನಿರ್ದೇಶಕ ಮತ್ತು ಹೊಸ ನಾಯಕಿಯರ... ಕಾಣಿಸಿಕೊಂಡ 'ಲೈಫು ಇಷ್ಟೇನೆ' ಎಂಬ... ಮೂರು ಚಿತ್ರಗಳ ಮೊದಲು ತೆರೆಕಂಡು... ಯಶಸ್ವಿಯಾಗಿತ್ತು. ಆದರೆ ಆ ಯಶಸ್ಸಿನ... ಈ ಮೂರು ಚಿತ್ರಗಳು ಸಾಲುಸಾಲಾಗಿ... ಹೊಡೆದಿವೆ. ಈ ಬಗ್ಗೆ ಪ್ರಶ್ನಿಸಿದಾಗ, ... ನಗುತ್ತಾ ಹೇಳುವುದು ಇಷ್ಟೇ:

"ಈ ಮೂರು ಚಿತ್ರಗಳು ನನ್ನ ... ಚಿತ್ರಗಳು. ಈ ಚಿತ್ರಗಳು ಬಿಡುಗಡೆಯಾಗುತ್ತಿರುವುದೂ ನನಗೆ ... ನಿರ್ಮಾಪಕರು ಚಿತ್ರದ ಪ್ರಚಾರಕ್ಕಾಗಿಯ... ನನ್ನನ್ನು ಕರೆದಿಲ್ಲ, ಇದೇ ಸಾಲಿಗೆ ಸೇರದ... ಮತ್ತೊಂದು ಚಿತ್ರವೂ ಸದ್ಯದಲ್ಲೇ ಬಿಡುಗಡೆಯಾಗಲಿದೆ."

"ನನ್ನ ಮುಂದಿನ ಎರಡು ಚಿತ್ರಗಳು ಖಂಡಿತವಾಗಿಯೂ ನನಗೆ ಮತ್ತೆ ಲೈಫ್ ನೀಡು... ಎಂದು ಹೇಳಲು ದಿಗಂತ್ ಮರೆಯಲಿಲ್ಲ. ಆ ಎರ... ಚಿತ್ರಗಳಲ್ಲಿ ಒಂದು ರಾಕ್‌ಲೈನ್ ವೆಂಕಟೇಶ್ ನಿರ್ಮಾ... ಮತ್ತು ಇನ್ನೊಂದು ಇಂದ್ರಜಿತ್ ಲಂಕೇಶ್ ನಿರ್ದೇಶ...

ಅಂದಹಾಗೆ, ಈ ವರ್ಷ ದಿಗಂತ್ ನಟಿಸಿರು... ಚಿತ್ರಗಳು ತೆರಕಂಡಿವೆ. ಆದ್ದರಿಂದ ಸಂಖ್ಯಾದೃಷ್ಟಿ... ದಿಗಂತ್ ಮೊದಲ ಸ್ಥಾನದಲ್ಲಿದ್ದಾರೆ ಎಂದು ಹೇಳಬಹುದೇನೋ!




ಗೈಡ್ 342 ಕೆಎಎಸ್ ನೇಮಕಾತಿ ವಿವರ

ಜಾಬ್ ನ್ಯೂಸ್ ಸರ್ವೆಯರ್ & ಫಾರೆಸ್ಟ್ ವಾಚರ್ಸ್ ಪರೀಕ್ಷೆಯ ಸರಿ ಉತ್ತರಗಳು

ಹೊಸ ಸಂಚಿಕೆಗಳು ಮಾರುಕಟ್ಟೆಯಲ್ಲಿವೆ...



ಪ್ರತಿಗಳಿಗಾಗಿ ಸಂಪರ್ಕಿಸಿ
ಗೈಡ್ ಪ್ರಕಾಶ...
ನಂ. 9, ಇ.ಎ.ಟಿ. ರಸ್ತೆ, ಬಸವ...
ಬೆಂಗಳೂರು-4 080-266...
9880302817


PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -560
Phone : 26676427, Fax : 26604536, E-mail :lankesh70@rediffmail.com